ಪುಟ ತೆರೆದಂತೆ...

ಕಲೆಯ ವಿರುದ್ಧ ರಾಜಕಾರಣ ಗೆಲುವು
ಅಭಿಮತ
ಶಿವಸುಬ್ರಹ್ಮಣ್ಯ ಕೆ.
ಸಂ.ಪುಟ | 6

ಅಭ್ಯಂಗ ಮಾಡಿ ಕೋವಿಡ್‌ನಿಂದ ಬಚಾವಾದೆ
ಸ್ವಾಸ್ಥ್ಯವೆಂಬ ಸಾಧನ
ಡಾ. ಸಾಧನಶ್ರೀ
ಸಂ.ಗಮ | 7

ಜಿ7 ಶೃಂಗಸಭೆಯಲ್ಲಿ ಉಕ್ರೇನ್ ಅಧ್ಯಕ್ಷ ವೊಲೊದಿಮೀರ್ ಝೆಲೆನ್ಸ್ಕಿ ಅವರನ್ನು ಭೇಟಿಯಾದ ಪ್ರಧಾನಿ ನರೇಂದ್ರ ಮೋದಿ.

ವಿಶ್ವವಾಣಿ
ವಿಶ್ವಾಸವೇ ವಿಶ್ವ

ದಾರಿದೀಪೋಕ್ತಿ

ನಿಮಗೆ ಬಹಳ ಸ್ನೇಹಿತರು ಇರಬೇಕೆಂದೇನೂ ಇಲ್ಲ. ಇರುವ ನಾಲ್ವರು ಉತ್ತಮರಿದ್ದರೆ ಸಾಕು. ಸ್ನೇಹಿತರು ಎಷ್ಟಿದ್ದಾರೆ ಎಂಬುದಕ್ಕಿಂತ , ಇರುವ ಸ್ನೇಹಿತರು ಎಂಬುದು ಮುಖ್ಯ. ಈ ವಿಷಯದಲ್ಲಿ ಯಾವತ್ತೂ ಸಂಖ್ಯೆಗಿಂತ ಗುಣಮಟ್ಟಕ್ಕೆ ಮಹತ್ವ ನೀಡಬೇಕು.

ವಕ್ರತುಂಡೋಕ್ತಿ

ನಮ್ಮ ಮಾತನ್ನು ನಾವೇ ಕೇಳುವ ಒಂದು ಪ್ರಯೋಜನ ಅಂದ್ರೆ, ಕನಿಷ್ಠ ಯಾರೋ ಒಬ್ಬರು ಕೇಳುತ್ತಾರೆ ಎಂದುಕೊಳ್ಳಬಹುದು.

ಪೋಕ್ಸೋ ಪ್ರಕರಣದಡಿ ಬಂಧನಕ್ಕೆ ಹೈಕೋರ್ಟ್ ತಡೆ
ಜೂ.17ರಂದು ವಿಚಾರಣೆಗೆ ಹಾಜರಾಗಲು ಆದೇಶ

ಬಿಎಸ್‌ವೈಗೆ ರಿಲೀಫ್



ಬಂಧನ ವಿನಾಯಿತಿಗೆ ಕೋರ್ಟ್ ಪರಿಗಣಿಸಿದ ಅಂಶಗಳು

- ಬಿಎಸ್ ಯಡಿಯೂರಪ್ಪ ಅವರಿಗೆ ವಯಸ್ಸಾಗಿದೆ
- ಸಹಜವಾಗಿಯೇ ವಯೋಸಹಜ ಸಮಸ್ಯೆಗಳಿರುತ್ತವೆ
- ವಿಚಾರಣೆಗೆ ಹಾಜರಾಗದೇ ತಲೆಮರೆಸಿಕೊಳ್ಳುವ ಸಾಧ್ಯತೆ ಇಲ್ಲ

ಪೊಲೀಸರು ನೀಡಿದ ಕಾರಣ

- ಪ್ರಕರಣಕ್ಕೆ ಸಂಬಂಧಿಸಿ ಸುಟ್ಟ ಮೊಬೈಲ್ ಚಿಪ್‌ನಲ್ಲಿದ್ದ ಡಾಟಾ ತೆಗೆಯಲು ಗುಜರಾತಿನ ಎಫ್‌ಎಸ್‌ಎಲ್‌ಗೆ ಕಳುಹಿಸಲಾಯಿತು. ಮೇ 13ರಂದು ಎಫ್‌ಎಸ್‌ಎಲ್ ವರದಿ ಬಂದಿದೆ.
- ಧ್ವನಿ ಪರೀಕ್ಷೆಗೆ ಬೆಂಗಳೂರು ಎಫ್‌ಎಸ್‌ಎಲ್‌ಗೆ ಕಳುಹಿಸಲಾಗಿದೆ. ಹೆಚ್ಚಿನ ವಿಚಾರಣೆ ನಡೆಸಬೇಕಾಗಿದೆ.
- ಜೂನ್ 12ರಂದು ಹಾಜರಾಗಲು ನೋಟಿಸ್. ಮೊಬೈಲ್ ನಲ್ಲಿದ್ದ ವಿಡಿಯೋ, ಧ್ವನಿ ಪರೀಕ್ಷೆ ನಂತರ ನೋಟಿಸ್ ನೀಡಲಾಯಿತು. ಹಾಜರಾಗದ ಕಾರಣ ವಾರಂಟ್.

ಸರಕಾರದ ಪರ ವಕೀಲರ ವಾದ

- ನಾವು ಎರಡು ಬಾರಿ ನೊಟೀಸ್ ಕೊಟ್ಟಿದ್ದೇವೆ. ಆದರೂ ಆರೋಪಿ ವಿಚಾರಣೆಗೆ ಬಂದಿಲ್ಲ.
- ನಾವು ಆರೋಪಿಯ ಧ್ವನಿ ಸ್ಯಾಂಪಲ್ ಪಡೆದು ವರದಿ ಪಡೆದಿದ್ದೇವೆ. ವಿಡಿಯೊ ಸಾಕ್ಷಿಯ ಎಫ್‌ಎಸ್‌ಎಲ್ ವರದಿ ಸಹ ಪಡೆದಿದ್ದೇವೆ. ವಿಚಾರಣೆಗೆ ಹಾಜರಾಗಲು ನಾವು ನೊಟೀಸ್ ಕೊಟ್ಟ ಬಳಿಕ ಆರೋಪಿ ದೆಹಲಿಗೆ ಟಿಕೆಟ್ ಬುಕ್ ಮಾಡಿದ್ದಾರೆ.
- ಆರೋಪಿ ಕರೆಯಿಸಿ 2 ಲಕ್ಷ ರುಪಾಯಿ ಹಣ ನೀಡಿ, ಆಕೆ ಬಳಿಯಿದ್ದ ವಿಡಿಯೊ ಡಿಲೀಟ್ ಮಾಡಲು ಹೇಳಿದ್ದಾರೆ. ಈ ಪ್ರಕರಣದಲ್ಲಿ ಆರೋಪಿ ಸಾಕ್ಷಿ ನಾಶಕ್ಕೆ ಪ್ರಯತ್ನಿಸಿದ್ದಾರೆ. ಆರೋಪಿಗಳು ಸಂತ್ರಸ್ತೆಯ ಮೇಲೆ ಒತ್ತಡ ಬೀರಿದ್ದಾರೆ.

ಬಿಎಸ್‌ವೈ ಪರ ವಕೀಲರ ವಾದ

- ಲೈಂಗಿಕ ದೌರ್ಜನ್ಯ ಪ್ರಕರಣ ಜಾಮೀನು ಸಹಿತ ಪ್ರಕರಣ. ಇದರಲ್ಲಿ ಬಂಧನದ ಅನಿವಾರ್ಯತೆ ಇಲ್ಲ. 41(0) ಅಡಿಯಲ್ಲಿ ನೋಟಿಸ್ ನೀಡಿದೆ. 7 ವರ್ಷದ ಶಿಕ್ಷೆ ಇರುವ ಪ್ರಕರಣಕ್ಕೆ ಬಂಧನ ಮಾಡಬಾರದು ಎಂದು ಸುಪ್ರೀಂ ಕೋರ್ಟ್ ಆದೇಶದಲ್ಲಿದೆ.
- ಕಮಿಷನ್ ಆರೋಪ ಸಂಬಂಧ ರಾಜ್ಯ ಬಿಜೆಪಿ ದಾಖಲಿಸಿದ ಮಾನನಷ್ಟ ಪ್ರಕರಣದಲ್ಲಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಕೋರ್ಟ್ ಮುಂದೆ ಬಂದಿದ್ದರು. ಇದಕ್ಕೆ ಪ್ರತಿಯಾಗಿ ಮಾಜಿ ಸಿಎಂ (ಬಿಎಸ್‌ವೈ) ಬಂಧನಕ್ಕೆ ಮುಂದಾಗಿದ್ದಾರೆ. ಕಾಂಗ್ರೆಸ್ ನಾಯಕ ಉಗ್ರಪ್ಪ ಮೇಲೆ ಪ್ರಕರಣ ದಾಖಲಾಗಿಲ್ಲ. ತನಿಖೆಯೂ ಇಲ್ಲ.
- ಉದ್ದೇಶಪೂರ್ವಕವಾಗಿ ಮ್ಯಾಜಿಸ್ಟ್ರೇಟ್ ಕೋರ್ಟ್ ಮುಂದೆ ತಲೆಮರೆಸಿಕೊಂಡಿದ್ದಾರೆಂದು ಸುಳ್ಳು ಹೇಳಿಕೆ ನೀಡುತ್ತಾರೆ.

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಅಪ್ರಾಪ್ತ ವಯಸ್ಸಿನ ಬಾಲಕಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪದಲ್ಲಿ ಬಂಧನದ ಭೀತಿ ಎದುರಿಸುತ್ತಿದ್ದ ಮಾಜಿ ಸಿಎಂ ಬಿ.ಎಸ್.ಯಡಿಯೂರಪ್ಪ ಅವರನ್ನು ಬಂಧಿಸದಂತೆ ಹೈಕೋರ್ಟ್ ಆದೇಶಿದೆ.

ನಿರೀಕ್ಷಣಾ ಜಾಮೀನು ಕೋರಿ ಬಿ.ಎಸ್ .ಯಡಿಯೂರಪ್ಪ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ಹೈಕೋರ್ಟ್ ನ್ಯಾಯಪೀಠ ಮುಂದಿನ ವಿಚಾರಣೆ ವರೆಗೂ ಬಂಧಿಸದಂತೆ ಆದೇಶಿದೆ. ಅಲ್ಲದೆ, ಜೂನ್ 17ರಂದು ಪೊಲೀಸ್ ವಿಚಾರಣೆಗೆ ಹಾಜರಾಗಲು ಬಿಎಸ್‌ವೈ ಅವರಿಗೆ ನ್ಯಾಯಾಲಯ ಸೂಚನೆ ನೀಡಿದೆ. ಬಂಧನ ಭೀತಿಯಲ್ಲಿದ್ದ ಯಡಿಯೂರಪ್ಪ ಅವರಿಗೆ ಈ ಆದೇಶ ರಿಲೀಫ್ ನೀಡಿದೆ. ಅವರ ಪಕ್ಷವೂ ಸದ್ಯಕ್ಕೆ ಮುಜುಗರದಿಂದ ಪಾರಾಗಿದೆ.

ಪೋಕ್ಸೊ ಪ್ರಕರಣದಡಿ ದಾಖಲಾದ ಪ್ರಕರಣ ಸಂಬಂಧ ಯಡಿಯೂರಪ್ಪ ಅವರನ್ನು ಬಂಧಿಸಲು ಸಿದ್ಧತೆ ನಡೆಸಿಕೊಂಡಿದ್ದ ಪೊಲೀಸರು ಜಾಮೀನುರಹಿತ ವಾರಂಟ್ ಪಡೆದುಕೊಂಡಿದ್ದರು. ಯಡಿಯೂರಪ್ಪ ಅವರು ದಿಲ್ಲಿಯಲ್ಲಿಯೇ ಉಳಿದುಕೊಂಡು ನಿರೀಕ್ಷಣಾ ಜಾಮೀನು ಕೋರಿ ಅರ್ಜಿ ಸಲ್ಲಿಸಿದ್ದರು. ವಿಚಾರಣೆಯ ವೇಳೆ ನ್ಯಾಯಮೂರ್ತಿ ಕೃಷ್ಣ ದೀಕ್ಷಿತ್ ಅವರ ಏಕಸದಸ್ಯ ಪೀಠ ಪೊಲೀಸರ ಕ್ರಮದ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದೆ. 'ಒಬ್ಬ ಮಾಜಿ ಮುಖ್ಯಮಂತ್ರಿಯನ್ನೇ ಈ ರೀತಿ ನಡೆಸಿಕೊಂಡರೆ, ಸಾಮಾನ್ಯ ಜನರ ಪಾಡೇನು' ಎಂದು ಕೋರ್ಟ್ ಕಳವಳ ವ್ಯಕ್ತಪಡಿಸಿದೆ.

ಸಿಐಡಿ ಪರ ವಾದ ಮಂಡಿಸಿದ ಅಡ್ವೊಕೇಟ್ ಜನರಲ್ (ಎಜಿ) ಶಶಿಕಿರಣ್ ಶೆಟ್ಟಿ ಅವರು, ಜೂ. 11ರಂದು ಬೆಳಗ್ಗೆ ಯಡಿಯೂರಪ್ಪ ಅವರಿಗೆ ಸಿಐಡಿ ಅಧಿಕಾರಿಗಳು ನೋಟಿಸ್ ಜಾರಿ ಮಾಡಿದ್ದಾರೆ. ಜೂ. 12ರಂದು ವಿಚಾರಣೆಗೆ ಹಾಜರಾಗಬೇಕು ಎಂದು ನೋಟಿಸ್ ನೀಡಿದ್ದಾರೆ. ಹೀಗಿದ್ದರೂ, ಯಡಿಯೂರಪ್ಪ ಅವರು ಸಂಜೆಗೆ ವಿಮಾನದ ಟಿಕೆಟ್ ಬುಕ್ ಮಾಡಿಕೊಂಡು ದೆಹಲಿಗೆ ತೆರಳಿದ್ದಾರೆ ಎಂದು ತಿಳಿಸಿದರು.

ಈ ವಾದವನ್ನು ಒಪ್ಪದ ನ್ಯಾಯಾಲಯವು, ಬಿ.ಎಸ್. ಯಡಿಯೂರಪ್ಪ ಅವರು ಜೂ. 12ರ ಬದಲು, ಜೂ.17ರಂದು ತನಿಖಾಧಿಕಾರಿ ಎದುರು ವಿಚಾರಣೆಗೆ ಹಾಜರಾಗುವುದಾಗಿ ತಿಳಿಸಿದ್ದಾರೆ.

→ 4

ಬಿ.ಎಸ್ .ಯಡಿಯೂರಪ್ಪ ಅವರ ಮೇಲಿನ ಕರುನಾಡ ಜನರ ಆಶೀರ್ವಾದ, ಕೋಟಿ ಹೃದಯಗಳ ಪ್ರಾರ್ಥನೆ ನ್ಯಾಯ ದೇಗುಲದಲ್ಲಿ ಅನಾವರಣಗೊಂಡಿದೆ. ಷಡ್ಯಂತ್ರ, ಪಿತೂರಿ ರಾಜಕಾರಣ ಯಡಿಯೂರಪ್ಪ ಅವರ ಹಿಂಬಾಲಿಸಿಕೊಂಡು ಬರುತ್ತಲೇ ಇದೆ, ಎದೆಗುಂದದ ಅವರು ನ್ಯಾಯದ ಹಾದಿಯಲ್ಲಿ ಷಡ್ಯಂತ್ರಗಳನ್ನು ಜಯಿಸಿದ್ದಾರೆ.
-ಬಿ.ವೈ.ವಿಜಯೇಂದ್ರ ಬಿಜೆಪಿ ರಾಜ್ಯಾಧ್ಯಕ್ಷ

ಮತ್ತಷ್ಟು ಸಾಕ್ಷ್ಯ ದರ್ಶನ್ ಲಾಕ್

ಬಂಧಿತ ಆರೋಪಿಗಳ ಸಂಖ್ಯೆ 18ಕ್ಕೆ ಏರಿಕೆ, ಅಪಹರಣ ದೃಶ್ಯ ಸಿಸಿಟಿವಿಯಲ್ಲಿ ಸೆರೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ನಟ ದರ್ಶನ್ ಮತ್ತು ಗ್ಯಾಂಗ್ ವಿರುದ್ಧ ಕೇಳಿ ಬರುತ್ತಿರುವ ಕೊಲೆ ಆರೋಪದಲ್ಲಿ ಪೊಲೀಸರಿಗೆ ಮತ್ತಷ್ಟು ಸಾಕ್ಷ್ಯಗಳು ದೊರೆತಿದ್ದು, ಪ್ರಕರಣದಲ್ಲಿ ಪಾರಾಗುವ ಹಾದಿ ದುರ್ಗಮವಾಗಿದೆ. ಇದೇ ವೇಳೆ, ಪ್ರಕರಣ ಸಂಬಂಧ ಇನ್ನೂ ಐವರನ್ನು ಬಂಧಿಸಲಾಗಿದ್ದು, ಬಂಧಿತರ ಸಂಖ್ಯೆ 18ಕ್ಕೆ ಏರಿದೆ.

ಗೆಳತಿ ಪವಿತ್ರಾ ಗೌಡಗೆ ಕಳುಹಿಸಿದ್ದ ಎನ್ನಲಾದ ಅಶ್ಲೀಲ ಸಂದೇಶದಿಂದ ರೊಚ್ಚಿಗೆದ್ದ ದರ್ಶನ್, ರೇಣುಕಾಸ್ವಾಮಿಯನ್ನು ಚಿತ್ರದುರ್ಗದಿಂದ ಪಟ್ಟಣಗೆರೆಗೆ ಕರೆಸಿಕೊಂಡು ಮಾರಣಾಂತಿಕ ಹಲ್ಲೆ ನಡೆಸಿದ ಪ್ರಕರಣ ಸಂಬಂಧ ತನಿಖೆ ನಡೆಸುತ್ತಿರುವ ಪೊಲೀಸರಿಗೆ ಹಲವು ಸಿಸಿಟಿವಿ ಸಾಕ್ಷ್ಯಗಳು ದೊರೆತಿವೆ. ಇದರ ಆಧಾರದ ಮೇಲೆ ದರ್ಶನ್ ಮತ್ತು ತಂಡವನ್ನು ಪ್ರಶ್ನಿಸಲಾಗುತ್ತಿದ್ದು, ಕೊಲೆ ಮತ್ತು ಸಾಕ್ಷ್ಯ ನಾಶಕ್ಕೆ ಯತ್ನಿಸಿದ ಬಗ್ಗೆ ಮತ್ತಷ್ಟು ಸಾಕ್ಷ್ಯ ದೊರೆತಿವೆ.

ಹತ್ಯೆಗೆ ಸಹಕರಿಸಿದ ಹಾಗೂ ಸಾಕ್ಷ್ಯನಾಶಪಡಿಸಿದ ಆರೋಪದಲ್ಲಿ ಶವ ಸಾಗಿಸಿದ್ದ ಸ್ಕಾರ್ಪಿಯೋ ಕಾರಿನ ಮಾಲೀಕ ಪುನೀತ್ ಸೇರಿ ಐವರನ್ನು ಶುಕ್ರವಾರ ಬಂಧಿಸಲಾಗಿದೆ. ಪುನೀತ್ ಮತ್ತು ಹೇಮಂತ್‌ನನ್ನು ಬೆಂಗಳೂರು ಪೊಲೀಸರರು ಬಂಧಿಸಿದರೆ ಪ್ರಕರಣದ 6, 7 ಮತ್ತು 8ನೇ ಆರೋಪಿಗಳಾದ ಜಗದೀಶ್, ಅನುಕುಮಾರ್, ರವಿ ಚಿತ್ರದುರ್ಗದಲ್ಲಿ ಪೊಲೀಸರಿಗೆ ಶರಣಾಗಿದ್ದಾರೆ.

→ 4

ಆರೋಪಿ ತಂದೆ ಸಾವು

ಚಿತ್ರದುರ್ಗ ಮೂಲದ ಆರೋಪಿ ಅನುಕುಮಾರ್ ಬಂಧನದಿಂದ ಆತಂಕಗೊಂಡ ಆರೋಪಿ ತಂದೆ ಚಂದ್ರಣ್ಣ ಹೃದಯಾಘಾತದಿಂದ ಮೃತಪಟ್ಟಿದ್ದಾರೆ. ಚಿತ್ರದುರ್ಗದ ಸಿಹಿನೀರು ಹೊಂಡ ರಸ್ತೆಯ ಬಳಿಯಿರುವ ಮನೆ ಬಳಿ ಏಕಾಏಕಿ ಕುಸಿದು ಬಿದ್ದ ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಮಗ ಅನು ಬಂಧನದಿಂದ ತಂದೆ ಖಿನ್ನತೆಗೆ ಒಳಗಾಗಿದ್ದರು.

ಮ್ಯಾನೇಜರ್ ನಾಪತ್ತೆ ಮತ್ತೆ ಮುನ್ನೆಲೆಗೆ

ಚಿತ್ರದುರ್ಗದ ರೇಣುಕಾಸ್ವಾಮಿ ಹತ್ಯೆ ಪ್ರಕರಣದ ಬೆನ್ನಲ್ಲೇ, 2018ರಲ್ಲಿ ನಾಪತ್ತೆಯಾಗಿದ್ದ ದರ್ಶನ್ ಮ್ಯಾನೇಜರ್ ಮಲ್ಲಿಕಾರ್ಜುನ್ ಅವರ ನಾಪತ್ತೆ ಪ್ರಕರಣ ಮತ್ತೆ ಮುನ್ನಲೆಗೆ ಬಂದಿದೆ. 2011ರಿಂದ 2018ರವರೆಗೂ ದರ್ಶನ್ ಮ್ಯಾನೇಜರ್ ಆಗಿದ್ದ ಮಲ್ಲಿಕಾರ್ಜುನ್ 2018ರಿಂದ ದಿಢೀರ್ ನಾಪತ್ತೆಯಾಗಿದ್ದರು. ಕಳೆದ ಏಪ್ರಿಲ್‌ನಲ್ಲಿ ಮಲ್ಲಿಕಾರ್ಜುನ್ ಬಗ್ಗೆ ಮಾಹಿತಿ ನೀಡಿ, ಈ ಬಗ್ಗೆ ಪತ್ರಿಕಾ ಪ್ರಕಟಣೆ ನೀಡಲು ಕೋರ್ಟ್ ಸೂಚಿಸಿತ್ತು.

ಪವನ್‌ಗೆ ಡಿಸಿಎಂ ಪಟ್ಟ

25 ಸಚಿವರು ಪ್ರಮಾಣ ಸ್ವೀಕಾರ | ಖಾತೆ ಹಂಚಿಕೆ



ಅಮರಾವತಿ: ವಿಧಾನಸಭಾ ಹಾಗೂ ಲೋಕಸಭಾ ಚುನಾವಣೆಯಲ್ಲಿ ಅಭೂತಪೂರ್ವ ಗೆಲುವಿನ ಬಳಿಕ ಜನಸೇನಾ ನಾಯಕ ಪವನ್ ಕಲ್ಯಾಣ್‌ಗೆ ಡಿಸಿಎಂ ಹುದ್ದೆ ಒಲಿದು ಬಂದಿದೆ.

ಆಂಧ್ರಪ್ರದೇಶದ ಉಪಮುಖ್ಯಮಂತ್ರಿಯಾಗಿ ಪವನ್ ಕಲ್ಯಾಣ್ ಶುಕ್ರವಾರ ಅಧಿಕಾರ ಸ್ವೀಕರಿಸಿದ್ದಾರೆ. ಬುಧವಾರ ಚಂದ್ರಬಾಬು ನಾಯ್ಡು ಎನ್‌ಡಿಎ ಸಿಎಂ ಆಗಿ ಅಧಿಕಾರ ಸ್ವೀಕರಿಸಿದ್ದಾರೆ, ಜತೆಗೆ 25 ಸಚಿವರು ಪ್ರಮಾಣ ವಚನ ಸ್ವೀಕಾರ ಮಾಡಿದ್ದು ಶುಕ್ರವಾರ ಸಿಎಂ ಖಾತೆ ಹಂಚಿಕೆ ಕೂಡ ಮಾಡಿದ್ದಾರೆ.

ಪವನ್ ಕಲ್ಯಾಣ್‌ಗೆ ಪಂಚಾಯತ್ ರಾಜ್, ಗ್ರಾಮೀಣಾಭಿವೃದ್ಧಿ ಮತ್ತು ಅರಣ್ಯ ಖಾತೆಯನ್ನು ಹಂಚಿಕೆ ಮಾಡಲಾಗಿದ್ದು ಜತೆಗೆ ಡಿಸಿಎಂ ಜವಾಬ್ದಾರಿ ಕೂಡ ಹೆಗಲೇರಿದೆ. ವಿಧಾನಸಭಾ ಚುನಾವಣೆಯಲ್ಲಿ ತೆಲುಗು ದೇಶಂ, ಜನಸೇನಾ ಹಾಗೂ ಬಿಜೆಪಿ ಒಕ್ಕೂಟ ಭರ್ಜರಿ ಗೆಲುವು ಸಾಧಿಸಿದ್ದು ಕೇಂದ್ರದಲ್ಲೂ ಪ್ರಧಾನಿ ಮೋದಿಗೆ ಬೆಂಬಲವಾಗಿ ಟಿಡಿಪಿ, ಜನಸೇನಾ ನಿಂತಿದೆ. ಸರಕಾರ ರಚನೆ ಚರ್ಚೆ ಆರಂಭದಿಂದಲೂ ಜನಸೇನಾ ನಾಯಕನಿಗೆ ಡಿಸಿಎಂ ಪಟ್ಟದ ನಿರೀಕ್ಷೆ ಇತ್ತು. ಶುಕ್ರವಾರ ಅಧಿಕೃತ ಘೋಷಣೆಯಾಗಿದೆ.

ಆ.30ರಿಂದ ಅಕ್ಕ ಸಮ್ಮೇಳನ ಆಯೋಜನೆ

ಬೆಂಗಳೂರು: ಆರು ವರ್ಷದ ಬಳಿಕ ಅಕ್ಕ ವಿಶ್ವ ಕನ್ನಡ ಸಮ್ಮೇಳನವನ್ನು ಆಯೋಜಿಸಲು ತೀರ್ಮಾನಿಸಲಾಗಿದ್ದು, ಆ.30ರಿಂದ ಸೆ.1ರವರೆಗೆ ಅಮೆರಿಕದ ವರ್ಜೀನಿಯಾದಲ್ಲಿ ನಡೆಯಲಿದೆ. ಈ ಬಗ್ಗೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅಮೆರಿಕ ಕನ್ನಡ ಕೂಟಗಳ ಆಗರ(ಅಕ್ಕ) ದ ಅಧ್ಯಕ್ಷ ರವಿ ಬೋರೇಗೌಡ, ಆರು ವರ್ಷದ ಬಳಿಕ ಅಕ್ಕ ವಿಶ್ವ ಕನ್ನಡ ಸಮ್ಮೇಳನ ಅಮೆರಿಕದ ವರ್ಜೀನಿಯಾ ರಾಜ್ಯದ ರಿಚ್ಮಂಡ್ ನಗರದಲ್ಲಿ ನಡೆಯಲಿದೆ. 42 ಅಮೆರಿಕದ ಕನ್ನಡ ಸಂಘಗಳು ಸೇರಿ ಈ ಕಾರ್ಯಕ್ರಮವನ್ನು ಆಯೋಜಿಸುತ್ತಿವೆ ಎಂದು ತಿಳಿಸಿದರು. ಸಮ್ಮೇಳನದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು, ವಿವಿಧ ಸ್ಪರ್ಧೆಗಳು, ಫ್ಯಾಶನ್ ಶೋ, ಸಾಹಿತ್ಯ ಗೋಷ್ಠಿ, ಬಿಸಿನೆಸ್ ಫೋರಂ, ನಾಡಿನ ವಿಶಿಷ್ಟ ಖಾದ್ಯಗಳ ಭೋಜನ, ವಿಜಯ್ ಪ್ರಕಾಶ್, ರಾಜೇಶ್ ಕೃಷ್ಣನ್ ಮುಂತಾದ ಕಲಾವಿದರಿಂದ ಸಂಗೀತ ಕಾರ್ಯಕ್ರಮ, ನಟ ಪುನೀತ್ ರಾಜ್ ಕುಮಾರ್ ಅವರಿಗೆ ನಮನ ಸಲ್ಲಿಸುವ ಸಂಗೀತ ಸಂಜೆ ನಡೆಯಲಿದೆ.

ವಿವರಪುಟ → 4

ಕುವೈತ್: ಕನ್ನಡಿಗ ಸೇರಿ 45 ಮೃತರ ದೇಹ ಸ್ವದೇಶಕ್ಕೆ

ದೆಹಲಿ: ಮಂಗಾಫ್ ನಗರಲ್ಲಿ ನಡೆದ ಭೀಕರ ಅಗ್ನಿ ದುರಂತದಲ್ಲಿ ಸಾವನ್ನಪ್ಪಿದ ಪ್ರಕರಣದಲ್ಲಿ ಒಬ್ಬ ಕನ್ನಡಿಗೆ ಸೇರಿದಂತೆ 45 ಭಾರತೀಯರ ಮೃತದೇಹಗಳನ್ನು ದೇಶಕ್ಕೆ ತರಲಾಗಿದೆ. ಭಾರತೀಯ ವಾಯುಸೇನೆ ವಿಮಾನದ ಮೂಲಕ ಪಾರ್ಥಿವ ಶರೀರಗಳನ್ನು ಹೊತ್ತು ಕೊಚ್ಚಿಯಲ್ಲಿ ಲ್ಯಾಂಡ್ ಆಗಿದೆ. ಮೃತರಾದ 45 ಭಾರತೀಯಲ್ಲಿ 23 ಮಂದಿ ಕೇರಳ ಮೂಲದವರಾಗಿದ್ದು, ತಮಿಳುನಾಡಿನ 7, ಆಂಧ್ರಪ್ರದೇಶ ಮತ್ತು ಉತ್ತರಪ್ರದೇಶದ ಮೂವರು, ಒಡಿಶಾದ ಇಬ್ಬರು ಹಾಗೂ ಬಿಹಾರ್, ಪಂಜಾಬ್, ಕರ್ನಾಟಕ, ಮಹಾರಾಷ್ಟ್ರ, ಪಶ್ಚಿಮ ಬಂಗಾಳ, ಜಾರ್ಖಂಡ ಮತ್ತು ಹರಿಯಾಣದ ತಲಾ ಒಬ್ಬರು. ರಾಜ್ಯದ ಕಲಬುರಗಿ ಜಿಲ್ಲೆಯ ಓರ್ವ ಕುವೈತ್‌ನಲ್ಲಿ ಸಾವನ್ನಪ್ಪಿದ್ದು ಆಂಬ್ಯುಲೆನ್ಸ್ ಮೂಲಕ ಕೊಚ್ಚಿಯಿಂದ ಪಾರ್ಥಿವ ಶರೀರ ಸ್ವಗ್ರಾಮ ತಲುಪಿದೆ. ಕೇರಳಾ ಮೂಲದ ವ್ಯಾಪಾರಿಯ ಮಾಲೀಕತ್ವದ ಕಟ್ಟಡದಲ್ಲಿ ಈ ಅಗ್ನಿ ದುರಂತ ನಡೆದಿದ್ದು, ಪೊಲೀಸರು ಮಾಲೀಕನನ್ನ ಬಂಧಿಸಿ ವಿಚಾರಣೆಗೆ ಒಳಪಡಿಸಿದ್ದಾರೆ. ಬೆಂಕಿ ಹೊತ್ತಿಕೊಳ್ಳಲು ನಿಖರ ಕಾರಣ ಇನ್ನೂ ತಿಳಿದು ಬಂದಿಲ್ಲ. 195 ಕಾರ್ಮಿಕರು ವಾಸವಿದ್ದ ಬಹು ಮಹಡಿ ಕಟ್ಟಡ ಸುಟ್ಟು ಕರಕಲಾಗಿದ್ದು 50 ಕ್ಕೂ ಅಧಿಕ ಮಂದಿ ಘಟನೆಯಲ್ಲಿ ಗಾಯಗೊಂಡಿದ್ದಾರೆ.

ಭಾರತೀಯ ಸೇನೆಗೆ ಡ್ರೋನಾಸ್ತ್ರದ ಬಲ

ದೆಹಲಿ: ದೇಶೀಯವಾಗಿ ತಯಾರಿಸಲಾದ ಶಕ್ತಿಯುತ ಆಯುಧ 'ನಾಗಾಸ್ತ್ರ-1' ಭಾರತೀಯ ಸೇನೆಯ ಬತ್ತಳಿಕೆ ಸೇರಿದೆ. ಉಗ್ರರ ಅಡಗು ತಾಣಗಳ ಮೇಲೆ ಗುರಿಯಿಟ್ಟು ದಾಳಿ ನಡೆಸಬಲ್ಲ ಡ್ರೋನ್‌ಗಳು ಭಾರತೀಯ ಸೇನೆಯ ಬಲ ಹೆಚ್ಚಿಸಿದೆ. ಇದೇ ಮೊದಲ ಬಾರಿಗೆ ಈ ಶ್ರೇಣಿಯ ಡ್ರೋನ್‌ಗಳನ್ನು ಭಾರತದಲ್ಲಿ ತಯಾರಿಸಲಾಗಿದ್ದು ನಾಗ್ಪುರದಲ್ಲಿರುವ ಸೋಲಾರ್ ಇಂಡಸ್ಟ್ರೀಸ್ ಸಂಸ್ಥೆಗೆ ಸೇರಿದ ಎಕನಾಮಿಕ್ ಎಕ್ಸ್‌ಪ್ಲೋಸಿವ್‌ನಲ್ಲಿ ತಯಾರಿಸಲಾಗಿದೆ. 480 ನಾಗಾಸ್ತ್ರಗಳಿಗೆ ಭಾರತೀಯ ಸೇನೆ ಬೇಡಿಕೆ ಇಟ್ಟಿದ್ದು ಮೊದಲ ಹಂತದಲ್ಲಿ 120 ಡ್ರೋನ್‌ಗಳು ಸೇನೆಯ ಕೈ ಸೇರಿದೆ. ಹಗುರವಾದ ಹಾಗೂ 1 ಕೆಜಿ ಸ್ಫೋಟಕಗಳನ್ನು ಹೊರಬಲ್ಲ ಈ ಡ್ರೋನ್‌ಗಳು 2 ಮೀಟರ್ ಅಂತರದಲ್ಲಿ ಗುರಿಯಿಟ್ಟು ದಾಳಿ ನಡೆಸುವ ಸಾಮರ್ಥ್ಯ ಹೊಂದಿವೆ. ಜತೆಗೆ ಹಗಲು ಹಾಗೂ ರಾತ್ರಿ ಸಮಯದಲ್ಲೂ ಈ ಡ್ರೋನ್‌ಗಳು ಕಾರ್ಯಾಚರಣೆ ನಡೆಸಬಲ್ಲವು. ಈ ಡ್ರೋನ್‌ಗಳು ರಕ್ಷಣಾ ವಲಯದಲ್ಲಿ ಆತ್ಮನಿರ್ಭರ ಭಾರತ ಮತ್ತು ಮೇಕ್ ಇನ್ ಇಂಡಿಯಾ ಯೋಜನೆಗಳಿಗೆ ಪುಷ್ಟಿ ನೀಡಿವೆ.

ರಾಜ್ಯದ ನಿರೀಕ್ಷೆ ಈಡೇರಿಸುವ ಭರವಸೆ

ನೂತನ ಸಚಿವರಿಗೆ ಅದ್ದೂರಿ ಸ್ವಾಗತ

ಬೆಂಗಳೂರು: ಕೇಂದ್ರ ಸಚಿವರಾಗಿ ಅಧಿಕಾರ ಸ್ವೀಕರಿಸಿದ ರಾಜ್ಯದ ನಾಲ್ವರು ನಾಯಕರು ಶುಕ್ರವಾರ ರಾಜ್ಯಕ್ಕೆ ಆಗಮಿಸಿದಾಗ ಬೆಂಗಲಿಗರು ಸಂಭ್ರಮದ ಸ್ವಾಗತ ನೀಡಿದರು. ಬೃಹತ್ ಕೈಗಾರಿಕೆ ಮತ್ತು ಉಕ್ಕು ಖಾತೆ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು ಬೆಂಗಳೂರಿಗೆ ಬಂದೊಡನೆ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಅವರನ್ನು ಭೇಟಿ ಮಾಡಿದರು. ಜಲಶಕ್ತಿ ಮತ್ತು ರೈಲ್ವೆ ಸಹಾಯಕ ಸಚಿವ ವಿ. ಸೋಮಣ್ಣ ಸಿದ್ದಗಂಗಾ ಮಠಕ್ಕೆ ಭೇಟಿ ನೀಡಿ ಶ್ರೀಗಳ ಆಶೀರ್ವಾದ ಪಡದರು. ಆಹಾರ, ಪಡಿತರ ಸಚಿವ ಪ್ರಹ್ಲಾದ ಜೋಶಿ ಮತ್ತು ಎಂಎಸ್‌ಎಂಇ ಸಚಿವೆ ಶೋಭಾ ಕರಂದ್ಲಾಜೆ ಅವರಿಗೂ ಕ್ಷೇತ್ರದ ನಾಯಕರಿಂದ ಅದ್ದೂರಿ ಸ್ವಾಗತ ದೊರೆಯಿತು.

ಸೋಮಣ್ಣ ಪುತ್ರನ ಮೇಲೆ ಎಫ್‌ಐಆರ್

ಅರುಣ್ ಸೋಮಣ್ಣ ವಿರುದ್ಧ ವಂಚನೆ, ಜೀವ ಬೆದರಿಕೆ ಆರೋಪ

- ಇವೆಂಟ್ ಮ್ಯಾನೇಜ್ಮೆಂಟ್ ಕಂಪನಿ ವ್ಯವಹಾರದಲ್ಲಿ ದಂಪತಿಗೆ ವಂಚನೆ, ಜೀವ ಬೆದರಿಕೆ ಹಾಕಿದ ಆರೋಪ

ಬೆಂಗಳೂರು: ಅಚ್ಚರಿಯ ರೀತಿಯಲ್ಲಿ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸಂಪುಟದಲ್ಲಿ ಸೇರ್ಪಡೆಯಾದ ಖುಷಿಯಲ್ಲಿರುವ ಕೇಂದ್ರ ಸಚಿವ ವಿ. ಸೋಮಣ್ಣ ಅವರಿಗೆ ಇದೀಗ ಶಾಕ್ ಎದುರಾಗಿದೆ. ಅಧಿಕಾರ ಸ್ವೀಕರಿಸಿದ ಎರಡನೇ ದಿನದಲ್ಲಿ ಪುತ್ರ ಅರುಣ್ ಸೋಮಣ್ಣ ವಿರುದ್ಧ ಗಂಭೀರ ಸ್ವರೂಪದ ಎಫ್‌ಐಆರ್ ದಾಖಲಾಗಿದೆ.

ಇವೆಂಟ್ ಮ್ಯಾನೇಜ್ಮೆಂಟ್ ಕಂಪನಿ ವ್ಯವಹಾರದಲ್ಲಿ ದಂಪತಿಗೆ ವಂಚನೆ, ಜೀವ ಬೆದರಿಕೆ ಹಾಕಿದ ಆರೋಪದಲ್ಲಿ ಅರುಣ್ ಸೋಮಣ್ಣ, ಜೀವನ್ ಕುಮಾರ್ ಮತ್ತು ಪ್ರಮೋದ್‌ರಾವ್ ಎಂಬುವವರ ವಿರುದ್ಧ ಎಫ್ ಐಆರ್ ದಾಖಲಾಗಿದೆ. ಬೆಂಗಳೂರಿನ ಸಂಜಯನಗರದ ಎಇಸಿಎಸ್ ನಿವಾಸಿ ತೃಪ್ತಿ ಹೆಗಡೆ ಎಂಬುವವರು ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. 37ನೇ ಹೆಚ್ಚುವರಿ ಚೀಫ್ ಮೆಟ್ರೊಪಾಲಿಟನ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯದ ಆದೇಶದ ಮೇರೆಗೆ ಮೂವರ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ.

ದೂರುದಾರರಾದ ತೃಪ್ತಿ ಹಾಗೂ ಮಧ್ವರಾಜ್ ಇವೆಂಟ್ ಮ್ಯಾನೇಜ್ಮೆಂಟ್ ಕಂಪನಿ ನಡೆಸುತ್ತಿದ್ದರು. 2013ರಲ್ಲಿ ಸರಕಾರಿ ಕಾರ್ಯಕ್ರಮವೊಂದರಲ್ಲಿ ಮಧ್ವರಾಜ್‌ಗೆ ಆರುಣ್ ಸೋಮಣ್ಣ ಪರಿಚಯವಾಗಿತ್ತು. 2017ರಲ್ಲಿ ಅರುಣ್ ಸೋಮಣ್ಣ ಪುತ್ರಿಯ ಹುಟ್ಟುಹಬ್ಬ ಕಾರ್ಯಕ್ರಮವನ್ನೂ ಮಧ್ವರಾಜ್ ಒಡೆತನದ ಕಂಪನಿ ಆಯೋಜಿಸಿತ್ತು. ಇದರಿಂದ ಆರುಣ್ ಸೋಮಣ್ಣ ಮಧ್ವರಾಜ್ ಜತೆ ಉತ್ತಮ ಬಾಂಧವ್ಯ ಏರ್ಪಟ್ಟಿತ್ತು. ಅರುಣ್, ಮಧ್ವರಾಜ್ ಜಂಟಿಯಾಗಿ ನೈಬರ್‌ಹುಡ್ ಎಂಬ ಇವೆಂಟ್ ಮ್ಯಾನೇಜ್‌ಮೆಂಟ್ ಕಂಪನಿಯನ್ನು ಪಾಲುದಾರಿಕೆ ಮೇಲೆ ಆರಂಭಿಸಿದ್ದರು. ಆದ್ದರಿಂದ ಕಂಪನಿಯ ಹೂಡಿಕೆ, ಪಾವತಿ ಹಾಗೂ ಸಂಗ್ರಹಣೆಯ ಸಂಪೂರ್ಣ ಜವಾಬ್ದಾರಿಯನ್ನು ಅರುಣ್ ವಹಿಸಿಕೊಂಡಿದ್ದರು. ನಂತರ ಕೆಲ ತಿಂಗಳಲ್ಲಿ ಕಂಪನಿಯ ವ್ಯವಹಾರದಲ್ಲಿ ನಷ್ಟವಾಗಿತ್ತು. ಈ ಹಿನ್ನೆಲೆ ಮಧ್ವರಾಜ್‌ಗೆ ಕಂಪನಿಗೆ ರಾಜೀನಾಮೆ ನೀಡಲು ಒತ್ತಾಯಿಸಿ ಕಿರುಕುಳ, ಕುಟುಂಬಕ್ಕೆ ಬೆದರಿಕೆ ಹಾಕಿರುವ ಆರೋಪ ಅರುಣ್ ವಿರುದ್ಧ ಕೇಳಿಬಂದಿದೆ.

ನೀಟ್ ಯುಜಿ ಪರೀಕ್ಷೆಯಲ್ಲಿ ಅಕ್ರಮ

ಕೇಂದ್ರಕ್ಕೆ ಸುಪ್ರೀಂ ಕೋರ್ಟ್ ನೋಟಿಸ್

ನವದೆಹಲಿ: ನೀಟ್ ಯುಜಿ ಪರೀಕ್ಷೆಯಲ್ಲಿ ಅಕ್ರಮ ನಡೆದ ಆರೋಪದ ಹಿನ್ನೆಲೆಯಲ್ಲಿ ಸುಪ್ರೀಮ್ ಕೋರ್ಟ್ ಕೇಂದ್ರ ಮತ್ತು ರಾಷ್ಟ್ರೀಯ ಪರೀಕ್ಷಾ ಸಂಸ್ಥೆ(ಎನ್‌ಟಿಎ)ಗೆ ಶುಕ್ರವಾರ ನೋಟಿಸ್ ನೀಡಿದೆ. ಅಕ್ರಮಗಳ ಬಗ್ಗೆ ಸಿಬಿಐ ತನಿಖೆ ನಡೆಸ ಬೇಕೆಂಬ ಅರ್ಜಿ ಹಿನ್ನೆಲೆಯಲ್ಲಿ ವರಿಷ್ಠ ಕೋರ್ಟ್ ಈ ಕ್ರಮ ಕೈಗೊಂಡಿದೆ. ಒಂದೇ ಕೇಂದ್ರದ 67 ವಿದ್ಯಾರ್ಥಿಗಳು 720ಕ್ಕೆ 720 ಅಂಕ ಪಡೆದ ಹಿನ್ನೆಲೆಯಲ್ಲಿ ಈ ಅಕ್ರಮ ದೂರು ಕೇಳಿಬಂದಿದೆ. ಹೀಗಾಗಿ ನೀಟ್ ಪರೀಕ್ಷೆಯ ಪಾವಿತ್ರ್ಯ ಹಾಳಾಗಿದೆ ಎಂದು ಸುಪ್ರೀಂ ಕೋರ್ಟ್ ತರಾಟೆಗೆ ತೆಗೆದುಕೊಂಡಿತ್ತು. ಇದರಿಂದ ಎಚ್ಚೆತ್ತುಕೊಂಡ ಕೇಂದ್ರ ಸರ್ಕಾರ, 1563 ವಿದ್ಯಾರ್ಥಿಗಳಿಗೆ ಜೂ.23ರಂದು ಮರುಪರೀಕ್ಷೆ ನಡೆಸುವುದಾಗಿ ನ್ಯಾಯಾಲಯದಲ್ಲಿ ಒಪ್ಪಿಕೊಂಡಿತ್ತು. ಈ ಪ್ರಕರಣದಲ್ಲಿ ಪ್ರಶ್ನೆಪತ್ರಿಕೆ ಸೋರಿಕೆಯಾಗಲೀ, ಅಕ್ರಮ ನಡೆದಿರುವುದಾಗಲಿ ಆಗಿಲ್ಲ ಎಂದು ಸಚಿವ ಧರ್ಮೇಂದ್ರ ಪ್ರಧಾನ್ ಸ್ಪಷ್ಟಪಡಿಸಿದ್ದರು.

ಸವಾಲು ಸ್ವೀಕರಿಸಿಲ್ಲ, ರಾಜೀನಾಮೆ ನೀಡಲ್ಲ: ಶಾಸಕ ಪ್ರದೀಪ್ ಈಶ್ವರ್

- ಸವಾಲು ಸ್ವೀಕರಿಸಿದ್ದರೆ ರಾಜೀನಾಮೆ ನೀಡಲು ಈಗಲೂ ಸಿದ್ಧ
- ಅಖಾಡದಲ್ಲಿ ನಾನು ಇದಿದ್ದರೆ ಕಥೆಯೇ ಬೇರೆಯಾಗುತ್ತಿತ್ತು

ಬೆಂಗಳೂರು: ಲೋಕಸಭಾ ಚುನಾವಣೆ ಸಮಯದಲ್ಲಿ ನಾನು ಹಾಕಿದ್ದ ಸವಾಲನ್ನು ಸುಧಾಕರ್ ಸ್ವೀಕರಿಸಿದ್ದರೆ, ರಾಜೀನಾಮೆ ನೀಡುತ್ತಿದ್ದೆ. ಆದರೆ ಅವರು ಸವಾಲನ್ನೇ ಸ್ವೀಕರಿಸದ ಕಾರಣ ರಾಜೀನಾಮೆ ನೀಡುವ ಅಗತ್ಯವಿಲ್ಲವೆಂದು ಚಿಕ್ಕಬಳ್ಳಾಪುರ ಶಾಸಕ ಪ್ರದೀಪ್ ಈಶ್ವರ್ ಸ್ಪಷ್ಟವಾಗಿ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಸುಧಾಕರ್ ಅವರಿಗೆ ನಾನು ಹಾಕಿದ್ದ ಸವಾಲನ್ನು ಒಂದು ವೇಳೆ, ಸ್ವೀಕರಿಸಿದರೆ ಈಗಲೂ ನಾನು ರಾಜೀನಾಮೆ ನೀಡಲು ಸಿದ್ಧ. ಪ್ರಶ್ನೆಪತ್ರಿಕೆಯನ್ನೇ ಕೊಡದೆ ಉತ್ತರ ತಪ್ಪಾಗಿದೆ ಎಂದು ಆರೋಪಿಸುವುದು ಸರಿಯಲ್ಲ. ರಾಜಕೀಯದಲ್ಲಿ ಎಲ್ಲ ಕಡೆ ನಡೆಯುತ್ತಿರುತ್ತದೆ. ತಲೆಕೆಡಿಸಿಕೊಳ್ಳುವುದು ಬೇಡ. ಈ ಚುನಾವಣಾ ಅಖಾಡದಲ್ಲಿ ನಾನು ಇದ್ದಿದ್ದರೆ ಕಥೆಯೇ ಬೇರೆ ಇರುತ್ತಿತ್ತು. ಎಲ್ಲರೂ ಪ್ರದೀಪ್ ಈಶ್ವರ್ ಆಗಲು ಸಾಧ್ಯವಿಲ್ಲ. ಮುಂದಿನ ದಿನಗಳಲ್ಲಿ ಕಾರ್ಯಕರ್ತರೊಂದಿಗೆ ಮನೆಮನೆ ಸುತ್ತಿ ಕಾಂಗ್ರೆಸ್ ಪಕ್ಷ ಸಂಘಟಿ ಸುವೆ. ಇಲ್ಲಿ ವ್ಯಕ್ತಿಗಿಂತ ಪಕ್ಷ ಮುಖ್ಯ ಎಂದು ಅಭಿಪ್ರಾಯಪಟ್ಟರು.

ಕಾಂಗ್ರೆಸ್ ನನ್ನಂತಹ ಅಹಿಂದ ಹುಡುಗನಿಗೆ ಬೆನ್ನುಲುಬಾಗಿದೆ. ಹೀಗಾಗಿ ಈ ಸಿದ್ಧಾಂತ ನನಗೆ ಇಷ್ಟ. ಕಾಂಗ್ರೆಸ್ ಚುನಾವಣೆ ಕಾರಣಕ್ಕಾಗಿ ಗ್ಯಾರಂಟಿ ಯೋಜನೆಗಳನ್ನು ತಂದಿರಲಿಲ್ಲ. ನಮ್ಮ ಸರಕಾರ ಅವುಗಳನ್ನು ನಿಲ್ಲಿಸುವುದಿಲ್ಲ ಎಂಬ ವಿಶ್ವಾಸವಿದೆ. ಚಿಕ್ಕಬಳ್ಳಾಪುರ ಕ್ಷೇತ್ರದಲ್ಲಿ ನಮಗೆ ಸೋಲಾಗಿಲ್ಲ, ಬದಲಾಗಿ ಗೆಲುವು 5 ವರ್ಷ ಮುಂದೂಡಿಕೆಯಾಗಿದೆ. ಮುಂದೆ ಮತ್ತೆ ನಾವು ಗೆಲ್ಲುತ್ತೇವೆ. ಫಲಿತಾಂಶ ಪ್ರಕಟಗೊಂಡ ಬಳಿಕ ನಮ್ಮ ಮನೆಯ ಮೇಲೆ ಕಲ್ಲುತೂರಿದ ಆರೋಪಿಗಳಿಗೆ ನೋಟಿಸ್ ನೀಡಲಾಗಿದೆ. ಮೈಸೂರಿನ ಮೂವರು ಹುಡುಗರು ನಕಲಿ ರಾಜೀನಾಮೆ ಪತ್ರವನ್ನು ಸಾಮಾಜಿಕ ಜಾಲತಾಣದಲ್ಲಿ ಹರಿಯಬಿಟ್ಟಿರುವುದು ಪತ್ತೆಯಾಗಿದೆ. ಅವರ ಬಂಧನಕ್ಕೂ ಕಾರ್ಯಾಚರಣೆ ನಡೆಯುತ್ತದೆ ಪ್ರದೀಪ್ ಈಶ್ವರ್ ಎಚ್ಚರಿಕೆ ಕೊಟ್ಟರು.

ಕಳೆದ ಒಂದೂವರೆ ವರ್ಷದಿಂದಲೂ ನಾನು ಅತ್ಯಂತ ಸಹನೆಯಿಂದ ಇದ್ದೇನೆ. ನನ್ನ ಮನೆಯ ಮೇಲೆ ಕಲ್ಲುತೂರಾಟ ನಡೆಸಲಾಗಿದೆ, 4-5 ಕಡೆ ದಾಳಿಯಾಗಿದೆ. ಅದಕ್ಕೆಲ್ಲಾ ತಕ್ಷಣ ಪ್ರತಿಕ್ರಿಯಿಸಿದರೆ ಕಾಂಗ್ರೆಸ್ ಕಾರ್ಯಕರ್ತರು ರೊಚ್ಚಿಗೇಳುತ್ತಾರೆ, ಕಾನೂನು ಸುವ್ಯವಸ್ಥೆಗೆ ತೊಡಕಾಗುತ್ತದೆ ಎಂಬ ಕಾರಣಕ್ಕೆ ಸುಮ್ಮನಿದ್ದೇನೆ.
- ಪ್ರದೀಪ್ ಈಶ್ವರ್ ಶಾಸಕ

ಸಂಘಟನೆ ಮರೆತ ರಾಜ್ಯ ಬಿಜೆಪಿ, ಸಂ.ಕಾರ್ಯದರ್ಶಿ ಹುದ್ದೆ ಖಾಲಿ!

- ಬಿಜೆಪಿಯನ್ನು ತಳಮಟ್ಟದಲ್ಲಿ ಕಟ್ಟುವ ಪ್ರಮುಖ ಹುದ್ದೆ
- ವಾರ ಕಳೆದರೂ ವಿಭಾಗವಾರು ಸಂಘಟನಾ ಕಾರ್ಯದರ್ಶಿಗಳ ನೇಮಕವಿಲ್ಲ
- ಸದ್ಯ ರಾಜ್ಯದಲ್ಲಿ ಸಂಘಟನಾ ಕಾರ್ಯದರ್ಶಿಯೂ ಇಲ್ಲ, ವಿಭಾಗ ಕಾರ್ಯದರ್ಶಿಯೂ ಇಲ್ಲ

ಬೆಂಗಳೂರು: ಬಿಜೆಪಿಗೆ 'ಸಂಘ'ಟನೆಯೇ ಶಕ್ತಿ. ಆದರೀಗ ಬೇರುಮಟ್ಟದಲ್ಲಿ ಪಕ್ಷವನ್ನು ಗಟ್ಟಿಗೊಳಿಸುವಲ್ಲಿ ಪ್ರಮುಖ ಪಾತ್ರವಹಿಸುವ ವಿಭಾಗವಾರು ಸಂಘಟನಾ ಕಾರ್ಯದರ್ಶಿಗಳ ಸ್ಥಾನವೇ ಖಾಲಿಯಾಗಿರುವುದು ಇದೀಗ ಪಕ್ಷದಲ್ಲಿ ಭಾರಿ ಚರ್ಚೆಗೆ ನಾಂದಿಯಾಗಿದೆ.

ಲೋಕಸಭಾ ಚುನಾವಣೆ ಮುಗಿಯುತ್ತಿದ್ದಂತೆ ರಾಜ್ಯ ಸಂಘಟನಾ ಕಾರ್ಯದರ್ಶಿಯಾಗಿದ್ದ ಜಿ.ವಿ. ರಾಜೇಶ್ ಅವರನ್ನು ವಾಪಸು ಸಂಘಕ್ಕೆ ಕರೆಸಿಕೊಂಡಿದ್ದು ಅನೇಕರ ಅಚ್ಚರಿಗೆ ಕಾರಣವಾಗಿದೆ. ಇದರ ಬೆನ್ನಲ್ಲೇ ಇದೀಗ ರಾಜ್ಯದ ವಿಭಾಗವಾರು ಸಂಘಟನಾ ಕಾರ್ಯದರ್ಶಿಗಳನ್ನು ವಾಪಸು ಕರೆಸಿಕೊಂಡಿರುವ ನಡೆ ಅನೇಕರಿಗೆ ಅಚ್ಚರಿ ಮೂಡಿಸಿದೆ.

ಬಿಜೆಪಿ ರಾಜ್ಯಾಧ್ಯಕ್ಷ ಸ್ಥಾನದಿಂದ ನಳಿನ್‌ಕುಮಾರ್ ಕಟೀಲ್ ಕೆಳಗಿಳಿದ ದಿನದಿಂದಲೂ ಈ ಬಗ್ಗೆ ಚರ್ಚೆಗಳು ನಡೆದಿತ್ತು. ಆದರೆ ನೂತನ ನೇಮಕದೊಂದಿಗೆ ಈ ಹಿಂದಿನ ವಿಭಾಗವಾರು ಸಂಘಟನಾ ಕಾರ್ಯದರ್ಶಿಗಳನ್ನು ಹಿಂಪಡೆಯುವುದು ಸಂಪ್ರದಾಯ. ಆದರೆ ಇದೇ ಮೊದಲ ಬಾರಿ ಹಾಲಿ ಕಾರ್ಯದರ್ಶಿಗಳನ್ನು ವಾಪಸು ಆರ್ ಎಸ್‌ಎಸ್‌ಗೆ ಕರೆಸಿಕೊಂಡರೂ, ಹೊಸ ನೇಮಕ ಪ್ರಕ್ರಿಯೆ ನಡೆದಿಲ್ಲ. ಸಂಘಟನಾ ಕಾರ್ಯದರ್ಶಿಗಳಿಲ್ಲದಿದ್ದರೆ, ಸ್ಥಳೀಯ ಮಟ್ಟದಲ್ಲಿ ಪಕ್ಷದ ಸಂಘಟನೆಯಲ್ಲಿ ಕೊಂಚ ಹಿನ್ನಡೆಯಾಗುತ್ತದೆ. ಆದ್ದರಿಂದ ಆದಷ್ಟು ಶೀಘ್ರ, ಈ ನೇಮಕ ಪ್ರಕ್ರಿಯೆ ನಡೆಯಬೇಕು ಎನ್ನುವ ಮಾತುಗಳು ಕೇಳಿಬರುತ್ತಿದೆ.

ಸಂಘಟನೆಗೆ ಸಮಸ್ಯೆ: ಮುಂದಿನ ದಿನದಲ್ಲಿ ಎದುರಾಗಲಿರುವ ಸ್ಥಳೀಯ ಸಂಸ್ಥೆ ಚುನಾವಣೆಗೆ ಕಾಂಗ್ರೆಸ್ ಈಗಾಗಲೇ ತಯಾರಿ ಆರಂಭಿಸಿದೆ. ಇನ್ನೊಂದು ವರ್ಷದ ಅವಧಿಯಲ್ಲಿ ಬಿಬಿಎಂಪಿ, ತಾಲೂಕು ಪಂಚಾಯಿತಿ, ಜಿಲ್ಲಾ ಪಂಚಾಯಿತಿ ಚುನಾವಣೆಗಳು ಎದುರಾಗಲಿದೆ. ಈ ಸಮಯದಲ್ಲಿ ವಿಭಾಗವಾರು ಸಂಘಟನಾ ಕಾರ್ಯದರ್ಶಿಗಳು ಪ್ರಮುಖ ಪಾತ್ರನಿರ್ವಹಿಸುತ್ತಾರೆ.

ರಾಜ್ಯದಲ್ಲಿ ಸದ್ಯ ಸಂಘಟನಾ ಕಾರ್ಯದರ್ಶಿಯೂ ಇಲ್ಲದಿರುವಾಗ, ವಿಭಾಗವಾರು ಸಂಘಟನಾ ಕಾರ್ಯದರ್ಶಿಗಳನ್ನು ನೇಮಕ ಮಾಡದಿದ್ದರೆ, ಪಕ್ಷದ ಸಂಘಟನೆಗೆ ಹೊಡೆತ ಬೀಳುತ್ತದೆ ಎನ್ನುವುದು ಅನೇಕರ ಆತಂಕವಾಗಿದೆ.

→ 4

ಫನ್‌ತರಂಗ
- ರಘುಪತಿ ಶೃಂಗೇರಿ -



ರೇಣುಕಾಸ್ವಾಮಿ ಬಾಯಿಗೆ ಬಿರಿಯಾನಿ ಮೂಳೆ ತುರುಕಿದ್ದ ಆರೋಪಿಗಳು

ಬೆಂಗಳೂರು: ರೇಣುಕಾಸ್ವಾಮಿ ಹತ್ಯೆ ಪ್ರಕರಣದಲ್ಲಿ ಇನ್ನಿಬ್ಬರು ಆರೋಪಿಗಳು ಪೊಲೀಸರಿಗೆ ಶರಣಾಗಿದ್ದಾರೆ. ಈ ನಡುವೆ ಪ್ರಕರಣದಲ್ಲಿ ಹೇಗೆಲ್ಲಾ ರೇಣುಕಾಸ್ವಾಮಿಗೆ ಚಿತ್ರಹಿಂಸೆ ನೀಡಲಾಗಿತ್ತು ಎಂಬ ವಿಷಯಗಳು ಒಂದೊಂದಾಗಿ ಬೆಳಕಿಗೆ ಬರುತ್ತಿವೆ. ಅಪಹರಣ ಆಗಿದ್ದ ದಿನ ಊಟ ಕೊಡಿಸಿದ್ದ ದರ್ಶನ್ ಗ್ಯಾಂಗ್, ನಾನು ಶಾಖಾಹಾರಿ ಎಂದರೂ ಬಿಡದೇ ರೇಣುಕಾಸ್ವಾಮಿ ಬಾಯಿಗೆ ಬಿರಿಯಾನಿ ಮೂಳೆ ತುರುಕಿದ್ದರು ಎನ್ನಲಾಗಿದೆ.

ಚಿತ್ರದುರ್ಗದಿಂದ ಜೂನ್ 8ರಂದು ರೇಣುಕಾಸ್ವಾಮಿಯನ್ನು ಅಪಹರಣ ಮಾಡಿ ಬೆಂಗಳೂರಿಗೆ ಕರೆತರಲಾಗಿತ್ತು. ನಂತರ ಆತನನ್ನು ಪಟ್ಟಣಗೆರೆ ಶೆಡ್‌ನಲ್ಲಿ ಕೂಡಿಹಾಕಿ ಟಾರ್ಚರ್ ನೀಡಲಾಗಿದೆ. ಮಧ್ಯಾಹ್ನ ಊಟ ಕೊಡಿಸಿದಾಗ ನಾನು ಸಸ್ಯಹಾರಿ ಎಂದು ರೇಣುಕಾಸ್ವಾಮಿ ಹೇಳಿದ್ದಾನೆ. ಆದರೂ ಬಿಡದೆ ಆರೋಪಿಗಳು ಬಿರಿಯಾನಿ ತಿನ್ನಿಸಿದ್ದಾರೆ. ಬಲವಂತ ಮಾಡಿದಾಗ ಬಿರಿಯಾನಿ ತಿನ್ನದೆ ಕೆಳಗೆ ಉಗಿದಿದ್ದರಿಂದ ರೇಣುಕಾ ಸ್ವಾಮಿಯನ್ನು ಹಿಗ್ಗಾಮುಗ್ಗಾ ಥಳಿಸಿದ್ದ ಗ್ಯಾಂಗ್, ಬಾಸ್ ಬರುತ್ತಾರೆ ಒದೆ ತಿನ್ನಲು ರೆಡಿಯಾಗು. ಬಿರಿಯಾನಿ ತಿಂದರೆ ಶಕ್ತಿ ಬರುತ್ತೆ ಎಂದು ಬಿರಿಯಾನಿ ತಿನ್ನಿಸಲು ಯತ್ನಿಸಿದ್ದಾರೆ. ಈ ಬಗ್ಗೆ ಪೊಲೀಸರ ಮುಂದೆ ಆರೋಪಿ ದೀಪಕ್ ಹೇಳಿಕೆ ಕೊಟ್ಟಿದ್ದಾನೆ.

ಕರಿಯನಿಗೆ ರೌಡಿಶೀಟರ್ ಪಟ್ಟ ಸಾಧ್ಯತೆ?

ಮೆಜೆಸ್ಟಿಕ್ ದರ್ಶನ್ ವಿರುದ್ಧ ಸಾಲು ಸಾಲು ಆರೋಪ | ರೌಡಿಶೀಟರ್ ಪಟ್ಟಿ ತೆರೆಯಲು ಸಿದ್ಧತೆ ನಡೆಸಿಕೊಂಡ ಪೊಲೀಸರು

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಚಿತ್ರದುರ್ಗ ಮೂಲದ ರೇಣುಕಾಸ್ವಾಮಿ ಕೊಲೆ ಪ್ರಕರಣದ ಆರೋಪಿ ನಟ ದರ್ಶನ್ ವಿರುದ್ಧ ರೌಡಿಶೀಟರ್ ಪಟ್ಟ ಕಟ್ಟುವ ಸಾಧ್ಯತೆ ದಟ್ಟವಾಗಿದೆ.

ರೇಣುಕಾ ಸ್ವಾಮಿ ಅಪಹರಣ ಮತ್ತು ಕೊಲೆ ಆರೋಪದ ಮೇಲೆ ಪೊಲೀಸ್ ವಶದಲ್ಲಿರುವ ನಟ ದರ್ಶನ್ ವಿರುದ್ಧ ರೌಡಿ ಪಟ್ಟಿ ತೆರೆಯಲು ಬೆಂಗಳೂರು ನಗರ ಪೊಲೀಸರು ಸಿದ್ಧರಾಗಿದ್ದಾರೆ ಎಂಬುದು ತಿಳಿದುಬಂದಿದೆ. ಪದೇ ಪದೆ ಕ್ರಿಮಿನಲ್ ಚಟುವಟಿಕೆಗಳಲ್ಲಿ ಭಾಗಿಯಾಗುತ್ತಿರುವ ಅವರ ಮೇಲೆ ಕಾನೂನಿನ ಹಿಡಿತ ಸ್ಥಾಪಿಸಲು ರೌಡಿ ಪಟ್ಟ ಅನಿವಾರ್ಯ ಎಂಬ ಅಭಿಪ್ರಾಯ ಹಿರಿಯ ಅಧಿಕಾರಿಗಳು ವ್ಯಕ್ತಪಡಿಸಿದ್ದಾರೆ. ಕೊಲೆ ಪ್ರಕರಣವೊಂದರಲ್ಲಿ ಭಾಗಿಯಾದ ಆರೋಪಿ ಮೇಲೆ ರೌಡಿ ಪಟ್ಟಿಯನ್ನು ತೆರೆಯಲಾಗುತ್ತದೆ. ರೇಣುಕಾ ಸ್ವಾಮಿ ಕೊಲೆ ಪ್ರಕರಣದಲ್ಲೂ ದರ್ಶನ್ ಪ್ರಮುಖ ಆರೋಪಿ. ಹೀಗಾಗಿ ಅವರ ಮೇಲೆಯೂ ರೌಡಿ ಶೀಟರ್ ಓಪನ್ ಮಾಡಬೇಕು ಎಂಬ ಅಭಿಪ್ರಾಯಗಳು ಕೇಳಿ ಬಂದಿದೆ.

ದರ್ಶನ್ ಈ ಹಿಂದೆಯೂ ಹಲವಾರು ಬಾರಿ ಕ್ರಿಮಿನಲ್ ಚಟುವಟಿಕೆಗಳಲ್ಲಿ ಭಾಗಿಯಾಗಿದ್ದರು. ಬೆದರಿಕೆ, ನಿಂದನೆ ಸೇರಿದಂತೆ ನಾನಾ ರೀತಿಯಲ್ಲಿ ಅವರು ಕಾನೂನು ಕ್ರಮವನ್ನು ಎದುರಿಸಿದ್ದರು. ಹೀಗಾಗಿ ಅವರನ್ನು ರೌಡಿ ಪಟ್ಟಿಯೊಳಗೆ ಸೇರಿಸಿ ನಿಯಂತ್ರಣದಲ್ಲಿ ಇಟ್ಟುಕೊಳ್ಳುವುದು ಪೊಲೀಸ್ ಇಲಾಖೆಯ ಆಲೋಚನೆಯಾಗಿದೆ. ಮೈಸೂರಿನ ಹೋಟೆಲ್ ಒಂದರಲ್ಲಿ ಸಪ್ಲೆಯರ್ ಮೇಲೆ ಹಲ್ಲೆ ನಡೆಸಿ ಸುದ್ದಿಯಾಗಿದ್ದರು. ಬೆಂಗಳೂರಿನ ಪಬ್ ಒಂದರಲ್ಲಿ ಅಭಿಮಾನಿ ಮೇಲೆ ಹಲ್ಲೆ ನಡೆಸಿದ್ದು ನಿದರ್ಶನ. ಹೀಗಾಗಿ ಹಳೆ ಪ್ರಕರಣಗಳ ಪರಿಶೀಲನೆ ನಡೆಸಲು ಹಿರಿಯ ಅಧಿಕಾರಿಗಳು ಮುಂದಾಗಿದ್ದು, ಯಾವ್ಯಾವ ಪ್ರಕರಣಗಳು ಬಾಕಿ ಇವೆ, ಠಾಣೆಗಳಲ್ಲಿ ದಾಖಲಾಗಿರುವ ಪ್ರಕರಣಗಳ ಬಗ್ಗೆ ಪರಿಶೀಲನೆ ನಡೆಸಿದ್ದಾರೆ. ಡೆವಿಲ್ ಸಿನಿಮಾದ ನಟ ದರ್ಶನ್ ಅವರ ಕಳೆದ ಮೂರು ದಿನಗಳಿಂದ ಬೆದರಿಕೆ, ದೌರ್ಜನ್ಯ ಆರೋಪಗಳು ಕೇಳಿ ಬಂದಿದ್ದು, ಕರಾಳಮುಖ ಬಯಲಾಗಿದೆ.

ನಟ ದರ್ಶನ್‌ಗೆ ರೌಡಿ ಶೀಟರ್ ಪಟ್ಟ ಕಟ್ಟಿದರೆ ಸಮಾಜಕ್ಕೆ ಮಾರಕ ಎಂದು ಪೊಲೀಸ್ ವ್ಯವಸ್ಥೆ ಗುರುತಿಸುವುದರಿಂದ, ಆತನ ಚಲನವಲನಗಳ ಮೇಲೆ ನಿಗಾ ಇಡಲಾಗುತ್ತದೆ. ಜೊತೆಗೆ ಸಹಚರರ ಮೇಲೂ ನಿಗಾ ಇಡಲಾಗುತ್ತದೆ. ಬ್ಯಾಂಕ್ ಖಾತೆ ಮೇಲೂ ನಿಗಾ ಇಡಲಾಗುತ್ತದೆ. ಜಾತ್ರೆ, ಚುನಾವಣೆ ಇತರ ಪ್ರಮುಖ ಕಾರ್ಯಕ್ರಮಗಳು ವ್ಯಕ್ತಿ ವಾಸಿಸುವ ಸ್ಥಳದ ಸುತ್ತಮುತ್ತ ನಡೆದರೆ ವ್ಯಕ್ತಿಯನ್ನು ವಶಕ್ಕೆ ಪಡೆದು ಗಡಿಪಾರು ಮಾಡಲಾಗುತ್ತದೆ. ಪಾಸ್‌ಪೋರ್ಟ್ ಜಪ್ತಿ, ವಿದೇಶಕ್ಕೆ ಹೋದರೆ ಕಾರಣ ನೀಡಿ ಹೋಗಬೇಕು. ರೌಡಿ ಪೆರೇಡ್‌ಗೆ ಹಾಜರಾಗಬೇಕು. ರಾಜಕೀಯ ಗಲಭೆ, ಕೋಮು ಗಲಭೆಗಳೇನಾದರೂ ಆದರೆ ಮೊದಲಿಗೆ ರೌಡಿ ಶೀಟರ್‌ಗಳನ್ನು ಪೊಲೀಸರು ವಶ ಪಡೆದು ವಿಚಾರಣೆ ಮಾಡುತ್ತಾರೆ. ಹಾಗೇನೇ ಕೆಲವೊಂದು ಸಾಮಾಜಿಕ ನಿರ್ಬಂಧಗಳನ್ನು ರೌಡಿಶೀಟರ್‌ಗೆ ಅನ್ವಯವಾಗುತ್ತದೆ. ಆದ್ದರಿಂದ ಒಂದು ವೇಳೆ ನಟ ದರ್ಶನ್‌ಗೆ ರೌಡಿ ಶೀಟರ್ ಪಟ್ಟ ಕಟ್ಟಿದರೆ ಸಿನಿಮಾ ವಲಯದಲ್ಲಿ ವರ್ಚಸ್ಸು ಕಳೆದುಕೊಳ್ಳುವುದು ಖಚಿತ.

ರೌಡಿಶೀಟರ್ ತೆರೆದರೆ ಏನಾಗಲಿದೆ ದಾಸನ ಭವಿಷ್ಯ

ಇಷ್ಟು ವರ್ಷಗಳ ಕಾಲ ಸೆಲೆಬ್ರಿಟಿಯಾಗಿ ಕಾಣಿಸಿಕೊಂಡಿದ್ದ ಹಾಗೂ ಅಪಾರ ಗೌರವ ಗಳಿಸಿಕೊಂಡಿದ್ದ ನಟ ದರ್ಶನ್ ರೌಡಿಶೀಟರ್ ಎನ್ನುವ ಕಳಂಕ ಹೊತ್ತುಕೊಳ್ಳಬೇಕಾ ಗುತ್ತದೆ. ಶಾಂತಿಸುವ್ಯವಸ್ಥೆಗೆ ಭಂಗ ತರುವ ಆರೋಪದ ಮೇಲೆ ಆಗಾಗ ಸಿಆರ್‌ಪಿಸಿ 110 ಅಡಿಯಲ್ಲಿ ಪ್ರಕರಣ ದಾಖಲಾಗಲಿದೆ. ಪದೇ ಪದೆ ಪೊಲೀಸ್ ಠಾಣೆಯ ಮೆಟ್ಟಿಲನ್ನು ಏರಬೇಕಾಗುತ್ತದೆ. ಚುನಾವಣೆ ಹಾಗೂ ಇನ್ಯಾವುದಾದರೂ ತುರ್ತು ಸಂಧರ್ಭದಲ್ಲಿ ಮುನ್ನೆಚ್ಚರಿಕೆ ಕ್ರಮವಾಗಿ ಅವರ ಮನೆಯ ಮೇಲೆ ಪೊಲೀಸರು ದಾಳಿ ಮಾಡುತ್ತಾರೆ. ಯಾವುದೇ ಅನುಮತಿ ಇಲ್ಲದೆ ಪರಿಶೀಲನೆ ನಡೆಸುತ್ತಾರೆ. ರೌಡಿಚಟುವಟಿಕೆ ಸಕ್ರಿಯರಾಗಿದ್ದಾರೆ ಎಂಬ ಕಾರಣದಲ್ಲಿ ಅವರ ಮೇಲೆ ನಿಗಾ ಇಡುತ್ತಾರೆ. ಖಾಸಗಿತನ ನಷ್ಟವಾಗುತ್ತದೆ. ತುರ್ತು ಸಂದರ್ಭದಲ್ಲಿ ತಹಸೀಲ್ದಾರರ ಮುಂದೆ ಹಾಜರಾಗಿ ಬಾಂಡ್ ಸಲ್ಲಿಸಬೇಕಾದ ಪರಿಸ್ಥಿತಿ ಎದುರಾಗುತ್ತದೆ. ಪೊ ಲೀಸರು ನಡೆಸುವ ರೌಡಿ ಪೆರೇಡ್ ನಲ್ಲಿ ಇತರೆ ರೌಡಿಗಳಂತೆ ನಿಲ್ಲಬೇಕಾದ ಪರಿಸ್ಥಿತಿ ಎದುರಾಗಲಿದೆ.

ಕೌಟುಂಬಿಕ ಕಲಹದಿಂದಲೂ ದಾಸ ಜೈಲು ವಾಸ

ದರ್ಶನ್ ವಿರುದ್ಧ ಹಲವು ಆರೋಪಗಳು ಕೇಳಿ ಬಂದಿದ್ದವು. ಇನ್ನು ಕೌಟುಂಬಿಕ ಕಲಹದಲ್ಲಿಯೂ 28 ದಿನಗಳ ಕಾಲ ಜೈಲಿನಲ್ಲಿ ಇದ್ದು ಬಂದಿದ್ದರು. 2011ರಲ್ಲಿ ವಿಜಯಲಕ್ಷ್ಮಿ ಮೇಲೆ ದರ್ಶನ್ ಮಾರಣಾಂತಿಕ ಹಲ್ಲೆ ಮಾಡಿದ್ದರು. 2016ರಲ್ಲಿ ಮತ್ತೊಮ್ಮೆ ದರ್ಶನ್ ವಿರುದ್ಧ ವಿಜಯಲಕ್ಷ್ಮಿ ದೂರು ನೀಡಿದ್ದ ಘಟನೆಯೂ ನಡೆದಿತ್ತು. ಮಗನನ್ನು ಹತ್ಯೆ ಮಾಡುವುದಾಗಿಯೂ ದರ್ಶನ್ ಬೆದರಿಸುವುದಾಗಿ ಕೇಳಿ ಬಂದಿತ್ತು. ಮಾತ್ರವಲ್ಲ ವಿಜಯಲಕ್ಷ್ಮಿ ಅವರಿಗೆ ಸಿಗರೇಟ್‌ನಿಂದ ಸುಟ್ಟು ಗಾಯಗೊಳಿಸಿದ್ದರು.

ಸ್ವಾಧೀನ ಸೂಚನೆ
(ಸ್ಥಿರ ಆಸ್ತಿಗಾಗಿ)

ಈ ಕಾರಣದಿಂದ:

ಕೆಳಗೆ ಸಹಿ ಮಾಡಲಾಗಿರುವ ಅಧಿಕೃತ ಅಧಿಕಾರಿಯಾಗಿ ಹಣಕಾಸು ಸ್ವತ್ತುಗಳ ಭದ್ರತೆ ಮತ್ತು ಪುನರ್ನಿರ್ಮಾಣ ಮತ್ತು ಭದ್ರತಾ ಹಿತಾಸಕ್ತಿ ಕಾಯ್ದೆ, 2002 ರ ಅಡಿಯಲ್ಲಿ ವಿಸ್ತಾ ಐಟಿಸಿಎಲ್ (ಇಂಡಿಯಾ) ಲಿಮಿಟೆಡ್ (CIN : U66020MH1995PLC095507) ಮತ್ತು ಸೆಕ್ಷನ್ 13 (12) ಅಡಿಯಲ್ಲಿ ಪ್ರದಾನ ಮಾಡಲಾದ ಅಧಿಕಾರಗಳ ಅನುಷ್ಠಾನದಲ್ಲಿ ಭದ್ರತಾ ಆಸಕ್ತಿ (ಜಾರಿ) ನಿಯಮಗಳ ನಿಯಮ 3 ರೊಂದಿಗೆ ಓದಲಾಗುತ್ತದೆ, 2002 ದಿನಾಂಕ **28.02.2024** ರಂದು ಸಾಲಗಾರರಿಗೆ **ಎ.ಎಸ್. ಮುನಿಸ್ವಾಮಿ ರಾಜು ಎಚ್.ಯು.ಎಫ್ ನ ಸದಸ್ಯರಾಗಿ ಬ್ಲೂ ಹಾರಿಜಾನ್ ಹೋಟೆಲ್ಸ್ ಪ್ರೈವೇಟ್ ಲಿಮಿಟೆಡ್, ಶ್ರೀ. ಎ.ಸಿ.ಶ್ರೀನಿವಾಸರಾಜು, ಶ್ರೀ. ಎ.ವಿ. ಸಚ್ಚಿದಾನಂದ ರಾಜು, ಶ್ರೀ. ಎ.ವಿ. ನಿತಿನ್ ರಾಜು, ಶ್ರೀಮತಿ. ಎ.ಆರ್. ಪ್ರೇಮಾ, ಶ್ರೀ. ಎ.ಸಿ.ಶ್ರೀನಿವಾಸ ರಾಜು (ಕರ್ತಾ ಮತ್ತು ವ್ಯವಸ್ಥಾಪಕ); ಶ್ರೀಮತಿ. ಎ.ಸಿ.ಸುಂದರಮ್ಮ; ಶ್ರೀಮತಿ. ಎ. ಎಸ್. ವೀಣ; ಶ್ರೀಮತಿ. ಎ.ಆರ್. ಪ್ರೇಮ; ಶ್ರೀಮತಿ. ಎ.ಆರ್. ಶ್ರುತಿ; ಶ್ರೀ. ಎ.ವಿ. ನಿತಿನ್ ರಾಜು; ಶ್ರೀಮತಿ. ಎ.ವಿ. ಗೀತಾ; ಶ್ರೀಮತಿ. ಎ.ಆರ್. ಗಾಯತ್ರಿ; ಶ್ರೀ. ಎ.ವಿ. ಸಚ್ಚಿದಾನಂದ ರಾಜು; ಶ್ರೀಮತಿ. ಎ.ಸಿ.ಪುಷ್ಪ ರಾಜು; ಶ್ರೀಮತಿ. ಕೆ.ಸಿ. ಸುಧಾ; ಶ್ರೀಮತಿ. ಎಂ.ಜಯಮ್ಮ; ಮತ್ತು ಶ್ರೀಮತಿ. ಕೆ.ಸುಂದರಮ್ಮ, ಮತ್ತು, ವೆಂಟಕಮ್ಮ ಎಂಟರ್‌ಪ್ರೈಸಸ್ ಮತ್ತು ಶ್ರೀಮತಿ. ಎ.ವಿ. ಗೀತಾ ಅವರ ಮೇಲೆ ಕರೆ ಮಾಡಿರುವಂತೆ, 22.10.2020 ರ ಡಿಬೆಂಚರ್ ಟ್ರಸ್ಟ್ ಡೀಡ್ ಮತ್ತು 28.02.2024 ರಂತೆ ಕಾಲಕಾಲಕ್ಕೆ ತಿದ್ದುಪಡಿ ಮತ್ತು ಪೂರಕವಾಗಿ ವಿರುದ್ಧ ನೋಟಿಸ್ ಸಂಖ್ಯೆ DT/2023-24/ERP/4936** ರಲ್ಲಿ ನಮೂದಿಸಿರುವ ಮೊತ್ತ **ರೂ. 835,26,90,777/-(ರೂಪಾಯಿ ಎಂಟು ನೂರ ಮೂವತ್ತ ಐದು ಕೋಟಿ ಇಪ್ಪತ್ತ ಆರು ಲಕ್ಷ ತೊಂಬತ್ತು ಸಾವಿರದ ಏಳು ನೂರ ಎಪ್ಪತ್ತ ಏಳು ಮಾತ್ರ)** ಮತ್ತು ಸದರಿ ನೋಟಿಸ್ ನನ್ನು ಸ್ವೀಕರಿಸಿದ ದಿನಾಂಕದಿಂದ 60 ದಿನಗಳ ಒಳಗೆ ಅದರ ಬಡ್ಡಿಯನ್ನು ಸೇರಿಸಿ ಮರುಪಾವತಿಸಲು ಡಿಮ್ಯಾಂಡ್ ನೋಟಿಸ್ ಅನ್ನು ಹೊರಡಿಸಲಾಗಿದೆ.

ಸಾಲಗಾರರು ಸಾಲ ಮರುಪಾವತಿಸಲು ವಿಫಲವಾದ ಕಾರಣ ಕೆಳಗೆ ತಿಳಿಸಿರುವ **ಸಾಂಕೇತಿಕ ಸ್ವಾಧೀನ**ವನ್ನು ಅಧಿಕಾರ ಪ್ರಯೋಗ ಮಾಡುವಿಕೆ ಸೆಕ್ಷನ್ 13(4)ರ ಆಕ್ಟ್‌ನ ನಿಯಮ 8 ರೊಂದಿಗೆ ಓದಿ ತಿಳಿಸಿರುವ ನಿಯಮದ ಪ್ರಕಾರ ದಿನಾಂಕ **12.06.2024** ರಂದು ಮಾಡಲಾಗಿದೆ ಎಂದು ಸಾಲಗಾರನಿಗೆ ಮತ್ತು ಸಾರ್ವಜನಿಕವಾಗಿ ತಿಳಿಯಪಡಿಸಲಾಗುವುದು.

ಪ್ರತ್ಯೇಕವಾಗಿ ಸಾಲಗಾರರಿಗೆ ಮತ್ತು ಸರ್ವಸಾಮಾನ್ಯವಾದ ಸಾರ್ವಜನಿಕರ ಎಚ್ಚರಿಕೆಗಾಗಿ ಯಾವುದೇ ತರಹದ ಆಸ್ತಿ ವ್ಯವಹಾರ ಮಾಡದಿರಲು ಮತ್ತು ಆಸ್ತಿಯಲ್ಲಿನ ಯಾವುದೇ ವ್ಯವಹಾರವು **ವಿಸ್ತಾ ಐಟಿಸಿಎಲ್ (ಇಂಡಿಯಾ) ಲಿಮಿಟೆಡ್**‌ನ ಬಾಕಿಇರುವ ಮೊತ್ತ **ರೂ. 835,26,90,777/- (ರೂಪಾಯಿ ಎಂಟು ನೂರ ಮೂವತ್ತ ಐದು ಕೋಟಿ ಇಪ್ಪತ್ತ ಆರು ಲಕ್ಷ ತೊಂಬತ್ತು ಸಾವಿರದ ಏಳು ನೂರ ಎಪ್ಪತ್ತ ಏಳು ಮಾತ್ರ) 28.02.2024** ವರೆಗಿನ ಮೊತ್ತ ಮತ್ತು ಜೊತೆಗೆ ಅದರ ಮೇಲಿನ ಬಡ್ಡಿಗೆ ಒಳಪಟ್ಟಿದೆ.

ಸೆಕ್ಯೂರ್ಡ್ ಆಸ್ತಿಗಳನ್ನು ರಿಡೀಮ್ ಮಾಡಲು ಉಪಲಬ್ಧವಿರುವ ಸಮಯದ ಬಗ್ಗೆ ಸಾಲಗಾರರ ಗಮನವನ್ನು ಕಾಯ್ದೆಯ ಸೆಕ್ಷನ್ 13ರ ಉಪ-ಸೆಕ್ಷನ್ (8)ರ ಪ್ರಾವಧಾನಗಳತ್ತ ಸೆಳೆಯಲಾಗುತ್ತದೆ.

ಸ್ಥಿರಾಸ್ತಿಯ ವರ್ಣನೆ

ಆಸ್ತಿ : 3

ವೆಂಕಟಮ್ಮ ಕಾಂಪ್ಲೆಕ್ಸ್:- ಈ ಕೆಳಗಿನಂತೆ ಭೂಮಿಯ ಎಲ್ಲಾ ಭಾಗಗಳು ಅಥವಾ ಭೂಮಿ/ಆಸ್ತಿಗಳ ಪಾರ್ಸೆಲ್‌ಗಳು, ಎಲ್ಲಾ ಪ್ರಸ್ತುತ ಮತ್ತು/ಅಥವಾ ಭವಿಷ್ಯದ ಎಫ್‌ಎಸ್‌ಐ, ರಚನೆಗಳು, ಕಟ್ಟಡಗಳು (ಪ್ರಸ್ತುತ ವೆಂಕಟಮ್ಮ ಕಾಂಪ್ಲೆಕ್ಸ್ ಎಂದು ಕರೆಯಲ್ಪಡುವ ಕಟ್ಟಡವನ್ನು ಒಳಗೊಂಡಂತೆ ಬೇಸ್‌ಮೆಂಟ್, ಗ್ರೌಂಡ್, ಮೊದಲ ಮತ್ತು ಎರಡನೇ ಮಹಡಿ, ಹೊಸ ಪಿಐಡಿ ಸಂಖ್ಯೆ. 167-W0034-29, 16,400 ಚದರ ಅಡಿಗಳನ್ನು ಹೊಂದಿದೆ ಒಟ್ಟಾರೆಯಾಗಿ ಸೂಪರ್ ಬಿಲ್ಟ್ ಅಪ್ ಏರಿಯಾ), ಪೀಠೋಪಕರಣಗಳು, ಫಿಕ್ಸ್ಚರ್‌ಗಳು, ಫಿಟ್ಟಿಂಗ್‌ಗಳು, ಇರುವ ಮತ್ತು/ಅಥವಾ ಸ್ಥಾವರ ಮತ್ತು ಯಂತ್ರೋಪಕರಣಗಳನ್ನು ಸ್ಥಾಪಿಸಲಾಗಿರುವ / ಸ್ಥಾಪಿಸಲಾಗುವ ಮತ್ತು/ಅಥವಾ ನಿರ್ಮಿಸಲಾಗಿರುವ / ಅಲ್ಲಿ ನಿರ್ಮಿಸಲಾಗುವ ಮತ್ತು ಮೆ. ವೆಂಕಟಮ್ಮ ಎಂಟರ್‌ಪ್ರೈಸಸ್‌ನ ಎಲ್ಲಾ ಪ್ರಸ್ತುತ ಮತ್ತು ಭವಿಷ್ಯದ ಹಕ್ಕುಗಳು, ಶೀರ್ಷಿಕೆ ಮತ್ತು/ಅಥವಾ ಆಸಕ್ತಿಗಳು ಮತ್ತು ಶ್ರೀ. ಎ.ಸಿ.ಶ್ರೀನಿವಾಸರಾಜು, ಶ್ರೀಮತಿ. ಎ.ಆರ್. ಪ್ರೇಮಾ, ಶ್ರೀಮತಿ. ಎ.ಆರ್. ಗಾಯತ್ರಿ, ಶ್ರೀಮತಿ. ಎ.ಆರ್. ಶ್ರುತಿ, ಶ್ರೀಮತಿ. ಎ.ವಿ. ಗೀತಾ, ಶ್ರೀ. ಎ.ವಿ. ನಿತಿನ್ ರಾಜು ಮತ್ತು ಶ್ರೀ. ಎ.ವಿ. ಸಚ್ಚಿಂದಾನಂದ ರಾಜು, ಪಾಲುದಾರಿಕೆ ಸಂಸ್ಥೆಯ ಪಾಲುದಾರರು, ಎ.ಎಸ್. ಮುನಿಸ್ವಾಮಿ ರಾಜು ಎಚ್.ಯು.ಎಫ್ ನ ಸದಸ್ಯರಾದ ಮೆ. ವೆಂಕಟಮ್ಮ ಎಂಟರ್‌ಪ್ರೈಸಸ್, ಮತ್ತು ಶ್ರೀ. ಎ.ಸಿ.ಶ್ರೀನಿವಾಸರಾಜು, ಶ್ರೀಮತಿ. ಎ.ಸಿ.ಸುಂದರಮ್ಮ, ಶ್ರೀಮತಿ. ಎ. ಎಸ್. ವೀಣಾ, ಶ್ರೀಮತಿ. ಎ.ಆರ್. ಪ್ರೇಮಾ, ಶ್ರೀಮತಿ. ಎ.ಆರ್. ಶ್ರುತಿ, ಶ್ರೀ. ಎ.ವಿ. ನಿತಿನ್ ರಾಜು, ಶ್ರೀಮತಿ. ಎ.ವಿ. ಗೀತಾ, ಶ್ರೀಮತಿ. ಎ.ಆರ್. ಗಾಯತ್ರಿ, ಶ್ರೀ. ಎ.ವಿ. ಸಚ್ಚಿದಾನಂದ ರಾಜು, ಶ್ರೀಮತಿ. ಎ.ಸಿ.ಪುಷ್ಪ ಶ್ರೀಮತಿ. ಕೆ.ಸಿ. ಸುಧಾ, ಶ್ರೀಮತಿ. ಎಂ.ಜಯಮ್ಮ ಮತ್ತು ಶ್ರೀಮತಿ. ಕೆ.ಸುಂದರಮ್ಮ, ಅದರಲ್ಲಿ: ಆಸ್ತಿ ಮುನಿಸಿಪಲ್ ನಂ. 23 ಹಳೆಯ ನಂ. 35/38-23, ಹಳೆಯ ಸೈಟ್ ನಂ. 4, ಸೌತ್ ಎಂಡ್ ಬಸವನಗುಡಿ, ಬೆಂಗಳೂರು, ನೆಲೆಗೊಂಡಿದೆ, ಪೂರ್ವದಿಂದ ಪಶ್ಚಿಮಕ್ಕೆ ಅಳತೆ: 40.6 ಅಡಿ. ಮತ್ತು ಉತ್ತರದಿಂದ ದಕ್ಷಿಣಕ್ಕೆ: 117 ಅಡಿ, ಎ.ಎಸ್. ಮುನಿಸ್ವಾಮಿ ರಾಜು, ಎಚ್.ಯು.ಎಫ್ ನ ಸದಸ್ಯರು ಮತ್ತು ಮೆ. ವೆಂಕಟಮ್ಮ ಎಂಟರ್‌ಪ್ರೈಸಸ್ ನವರ ಮಾಲೀಕತ್ವದಲ್ಲಿದೆ.

ದಿನಾಂಕ : 12.06.2024 | **ಅಧಿಕೃತ ಅಧಿಕಾರಿ**
ಸ್ಥಳ : ಬೆಂಗಳೂರು | **ವಿಸ್ತಾ ಐಟಿಸಿಎಲ್ (ಭಾರತ) ಲಿಮಿಟೆಡ್**

KAVVERI TELECOM PRODUCTS LIMITED
CIN: L85110KA1996PLC019627
Regd. Office: Plot No 31-36, I Main, II Stage, Arekere Mico Layout, Bannerghatta Road, Bangalore - 560076
Tel: 080-41215999, Fax: 080-41215966,
Email: companysecretary@kavveritelecoms.com
Website: www.kavveritelecoms.com

NOTICE TO MEMBERS OF 1st EXTRA-ORDINARY GENERAL MEETING AND E-VOTING INFORMATION

NOTICE is hereby given to the Shareholders **(the "Shareholders" or the "Members")** of Kavveri Telecom Products Limited **("Company")** that an Extra-Ordinary General Meeting **("EGM")** of the Company will be held on Friday, July 05, 2024 at 10.00 A.M. at the registered office of the company at No. 31-36, I Main, II Stage, Arekere MICO Layout, Bannerghatta Road, Bangalore 560 076. Electronic copy of the Notice of the Extra Ordinary General Meeting (EGM) along with Attendance Slip and Proxy Form were been sent to all the members whose email address is registered with the Company or with their respective Depository Participants ("Depository") and the Company's Registrar and Transfer Agent, Integrated Registry Management Services Private Limited at irg@integratedindia.in ., in accordance with the MCA Circulars and the SEBI Circulars. Notice of EGM available on the website of the Company i.e., https://www.kavveritelecoms.com and the website of BSE Limited and NSE i.e., www.bseindia.com and https://www.nseindia.com/ . Pursuant to the provisions of section 108 of the Act read with Rule 20 of the Companies (Management and Administration) Rules, 2014 and Regulation 44 of SEBI Listing Regulations, Shareholders will have an opportunity to cast their vote remotely on the business as set forth in the Notice of the EGM though electronic voting system. Additionally, the Company is providing the facility of voting through e-voting system during the EGM. The manner of voting remotely for shareholders holding shares in dematerialized mode, physical mode and for shareholders who have not registered their email addresses will be provided in the Notice to the Shareholders. All the Members are hereby informed that:

1. Cut-off date is Thursday, 27 th June 2024 for determining the name of members eligible for E voting EGM.
2. E-voting shall commence on Tuesday, 02nd, July 2024 (09:00 a.m.) and ends Thursday, July 04, 2024, (05:00 p.m.). During this period, Members holding shares either in physical or dematerialized form as on cut-off date i.e., Thursday, 27 th June 2024 may cast their vote electronically as instructed in the Notice of EGM.
3. Members who have cast their vote by remote e-voting prior to the EGM may attend the EGM at the registered office and cast their vote again. Members who have not cast their vote by remote e-voting and are present in the EGM at the registered office, shall be eligible to vote through e-voting/ physical voting at the EGM.
4. Any person who acquires shares of the Company and becomes a member of the Company after the Notice of the EGM has been sent electronically by the Company, and holds shares as on the cut-off date i.e., 27th June. 2024, may contact Integrated Registry Management Services Private Limited at irg@integratedindia.in and obtain a copy of the Notice. In case of any queries, the members may visit the website of Company i.e. https://www.kavveritelecoms.com .
5. The results of the remote e-voting and e-voting at the EGM along with the report of the Scrutinizer will be placed on the website of the Company and on the website of NSE and BSE limited within two working days from the conclusion of the EGM which is to be held on 05th July, 2024 for information of the members and shall also be communicated to the Stock Exchanges.

For **Kavveri Telecom Products Limited**
Sd/- **CHENNAREDDY SHIVAKUMARREDDY,**
Managing Director
DIN: 01189348

Date: 14/06/2024
Place: Bangalore

ರೇಣುಕಾಸ್ವಾಮಿ ಕಿಡ್ನಾಪ್; ಹೀಗಿತ್ತು ಚಿತ್ರದುರ್ಗ ಟು ಬೆಂಗಳೂರು ಪ್ರಯಾಣ

ಬೆಂಗಳೂರು: ಸಿನಿಮಾ ರೀತಿಯಲ್ಲಿ ದರ್ಶನ್ ಗ್ಯಾಂಗ್ ಚಿತ್ರದುರ್ಗದಿಂದ ರೇಣುಕಾಸ್ವಾಮಿಯನ್ನು ಅಪಹರಣ ಮಾಡಿ ಬೆಂಗಳೂರಿಗೆ ಕರೆ ತಂದು ಹತ್ಯೆ ಮಾಡಿರುವ ಸಂಪೂರ್ಣ ಮಾಹಿತಿ ಬೆಳಕಿಗೆ ಬಂದಿದೆ.

ರೇಣುಕಾ ಸ್ವಾಮಿಯನ್ನು ಬೆಂಗಳೂರಿಗೆ ಕರೆದುಕೊಂಡು ಹೋಗಲು ರಾಘವೇಂದ್ರ ಸೇರಿದಂತೆ ಇನ್ನಿತರ ಆರೋಪಿಗಳು, ರವಿ ಕಾರನ್ನು ಬಾಡಿಗೆಗೆ ಬುಕ್ ಮಾಡಿದ್ದಾರೆ. ಚಿತ್ರದುರ್ಗದ ಕುಂಚಿಗನಾಳ್ ಸಮೀಪದ ಜಗಳೂರು ಮಹಾಲಿಂಗಪ್ಪ ಪೆಟ್ರೋಲ್ ಬಂಕ್ ಬಳಿ, ರೇಣುಕಾ ಸ್ವಾಮಿಯನ್ನು ಕಾರಿನಲ್ಲಿ ಕೂರಿಸಿಕೊಂಡ ರಾಘವೇಂದ್ರ ಜತೆಗೆ ಆಟೋ ಚಾಲಕ ಜಗ್ಗು, ಅನುಕಿರಣ್, ರಾಜು ಎಂಬುವವರು ಕೂಡ ಇದ್ದರು. ತುಮಕೂರು ಬಳಿ ಎಲ್ಲರೂ ಊಟ ಮಾಡಿದ್ದಾರೆ. ಆಗ ಸ್ವತಃ ರೇಣುಕಾ ಸ್ವಾಮಿಯ ಅದಕ್ಕೆ ದುಡ್ಡು ನೀಡಿದ್ದಾರೆ. ಅಲ್ಲಿಂದ ಸೀದಾ ಕೆಂಗೇರಿಗೆ ಬಂದವರೇ, ಪಟ್ಟಣಗೆರೆ ಶೆಡ್ ಲೊಕೇಷನ್ ಶೇರ್ ಮಾಡಿಸಿಕೊಂಡು, ಅಲ್ಲಿಗೆ ಹೋಗಿದ್ದಾರೆ. ರಾಘವೇಂದ್ರ, ಹೇಳಿದಂತೆ ರವಿ ಕಾರನ್ನು ಪಟ್ಟಣಗೆರೆ ಶೆಡ್‌ಗೆ ತಿರುಗಿಸಿದ್ದಾರೆ.

ಶೆಡ್‌ಗೆ ಹೋಗುತ್ತಿದ್ದಂತೆಯೇ, ಅಲ್ಲಿ ಹಲವು ಮಂದಿ ಇರುವುದು ರವಿ ಗಮನಕ್ಕೆ ಬಂದಿದೆ. ಕಾರಿನಿಂದ ರೇಣುಕಾ ಸ್ವಾಮಿಯನ್ನು ಇಳಿಸಿಕೊಂಡ ರಾಘವೇಂದ್ರ, ಶೆಡ್ ನತ್ತ ಕರೆದುಕೊಂಡು ಹೋಗಿದ್ದಾನೆ. ರವಿಗೆ ಕಾರಿನಲ್ಲೇ ಇರುವಂತೆ ಹೇಳಿದ್ದಾನೆ. ಅಲ್ಲಿ ಏನು ನಡೆಯುತ್ತದೆ ಎಂಬುದು ಅರಿವಿಗೆ ಬಾರದೇ ಕಾರಿನಲ್ಲೇ ರವಿ ಮಲಗಿದ್ದಾನೆ. ಅತ್ತ ಶೆಡ್‌ನಲ್ಲೇ ರೇಣುಕಾ ಸ್ವಾಮಿಯ ಕೊಲೆಯಾಗಿದೆ. ಕೆಲವರನ್ನು ಕೇಸ್‌ನಲ್ಲಿ ಸರೆಂಡರ್ ಆಗಲು ಸಂಚು ಕೂಡ ಮಾಡಲಾಗಿದೆ. ಮಧ್ಯರಾತ್ರಿವರೆಗೂ ಶೆಡ್‌ನ ಹೊರಗೆ ರವಿ ಮತ್ತು ಇತರರು ಕಾಯುತ್ತಾ ಸಮಯ ಕಳೆದಿದ್ದಾರೆ. ಆ ನಂತರ ಬಂದು ರೇಣುಕಾಸ್ವಾಮಿ ಸಾವಿಗೀಡಾಗಿರುವ ವಿಷಯ ತಿಳಿಸಿ, ಪ್ರಕರಣದಲ್ಲಿ ಆರೋಪಿಗಳಾಗಿ ಶರಣಾಗಲು ಮನವೊಲಿಸುವ ಪ್ರಯತ್ನ ಮಾಡಿದ್ದಾರೆ. ಆಗ ಚಾಲಕ ರವಿ ಆತಂಕಕ್ಕೊಳಗಾಗಿ, ಅಣ್ಣಾ ಇದೆಲ್ಲ ನಮಗೇಕಣ್ಣಾ? ಬಾಡಿಗೆ ಕೊಟ್ಟರೆ ಹೊರಟು ಹೋಗ್ತಿವಿ ಎಂದು ದುಂಬಾಲು ಬಿದ್ದಿದ್ದಾನೆ. ಸ್ವಲ್ಪ ಹೊತ್ತಿನ ನಂತರ ಶೆಡ್‌ನಿಂದ ರಘು ಹೊರಗೆ ಬಂದು ಬಾಡಿಗೆ ಬಾಬ್ತು 4 ಸಾವಿರ ರು. ಹಣ ಕೊಟ್ಟು ಕಳುಹಿಸಿದ್ದಾರೆ. ಜಗ್ಗು, ಅನುಕಿರಣ್, ರಾಜು ಜತೆಗೆ ರವಿ ಜೂನ್ 9ರ ಬೆಳಗಿನ ಜಾವ 4 ಗಂಟೆಗೆ ಅಲ್ಲಿಂದ ಚಿತ್ರದುರ್ಗಕ್ಕೆ ಮರಳಿದ್ದಾನೆ.

ಸಿಸಿಟಿವಿ ದಾಖಲೆಗಳಲ್ಲಿ ಮಾಹಿತಿ ಲಭ್ಯ: ದರ್ಶನ್ ಗ್ಯಾಂಗ್ ಪ್ರತಿಯೊಂದು ಚಟುವಟಿಕೆಗೆಗಳು ಸಿಸಿ ಕ್ಯಾಮೆರಾದಲ್ಲಿ ದಾಖಲಾಗಿದ್ದು ಪ್ರಕರಣದಲ್ಲಿ ಸಿಸಿಟಿವಿ ದೃಶ್ಯಗಳು ಪ್ರಮುಖ ಸಾಕ್ಷ್ಯವಾಗಿ ಪರಿಗಣನೆಯಾಗಲಿದೆ. ಜೂನ್ 8 ರ ಬೆಳಗ್ಗೆ 9:48ರ ವೇಳೆಗೆ ಸ್ಕೂಟಿಯಲ್ಲಿ ರೇಣುಕಾಸ್ವಾಮಿ ತೆರಳಿದ್ದರು. ಈ ವೇಳೆ ಸ್ಕಾರ್ಪಿಯೋ ಕಾರಿನಲ್ಲಿ ದರ್ಶನ್ ಅಭಿಮಾನಿ ಸಂಘದ ಅಧ್ಯಕ್ಷ ರಘು ಮತ್ತು ಇತರರು ಆತನನ್ನು ಹಿಂಬಾಲಿಸಿದ್ದಾರೆ. ಚಳ್ಳಕೆರೆ ಗೇಟ್ ಕಡೆಯಿಂದ ಅಪೊಲೋದತ್ತ ತೆರಳುತ್ತಿದ್ದಾಗ ರೇಣುಕಾಸ್ವಾಮಿಯನ್ನು ದರ್ಶನ್ ಗ್ಯಾಂಗ್ ನಂಬಿಸಿದೆ. ನಂತರ ರಿಕ್ಷಾದಲ್ಲಿ ಕೂರಿಸಿ ಕುಂಚಿಗನಾಳ್ ಬಳಿ ಕಾರಿಗೆ ಶಿಫ್ಟ್ ಮಾಡುವ ಮೂಲಕ ರೇಣುಕಾಸ್ವಾಮಿಯನ್ನು ಅಪಹರಣ ಮಾಡಿದ್ದಾರೆ. ಬಾಡಿಗೆಗೆ ಎಂದು ಹೇಳಿ ತಂದಿದ್ದ ರವಿ ಕಾರಿನಲ್ಲಿ ಅಪಹರಣ ಮಾಡಿದ್ದಾರೆ. ಅಂದು ಬೆಳಗ್ಗೆ 11:56ರ ಸುಮಾರಿಗೆ ಕಾರು ಹತ್ತಿಸಿಕೊಂಡ ದೃಶ್ಯ ಸಿಸಿಟಿವಿಯಲ್ಲಿ ಸೆರೆಯಾಗಿದೆ.

ಹಂತಕರ ವಿರುದ್ಧ ಇವೆ 16 ಸಾಕ್ಷಿಗಳು!

- ದರ್ಶನ್, ಪವಿತ್ರಾಗೌಡ, ನಾಗ, ವಿನಯ್, ಸೇರಿ 6 ಮಂದಿಯ ಟವರ್ ಡಂಪ್.
- ಪೊಲೀಸ್ ಅಧಿಕಾರಿಗಳ ಜತೆ ಕೃತ್ಯದ ಬಗ್ಗೆ ಚರ್ಚಿಸಿರುವ ಕರೆಗಳ ಮಾಹಿತಿ
- ಕೃತ್ಯದ ನಂತರ ಕಾರ್ತಿಕ್, ಕೇಶವ್, ನಿಖಿಲ್ ಕೊಲೆ ಮಾಡಿದ್ದಾಗಿ ಸರಂಡರ್
- ಮೃತದೇಹ ಬಿಸಾಡಲು ತಲಾ 5 ಲಕ್ಷ ನೀಡಿದ್ದಾಗಿ ಆರೋಪಿ ದೀಪಕ್ ಹೇಳಿಕೆ
- ದೀಪಕ್ ವಿಚಾರಣೆ ವೇಳೆ ಪ್ರದೋಶ್, ಪವನ್, ವಿನಯ್ ಹೆಸರು ಬಹಿರಂಗ
- ವಿನಯ್, ಪವನ್, ಪ್ರದೋಶ್ ವಿಚಾರಣೆ ವೇಳೆ ದರ್ಶನ್, ಪವಿತ್ರಾಗೌಡ ಹೆಸರು
- ರೇಣುಕಾಸ್ವಾಮಿ ಅಶ್ಲೀಲ ಸಂದೇಶ ಕಳಿಸಿದ್ದನ್ನು ದರ್ಶನ್‌ಗೆ ಹೇಳಿದ್ದ ಪವಿತ್ರಾ ಗೌಡ
- ವಿಚಾರಣೆ ವೇಳೆ ಪೊಲೀಸರೆದುರು ಈ ಬಗ್ಗೆ ಹೇಳಿಕೊಂಡಿರುವ ಪವಿತ್ರಾ ಗೌಡ
- ಚಿತ್ರದುರ್ಗದ ದರ್ಶನ್ ಅಭಿಮಾನಿ ಸಂಘದ ಅಧ್ಯಕ್ಷ ರಾಘವೇಂದ್ರನಿಂದ ಅಪಹರಣ.
- ಪವನ್, ಪವಿತ್ರಾ, ದರ್ಶನ್ ಹೇಳಿದಂತೆ ರೇಣುಕಾ ಕರೆತಂದಿರುವ ಬಗ್ಗೆ ರಘು ಹೇಳಿಕೆ
- ಶೆಡ್‌ನಲ್ಲಿ ಮೃತ ರೇಣುಕಾಸ್ವಾಮಿಯ ರಕ್ತದ ಕಲೆ, ಕೂದಲು, ಬೆವರಿನ ಮಾದರಿ.
- ಆರೋಪಿಗಳ ಬೆರಳಚ್ಚು, ಫುಟ್‌ಪ್ರಿಂಟ್, ರಕ್ತದ ಮಾದರಿ ಪಡೆದ ಪೊಲೀಸರು.
- ರೇಣುಕಾಸ್ವಾಮಿ ಬೆರಳಚ್ಚು, ಆರೋಪಿಗಳ ಬೆರಳಚ್ಚು ಹೊಂದಾಣಿಕೆ ಸಾಧ್ಯತೆ.
- ಕೊಲೆ ನಂತರ ದರ್ಶನ್‌ಗೆ ಸಾಮಾನ್ಯ, ವಾಟ್ಸ್ ಆ್ಯಪ್ ಕಾಲ್ ಮಾಡಿದ್ದ ಆರೋಪಿಗಳು.
- ಒಂದೇ ಲೊಕೇಷನ್‌ನಲ್ಲಿ ಆರೋಪಿಗಳ ಮೊಬೈಲ್ ಸಿಡಿಆರ್, ಟವರ್ ಡಂಪ್ ಪತ್ತೆ.

ರೇಣುಕಾಸ್ವಾಮಿಯ ಕೊನೆ ಕ್ಷಣ ಹೇಗಿತ್ತು?

- **ಜೂ.8 :** ಬೆಳಗ್ಗೆ 9:48 – ಚಿತ್ರದುರ್ಗ ಹೈವೇಗೆ ರೇಣುಕಾ
- **ಜೂ.8:** ಬೆಳಗ್ಗೆ 10:33 – ರೇಣುಕಾಸ್ವಾಮಿ ಅಪಹರಣ. (ಆಟೋದಲ್ಲಿ ಕರೆದೊಯ್ದ ಆರೋಪಿಗಳು)
- **ಜೂ.8:** ಬೆಳಗ್ಗೆ 10:56 – ಬೆಂಗಳೂರು ಕಡೆಗೆ ರೇಣುಕಾಸ್ವಾಮಿ. ಕಾರಿನಲ್ಲಿ ಕರೆದೊಯ್ದ ಜಗ್ಗ, ರಾಘು, ಅನು
- **ಜೂ.8:** ಮಧ್ಯಾಹ್ನ 1:15 – ತುಮಕೂರಿಗೆ ಆಗಮನ. ಆಹಾರ ಸೇವಿಸಿದ ಆರೋಪಿಗಳು
- **ಜೂ.8:** ಮಧ್ಯಾಹ್ನ 2:30 – ಆರ್.ಆರ್.ನಗರ ಶೆಡ್‌ಗೆ ಬಂದ ಕಾರು
- **ಜೂ.8 :** ಮಧ್ಯಾಹ್ನ 3:30 – ಶೆಡ್‌ಗೆ ದರ್ಶನ್ ಆಗಮನ
- **ಜೂ.8:** ಮಧ್ಯಾಹ್ನ 3:45 – ದರ್ಶನ್ ಮತ್ತು ಗ್ಯಾಂಗ್‌ನಿಂದ ಹಲ್ಲೆ
- **ಜೂ.8:** ಸಂಜೆ 6:00 – ತೀವ್ರ ಅಸ್ವಸ್ಥರಾಗಿ ರೇಣುಕಾ ಸಾವು
- **ಜೂ.8 :** ರಾತ್ರಿ 8:00 – ಶವ ಸಾಗಾಟಕ್ಕೆ ಯತ್ನ, ಶವ ಸಾಗಾಟಕ್ಕೆ ಒಪ್ಪದ ಎ8 ಆರೋಪಿ ರವಿ
- **ಜೂ.9 :** ಮುಂಜಾನೆ 3:35 – ಶೆಡ್‌ನಿಂದ ಶವ ಸಾಗಾಟ
- **ಜೂ.9 :** ಮುಂಜಾನೆ 3:45 – ಸುಮ್ಮನಹಳ್ಳಿ ಬಳಿ ಶವ ಎಸೆದ ಆರೋಪಿಗಳು

ಸ್ವಾಧೀನ ಸೂಚನೆ
(ಸ್ಥಿರ ಆಸ್ತಿಗಾಗಿ)

ಈ ಕಾರಣದಿಂದ:

ಕೆಳಗೆ ಸಹಿ ಮಾಡಲಾಗಿರುವ ಅಧಿಕೃತ ಅಧಿಕಾರಿಯಾಗಿ ಹಣಕಾಸು ಸ್ವತ್ತುಗಳ ಭದ್ರತೆ ಮತ್ತು ಪುನರ್ನಿರ್ಮಾಣ ಮತ್ತು ಭದ್ರತಾ ಹಿತಾಸಕ್ತಿ ಕಾಯ್ದೆ, 2002 ರ ಅಡಿಯಲ್ಲಿ ವಿಸ್ತಾ ಐಟಿಸಿಎಲ್ (ಇಂಡಿಯಾ) ಲಿಮಿಟೆಡ್ (CIN : U66020MH1995PLC095507) ಮತ್ತು ಸೆಕ್ಷನ್ 13 (12) ಅಡಿಯಲ್ಲಿ ಪ್ರದಾನ ಮಾಡಲಾದ ಅಧಿಕಾರಗಳ ಅನುಷ್ಠಾನದಲ್ಲಿ ಭದ್ರತಾ ಆಸಕ್ತಿ (ಜಾರಿ) ನಿಯಮಗಳ ನಿಯಮ 3 ರೊಂದಿಗೆ ಓದಲಾಗುತ್ತದೆ, 2002 ದಿನಾಂಕ **28.02.2024** ರಂದು ಸಾಲಗಾರರಿಗೆ **ಎ.ಎಸ್. ಮುನಿಸ್ವಾಮಿ ರಾಜು ಎಚ್.ಯು.ಎಫ್ ನ ಸದಸ್ಯರಾಗಿ ಬ್ಲೂ ಹಾರಿಜಾನ್ ಹೋಟೆಲ್ಸ್ ಪ್ರೈವೇಟ್ ಲಿಮಿಟೆಡ್, ಶ್ರೀ. ಎ.ಸಿ.ಶ್ರೀನಿವಾಸರಾಜು, ಶ್ರೀ. ಎ.ವಿ. ಸಚ್ಚಿದಾನಂದ ರಾಜು, ಶ್ರೀ. ಎ.ವಿ. ನಿತಿನ್ ರಾಜು, ಶ್ರೀಮತಿ. ಎ.ಆರ್. ಪ್ರೇಮಾ, ಶ್ರೀ. ಎ.ಸಿ.ಶ್ರೀನಿವಾಸ ರಾಜು (ಕರ್ತಾ ಮತ್ತು ವ್ಯವಸ್ಥಾಪಕ); ಶ್ರೀಮತಿ. ಎ.ಸಿ.ಸುಂದರಮ್ಮ; ಶ್ರೀಮತಿ. ಎ. ಎಸ್. ವೀಣ; ಶ್ರೀಮತಿ. ಎ.ಆರ್. ಪ್ರೇಮ; ಶ್ರೀಮತಿ. ಎ.ಆರ್. ಶ್ರುತಿ; ಶ್ರೀ. ಎ.ವಿ. ನಿತಿನ್ ರಾಜು; ಶ್ರೀಮತಿ. ಎ.ವಿ. ಗೀತಾ; ಶ್ರೀಮತಿ. ಎ.ಆರ್. ಗಾಯತ್ರಿ; ಶ್ರೀ. ಎ.ವಿ. ಸಚ್ಚಿದಾನಂದ ರಾಜು; ಶ್ರೀಮತಿ. ಎ.ಸಿ.ಪುಷ್ಪ ರಾಜು; ಶ್ರೀಮತಿ. ಕೆ.ಸಿ. ಸುಧಾ; ಶ್ರೀಮತಿ. ಎಂ.ಜಯಮ್ಮ; ಮತ್ತು ಶ್ರೀಮತಿ. ಕೆ.ಸುಂದರಮ್ಮ, ಮತ್ತು, ವೆಂಟಕಮ್ಮ ಎಂಟರ್‌ಪ್ರೈಸಸ್ ಮತ್ತು ಶ್ರೀಮತಿ. ಎ.ವಿ. ಗೀತಾ ಅವರ ಮೇಲೆ ಕರೆ ಮಾಡಿರುವಂತೆ, 22.10.2020 ರ ಡಿಬೆಂಚರ್ ಟ್ರಸ್ಟ್ ಡೀಡ್ ಮತ್ತು 28.02.2024 ರಂತೆ ಕಾಲಕಾಲಕ್ಕೆ ತಿದ್ದುಪಡಿ ಮತ್ತು ಪೂರಕವಾಗಿ ವಿರುದ್ಧ ನೋಟಿಸ್ ಸಂಖ್ಯೆ DT/2023-24/ERP/4936** ರಲ್ಲಿ ನಮೂದಿಸಿರುವ ಮೊತ್ತ **ರೂ. 835,26,90,777/-(ರೂಪಾಯಿ ಎಂಟು ನೂರ ಮೂವತ್ತ ಐದು ಕೋಟಿ ಇಪ್ಪತ್ತ ಆರು ಲಕ್ಷ ತೊಂಬತ್ತು ಸಾವಿರದ ಏಳು ನೂರ ಎಪ್ಪತ್ತ ಏಳು ಮಾತ್ರ)** ಮತ್ತು ಸದರಿ ನೋಟಿಸ್ ನನ್ನು ಸ್ವೀಕರಿಸಿದ ದಿನಾಂಕದಿಂದ 60 ದಿನಗಳ ಒಳಗೆ ಅದರ ಬಡ್ಡಿಯನ್ನು ಸೇರಿಸಿ ಮರುಪಾವತಿಸಲು ಡಿಮ್ಯಾಂಡ್ ನೋಟಿಸ್ ಅನ್ನು ಹೊರಡಿಸಲಾಗಿದೆ.

ಸಾಲಗಾರರು ಸಾಲ ಮರುಪಾವತಿಸಲು ವಿಫಲವಾದ ಕಾರಣ ಕೆಳಗೆ ತಿಳಿಸಿರುವ **ಸಾಂಕೇತಿಕ ಸ್ವಾಧೀನ**ವನ್ನು ಅಧಿಕಾರ ಪ್ರಯೋಗ ಮಾಡುವಿಕೆ ಸೆಕ್ಷನ್ 13(4)ರ ಆಕ್ಟ್‌ನ ನಿಯಮ 8 ರೊಂದಿಗೆ ಓದಿ ತಿಳಿಸಿರುವ ನಿಯಮದ ಪ್ರಕಾರ ದಿನಾಂಕ **12.06.2024** ರಂದು ಮಾಡಲಾಗಿದೆ ಎಂದು ಸಾಲಗಾರನಿಗೆ ಮತ್ತು ಸಾರ್ವಜನಿಕವಾಗಿ ತಿಳಿಯಪಡಿಸಲಾಗುವುದು.

ಪ್ರತ್ಯೇಕವಾಗಿ ಸಾಲಗಾರರಿಗೆ ಮತ್ತು ಸರ್ವಸಾಮಾನ್ಯವಾದ ಸಾರ್ವಜನಿಕರ ಎಚ್ಚರಿಕೆಗಾಗಿ ಯಾವುದೇ ತರಹದ ಆಸ್ತಿ ವ್ಯವಹಾರ ಮಾಡದಿರಲು ಮತ್ತು ಆಸ್ತಿಯಲ್ಲಿನ ಯಾವುದೇ ವ್ಯವಹಾರವು **ವಿಸ್ತಾ ಐಟಿಸಿಎಲ್ (ಇಂಡಿಯಾ) ಲಿಮಿಟೆಡ್**‌ನ ಬಾಕಿಇರುವ ಮೊತ್ತ **ರೂ. 835,26,90,777/- (ರೂಪಾಯಿ ಎಂಟು ನೂರ ಮೂವತ್ತ ಐದು ಕೋಟಿ ಇಪ್ಪತ್ತ ಆರು ಲಕ್ಷ ತೊಂಬತ್ತು ಸಾವಿರದ ಏಳು ನೂರ ಎಪ್ಪತ್ತ ಏಳು ಮಾತ್ರ) 28.02.2024** ವರೆಗಿನ ಮೊತ್ತ ಮತ್ತು ಜೊತೆಗೆ ಅದರ ಮೇಲಿನ ಬಡ್ಡಿಗೆ ಒಳಪಟ್ಟಿದೆ.

ಸೆಕ್ಯೂರ್ಡ್ ಆಸ್ತಿಗಳನ್ನು ರಿಡೀಮ್ ಮಾಡಲು ಉಪಲಬ್ಧವಿರುವ ಸಮಯದ ಬಗ್ಗೆ ಸಾಲಗಾರರ ಗಮನವನ್ನು ಕಾಯ್ದೆಯ ಸೆಕ್ಷನ್ 13ರ ಉಪ-ಸೆಕ್ಷನ್ (8)ರ ಪ್ರಾವಧಾನಗಳತ್ತ ಸೆಳೆಯಲಾಗುತ್ತದೆ.

ಸ್ಥಿರಾಸ್ತಿಯ ವರ್ಣನೆ

ಆಸ್ತಿ: 1 (ಎ)

ವೇಗಾ ಸಿಟಿ ಮಾಲ್:- 1,60,076 ಚದರ ಅಡಿ ವಿಸ್ತೀರ್ಣದ ಅವಿಭಜಿತ ಭೂಮಿಯ ಎಲ್ಲಾ ಭಾಗಗಳು (I) ಭೂಮಿಯ ಸರ್ವೆ ಸಂಖ್ಯೆ 172/1 ಅಳತೆ 3 ಎಕರೆ 12 ಗುಂಟಾಸ್, ಪರಿವರ್ತನೆ ಸಂಖ್ಯೆ B. DIS, ALN. SR. 3361/76-77 ದಿನಾಂಕ 22.08.1977 **ಬಿಲೇಕಹಳ್ಳಿ, ಬೇಗೂರು ಹೋಬಳಿ ಮತ್ತು (II) ಭೂಮಿಯ ಸರ್ವೆ ಸಂಖ್ಯೆ** 75 **ಅಳತೆಯ** 1 **ಎಕರೆ** 12 **ಗುಂಟಾಸ್, ಪರಿವರ್ತನೆ ಸಂಖ್ಯೆ B. DIS, ALN. SR. 96/77-78 ದಿನಾಂಕ 08.08.1977 ಎನ್.ಎಸ್. ಪಾಳ್ಯ, ಬೇಗೂರು ಹೋಬಳಿ, ಶ್ರೀನಿವಾಸ ಇಂಡಸ್ಟ್ರಿಯಲ್ ಎಸ್ಟೇಟ್, ಬನ್ನೇರಘಟ್ಟ ರಸ್ತೆ, ಬೆಂಗಳೂರು ದಕ್ಷಿಣ ತಾಲೂಕು - 560076, ರಲ್ಲಿ ನೆಲೆಗೊಂಡಿದೆ ಎಲ್ಲಾ ಪ್ರಸ್ತುತ ಮತ್ತು/ಅಥವಾ ಭವಿಷ್ಯದ ರಚನೆಗಳು, ಕಟ್ಟಡಗಳು, ಪ್ರಯೋಜನಗಳು, ಅರ್ಹತೆಗಳು, ಭವಿಷ್ಯ ಮತ್ತು/ಅಥವಾ ಬಳಕೆಯಾಗದ ಅಭಿವೃದ್ಧಿಯ ಸಂಭಾವ್ಯ, ಮಹಡಿ ಜಾಗದ ಸೂಚ್ಯಂಕ (ಪ್ರಸ್ತುತ ವೇಗಾ ಸಿಟಿ ಎಂದು ಕರೆಯಲ್ಪಡುವ ವಾಣಿಜ್ಯ ಮಾಲ್ ಒಳಗೊಂಡಂತೆ) ಒಟ್ಟಾರೆಯಾಗಿ 1,07,194.27 ಚದರ ಮೀಟರ್‌ಗಳನ್ನು ನಿರ್ಮಿಸಿದ ಪ್ರದೇಶವನ್ನು ಹೊಂದಿದೆ ಮತ್ತು 1,60,076 ಚದರ ಅಡಿಗಳ ಅನುಪಾತದ ಯುಡಿಎಸ್, ಪೀಠೋಪಕರಣಗಳು, ಫಿಕ್ಸ್ಚರ್‌ಗಳು, ಫಿಟ್ಟಿಂಗ್‌ಗಳು, ಇರುವ ಮತ್ತು / ಅಥವಾ ಸ್ಥಾವರ ಮತ್ತು ಯಂತ್ರೋಪಕರಣಗಳನ್ನು ಸ್ಥಾಪಿಸಲಾಗಿರುವ / ಸ್ಥಾಪಿಸಲಾಗುವ ಮತ್ತು / ಅಥವಾ ನಿರ್ಮಿಸಲಾಗಿರುವ / ಅಲ್ಲಿ ನಿರ್ಮಿಸಲಾಗುವ ಮತ್ತು ಎಲ್ಲಾ ಪ್ರಸ್ತುತ ಮತ್ತು ಭವಿಷ್ಯದ ಹಕ್ಕುಗಳು, ಶೀರ್ಷಿಕೆ ಮತ್ತು / ಅಥವಾ ಎ.ಎಸ್. ಮುನಿಸ್ವಾಮಿ ರಾಜು ಎಚ್.ಯು.ಎಫ್ ನ ಇದರ ಕರ್ತಾ ಶ್ರೀ ಎಸಿ ಶ್ರೀನಿವಾಸ ರಾಜು ಪ್ರತಿನಿಧಿಸಿದ್ದಾರೆ.**

ಆಸ್ತಿ: 1 (ಬಿ)

ವೇಗಾ ಸಿಟಿ ಮಾಲ್:- 1,60,076 ಚದರ ಅಡಿ ವಿಸ್ತೀರ್ಣದ ಅವಿಭಜಿತ ಭೂಮಿಯ ಎಲ್ಲಾ ಭಾಗಗಳು (I) ಭೂಮಿಯ ಸರ್ವೆ ಸಂಖ್ಯೆ 172/1 ಅಳತೆ 3 ಎಕರೆ 12 ಗುಂಟಾಸ್, ಪರಿವರ್ತನೆ ಸಂಖ್ಯೆ B. DIS, ALN. SR. 3361/76-77 ದಿನಾಂಕ 22.08.1977 **ಬಿಲೇಕಹಳ್ಳಿ, ಬೇಗೂರು ಹೋಬಳಿ ಮತ್ತು (II) ಭೂಮಿಯ ಸರ್ವೆ ಸಂಖ್ಯೆ** 75 **ಅಳತೆಯ** 1 **ಎಕರೆ** 12 **ಗುಂಟಾಸ್, ಪರಿವರ್ತನೆ ಸಂಖ್ಯೆ B. DIS, ALN. SR. 96/77-78 ದಿನಾಂಕ 08.08.1977 ಎನ್.ಎಸ್. ಪಾಳ್ಯ, ಬೇಗೂರು ಹೋಬಳಿ, ಶ್ರೀನಿವಾಸ ಇಂಡಸ್ಟ್ರಿಯಲ್ ಎಸ್ಟೇಟ್, ಬನ್ನೇರಘಟ್ಟ ರಸ್ತೆ, ಬೆಂಗಳೂರು ದಕ್ಷಿಣ ತಾಲೂಕು - 560076, ರಲ್ಲಿ ನೆಲೆಗೊಂಡಿದೆ ಎಲ್ಲಾ ಪ್ರಸ್ತುತ ಮತ್ತು/ಅಥವಾ ಭವಿಷ್ಯದ ರಚನೆಗಳು, ಕಟ್ಟಡಗಳು, ಪ್ರಯೋಜನಗಳು, ಅರ್ಹತೆಗಳು, ಭವಿಷ್ಯ ಮತ್ತು/ಅಥವಾ ಬಳಕೆಯಾಗದ ಅಭಿವೃದ್ಧಿಯ ಸಂಭಾವ್ಯ, ಮಹಡಿ ಜಾಗದ ಸೂಚ್ಯಂಕ (ಪ್ರಸ್ತುತ ವೇಗಾ ಸಿಟಿ ಎಂದು ಕರೆಯಲ್ಪಡುವ ವಾಣಿಜ್ಯ ಮಾಲ್ ಒಳಗೊಂಡಂತೆ) ಒಟ್ಟಾರೆಯಾಗಿ 1,07,194.27 ಚದರ ಮೀಟರ್‌ಗಳನ್ನು ನಿರ್ಮಿಸಿದ ಪ್ರದೇಶವನ್ನು ಹೊಂದಿದೆ ಮತ್ತು 1,60,076 ಚದರ ಅಡಿಗಳ ಅನುಪಾತದ ಯುಡಿಎಸ್, ಪೀಠೋಪಕರಣಗಳು, ಫಿಕ್ಸ್ಚರ್‌ಗಳು, ಫಿಟ್ಟಿಂಗ್‌ಗಳು, ಇರುವ ಮತ್ತು / ಅಥವಾ ಸ್ಥಾವರ ಮತ್ತು ಯಂತ್ರೋಪಕರಣಗಳನ್ನು ಸ್ಥಾಪಿಸಲಾಗಿರುವ / ಸ್ಥಾಪಿಸಲಾಗುವ ಮತ್ತು / ಅಥವಾ ನಿರ್ಮಿಸಲಾಗಿರುವ / ಅಲ್ಲಿ ನಿರ್ಮಿಸಲಾಗುವ ಮತ್ತು ಎಲ್ಲಾ ಪ್ರಸ್ತುತ ಮತ್ತು ಭವಿಷ್ಯದ ಹಕ್ಕುಗಳು, ಶೀರ್ಷಿಕೆ ಮತ್ತು / ಅಥವಾ ಎ.ಎಸ್. ಮುನಿಸ್ವಾಮಿ ರಾಜು ಎಚ್.ಯು.ಎಫ್ ನ ಇದರ ಕರ್ತಾ ಶ್ರೀ ಎಸಿ ಶ್ರೀನಿವಾಸ ರಾಜು ಪ್ರತಿನಿಧಿಸಿದ್ದಾರೆ.**

ದಿನಾಂಕ : 12.06.2024 | **ಅಧಿಕೃತ ಅಧಿಕಾರಿ**
ಸ್ಥಳ : ಬೆಂಗಳೂರು | **ವಿಸ್ತಾ ಐಟಿಸಿಎಲ್ (ಭಾರತ) ಲಿಮಿಟೆಡ್**

ಸ್ವಾಧೀನ ಸೂಚನೆ
(ಸ್ಥಿರ ಆಸ್ತಿಗಾಗಿ)

ಈ ಕಾರಣದಿಂದ,

ಈಡೆಲ್‌ವಾಯಿಸ್ ಅಸೆಟ್ ರಿಕನ್‌ಸ್ಟ್ರಕ್ಷನ್ ಕಂಪೆನಿ ಲಿಮಿಟೆಡ್ (''ಇಎಆರ್‌ಸಿ'') (CIN:U67100MH2007PLC174759) ನ ಅಧಿಕಾರ ಕೊಟ್ಟಿರುವ ಅಧಿಕಾರಿಯ ಹಸ್ತಾಕ್ಷರವಿರುವ ಐಹಿಕತೆ ಮತ್ತು ಪುನರ್ ನಿರ್ಮಾಣ ಮತ್ತು ಫೈನಾನ್ಸ್ ನ ಸಾಲ ತೀರಿಸಲು ಇರುವ ಸ್ವತ್ತು ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯೂರಿಟಿಸ್ ಆಕ್ಟ್ 2002 ಮತ್ತು ಅಧಿಕಾರದ ಪ್ರಯೋಗ ಮಾಡುವಿಕೆಯ ಸೆಕ್ಷನ್ 13 (12) ನಿಯಮ 3 ರ ಸೆಕ್ಯೂರಿಟಿಸ್ (ಎನ್‌ಫೋರ್ಸ್‌ಮೆಂಟ್) ನಿಯಮ, 2002 ದೊಂದಿಗೆ ಓದಿರಿ. ಬೇಡಿಕಯ ಸೂಚನೆ ಮುಲಕ ಪ್ರಕಟಿಸಿದ ತಾರೀಖು **05.09.2022** ರಂದು ಕರೆದು ಸಾಲಗಾರ **ಬೂಚಪ್ಪ ಸದಾನಂದ, ಅಭಿಷೇಕ್ ಸದಾನಂದ ಮತ್ತು ಮಂಜುಳಾ ಸದಾನಂದ** ನೋಟಿಸಿನಲ್ಲಿ ಹೇಳಿರುವಂತೆ ಮರುಪಾವತಿಸಬೇಕಾದ ಸದರಿ ಸೌಲಭ್ಯಕ್ಕೆ ದಿನಾಂಕ **01.09.2022** ರ ವರೆಗೆ **ರೂ. 2,88,31,081.82 (ಎರಡು ಕೋಟಿ ಎಂಬತ್ತೆಂಟು ಲಕ್ಷ ಮೂವತ್ತೊಂದು ಸಾವಿರದ ಎಂಬತ್ತೊಂದು ರೂಪಾಯಿ ಮತ್ತು ಎಂಬತ್ತೆರಡು ಪೈಸೆ ಮಾತ್ರ)** ಸಾಲ ಖಾತೆ ನಂ. **HLAPBAN00145995** ಸದರಿ ನೋಟಿಸ್ ದೊರೆತ 60 ದಿನಗಳೊಳಗೆ, ಪೂರ್ಣ ಹಣಪಾವತಿ / ಚೆಕ್ ಪರಿವರ್ತಿತವಾಗಿ ನಗದು ಹಣ ಲಭ್ಯವಾಗುವ ತನಕ **02.09.2022** ರಿಂದ ಮುಂದಿನ ಬಡ್ಡಿ ಹಾಗೂ ದಂಡದ ಬಡ್ಡಿ ವಿಧಿಸಲಾಗುತ್ತದೆ.

ಅನಂತರ, **ಐಎಚ್‌ಎಫ್‌ಎಲ್** ಸಾಲಗಾರ (ರಿಗೆ) /ಗ್ಯಾರಂಟರ್‌ಗೆ(ಗಳಿಗೆ) / ಮಾರ್ಟ್‌ಗೇಜರ್(ಗಳಿಗೆ) ನೀಡಿದ ಸೌಲಭ್ಯಗಳ ಕಾರಣವಾಗಿ ಸಾಲಗಾರ /ಗ್ಯಾರಂಟರ್(ಗಳು) / ಮಾರ್ಟ್‌ಗೇಜರ್(ಗಳು) ಹಿಂದಿರುಗಿಸಬೇಕಾದ ಬಾಕಿ ಸಾಲಗಳಿಗೆ ಸಂಬಂಧಿಸಿದಂತೆ, **ಇಎಆರ್‌ಸಿ ಟ್ರಸ್ಟ್‌ನ ಟ್ರಸ್ಟಿ ಆಗಿ ಎಡೆಲ್‌ವೇಸ್ ಅಸೆಟ್ ರೀಕನ್‌ಸ್ಟ್ರಕ್ಷನ್ ಕಂಪನಿ ಲಿಮಿಟೆಡ್ ಸಂಸ್ಥೆಯು ಎಸ್‌ಸಿ 432 ಮತ್ತು ಇಎಆರ್‌ಸಿ ಟ್ರಸ್ಟ್-ಎಸ್‌ಸಿ 439ರ** ಟ್ರಸ್ಟಿ ಆಗಿ ದಿನಾಂಕ **25.08.2023** ರ ಅಸ್ಸೈನ್‌ಮೆಂಟ್ ಅಗ್ರಿಮೆಂಟ್ ಪ್ರಕಾರ, ತನ್ನ ಎಲ್ಲಾ ಹಕ್ಕುಗಳು, ಹಕ್ಕುಪತ್ರ, ಬಡ್ಡಿ ಮತ್ತು ಪ್ರಯೋಜನಗಳನ್ನು ಹಾಗೂ ಎಲ್ಲಾ ಸೆಕ್ಯುರಿಟಿಗಳನ್ನು, ಸೆಕ್ಯುರಿಟಿ ರಸೀದಿಗಳ ಹೋಲ್ಡರ್‌ಗಳ ಪ್ರಯೋಜನಕ್ಕಾಗಿ **ಆರ್ಸಿಲ್-ಸಿಪಿಎಸ್-IV, ಟ್ರಸ್ಟ್‌ನ ('ಆರ್ಸಿಲ್')** ಟ್ರಸ್ಟಿಯಾಗಿ ಕೆಲಸ ಮಾಡುತ್ತಿರುವ ಅಸೆಟ್ ರೀಕನ್‌ಸ್ಟ್ರಕ್ಷನ್ ಕಂಪನಿ (ಇಂಡಿಯ) ಲಿಮಿಟೆಡ್‌ಗೆ ವಹಿಸಿಕೊಟ್ಟಿದೆ. ಆದ್ದರಿಂದ, ಈ ಅಸೈನ್‌ಮೆಂಟ್‌ನ ಕಾರಣವಾಗಿ, ಈಗ **ಎಡೆಲ್‌ವೇಸ್ ಅಸೆಟ್ ರೀಕನ್‌ಸ್ಟ್ರಕ್ಷನ್ ಕಂಪನಿ ಲಿಮಿಟೆಡ್‌ನ** ಜಾಗದಲ್ಲಿ ಆರ್ಸಿಲ್ ಇದೆ ಮತ್ತು ಆರ್ಥಿಕ ದಾಖಲೆಗಳ ಅಡಿಯಲ್ಲಿ ಸನರಿ ಸೌಲಭ್ಯಗಳಿಗಾಗಿ ಸಾಲಗಾರ /ಗ್ಯಾರಂಟರ್(ಗಳು) / ಮಾರ್ಟ್‌ಗೇಜರ್(ಗಳು) ಸಿದ್ಧಪಡಿಸಿ ಕಾರ್ಯಗತಗೊಳಿಸಿದ ಸೆಕ್ಯುರಿಟಿ ಇಂಟ್‌ರೆಸ್ಟ್ ಒಳಗೊಂಡಂತೆ ತನ್ನ ಹಕ್ಕುಗಳು ಮತ್ತು ಪ್ರಯೋಜನಗಳ ಅಧಿಕಾರವನ್ನು ಚಲಾಯಿಸಲು ಸಾಲಗಾರ(ರ) /ಗ್ಯಾರಂಟರ್(ಗಳ) / ಮಾರ್ಟ್‌ಗೇಜರ್(ಗಳ) ವಿರುದ್ಧ ಎಲ್ಲಾ ಮತ್ತು ಯಾವುದೇ ಕ್ರಮಗಳನ್ನು ಆರಂಭಿಸಲು /ಮುಂದುವರಿಸಲು ಹಕ್ಕನ್ನು ಹೊಂದಿರುತ್ತಾರೆ.

ಸಾಲಗಾರ /ಗ್ಯಾರಂಟರ್(ಗಳು) / ಮಾರ್ಟ್‌ಗೇಜರ್(ಗಳು) ಆರ್ಸಿಲ್‌ಗೆ ಮೇಲೆ ಹೇಳಿರುವ ಮೊತ್ತವನ್ನು ಈ ತನಕ ಮರುಪಾವತಿ ಮಾಡದೆ ಇರುವ ಕಾರಣ, ಕೆಳಗೆ ಸಹಿ ಮಾಡಿರುವ **ಸಾಂಕೇತಿಕ ಸ್ವಾಧೀನ** ಅಧಿಕೃತ ಅಧಿಕಾರಿಯವರು, ಸದರಿ ಆ್ಯಕ್ಟ್‌ನ ಸೆಕ್ಷನ್ 13ರ ಸಬ್-ಸೆಕ್ಷನ್ (4)ರ ಜೊತೆಗೆ ಹೇಳಲಾಗಿರುವ ರೂಲ್‌ಗಳಲ್ಲಿನ ರೂಲ್ 8ರ ಅಡಿಯಲ್ಲಿ ಅವರಿಗೆ ಲಭ್ಯವಿರುವ ಪವರ್‌ಗಳನ್ನು ಚಲಾಯಿಸಿ, **11.06.2024** ರಂದು ಕೆಳಗೆ ವಿವರಿಸಿರುವ ಸೆಕ್ಯುರಿಟಿ ಅಸೆಟ್‌ಗಳನ್ನು ತಮ್ಮ ವಶಕ್ಕೆ ತೆಗೆದುಕೊಂಡಿದ್ದಾರೆ ಎಂದು ನಿರ್ದಿಷ್ಟವಾಗಿ ಸಾಲಗಾರರಿಗೆ / ಗ್ಯಾರಂಟರ್(ಗಳಿಗೆ) / ಮಾರ್ಟ್‌ಗೇಜರ್(ಗಳಿಗೆ) ಮತ್ತು ಸಾರ್ವಜನಿಕರಿಗೆ ಈ ಮೂಲಕ ನೋಟಿಸ್ ಕೊಡಲಾಗುತ್ತಿದೆ.

ಕೆಳಗೆ ಹೇಳಿರುವ ಸೆಕ್ಯುರಿಟಿಯ ಅಸೆಟ್‌ಗಳ ಬಗ್ಗೆ ಯಾವುದೇ ವ್ಯವಹಾರವನ್ನೂ ಮಾಡಕೂಡದು, ಮತ್ತು ಈ ಸೆಕ್ಯುರಿಟಿಯ ಅಸೆಟ್‌ಗಳಿಗೆ ಸಂಬಂಧಿಸಿದಂತೆ ಯಾವುದೇ ವ್ಯವಹಾರ ಮಾಡಿದರೂ, ಅದು ಮೇಲೆ ಹೇಳಿರುವ ಸಾಲ ಸೌಲಭ್ಯದ ಕಾರಣವಾಗಿ ದಿನಾಂಕ **18.04.2024** ರ ವರೆಗೆ **ರೂ. 3,77,81,213.22 (ಮೂರು ಕೋಟಿ ಎಪ್ಪತ್ತೇಳು ಲಕ್ಷ ಎಂಬತ್ತೊಂದು ಸಾವಿರದ ಇನ್ನೂರಾ ಹದಿಮೂರು ರೂಪಾಯಿ ಮತ್ತು ಇಪ್ಪತ್ತೆರಡು ಪೈಸೆ ಮಾತ್ರ)** ಮೊತ್ತಕ್ಕೆ, ಮತ್ತು ನಂತರ ಪೂರ್ಣ ಹಣಪಾವತಿ / ಚೆಕ್ ಪರಿವರ್ತಿತವಾಗಿ ನಗದು ಹಣ ಲಭ್ಯವಾಗುವ ತನಕ **19.04.2024** ರಿಂದ ಕರಾರಿನ ದರದ ಪ್ರಕಾರ ಮುಂದಿನ ಬಡ್ಡಿ, ದಂಡ ಹಾಗೂ ಇತರ ಎಲ್ಲಾ ಖರ್ಚುವೆಚ್ಚಗಳು, ಶುಲ್ಕಗಳ ವಸೂಲಿ ಆರ್ಸಿಲ್‌ನ ಹಕ್ಕಿಗೆ ಒಳಪಟ್ಟಿರುತ್ತವೆ ಎಂದು ನಿರ್ದಿಷ್ಟವಾಗಿ ಸಾಲಗಾರರಿಗೆ / ಗ್ಯಾರಂಟರ್(ಗಳಿಗೆ) / ಮಾರ್ಟ್‌ಗೇಜರ್(ಗಳಿಗೆ) ಮತ್ತು ಸಾರ್ವಜನಿಕರಿಗೆ ಈ ಮೂಲಕ ಎಚ್ಚರಿಕೆ ಕೊಡಲಾಗುತ್ತಿದೆ

ಕೆಳಗೆ ಹೇಳಿರುವ ಸೆಕ್ಯುರಿಟಿ ಅಸೆಟ್‌ಗಳನ್ನು ರಿಡೀಮ್ ಮಾಡಿಕೊಳ್ಳಲು ಲಭ್ಯವಿರುವ ಸಮಯದ ಬಗ್ಗೆ ಸದರಿ ಆ್ಯಕ್ಟ್‌ನ ಸೆಕ್ಷನ್ 13ರ ಸಬ್-ಸೆಕ್ಷನ್ (8)ರ ಪ್ರಾವಧಾನಗಳ ಕಡೆಗೆ ಸಾಲಗಾರರ / ಗ್ಯಾರಂಟರ್‌ಗಳ / ಮಾರ್ಟ್‌ಗೇಜರ್‌ಗಳ ಗಮನವನ್ನು ಸೆಳೆಯಲಾಗುತ್ತಿದೆ.

ಸ್ಥಿರಾಸ್ತಿಯ ವರ್ಣನೆ

ಪ್ರಾಪರ್ಟಿಯ ಮಾಲೀಕರು: **ಬೂಚಪ್ಪ ಸದಾನಂದ**

ಈ ಮುಂದಿನ ಸಂಪೂರ್ಣ ಪ್ರಾಪರ್ಟಿ: ಸೈಟ್‌ನಂ. 32, 33 ಮತ್ತು 34, 20ನೇ ಕ್ರಾಸ್, ಖಾತೆ ನಂ. 34/1ಎ; ಮೇಲಿನ ಸೈಟನ್ನು ಈ ಮುಂದಿನ ಸೈಟ್‌ಗಳಿಂದ ಕೊರೆದು ತೆಗೆಯಲಾಗಿದೆ: 32, 33, 34, 35, 36, 37 ಮತ್ತು 38. ಇದರ ವಿಳಾಸ: ಬೂಚಪ್ಪ ಲೇ-ಔಟ್, ಈಜಿಪುರ, ವಿವೇಕ ನಗರ ಪೋಸ್ಟ್, ಬೆಂಗಳೂರು - 560047, ಕರ್ನಾಟಕ; ಇದು ಈಗ ಬಿಬಿಎಮ್‌ಪಿ ಮಿತಿಗಳೊಳಗೆ ಇದೆ ಮತ್ತು ಇದರ ಗಡಿಗಳು ಹೀಗಿವೆ:

ಪೂರ್ವದಲ್ಲಿ : ನರಸಿಂಹಲುರವರ ಪ್ರಾಪರ್ಟಿ, ಅಳತೆ 128 ಅಡಿ ಆ ಬದಿಯಲ್ಲಿ;
ಪಶ್ಚಿಮದಲ್ಲಿ : ರಸ್ತೆ, ಅಳತೆ 129 ಅಡಿ ಆ ಬದಿಯಲ್ಲಿ;
ಉತ್ತರದಲ್ಲಿ : ಎ. ಮುನಿಯಪ್ಪಮತ್ತು ದಿ. ಮುನಿಯಪ್ಪನವರ ಪ್ರಾಪರ್ಟಿ, ಅಳತೆ 67 ಅಡಿ ಆ ಬದಿಯಲ್ಲಿ;
ದಕ್ಷಿಣದಲ್ಲಿ : ಸೈಟ್ ನಂ. 35, ಮಾಲೀಕರ ಮಾಲೀಕತ್ವದಲ್ಲಿ, ಅಳತೆ 54 ಅಡಿ ಆ ಬದಿಯಲ್ಲಿ.

ಅಧಿಕಾರವಿರುವ ಅಧಿಕಾರಿ
ಅಸೆಟ್ ರೀಕನ್‌ಸ್ಟ್ರಕ್ಷನ್ ಕಂಪನಿ (ಇಂಡಿಯ) ಲಿಮಿಟೆಡ್
(ಆರ್ಸಿಲ್-ಸಿಪಿಎಸ್- IV, ಟ್ರಸ್ಟ್‌ನ ಟ್ರಸ್ಟಿ)

ದಿನಾಂಕ : 11.06.2024
ಸ್ಥಳ : ಬೆಂಗಳೂರು

ಸಂಸ್ಕೃತ ಅನೇಕ ಭಾಷೆಗಳ ತಾಯಿ; ಗೆಹ್ಲೋಟ್

ಪುರಭವನದಲ್ಲಿ ಆಯೋಜಿಸಿದ್ದ ಕರ್ನಾಟಕ ಸಂಸ್ಕೃತ ವಿವಿಯ 11ನೇ ಘಟಿಕೋತ್ಸವ

ನಗರದ ಪುರಭವನದಲ್ಲಿ ಆಯೋಜಿಸಿದ್ದ ಕರ್ನಾಟಕ ಸಂಸ್ಕೃತ ವಿವಿಯ 11ನೇ ಘಟಿಕೋತ್ಸವದಲ್ಲಿ ಪದವಿ ಪ್ರದಾನ ಮಾಡಲಾಯಿತು.

ಸಂಸ್ಕೃತ ಭಾಷೆಯಿಂದ ಉಜ್ವಲ ಭವಿಷ್ಯ

ಸಂಸ್ಕೃತವನ್ನು ಭಾರತದ ಸಂವಿಧಾನದ ಎಂಟನೇ ಶೆಡ್ಯೂಲ್ ನಲ್ಲಿ ಸೇರಿಸಲಾಗಿದೆ, ಆದರೆ ಉತ್ತರಾಖಂಡ ರಾಜ್ಯದಲ್ಲಿ ಇದು ಎರಡನೇ ಅಧಿಕೃತ ಭಾಷೆಯ ಸ್ಥಾನಮಾನವನ್ನು ಹೊಂದಿದೆ. ಕರ್ನಾಟಕದ ಮುತ್ತೂರಿನಲ್ಲಿ ಸಂಸ್ಕೃತ ಮಾತನಾಡುವ ಭಾಷೆಯಾಗಿದೆ. ಇದಲ್ಲದೆ, ಸಂಸ್ಕೃತವನ್ನು ದೇಶದ ಅನೇಕ ಭಾಗಗಳಲ್ಲಿ ಸಾಮಾನ್ಯವಾಗಿ ಮಾತನಾಡುವ ಭಾಷೆಯಾಗಿ ಬಳಸಲಾಗುತ್ತದೆ. ದೇಶ ಮತ್ತು ಪ್ರಪಂಚದ ಅನೇಕ ವಿಶ್ವವಿದ್ಯಾಲಯಗಳಲ್ಲಿ ಸಂಸ್ಕೃತ ಭಾಷೆಯನ್ನು ಕಲಿಸಲಾಗುತ್ತದೆ. ಈ ಭಾಷೆಯ ಜ್ಞಾನ ಹೊಂದಿರುವವರ ಭವಿಷ್ಯವು ತುಂಬಾ ಉಜ್ವಲವಾಗಲಿದೆ ಎಂದು ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಹೇಳಿದರು.

ಬೆಂಗಳೂರು: ಸಂಸ್ಕೃತ ಭಾರತೀಯ ಸಂಪ್ರದಾಯದ ಜ್ಞಾನದ ಭಾಗವಾಗಿದ್ದು, ಇದನ್ನು ಅನೇಕ ಭಾಷೆಗಳ ತಾಯಿ ಎಂದು ಪರಿಗಣಿಸಲಾಗಿದೆ ಎಂದು ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಹೇಳಿದರು.

ನಗರದ ಪುರಭವನದಲ್ಲಿ ಆಯೋಜಿಸಿದ್ದ ಕರ್ನಾಟಕ ಸಂಸ್ಕೃತ ವಿವಿಯ 11ನೇ ಘಟಿಕೋತ್ಸವದಲ್ಲಿ ಮಾತನಾಡಿ, ಸಂಸ್ಕೃತ ಭಾಷೆ ಭಾರತದ ಆತ್ಮ ಮತ್ತು ಅಪಾರ ಜ್ಞಾನದ ಧ್ವನಿಯಾಗಿದೆ. ಹಿಂದೆ ಸಂಸ್ಕೃತ ದೇಶದಾದ್ಯಂತ ವಿದ್ಯಾವಂತರಲ್ಲಿ ಪ್ರವಚನದ ಭಾಗಿಯಾಗಿತ್ತು ಮತ್ತು ಪ್ರತಿ ಪ್ರಮುಖ ವಿಷಯದ ಹೇಳಲು ಬಳಸಲಾಗುತ್ತಿತ್ತು ಎಂದು ಹೇಳಲಾಗುತ್ತದೆ. ಸಂಸ್ಕೃತ ವಿಶ್ವ ಸಹೋದರತ್ವ ಮತ್ತು ವಿಶ್ವ ಶಾಂತಿಯ ಸಂದೇಶವನ್ನು ನೀಡಿದೆ. ಪ್ರಜಾಪ್ರಭುತ್ವದ ವಿಶ್ವದ ಅತಿದೊಡ್ಡ ದೇವಾಲಯವಾದ ಸಂಸತ್ತಿನ ಭವನದ ಮುಖ್ಯ ದ್ವಾರದ ಮೇಲಿನ ಸಂಸ್ಕೃತದಲ್ಲಿನ ಉಲ್ಲೇಖವು ನಮಗೆ ರಾಷ್ಟ್ರದ ಸಾರ್ವಭೌಮತ್ವವನ್ನು ನೆನಪಿಸುತ್ತದೆ. ಸಂಸತ್ ಭವನದಲ್ಲಿ ಅನೇಕ ಸಂಸ್ಕೃತ ಉಲ್ಲೇಖಗಳನ್ನು ಕೆತ್ತಲಾಗಿದೆ. ಅವುಗಳು ಎರಡೂ ಸದನಗಳ ಕಾರ್ಯನಿರ್ವಹಣೆಗೆ ಸಂಬಂಧಿಸಿ ಮತ್ತು ಮಾರ್ಗದರ್ಶನ ನೀಡುತ್ತವೆ ಎಂದರು.

ನಾಸಾದ ಪ್ರಸಿದ್ಧ ವಿಜ್ಞಾನಿ ರಿಕ್ ಬ್ರಿಗ್ಸ್ ಅವರು ಸಂಸ್ಕೃತ ಭಾಷೆಯ ಹಿರಿಮೆಯನ್ನು ಸ್ಪಷ್ಟಪಡಿಸಿದ್ದಾರೆ. ಸಂಸ್ಕೃತ ವ್ಯಾಕರಣದ ಉದಾಹರಣೆಗಳನ್ನು ನೀಡುವ ಮೂಲಕ ತಮ್ಮ ಹಕ್ಕುಗಳನ್ನು ದೃಢಪಡಿಸಿದ್ದಾರೆ. ಈ ಭಾಷೆಯ ವೈಜ್ಞಾನಿಕತೆಯನ್ನು ಅಧ್ಯಯನ ಮಾಡಿದ ನಂತರ, ಸಂಶೋಧನಾ ಸಂಸ್ಥೆ ಕಂಪ್ಯೂಟರ್ ಸಾಫ್ಟ್‌ವೇರ್ ಸಾಫ್ಟ್‌ವೇರ್ ಸಂಸ್ಕೃತವನ್ನು ಅತ್ಯಂತ ಸೂಕ್ತವಾದ ಭಾಷೆ ಎಂದು ಪರಿಗಣಿಸಿದೆ. 60 ಸಾವಿರಕ್ಕೂ ಹೆಚ್ಚು ಸಂಸ್ಕೃತ ಹಸ್ತಪ್ರತಿಗಳ ಸಂಶೋಧನೆಗಾಗಿ ನಾಸಾದಲ್ಲಿ ಪ್ರತ್ಯೇಕ ವಿಭಾಗವನ್ನು ರಚಿಸಲಾಗಿದೆ. ಅಮೆರಿಕ, ಜರ್ಮನಿ ಮೊದಲಾದ ಹಲವು ದೇಶಗಳು ಸಂಸ್ಕೃತ ಕ್ಷೇತ್ರದಲ್ಲಿ ಅತ್ಯುತ್ತಮ ಸಂಶೋಧನಾ ಕಾರ್ಯವನ್ನು ನಿರಂತರವಾಗಿ ಮಾಡುತ್ತಿವೆ ಎಂದು ತಿಳಿಸಿದರು.

ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್, ಘಟಿಕೋತ್ಸವದ ಮುಖ್ಯ ಅತಿಥಿ ಪ್ರೊ.ಎಚ್.ವಿ ನಾಗರಾಜ ರಾವ್, ಕುಲಪತಿ ಡಾ. ಅಹಲ್ಯಾ ಶರ್ಮಾ ಮತ್ತಿತರರು ಇದ್ದರು.

ಸಮಾಚಾರ ಸಣ್ಣದಲ್ಲ

ಕರಕುಶಲ ವಸ್ತುಗಳ ಮಾರಾಟ ಮೇಳ

ಬೆಂಗಳೂರು: ಕರ್ನಾಟಕ ಚಿತ್ರಕಲಾ ಪರಿಷತ್‌ನಲ್ಲಿ ಜೂನ್ 23 ರ ವರೆಗೆ ಕರಕುಶಲ ವಸ್ತುಗಳ ಮಾರಾಟ ಮೇಳ ನಡೆಯಲಿದೆ. ಮನೆಯ ಉದ್ಯಾನವನ್ನು ಅಲಂಕರಿಸಲು, ಕೈಮಗ್ಗ ಸೀರೆಗಳು, ಕುರ್ತಾಗಳು, ಆಭರಣಗಳು, ಆಟಿಕೆಗಳು, ಉಡುಪುಗಳು ಜನತೆಗೆ ಮುದ ನೀಡುವಂತಹ ಉತ್ಪನ್ನಗಳು ಒಂದೇ ಸೂರಿನಡಿ ದೊರೆಯುತ್ತವೆ. ದೇಶದ ವಿವಿಧ ಮೂಲೆಗಳಿಂದ ಆಗಮಿಸಿರುವ ಕಲಾವಿದರು ಸುಮಾರು 110ಕ್ಕೂ ಅಧಿಕ ಮಳಿಗೆಗಳಲ್ಲಿ ತಮ್ಮ ಉತ್ಪನ್ನಗಳಗಳನ್ನು ಮಾರಾಟ ಮಾಡುತ್ತಿದ್ದಾರೆ. ಪ್ರತಿದಿನ ಬೆಳಗ್ಗೆ 11 ರಿಂದ ಸಂಜೆ 7ರವರೆಗೆ ಪ್ರದರ್ಶನ ಇರಲಿದ್ದು, ಪ್ರವೇಶ ಉಚಿತವಾಗಿದೆ. ದೇಶದ ವಿವಿಧ ಭಾಗಗಳ ಕಲಾವಿದರ ಕಲಾಕೃತಿಗಳು ಹಾಗೂ ಉತ್ಪನ್ನಗಳು ನೇರವಾಗಿ ಜನರಿಗೆ ತಲುಪಲಿವೆ. ಅತೀ ಕಡಿಮೆ ಬೆಲೆಯ ನಾನಾ ರೀತಿಯ ಕಲೆ, ಶಿಲ್ಪಕಲಾ ಕೃತಿಗಳು, ಆಭರಣಗಳ ಮಾರಾಟ ಮಾಡುತ್ತಿದ್ದು, ಚಿತ್ರಕಲಾ ಪರಿಷತ್ ನಲ್ಲಿ ಹಬ್ಬದ ವಾತಾವರಣವೇ ನಿರ್ಮಾಣವಾಗಿದೆ. ನಟಿ ಪ್ರಿಯಾಂಕಾ ಅರೋರಾ ಮೇಳಕ್ಕೆ ಚಾಲನೆ ನೀಡಿ ಮಾತನಾಡಿ, ಇದು ಅಪ್ಪಟ ಕಲಾವಿದರೇ ತಯಾರಿಸಿದ ವಿಶೇಷ ವಸ್ತುಗಳ ಬಂಢಾರವಾಗಿದೆ. ಸ್ಥಳೀಯ ಕಲಾವಿದರ ವಿಶೇಷ ವಸ್ತುಗಳನ್ನು ಖರೀದಿಸಿ, ಪ್ರೋತ್ಸಾಹಿಸುವಂತೆ ಮನವಿ ಮಾಡಿದರು.

ಪ್ರತಿಭಾ ಪುರಸ್ಕಾರ ಕಾರ್ಯಕ್ರಮ ಇಂದು

ಬೆಂಗಳೂರು: ಕರ್ನಾಟಕ ರಾಜ್ಯ ಸರಕಾರಿ ನೌಕರರ ಸಂಘದ ವತಿಯಿಂದ ಪುರಭವನದಲ್ಲಿ ಜೂ.15ರ ಸಂಜೆ 4 ಗಂಟೆಗೆ 2024ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ತರಗತಿ ಪರೀಕ್ಷೆಗಳಲ್ಲಿ ಅತೀ ಹೆಚ್ಚು ಅಂಕಗಳಿಸಿದ ರಾಜ್ಯ ಸರಕಾರಿ ನೌಕರರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಗೌರವ ಉಪಸ್ಥಿತಿ ವಹಿಸಲಿದ್ದು, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಕಾರ್ಯಕ್ರಮ ಉದ್ಘಾಟಿಸಲಿದ್ದಾರೆ. ಬೆಂಗಳೂರು ನಗರ ಜಿಲ್ಲಾಧಿಕಾರಿ ಕೆ.ಎ. ದಯಾನಂದರವರು ವಿದ್ಯಾರ್ಥಿಗಳಿಗೆ ಪ್ರೇರಣಾ ನುಡಿಗಳನ್ನಾಡಲಿದ್ದು, ಕರ್ನಾಟಕ ರಾಜ್ಯಾಧ್ಯಕ್ಷ ಸಿ.ಎಸ್.ಷಡಾಕ್ಷರಿಯವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ಬೆಂಗಳೂರು ನಗರ ಜಿಲ್ಲೆ, ರಾಮನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಿಂದ 719 ವಿದ್ಯಾರ್ಥಿಗಳು ಪ್ರತಿಭಾ ಪುರಸ್ಕಾರವನ್ನು ಸ್ವೀಕರಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಜೂನ್ 17ರಂದು ಮೆಟ್ರೋ ಸೇವೆ ರದ್ದು

ಬೆಂಗಳೂರು: ನಮ್ಮ ಮೆಟ್ರೋ ರೈಲುಗಳು ಪದೇ ಪದೇ ಕೈಕೊಡುತ್ತಿರುವ ಹಿನ್ನೆಲೆ ನಮ್ಮ ಮೆಟ್ರೋವು ನಿರ್ವಹಣೆ ಕಾಮಗಾರಿ ಹಿನ್ನೆಲೆ ರೈಲು ಸೇವೆ ರದ್ದು ಮಾಡುತ್ತಿದೆ ಎಂದು ಮೆಟ್ರೋ ತಿಳಿಸಿದೆ. ಕೆಂಗೇರಿ

ಮತ್ತು ಚಲ್ಲಘಟ್ಟ ಮೆಟ್ರೋ ನಿಲ್ದಾಣಗಳ ನಡುವೆ ಮೆಟ್ರೋ ರೈಲು ಸೇವೆ ರದ್ದಾಗಿದ್ದು, ಜೂನ್ 17 ಸೋಮವಾರದಂದು ಬೆಳಗ್ಗೆ 5 ರಿಂದ ಮಧ್ಯಾಹ್ನ 1 ಗಂಟೆವರೆಗೂ ಮೆಟ್ರೋ ಸಂಚಾರ ಸ್ಥಗಿತವಾಗಲಿದೆ. ನೇರಳೆ ಮಾರ್ಗದ ಚಲ್ಲಘಟ್ಟ ನಿಲ್ದಾಣ ದಲ್ಲಿ ನಿರ್ವಹಣಾ ಕಾಮಗಾರಿ ನಡೆಯಲಿದ್ದು, ಜೂನ್ 17ರಂದು ಕೆಂಗೇರಿಯಿಂದ ಚಲ್ಲಘಟ್ಟ ನಿಲ್ದಾಣಗಳ ನಡುವೆ ಮೆಟ್ರೋ ರೈಲು ಸೇವೆ ಸ್ಥಗಿತವಾಗಲಿದೆ. ಬೆಳಗ್ಗೆ 5:00 ರಿಂದ ಮಧ್ಯಾಹ್ನ 1:00 ಗಂಟೆಯವರೆಗೆ ಲಭ್ಯವಿರುವುದಿಲ್ಲ. ಮಧ್ಯಾಹ್ನ 1ಗಂಟೆಯ ಬಳಿಕ ರೈಲು ಸೇವೆ ಚಲ್ಲಘಟ್ಟ ಟು ವೈಟ್‌ಫೀಲ್ಡ್ ನಡುವೆ ಸಂಪೂರ್ಣ ಸಂಚಾರ ಲಭ್ಯವಿರಲಿದೆ. ಆದರೂ ಹಸಿರು ಮಾರ್ಗದಲ್ಲಿ ರೈಲು ಸೇವೆಗಳು ಎಂದಿನಂತೆ ಇರಲಿದೆ ಎಂದು ಮೆಟ್ರೋ ಪ್ರಕಟಣೆಯಲ್ಲಿ ತಿಳಿಸಿದೆ.

ವಚನ ಗಾನಯಾನ ಸಮಾರೋಪ ಸಮಾರಂಭ

ಬೆಂಗಳೂರು: ಪ್ರಪುಣ್ಯಾ ಸಂಗೀತ ಶಾಲೆ ಹಾಗೂ ವಚನಜ್ಯೋತಿ ಬಳಗದ ವತಿಯಿಂದ ವಿಶ್ವಗುರು ಬಸವಣ್ಣ ಜಯಂತಿ ಅಂಗವಾಗಿ ವಚನ ಗಾನ ಯಾನ-5 ಸಮಾರೋಪ ಸಮಾರಂಭ ಕಾರ್ಯಕ್ರಮವನ್ನು ಜೂ.16ರಂದು ಮಧ್ಯಾಹ್ನ 12.00 ಗಂಟೆಗೆ ಡಾ. ಎಂ ಚಿದಾನಂದಮೂರ್ತಿ ಸಭಾಂಗಣದಲ್ಲಿ ಆಯೋಜಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ. ಕಾರ್ಯಕ್ರಮವನ್ನು ಶಾಸಕ ಪ್ರಿಯಾಕೃಷ್ಣ ಉದ್ಘಾಟಿಸಲಿದ್ದು, ವಚನಜ್ಯೋತಿ ಬಳಗದ ಅಧ್ಯಕ್ಷ ಎಸ್.ಪಿನಾಕಪಾಣಿ ವಹಿಸಲಿದ್ದು, ಗೌರವಾಧ್ಯಕ್ಷ ಮಹೇಶ್ ಬೆಲ್ಲದ, ಗಾಳಿ ಆಂಜನೇಯ ಸ್ವಾಮಿ ದೇವಾಲಯದ ಪ್ರಧಾನ ಅರ್ಚಕ ವೇ.ವಿ. ಶ್ರೀನಿವಾಸ ರಾಮಾನುಜ ಭಟ್ಟಾಚಾರ್ಯ, ಶಶಿ ವಿಶ್ವನಾಥ್, ಎಂ. ನಂಜಪ್ಪ, ವಿ.ರಾಮಾಂಜಿನಿ, ಈರಯ್ಯ ಚಿಕ್ಕಮಠ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ರವಿ ಪೂಜಾರಿ ಆಸ್ಪತ್ರೆಗೆ ದಾಖಲು

ಬೆಂಗಳೂರು: ಭೂಗತ ಪಾತಕಿ ರವಿ ಪೂಜಾರಿ ಅನಾರೋಗ್ಯದ ಹಿನ್ನೆಲೆಯಲ್ಲಿ ವಿಕ್ಟೋರಿಯಾ ಆಸ್ಪತ್ರೆ ಮಲ್ಟಿಸ್ಪೆಷಾಲಿಟಿ ಘಟಕಕ್ಕೆ ಸೋಮವಾರ ದಾಖಲಿಸಲಾಗಿದೆ. ಭೂಗತ ಪಾತಕಿ ರವಿ ಪೂಜಾರಿ ವಿರುದ್ಧ ಕರ್ನಾಟಕ, ಕೇರಳ ಹಾಗೂ ಮಹಾರಾಷ್ಟ್ರದಲ್ಲಿ 60ಕ್ಕೂ ಹೆಚ್ಚು ಪ್ರಕರಣಗಳು ದಾಖಲಾಗಿವೆ. ಈತ ಉದ್ಯಮಿಗಳು, ಚಿತ್ರನಟರಿಗೆ ಜೀವ ಬೆದರಿಕೆ ಹಾಕಿ ಹಣ ವಸೂಲಿ ಮಾಡುತ್ತಿದ್ದ. 15 ವರ್ಷಗಳಿಂದ ತಲೆಮರೆಸಿಕೊಂಡಿದ್ದ ರವಿ ಪೂಜಾರಿಯನ್ನು 2019ರ ಫೆಬ್ರವರಿಯಲ್ಲಿ ಪಶ್ಚಿಮ ಆಫ್ರಿಕಾದ ಸೆನೆಗಲ್‌ನಲ್ಲಿ ಇಂಟರ್‌ಪೋಲ್ ಪೊಲೀಸರು ಬಂಧಿಸಿದ್ದರು. ನಂತರ ಆತನನ್ನು ರಾಜ್ಯಕ್ಕೆ ಕರೆತರಲಾಗಿತ್ತು. ವಿಚಾರಣೆ ಬಳಿಕ ಆತ ಪರಪ್ಪನ ಅಗ್ರಹಾರ ಜೈಲು ಸೇರಿದ್ದ. ಇದೀಗ ಅನಾರೋಗ್ಯದ ಹಿನ್ನೆಲೆಯಲ್ಲಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ಹಸಿರೀಕರಣ ಕಾರ್ಯಕ್ರಮದಲ್ಲಿ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿಕೆ

2 ಲಕ್ಷ ಗಿಡ ನೆಡುವ ಹಸಿರು ರಕ್ಷಕ ಅಭಿಯಾನ

ಬೆಂಗಳೂರು: ಈ ವರ್ಷ ಅನೇಕ ಶಾಲೆಗಳ ಜತೆ ಒಪ್ಪಂದ ಮಾಡಿಕೊಂಡು 2 ಲಕ್ಷಕ್ಕೂ ಅಧಿಕ ಗಿಡಗಳನ್ನು ನೆಡಲು ಹಸಿರು ರಕ್ಷಕ ಕಾರ್ಯಕ್ರಮವನ್ನು ರೂಪಿಸಲಾಗಿದೆ ಎಂದು ಡಿಸಿಎಂ ಡಿ.ಕೆ.ಶಿವಕುಮಾರ್ ಹೇಳಿದರು.

ಕಬ್ಬನ್‌ಪಾರ್ಕ್‌ನ ಬಾಲ ಭವನದಲ್ಲಿ ಶುಕ್ರವಾರ ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ಹಸಿರೀಕರಣ ಕಾರ್ಯಕ್ರಮದಲ್ಲಿ ಮಾತನಾಡಿ, ಕಳೆದ ವರ್ಷ 52 ಸಾವಿರ ಗಿಡಗಳನ್ನು ಶಾಲಾ ಮಕ್ಕಳೇ ನೆಟ್ಟು ಬೆಳೆಸಿದ್ದಾರೆ. ಗಿಡ ನೆಟ್ಟರೆ ಮರ, ಮರದಿಂದ ಮಳೆ, ಮಳೆ ಬಂದರೆ ನೀರು, ನೀರು ಇದ್ದರೆ ನಾವು, ನೀವು. ಪ್ರಪಂಚದಲ್ಲಿ ನೀರು ಮತ್ತು ಪವರ್‌ಗೆ ಯುದ್ಧಗಳು ಆಗುತ್ತವೆ ಎಂದು ಅನೇಕ ಜ್ಞಾನಿಗಳು ಹೇಳಿದ್ದಾರೆ ಎಂದು ನೆರೆದ ಶಾಲಾ ಮಕ್ಕಳಿಗೆ ಕಿವಿಮಾತು ಹೇಳಿದರು.

ಬ್ರ್ಯಾಂಡ್ ಬೆಂಗಳೂರು, ಗ್ರೀನ್ ಬೆಂಗಳೂರು: ಬೆಂಗಳೂರು ಇಷ್ಟರ ಮಟ್ಟಿಗೆ ಬೆಳೆಯುತ್ತದೆ ಎಂದು ನಾಡಪ್ರಭು ಕೆಂಪೇಗೌಡರಿಗೆ ತಿಳಿದಿರಲಿಲ್ಲ. ಇಂದು ಆರೋಗ್ಯ, ಶಿಕ್ಷಣ, ಕೈಗಾರಿಕೆ, ಉದ್ದಿಮೆ ಸೇರಿದಂತೆ ಅನೇಕ ಕ್ಷೇತ್ರಗಳಲ್ಲಿ ಬೆಂಗಳೂರು ಬೆಳೆಯುತ್ತಿದೆ. ನಮ್ಮ ಹಿರಿಯರು ಬೆಂಗಳೂರನ್ನು ಹಸಿರಿನಿಂದ ಕಂಗೊಳಿಸಿದ್ದರು. ಇದನ್ನು ಕಾಪಾಡುವ ಜವಾಬ್ದಾರಿ ನಮ್ಮ ಮೇಲಿದೆ. ಈ ಕಾರಣಕ್ಕೆ ಹಸಿರು ರಕ್ಷಕ ಎನ್ನುವ ಅಭಿಯಾನ ಪ್ರಾರಂಭ ಮಾಡಲಾಗಿದೆ ಎಂದು ತಿಳಿಸಿದರು. ಬೆಂಗಳೂರಿನ ಉಷ್ಣಾಂಶ 28 ಡಿಗ್ರಿಗಿಂತ ಹೆಚ್ಚು ಹೋಗುತ್ತಿರಲಿಲ್ಲ. ಈಗ 36 ದಾಟಿದೆ. ಬೆಂಗಳೂರಿನ ಹಸಿರನ್ನು ಉಳಿಸಲು ಅನೇಕ ಸ್ವಯಂ ಸೇವಾ ಸಂಘಗಳು ಕೆಲಸ ಮಾಡುತ್ತಿವೆ. ಇವಕ್ಕೆ ಸರಕಾರ ಬೆನ್ನೆಲುಬಾಗಿ ನಿಲ್ಲಲಿದೆ. ಬೆಂಗಳೂರಿನ ಹಸಿರು ಸಂರಕ್ಷಣೆಗೆ ವಿವಿಧ ಇಲಾಖೆಗಳ ಅಡಿಯಲ್ಲಿ 310 ಕೋಟಿ ಹಾಗೂ 15 ನೇ ಹಣಕಾಸು ಆಯೋಗದ ಅಡಿ 100 ಕೋಟಿ - ಹೀಗೆ ಒಟ್ಟು 410 ಕೋಟಿ ಹಣ ಮೀಸಲಿಡಲಾಗಿದೆ ಎಂದರು. ಕಳೆದ ವರ್ಷ ಮಳೆ ಬರದೆ 200 ಕ್ಕೂ ಹೆಚ್ಚು ತಾಲೂಕುಗಳು ಬರ ಎದುರಿಸಬೇಕಾಯಿತು. ಬೆಂಗಳೂರಿನಲ್ಲಿ ನೀರಿನ ಕೊರತೆ ಉಂಟಾಯಿತು ಆದರೂ ಪರಿಸ್ಥಿತಿ ನಿಭಾಯಿಸಲಾಯಿತು. ಇಂತಹ ಪರಿಸ್ಥಿತಿಗಳು ಮತ್ತೆ ಬರದಂತೆ ನಾವು ಜಾಗೃತವಾಗಿ ಇರಬೇಕು. ಇಂದು ಪ್ರಪಂಚ ಸಾಕಷ್ಟು ಮುಂದುವರೆದಿದೆ. ನಮ್ಮ ಕಾಲದ ಶಿಕ್ಷಣಕ್ಕೂ ಈಗಿನ ಕಾಲದ ಶಿಕ್ಷಣಕ್ಕೂ ಬಹಳ ವ್ಯತ್ಯಾಸವಿದೆ ಎಂದರು.

ಕಾರ್ಯಕ್ರಮದಲ್ಲಿ ಶಾಸಕ ರಿಜ್ವಾನ್ ಅರ್ಷದ್, ಮಾಜಿ ಶಾಸಕ ಹಸನಬ್ಬ, ಬಿಬಿಎಂಪಿ ಆಡಳಿತಾಧಿಕಾರಿ ಉಮಾಶಂಕರ್, ಮುಖ್ಯ ಆಯುಕ್ತ ತುಷಾರ್ ಗಿರಿನಾಥ್, ಡಿಸಿಎಂ ಕಾರ್ಯದರ್ಶಿ, ಬಿಎಂಆರ್‌ಡಿಎ ಆಯುಕ್ತ ರಾಜೇಂದ್ರ ಚೋಳನ್, ಪ್ರೀತಿ ಗೆಹಲೋಟ್ ಮತ್ತಿತರರು ಇದ್ದರು.

ಕಬ್ಬನ್‌ಪಾರ್ಕ್‌ನ ಬಾಲ ಭವನದಲ್ಲಿ ಶುಕ್ರವಾರ ವಿಶ್ವ ಪರಿಸರ ದಿನಾಚರಣೆಯ ಅಂಗವಾಗಿ ನಡೆದ ಹಸಿರೀಕರಣ ಕಾರ್ಯಕ್ರಮಕ್ಕೆ ಡಿಸಿಎಂ ಡಿ.ಕೆ.ಶಿವಕುಮಾರ್ ಚಾಲನೆ ನೀಡಿದರು.

ಮಕ್ಕಳು ನಮಗಿಂತ ಚೆನ್ನಾಗಿ ಮಾತಾಡುತ್ತಾರೆ

ಯಾವುದೇ ಕಾರ್ಯಕ್ರಮ ನಡೆದರೂ ಮಕ್ಕಳಿಂದಲೇ ನಿರ್ವಹಣೆ ಮಾಡಿಸಬೇಕು ಎಂದು ಸೂಚನೆ ನೀಡಿದ್ದೆ. ಆದರೆ ಅಧಿಕಾರಿಗಳು ಮರೆತಂತಿದೆ. ನಮ್ಮ ಜತೆ ವೇದಿಕೆಯಲ್ಲಿ ಮಕ್ಕಳು ಇದ್ದರೆ ಅವರಿಗೂ ನೆನಪು ಇರುತ್ತದೆ. ಅಲ್ಲದೇ ಅವರು ನಮಗಿಂತ ತುಂಬಾ ಚೆನ್ನಾಗಿ ಮಾತನಾಡುತ್ತಾರೆ. ಈ ದೇಶ ಉಳಿಯಬೇಕು, ಹಸಿರು ಉಳಿಯಬೇಕು ಎಂದರೆ ಮಕ್ಕಳನ್ನು ಇಂದಿನಿಂದಲೇ ತಯಾರು ಮಾಡಬೇಕು ಡಿಸಿಎಂ ಡಿ.ಕೆ.ಶಿವಕುಮಾರ್ ಹೇಳಿದರು.

ತಂದೆ, ತಾಯಂದಿರು ಮಕ್ಕಳಿಗಾಗಿ ಯಾವ ತ್ಯಾಗಕ್ಕೆ ಬೇಕಾದರೂ ಸಿದ್ಧರಾಗಿರುತ್ತಾರೆ. ವಿಶ್ವ ಯುವ ಸಮ್ಮೇಳನಕ್ಕೆ ಭಾಗವಹಿಸಲು ವಿಯೆಟ್ನಾಂ ದೇಶಕ್ಕೆ ಹೋದಾಗ ಅಲ್ಲಿ ಗಮನಿಸಿದ್ದೆ. ಮಕ್ಕಳಿಗೆ ಜನ್ಮ ನೀಡುವುದು ಮಾತ್ರ ತಂದೆ, ತಾಯಿಯ ಕೆಲಸ. ಇಡೀ ಮಗುವಿನ ಆಸಕ್ತಿ, ವಿದ್ಯಾಭ್ಯಾಸವೆಲ್ಲಾ ಸರಕಾರದ ಕೆಲಸ.ಅ

– ಡಿ.ಕೆ.ಶಿವಕುಮಾರ್, ಉಪಮುಖ್ಯಮಂತ್ರಿ

ತಪಾಸಣೆ ನೆಪದಲ್ಲಿ ಮುತ್ತಿಟ್ಟ ವೈದ್ಯ: ಪ್ರಕರಣ ದಾಖಲಿಸಲು ಹೈ ಸೂಚನೆ

ಬೆಂಗಳೂರು: ವೈದ್ಯಕೀಯ ನೈತಿಕತೆ ಮರೆತು ತನ್ನ ಬಳಿಕ ಚಿಕಿತ್ಸೆಗಾಗಿ ಬಂದಿದ್ದ ಯುವತಿಗೆ ತಪಾಸಣೆ ನೆಪದಲ್ಲಿ ಬಟ್ಟೆ ಹಾಗೂ ಒಳಉಡುಪುಗಳನ್ನು ಬಿಚ್ಚಿಸಿ ಎದೆ ಮೇಲೆ ಮುತ್ತಿಟ್ಟ ವೈದ್ಯನ ಮೇಲೆ ಕೇಸ್ ದಾಖಲಿಸುವಂತೆ ಹೈಕೋರ್ಟ್ ಸೂಚಿಸಿದೆ.

ಪುಟ್ಟೇನಹಳ್ಳಿ ಪೊಲೀಸ್ ಠಾಣೆಯಲ್ಲಿ ದಾಖಲಾದ ಪ್ರಕರಣವನ್ನು ರದ್ದು ಮಾಡುವಂತೆ ಆರೋಪಿ ವೈದ್ಯ ಸಲ್ಲಿಸಿದ್ದ ಅರ್ಜಿಯನ್ನು ರದ್ದು ಮಾಡಿದ ಕೋರ್ಟ್, ಕ್ರಮ ಕೈಗೊಳ್ಳುವಂತೆ ಪೊಲೀಸರಿಗೆ ಆದೇಶಿಸಿದೆ. ಇದು ವೈದ್ಯಕೀಯ ನೈತಿಕತೆಯನ್ನು ಮರೆಯುವ ವೃತ್ತಿಪರರಿಗೆ ತಕ್ಕ ಪಾಠ ಎಂಬುದಾಗಿ ಕೋರ್ಟ್ ಅಭಿಪ್ರಾಯ ಪಟ್ಟಿದೆ. ಜರಗನಹಳ್ಳಿಯಲ್ಲಿರುವ ಆಸ್ಪತ್ರೆಯಲ್ಲಿ ಈ ಅಧಿಕ ಪ್ರಸಂಗ ನಡೆದಿದೆ. ಎದೆ ನೋವಿನ ತಪಾಸಣೆ ನಡೆಸಲು ಬಂದ ಯುವತಿಯ ಒಳಉಡುಪುಗಳ ಬಿಚ್ಚಿಸಿದ್ದ ಆರೋಪಿ ವೈದ್ಯ, ಹೃದಯ ಬಡಿತ ಪರೀಕ್ಷೆ ಮಾಡುವ ನೆಪದಲ್ಲಿ ಸ್ತನಗಳ ಮೇಲೆ ಕೈಯಾಡಿಸಿದ್ದ. ಕೊನೆಗೆ ಮುತ್ತು ನೀಡಿದ್ದ. ತಕ್ಷಣ ಯುವತಿ ದೂರು ದಾಖಲಿಸಿದ್ದರು. ಈ ಕ್ರಿಮಿನಲ್ ಮೊಕದ್ದಮೆ ದಾಖಲಾಗಿದ್ದು, ಇದನ್ನು ರದ್ದು ಮಾಡುವಂತೆ ಕೋರಿ ಅವರು ಹೈಕೋರ್ಟ್ ಮೆಟ್ಟಿಲೇರಿದ್ದರು.

ಕೋರ್ಟ್ ಅಭಿಪ್ರಾಯ: ವೈದ್ಯರು ತನ್ನ ವೃತ್ತಿ ನೈತಿಕತೆ ಹಾಗೂ ಜನರ ನಂಬಿಕೆ ದುರುಪಯೋಗಪಡಿಸಿಕೊಂಡರೆ ವೈದ್ಯ ಮತ್ತು ರೋಗಿಯ ನಡುವಿನ ಸಂಬಂಧಕ್ಕೆ ಅಪಚಾರವಾಗುತ್ತದೆ. ರೋಗಿಯ ದೇಹ ವೈದ್ಯಕೀಯ ತಪಾಸಣೆಗೆ ಸೀಮಿತ. ದುರುಪಯೋಗ ಸಲ್ಲ. ಪ್ರಕರಣದಲ್ಲಿ ಸ್ಪಷ್ಟವಾದ ಲೈಂಗಿಕ ಪ್ರಚೋದನೆ ಕಂಡುಬಂದಿರುವುದರಿಂದ ವೈದ್ಯರ ವಿರುದ್ಧ ದಾಖಲಿಸಿದ ಕ್ರಿಮಿನಲ್ ಮೊಕದ್ದಮೆಯನ್ನು ರದ್ದುಗೊಳಿಸಲಾಗದು ಎಂದು ಕೋರ್ಟ್ ಹೇಳಿದೆ.

ಏನಿದು ಪ್ರಕರಣ?

ಸಂತ್ರಸ್ತೆ ಯುವತಿ ಎದೆನೋವಿನಿಂದ ಬಳಲುತ್ತಿದ್ದರು. ಅವರು ಜೆಪಿ ನಗರದ ಆಸ್ಪತ್ರೆಗೆ ಭೇಟಿ ನೀಡಿದ್ದರು. ಚಿಕಿತ್ಸೆ ನೀಡಿದ ನಂತರ ಇಸಿಜಿ ಮತ್ತು ಎದೆಯ ಎಕ್ಸ್-ರೇ ಪರೀಕ್ಷೆಗೆ ಒಳಗಾಗುವಂತೆ ವೈದ್ಯರು ಸೂಚಿಸಿದ್ದರು. ಅಲ್ಲದೆ, ವರದಿಗಳನ್ನು ವಾಟ್ಸಾಪ್‌ನಲ್ಲಿ ಕಳುಹಿಸಲು ಹೇಳಿದ್ದರು. ವರದಿಗಳನ್ನು ನೋಡಿದ ವೈದ್ಯರು ಮಾರ್ಚ್ 21 ರಂದು ಮಧ್ಯಾಹ್ನ 2 ಗಂಟೆಗೆ ಜರಗನಹಳ್ಳಿಯಲ್ಲಿರುವ ತನ್ನ ಕ್ಲಿನಿಕ್‌ಗೆ ಭೇಟಿ ನೀಡುವಂತೆ ಹೇಳಿದ್ದರು. ಅಂತೆಯೇ ಯುವತಿ ಕ್ಲಿನಿಕ್‌ಗೆ ಭೇಟಿ ನೀಡಿದಾಗ ವೈದ್ಯ ಮಾತ್ರ ಅಲ್ಲಿದ್ದರು. ತಪಾಸಣಾ ಕೋಣೆಗೆ ಕರೆದೊಯ್ದು ವೈದ್ಯರು ಮಲಗಲು ಹೇಳಿದ್ದರು. ಬಳಿಕ ಆಕೆಯ ಎದೆಯ ಮೇಲೆ ಸ್ಟೆತಾಸ್ಕೋಪ್ ಇಟ್ಟು ಹೃದಯ ಬಡಿತ ಪರೀಕ್ಷಿಸಲು ಪ್ರಾರಂಭಿಸಿದ್ದರು. ಮುಂದುವರಿದು ಆಕೆಯ ಬಳಿ ಶರ್ಟ್ ಮತ್ತು ಒಳ ಉಡುಪು ತೆಗೆಯಲು ಹೇಳಿದ್ದರು. ಐದು ನಿಮಿಷಗಳ ಪರೀಕ್ಷೆಯ ನಂತರ, ಕೈಗಳಿಂದ ಸ್ತನವನ್ನು ಸ್ಪರ್ಶಿಸಲು ಪ್ರಾರಂಭಿಸಿದ್ದರು. ಅಂತಿಮವಾಗಿ ಸ್ತನಕ್ಕೆ ಮುತ್ತಿಟ್ಟಿದ್ದಾರೆ ಎಂದು ಆರೋಪಿಸಲಾಗಿದೆ. ಗಾಬರಿಗೊಂಡ ಆಕೆ ಕ್ಲಿನಿಕ್‌ನಿಂದ ಓಡಿಬಂದು ಕುಟುಂಬ ಸದಸ್ಯರಿಗೆ ಮಾಹಿತಿ ನೀಡಿದ್ದರು. ಮರುದಿನ ಅವರು ಪುಟ್ಟೇನಹಳ್ಳಿ ಠಾಣೆಯಲ್ಲಿ ವೈದ್ಯರ ವಿರುದ್ಧ ದೂರು ದಾಖಲಿಸಿದ್ದರು.

ನಿಗಮ -ಮಂಡಳಿ, ಅಕಾಡೆಮಿ ಅಧ್ಯಕ್ಷರೊಂದಿಗೆ ಡಿಕೆಶಿ ಸಭೆ | ಅಕ್ಟೋಬರ್‌ಗೆ ಬಿಬಿಎಂಪಿ, ಜನವರಿಗೆ ಜಿಪಂ, ತಾಪಂ ಚುನಾವಣೆ

ಸ್ಥಳೀಯ ಸಂಸ್ಥೆ ಚುನಾವಣಾ ತಯಾರಿ

ಬೆಂಗಳೂರು: ಲೋಕಸಭಾ ಚುನಾವಣೆಯ ಬೆನ್ನಲ್ಲೇ, ಸ್ಥಳೀಯ ಸಂಸ್ಥೆಗಳ ಸುಳಿವು ನೀಡಿರುವ ಕಾಂಗ್ರೆಸ್, ಸದ್ದಿಲ್ಲದೇ ಸ್ಥಳೀಯ ಸಂಸ್ಥೆ ಚುನಾವಣೆಗಳಿಗೂ ತಯಾರಿ ಆರಂಭಿಸಿದೆ.

ವಿಧಾನಸಭಾ ಚುನಾವಣೆಯಲ್ಲಿ ಭರ್ಜರಿ ಯಶಸ್ಸು ಪಡೆದಿದ್ದ ಕಾಂಗ್ರೆಸ್‌ಗೆ ಲೋಕಸಭಾ ಚುನಾವಣೆಯಲ್ಲಿ ನಿರೀಕ್ಷಿತ ಫಲಿತಾಂಶ ದೊರೆಯದಿದ್ದರೂ, ಸಮಾಧಾನಕರ ಸ್ಥಾನಗಳು ಸಿಕ್ಕಿವೆ. ಆದ್ದರಿಂದ ಅಕ್ಟೋಬರ್ ವೇಳೆಗೆ ಬಿಬಿಎಂಪಿ ಹಾಗೂ 2025ರ ಜನವರಿ ವೇಳೆಗೆ ಜಿಲ್ಲಾ ಪಂಚಾಯಿತಿ, ತಾಲೂಕು ಪಂಚಾಯಿತಿ ಚುನಾವಣೆ ನಡೆಸಲು ತೀರ್ಮಾನಿಸಿದ್ದು, ಅದಕ್ಕೆ ಬೇಕಿರುವ ತಯಾರಿಯನ್ನು ಈಗಿನಿಂದಲೇ ಆರಂಭಿಸಲು ಮುಂದಾಗಿದೆ.

ಕೆಪಿಸಿಸಿ ಕಚೇರಿಯಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ನೇತೃತ್ವದಲ್ಲಿ ನಿಗಮ ಮಂಡಳಿಗಳ ಅಧ್ಯಕ್ಷರು, ಅಕಾಡೆಮಿಗಳ ಅಧ್ಯಕ್ಷರು ಸೇರಿದಂತೆ ಪರಾಜಿತ ಅಭ್ಯರ್ಥಿಗಳ ಸಭೆ ನಡೆಸಿ ಸ್ಥಳೀಯ ಸಂಸ್ಥೆ ಚುನಾವಣೆಗೆ ಸಜ್ಜಾಗುವಂತೆ ಸೂಚನೆ ನೀಡಿದರು. ಇದಕ್ಕೂ ಮೊದಲು ಕಾಂಗ್ರೆಸ್ ಹಿರಿಯ ನಾಯಕರೊಂದಿಗೆ ಸಭೆ ನಡೆಸಿ, ಮುಂದಿನ ದಿನದಲ್ಲಿ ಪಕ್ಷವನ್ನು ಯಾವ ರೀತಿಯಲ್ಲಿ ಸಂಘಟಿಸಬಹುದು? ಯಾವ ಹಂತದಲ್ಲಿ ಸುಧಾರಣೆಗೆ ಅವಕಾಶಗಳಿವೆ ಎನ್ನುವ ಬಗ್ಗೆ ಸುದೀರ್ಘ ಚರ್ಚೆ ನಡೆಸಿದರು. ಚಿಂತಕರ ಛಾವಡಿಯ ಸಭೆಯಲ್ಲಿ ವಿಧಾನಸಭೆ ಮಾಜಿ ಸ್ಪೀಕರ್ ರಮೇಶ್‌ಕುಮಾರ್, ವಿಧಾನ ಪರಿಷತ್ ಮಾಜಿ ಸಭಾಪತಿ ವಿ.ಆರ್ ಸುದರ್ಶನ್, ಕೆಪಿಸಿಸಿ ಕಾರ್ಯಾಧ್ಯಕ್ಷ ಜಿ.ಸಿ ಚಂದ್ರಶೇಖರ್, ಬಿ.ಎಲ್ ಶಂಕರ್ ಸೇರಿದಂತೆ ಅನೇಕರು ಭಾಗವಹಿಸಿದ್ದರು.

ಹೊಸ ವಿದ್ಯುತ್ ವ್ಯವಸ್ಥೆಗೆ ಜಾರ್ಜ್ ಚಾಲನೆ

ಬೆಂಗಳೂರು: ಬೆಂಗಳೂರಿನ ಕೇಂದ್ರ ಭಾಗಗಳಾದ ಸರ್ವಜ್ಞನಗರ, ಎಚ್‌ಬಿಆರ್ ಲೇಔಟ್, ಬಾಣಸ ವಾಡಿ ಸೇರಿದಂತೆ ಸುತ್ತಮುತ್ತಲ ಪ್ರದೇಶಗಳಿಗೆ ಗುಣಮಟ್ಟದ ವಿದ್ಯುತ್ ಒದಗಿಸುವ ಹೊಸ ವಿದ್ಯುತ್ ಸರಬರಾಜು ವ್ಯವಸ್ಥೆಗೆ ಎಚ್‌ಬಿಆರ್ ಸ್ಟೇಷನ್‌ನಲ್ಲಿ ಇಂಧನ ಸಚಿವ ಕೆ.ಜೆ. ಜಾರ್ಜ್ ಚಾಲನೆ ನೀಡಿದರು.

ಪಾಟರಿ ರಸ್ತೆ ಉಪಕೇಂದ್ರಕ್ಕೆ ವಿದ್ಯುತ್ ಹೊರೆ ಏರುತ್ತಿರುವ ಹಿನ್ನಲೆಯಲ್ಲಿ ಉಪಕೇಂದ್ರದಿಂದ ನಿರಂತರ ಹಾಗೂ ಗುಣಮಟ್ಟದ ವಿದ್ಯುತ್ ಒದಗಿಸಲು ಎಚ್‌ಬಿಆರ್‌ನ 220/66 ಕೆವಿ ಜಿಐಎಸ್ ವಿದ್ಯುತ್ ಕೇಂದ್ರದಿಂದ ಸುಮಾರು 5.18 ಕಿ.ಮೀ. ಉದ್ದದ ಸುಮಾರು 80 ಮೆಗಾವ್ಯಾಟ್‌ನಷ್ಟು ವಿದ್ಯುತ್ ಪ್ರಸರಣ ಮಾಡುವ ಸಾಮರ್ಥ್ಯವನ್ನು ಹೊಂದಿರುವ 1000 ಚ.ಮಿ.ಮೀ. ಸುತ್ತಳತೆಯ 66 ಕೆವಿ ಭೂಗತ ಕೇಬಲ್ ಹೊಸದಾಗಿ ಅಳವಡಿಸ ಲಾಗಿದೆ. ಈಗಿರುವ ಪಾಟರಿ ರಸ್ತೆಯ 66 ಕೆವಿ ವಿದ್ಯುತ್ ಉಪಕೇಂದ್ರಕ್ಕೆ ಐಟಿಐನ 66 ಕೆವಿ ವಿದ್ಯುತ್ ಉಪಕೇಂದ್ರದಿಂದ ದ್ವಿಮಾರ್ಗ ಪ್ರಸರಣ ಮಾರ್ಗ ಸಂಪರ್ಕದಲ್ಲಿದ್ದು, ಸರ್ವಜ್ಞನಗರ, ಎಚ್ ಬಿಆರ್ ಲೇಔಟ್, ನಾಗವಾರ, ಬಾಣಸವಾಡಿ, ಕಮ್ಮನಹಳ್ಳಿ, ಕಾಡಗೊಂಡನಹಳ್ಳಿ, ಲಿಂಗರಾಜಪುರ, ಅರೇಬಿಕ್ ಕಾಲೇಜು, ಟ್ಯಾನರಿ ರಸ್ತೆ, ಡೇವಿಸ್ ರಸ್ತೆ, ಪುಲಕೇಶಿನಗರ ಮತ್ತು ದಂಡು ರೈಲ್ವೆ ನಿಲ್ದಾಣ ಮತ್ತು ಸುತ್ತಮುತ್ತಲಿನ ಇತರ ಪ್ರದೇಶಗಳಿಗೆ ಕೈಗಾರಿಕೆ, ವಾಣಿಜ್ಯ ಹಾಗೂ ಗೃಹಬಳಕೆ ಉದ್ದೇಶಗಳಿಗಾಗಿ ವಿದ್ಯುತ್ ಒದಗಿಸಲಾಗುತ್ತಿದೆ.

ವಿದ್ಯುತ್ ಉಳಿತಾಯ

ಅಂದಾಜು 39.05 ಕೋಟಿ ವೆಚ್ಚದ ಈ ಯೋಜನೆಯಿಂದ 17.603 ದಶಲಕ್ಷ ಯೂನಿಟ್ ವಾರ್ಷಿಕ ಇಂಧನ ಉಳಿತಾಯವಾಗುತ್ತದೆ. ಪಾಟರಿ ವಿದ್ಯುತ್ 66 ಕೆವಿ ಉಪಕೇಂದ್ರಕ್ಕೆ ಮುಖ್ಯ ಹಾಗೂ ಪರ್ಯಾಯ ಪ್ರಸರಣಾ ಮಾರ್ಗದ ವ್ಯವಸ್ಥೆಗಳಾಗಿರುವುದರಿಂದ ನಿರಂತರವಾಗಿ ಗುಣಮಟ್ಟದ ವಿದ್ಯುತ್ ಒದಗಿಸಲು ನೆರವಾಗಲಿದೆ.

ಹೊಸ 66 ಕೆವಿ ಕೇಬಲ್ ಮಾರ್ಗ ಸೇರ್ಪಡೆ ಬೆಂಗಳೂರಿನ ವಿದ್ಯುತ್ ವಿತರಣಾ ಮೂಲಸೌಕರ್ಯವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಮಹತ್ವದ ಹೆಜ್ಜೆಯಾಗಿದೆ. ವಸತಿ, ವಾಣಿಜ್ಯ ಮತ್ತು ಕೈಗಾರಿಕಾ ಪ್ರದೇಶಗಳಿಗೆ ಗುಣಮಟ್ಟದ ವಿದ್ಯುತ್ ಪೂರೈಕೆ ಸಾಧ್ಯವಾಗಲಿದೆ.

– ಕೆ.ಜೆ.ಜಾರ್ಜ್, ಇಂಧನ ಸಚಿವ

ಭವಾನಿ ಮಧ್ಯಂತರ ಜಾಮೀನು ವಿಸ್ತರಣೆ

ಬೆಂಗಳೂರು: ಸಂತ್ರಸ್ತೆಯ ಅಪಹರಣ ಆರೋಪದಲ್ಲಿ ಭವಾನಿ ರೇವಣ್ಣ ಅವರಿಗೆ ಈ ಹಿಂದೆ ಮಂಜೂರು ಮಾಡಿದ್ದ ನಿರೀಕ್ಷಣಾ ಜಾಮೀನುನನ್ನು ಹೈಕೋರ್ಟ್ ವಿಸ್ತರಿಸಿದೆ.

ಭವಾನಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ

ನ್ಯಾಯಪೀಠ, ವಿಚಾರಣೆ ಪೂರ್ಣಗೊಳಿಸಿ ತೀರ್ಪು ಕಾಯ್ದಿರಿಸಿದೆ. ಅಲ್ಲದೆ, ಅಲ್ಲಿಯವರೆಗೂ ಈ ಹಿಂದೆ ಮಂಜೂರು ಮಾಡಿದ್ದ ಮಧ್ಯಂತರ ನಿರೀಕ್ಷಣಾ ಜಾಮೀನು ವಿಸ್ತರಿಸಿ ಆದೇಶಿಸಿದೆ. ಅರ್ಜಿದಾರರು ನ್ಯಾಯಾಲಯದ ಆದೇಶದಂತೆ ಮೂರು ದಿನಗಳ ಕಾಲ ವಿಚಾರಣೆಗೆ ಹಾಜರಾಗಿದ್ದಾರೆ. ಪೊಲೀಸರು ಕೇಳಿದ ಪ್ರಶ್ನೆಗಳಿಗೆ ವಿವರಣೆ ನೀಡಿದ್ದಾರೆ. ಆದ್ದರಿಂದ ನಿರೀಕ್ಷಣಾ ಜಾಮೀನು ತಿರಸ್ಕರಿಸಬೇಕು ಎಂಬ ಸರಕಾರದ ಪರ ವಾದವನ್ನು ತಿರಸ್ಕರಿಸುತ್ತಿದ್ದು, ಮಧ್ಯಂತರ ನಿರೀಕ್ಷಣಾ ಜಾಮೀನು ವಿಸ್ತರಣೆ ಮಾಡಲಾಗುತ್ತಿದೆ ಎಂದು ಪೀಠ ತಿಳಿಸಿದೆ.

ಸರಕಾರದ ಪರ ವಾದ ಮಂಡಿಸಿ, ಅರ್ಜಿದಾರ ಭವಾನಿ ತನಿಖೆಗೆ ಸಹಕಾರ ನೀಡುತ್ತಿಲ್ಲ. ಎಲ್ಲವೂ ಸುಳ್ಳು ಮಾಹಿತಿ ನಿಡುತ್ತಿದ್ದಾರೆ. ಯಾವುದೇ ಪ್ರಶ್ನೆಗೂ ಸರಿಯಾದ ಉತ್ತರ ನೀಡುತ್ತಿಲ್ಲ. ಇಡೀ ಪ್ರಕರಣದಲ್ಲಿ ಭವಾನಿ ರೇವಣ್ಣ ಅವರು ಪ್ರಮುಖ ಆರೋಪಿಯಾದ್ದಾರೆ. ಅವರು ಸಂತ್ರಸ್ತೆಯ ಅಪಹರಣದಲ್ಲಿ ಪ್ರಮುಖ ಪಾತ್ರವಹಿಸಿದ್ದಾರೆ. ಸೂಕ್ತ ರೀತಿಯಲ್ಲಿ ಸಹಕಾರ ನೀಡದ ಹಿನ್ನೆಲೆಯಲ್ಲಿ ವಶಕ್ಕೆ ಪಡೆದು ವಿಚಾರಣೆಗೆ ಒಳಪಡಿಸಬೇಕಾಗಿದೆ. ಆದ ಕಾರಣ ಈಗಾಗಲೇ ಮಂಜೂರು ಮಾಡಿರುವ ನಿರೀಕ್ಷಣಾ ಜಾಮೀನು ರದ್ದಪಡಿಸಬೇಕು ಎಂದು ಕೋರಿದರು.

ಈ ವೇಳೆ ಪೀಠ, ಯಾವ ಕಾರಣಕ್ಕೆ ವಶಕ್ಕೆ ಪಡೆದು ನಡೆಸಬೇಕು ಎಂಬುದರ ಕುರಿತು ವಿವರಿಸಬೇಕು. ಯಾವ ಕಾರಣಕ್ಕೆ ಅವರು ವಶಕ್ಕೆ ಬೇಕು ಎಂದು ತಿಳಿಸಬೇಕು ಎಂದು ಕೇಳಿತು. ಇದಕ್ಕೆ ಪ್ರತಿಕ್ರಿಯಿಸಿದ ರವಿವರ್ಮ ಕುಮಾರ್, ಆರೋಪ ಪಟ್ಟಿ ಸಲ್ಲಿಕೆಯಾಗುವವರೆಗೂ ಕೋರ್ಟ್ ಈ ರೀತಿಯ ಪ್ರಶ್ನೆಗಳನ್ನು ಕೇಳುವುದಕ್ಕೆ ಅವಕಾಶವಿಲ್ಲ. ಯಾವ ಕಾರಣಕ್ಕೆ ಬಂಧನ ನೀಡಬೇಕು ಎಂದು ಪ್ರಶ್ನಿಸಿದರೆ ತನಿಖೆ ಮಾಡಲು ಸಾಧ್ಯವೇ ಇರುವುದಿಲ್ಲ. ಅದೆನ್ನೆಲ್ಲಾ ಕೋರ್ಟ್‌ಗೆ ಹೇಳುವಂತಿಲ್ಲ ಎಂದರು.

ಬೆಳೆ ವಿಮೆ ನೋಂದಾಯಿಸಿಕೊಳ್ಳಿ

ಬೆಂಗಳೂರು: ತಮ್ಮ ಆರೋಗ್ಯ ರಕ್ಷಣೆಗೆ ಭವಿಷ್ಯಕ್ಕೆ ಹೇಗೆ ವಿಮೆ ಬಹು ಮುಖ್ಯವೋ ಹಾಗೇ ರೈತರ ಬೆಳೆಗೂ ವಿಮೆ ಮುಖ್ಯ ಎಂದು ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ತಿಳಿಸಿದ್ದಾರೆ.

ಸ್ಕೈಲೈಟ್ ಮ್ಯಾನೇಜ್ಮೆಂಟ್ ಸರ್ವಿಸ್‌ನ ನೂತನ ಪ್ರಾದೇಶಿಕ ಕಚೇರಿ ಉದ್ಘಾಟಿಸಿ ಮಾತನಾಡಿದ ಅವರು, ಶೇ.2ರಷ್ಟು ಭರಿಸುವ ವಿಮೆಯನ್ನು ಕಡಿಮೆ ಪ್ರಮಾಣದಲ್ಲಿ ರೈತರು ನೋಂದಾಯಿಸುತ್ತಿದ್ದು, ಎಲ್ಲರೂ ನೊಂದಾಯಿಸುವಂತಾಗಬೇಕು. ಕಳೆದ ಸಾಲಿನಲ್ಲಿ ಬೆಳೆ ವಿಮೆ 19 ಲಕ್ಷ ರೈತರಿಗೆ ಸುಮಾರು 1700 ಕೋಟಿಯಷ್ಟು ಬೆಳೆ ವಿಮೆ ಪ್ರಸ್ತಾವನೆಗಳನ್ನು ಇತ್ಯಾರ್ಥಪಡಿಸಲಾಗುತ್ತಿದೆ. ಸ್ಕೈಲೈಟ್ ಮ್ಯಾನೇಜ್ಮೆಂಟ್ ಸರ್ವಿಸಸ್ ಸಂಸ್ಥೆ ಕೂಡ ರೈತರ ವಿಮಾ ವಲಯಗಳಲ್ಲಿ ಗುರುತಿಸಿಕೊಂಡು, ಬೆಂಗಳೂರಿನಲ್ಲಿ ಪ್ರಾದೇಶಿಕ ಕಚೇರಿ ಪ್ರಾರಂಭವಾಗುತ್ತಿರುವುದು ಶ್ಲಾಘನೀಯ ಎಂದರು.

ಐವರು ಐಎಎಸ್ ಅಧಿಕಾರಿಗಳ ವರ್ಗಾವಣೆ

ಬೆಂಗಳೂರು : ರಾಜ್ಯ ಸರಕಾರವು ಐವರು ಐಎಎಸ್ ಅಧಿಕಾರಿಗಳನ್ನು ವರ್ಗಾವಣೆ ಮಾಡಿ ಶುಕ್ರವಾರ ಆದೇಶ ಹೊರಡಿಸಿದೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ಟಿ.ಕೆ. ಅನಿಲ್ ಕುಮಾರ್ ಅವರನ್ನು ವೈದ್ಯಕೀಯ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಯಾಗಿ ವರ್ಗಾವಣೆ ಮಾಡಲಾಗಿದೆ. ಸ್ಥಳ ನಿಯುಕ್ತಿಯ ನಿರೀಕ್ಷೆಯಲ್ಲಿದ್ದ ಹರ್ಷ ಗುಪ್ತ ಅವರನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಪ್ರಧಾನ ಕಾರ್ಯದರ್ಶಿಯಾಗಿ, ವಿಪುಲ್ ಬನ್ಸಾಲ್ ಅವರನ್ನು ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ ಕಾರ್ಯದರ್ಶಿಯಾಗಿ, ರಮಣದೀಪ್ ಚೌಧರಿ ಅವರನ್ನು ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಕಾರ್ಯರ್ಶಿಯಾಗಿ ವರ್ಗಾವಣೆ ಮಾಡಲಾಗಿದೆ. ರಾಜ್ಯ ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕ ಕುಮಾರ್ ಟಿಎಚ್‌ಎಂ ಅವರನ್ನು ಅವರನ್ನು ಜವಳಿ ಅಭಿವೃದ್ಧಿ ಆಯುಕ್ತ ಹಾಗೂ ಕೈಮಗ್ಗ ಮತ್ತು ಜವಳಿ ನಿರ್ದೇಶಕರನ್ನಾಗಿ ವರ್ಗಾವಣೆ ಮಾಡಲಾಗಿದೆ.

ಐಪಿಎಸ್ ಅಧಿಕಾರಿಗಳ ವರ್ಗಾವಣೆ: ಬೆಂಗಳೂರು ನಗರ ಪೂರ್ವ ವಿಭಾಗದ ಡಿಸಿಪಿ ಕುಲದೀಪ್ ಕುಮಾರ್ ಆರ್.ಜೈನ್ ಅವರನ್ನು ಸಂಚಾರ ಪೂರ್ವ ವಿಭಾಗದ ಡಿಸಿಪಿಯಾಗಿ ಹಾಗೂ ಸ್ಥಳ ನಿಯುಕ್ತಿಯ ನಿರೀಕ್ಷೆಯಲ್ಲಿದ್ದ ಡಿ.ದೇವರಾಜ ಅವರನ್ನು ಪೂರ್ವ ವಿಭಾಗದ ಡಿಸಿಪಿಯಾಗಿ ವರ್ಗಾವಣೆ ಮಾಡಿ ಸರಕಾರ ಆದೇಶ ಹೊರಡಿಸಿದೆ.

ಕೇಂದ್ರದ ಭಾರೀ ಕೈಗಾರಿಕೆ ಹಾಗೂ ಉಕ್ಕು ಖಾತೆ ಸಚಿವ ಎಚ್.ಡಿ.ಕುಮಾರಸ್ವಾಮಿ ಕಿಡಿ

ಯಡಿಯೂರಪ್ಪ ಕುಟುಂಬದ ವಿರುದ್ಧ ಷಡ್ಯಂತ್ರ

ಬೆಂಗಳೂರು: ದೇವೇಗೌಡರ ಕುಟುಂಬವನ್ನು ರಾಜಕೀಯವಾಗಿ ಮುಗಿಸಬೇಕು ಎನ್ನುವ ಷಡ್ಯಂತ್ರದ ನಂತರ ಯಡಿಯೂರಪ್ಪ ಅವರ ಕುಟುಂಬವನ್ನು ರಾಜಕೀಯವಾಗಿ ಮುಗಿಸುವ ಕುತಂತ್ರ ಆರಂಭವಾಗಿದೆ ಎಂದು ಕೇಂದ್ರದ ಭಾರೀ ಕೈಗಾರಿಕೆ ಹಾಗೂ ಉಕ್ಕು ಖಾತೆ ಸಚಿವ ಎಚ್.ಡಿ.ಕುಮಾರಸ್ವಾಮಿ ಕಿಡಿಕಾರಿದ್ದಾರೆ.

ಕೇಂದ್ರ ಸಚಿವರಾದ ಮೇಲೆ ರಾಜ್ಯಕ್ಕೆ ಮೊದಲ ಭೇಟಿ ನೀಡಿ ಜೆಡಿಎಸ್ ಕಚೇರಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಸೇಡಿನ ರಾಜಕಾರಣ ಮಾಡಿ ಯಡಿಯೂರಪ್ಪ ಅವರ ವ್ಯಕ್ತಿತ್ವಕ್ಕೆ ಮಸಿ ಬಳಿಯುವ ಕೆಲಸ ಮಾಡಲಾಗುತ್ತಿದ್ದು, ಅವರ ಪ್ರಯತ್ನ ಫಲಪ್ರದ ಆಗುವುದಿಲ್ಲ ಎಂದು ವಾಗ್ದಾಳಿ ನಡೆಸಿದರು. ನಾಲ್ಕು ತಿಂಗಳ ಹಿಂದಿನ ಪ್ರಕರಣಕ್ಕೆ ಯಡಿಯೂರಪ್ಪ ಅವರ ಮೇಲೆ ಜಾಮೀನು ರಹಿತ ಕೇಸ್ ಹಾಕಲು ಹೊರ ಟಿದ್ದು, ಹಾಸನದಲ್ಲಿ ಚುನಾವಣೆಯಲ್ಲಿ ಗೆಲ್ಲಲು ಪೆನ್ ಡ್ರೈವ್ ಗಳನ್ನು ಹರಿಬಿಟ್ಟು ನೀಚ ರಾಜಕಾರಣ ಮಾಡಿ ಆಡಿಯೋ ಬಂತಲ್ಲಾ, ಅದರ ಬಗ್ಗೆ ಏನು ಕ್ರಮ ತಗೊಂ ಡಿದ್ದೀರಾ ಸಿಡಿ ಶಿವು ಅವರೇ, ಎಂದು ಪರೋಕ್ಷವಾಗಿ ಡಿ.ಕೆ.ಶಿವಕುಮಾರ್ ವಿರುದ್ಧ ಪ್ರಹಾರ ನಡೆಸಿದರು. ರಾಜಕೀಯದಲ್ಲಿ ಯಾರು ಯಾರನ್ನು ಮುಗಿಸಲು ಸಾಧ್ಯವಿಲ್ಲ. ನೆರೆಯ ಆಂಧ್ರ ಪ್ರದೇಶದಲ್ಲಿ ಚಂದ್ರಬಾಬು ನಾಯ್ಡು ಹಿಂದಿನ ಚುನಾವಣೆಯಲ್ಲಿ ಅನೇಕ ಶಾಸಕರು ಅವರನ್ನು ಬಿಟ್ಟು ಹೋದರು. ಅವರನ್ನು ಜೈಲಿಗೂ ಕಳಿಸಿದರು. ಈಗ ಮತ್ತೆ ಗೆದ್ದು ಅಧಿಕಾರಕ್ಕೆ ಬಂದಿದ್ದಾರೆ. ಕರ್ನಾಟಕದಲ್ಲಿಯೂ ಇದು ನಡೆಯುತ್ತದೆ ಚಕ್ರ ತಿರುಗುತ್ತದೆ ಎನ್ನುವುದನ್ನು ಯಾರೂ ಮರೆಯಬಾರದು ಎಂದು ಹೇಳಿದರು.

ನೂತನ ಕೇಂದ್ರ ಸಚಿವರಾಗಿ ಎಚ್.ಡಿ.ಕುಮಾರಸ್ವಾಮಿ ಅಧಿಕಾರ ವಹಿಸಿಕೊಂಡ ನಂತರ ರಾಜ್ಯಕ್ಕೆ ಮೊದಲ ಭೇಟಿ ಸಂದರ್ಭದಲ್ಲಿಯೇ ರಾಜಭವನಕ್ಕೆ ತೆರಳಿ ರಾಜ್ಯಪಾಲ ಥಾವರಚಂದ್ ಗೆಹ್ಲೋಟ್ ಅವರನ್ನು ಸೌಹಾರ್ದ ಭೇಟಿಯಾದರು.

ಉದ್ಯೋಗ ಸೃಷ್ಟಿ, ಉತ್ಪಾದನೆ ಹೆಚ್ಚಳ, ಜಿಡಿಪಿ ವೃದ್ಧಿ ಸೇರಿದಂತೆ ದೇಶಕ್ಕೆ ಒಳ್ಳೆಯದಾಗುವ ಕೆಲಸ ಮಾಡುತ್ತೇನೆ. ಕೈಗಾರಿಕಾ ಕ್ಷೇತ್ರದಲ್ಲಿ ಸಾಮಾನ್ಯ ಜನರಿಗೂ ಉಪಯೋಗ ಆಗುವ ರೀತಿಯಲ್ಲಿ ದುಡಿಯುತ್ತೇನೆ. ನನ್ನ ಶಕ್ತಿ ಮೀರಿ ಕೆಲಸ ಮಾಡುತ್ತೇನೆ.

ಎಚ್.ಡಿ.ಕುಮಾರಸ್ವಾಮಿ, ಕೇಂದ್ರ ಸಚಿವ

ವಿಮಾನ ನಿಲ್ದಾಣದಲ್ಲಿ ಅದ್ದೂರಿ ಸ್ವಾಗತ

ಕೇಂದ್ರ ಸಚಿವರಾದ ಮೇಲೆ ಮೊದಲ ಬಾರಿಗೆ ರಾಜ್ಯಕ್ಕೆ ಭೇಟಿ ನೀಡಿರುವ ಕುಮಾರಸ್ವಾಮಿ ಅವರನ್ನು ಜೆಡಿಎಸ್ ಮತ್ತು ಬಿಜೆಪಿ ಕಾರ್ಯಕರ್ತರು ವಿಮಾನ ನಿಲ್ದಾಣದಲ್ಲಿ ಅದ್ದೂರಿಯಾಗಿ ಸ್ವಾಗತಿಸಿದರು. ಬಳಿಕ ಸಾದಹಳ್ಳಿ ಗೇಟ್ ಟೋಲ್ ಬಳಿಗೆ ಆಗಮಿಸಿದಾಗ ಬೃಹತ್ ಸೇಬಿನ ಹಾರ, ಹೂವಿನ ಹಾರ ಹಾಕಿ ಕಾರ್ಯಕರ್ತರು ಸ್ವಾಗತ ಮಾಡಿದರು.

ಪದ್ಮಿನಿಗೆ ಆಟೋಮೋಟಿವ್ ವರ್ಷದ ಮಹಿಳೆ ಪ್ರಶಸ್ತಿ ಪ್ರದಾನ

ಪದ್ಮಿನಿ ಎಸ್ ನವಲಗುಂದ ಅವರಿಗೆ ಅಂತಾರಾಷ್ಟ್ರೀಯ ಆಟೋಮೋಟಿವ್ ವಿಮೆನ್ ಆಫ್ ದಿ ಇಯರ್ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಬೆಂಗಳೂರು: ಭಾಷ್ ಗ್ಲೋಬಲ್ ಸಾಫ್ಟ್‌ವೇರ್ ಟೆಕ್ನಾಲಜಿ ಸಂಸ್ಥೆಯ ಪದ್ಮಿನಿ ಎಸ್ ನವಲಗುಂದ ಅವರಿಗೆ 2024ನೇ ಸಾಲಿನ ಅಂತಾರಾಷ್ಟ್ರೀಯ ಆಟೋಮೋಟಿವ್ ವಿಮೆನ್ ಆಫ್ ದಿ ಇಯರ್ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

ಪದ್ಮಿನಿ ಅವರು ಸಿಐಐ (ಭಾರತೀಯ ಕೈಗಾರಿಕಾ ಒಕ್ಕೂಟ)-ಐಡಬ್ಲ್ಯೂಎನ್) ಭಾರತೀಯ ಮಹಿಳಾ ನೆಟ್ವರ್ಕ್) ಉಪಾಧ್ಯಕ್ಷರೂ ಆಗಿದ್ದಾರೆ. ಇವರು ಕೈಗಾರಿಕಾ ಹಾಗೂ ಸಾಫ್ಟ್‌ವೇರ್ ಕ್ಷೇತ್ರದಲ್ಲಿ ನಡೆಸಿದ ಅವಿರತ ಶ್ರಮ ಹಾಗೂ ಮಹಿಳಾ ಉಪಕ್ರಮಗಳು ಮನ್ನಣೆಗಳಿಸಿದೆ. ಯೂನಿರ್ಸಲ್ ವುಮೆನ್ ನೆಟ್‌ವರ್ಕ್ ಮತ್ತು ಜಿಐಎಸ್‌ಆರ್ ಫೌಂಡೇಷನ್‌ನಿಂದ ಸ್ಫೂರ್ತಿದಾಯಕ ಮಹಿಳಾ ನಾಯಕಿ, ಡಿಫರೆನ್ಸ್ ಮೇಕರ್ ಅಂತಾರಾಷ್ಟ್ರೀಯ ಪ್ರಶಸ್ತಿ ಮುಡಿಗೇರಿಸಿಕೊಂಡಿದ್ದಾರೆ. ಅಲ್ಲದೆ ಭಾರತದಿಂದ ಟೆಕ್ ಸಮಾವೇಶದಲ್ಲಿ ಭಾಗವಹಿಸಿದ್ದಾರೆ.

ಕರ್ನಾಟಕ ಸರಕಾರ
ಕರ್ನಾಟಕ ಅರಣ್ಯ ಇಲಾಖೆ
ಉಪ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂಚಾರಿ ದಳ, ಶಿರಸಿರವರ ಕಚೇರಿ
ಕ್ರ.ಸಂ.:ಅಸಂದ/ಶಿರಸಿ/ಹೊ.ಗು./ಟೆಂಡರ್/ಸಿಆರ್–3/24–25/73 ದಿ: 06/06/2024

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕತೆ ಅಧಿನಿಯಮ 2000 ರಂತೆ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಅರಣ್ಯ ಸಂಚಾರಿ ದಳ, ಶಿರಸಿರವರ ಕಚೇರಿಯಲ್ಲಿ 2024–25ನೇ ಸಾಲಿನಲ್ಲಿ ಅರಣ್ಯ ಸಂಚಾರಿ ದಳ, ಶಿರಸಿ ಘಟಕಕ್ಕೆ ಅಗತ್ಯವಿರುವ ಕಂಪ್ಯೂಟರ ಆಪರೇಟರ್, ವಾಹನ ಚಾಲಕರ ಹೊರಗುತ್ತಿಗೆ ನೌಕರರ ಸೇವೆಯನ್ನು ಒದಗಿಸುವ ಬಗ್ಗೆ ಟೆಂಡರ್ ಕರೆಯಲಾಗಿದ್ದು, ಈ ಕಚೇರಿಯಲ್ಲಿ 2024–25ನೇ ಸಾಲಿಗೆ ನೋಂದಾಯಿತ ಹೊರಸಂಪನ್ಮೂಲ ಏಜನ್ಸಿಯವರಿಂದ ನೋಂದಣಿ ಹೊಂದಿರುವವರು ಟೆಂಡರಿನಲ್ಲಿ ಭಾಗವಹಿಸಬಹುದಾಗಿದೆ.
ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ: 20/06/2024 ರಂದು ಮುಂಜಾನೆ 10:00 ಗಂಟೆಯಿಂದ ಮಧ್ಯಾಹ್ನ 3:00 ಗಂಟೆಯವರೆಗೆ

ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿ,
ಅರಣ್ಯ ಸಂಚಾರಿ ದಳ, ಶಿರಸಿ.
DIPR/KWR/KSMCA/38/24-25 Dt.14.06.2024

ಕರ್ನಾಟಕ ಸರ್ಕಾರ – ಜಿಲ್ಲಾ ಪಂಚಾಯತ್, ಶಿವಮೊಗ್ಗ
ಆಯುಷ್ ಇಲಾಖೆ, ಜಿಲ್ಲಾ ಆಯುಷ್ ಅಧಿಕಾರಿಗಳ ಕಛೇರಿ, ಶಿವಮೊಗ್ಗ
ನಂ:8, ಜಿ.ಆರ್.ಕಾಂಪ್ಲೆಕ್ಸ್, 4ನೇ ಅಡ್ಡರಸ್ತೆ, 1ನೆ ಮುಖ್ಯ ರಸ್ತೆ, ದೇವರಾಜು ಅರಸು ನಗರ, ಸೋಮಿನಕೊಪ್ಪ ರಸ್ತೆ, ಶಿವಮೊಗ್ಗ–577204
e.mail: dao.shimoga09@gmail.com ph:08182-255230
ಕ್ರ.ಸಂ: ಜಿಆಕಶಿ/09/ಸಿಬ್ಬಂದಿ(1)/2023–24 ದಿನಾಂಕ: 13.06.2024

ಅಲ್ಪಾವಧಿ ಮರು ಇ-ಟೆಂಡರ್ ಪ್ರಕಟಣೆ (ಹೊರಗುತ್ತಿಗೆ ಸೇವೆಯನ್ನು ಪಡೆಯುವ ಬಗ್ಗೆ ಟೆಂಡರ್) (ದ್ವಿ ಲಕೋಟೆ ಪದ್ಧತಿ)

2023–24ನೇ ಸಾಲಿಗೆ ಜಿಲ್ಲಾ ಆಯುಷ್ ಕಛೇರಿ, ಶಿವಮೊಗ್ಗ ಇಲ್ಲಿಗೆ 01 ಸಂಖ್ಯೆಯು ಮತ್ತು ಇದರ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿವಮೊಗ್ಗ ಜಿಲ್ಲೆಯ ವಿವಿಧ ತಾಲ್ಲೂಕಿನಲ್ಲಿನ 22 ಸರ್ಕಾರಿ ಆಯುರ್ವೇದ ಚಿಕಿತ್ಸಾಲಯಗಳಿಗೆ 22 ಸಂಖ್ಯೆಯ ಹೀಗೆ ಒಟ್ಟು 23 ಸಂಖ್ಯೆಯ ಗ್ರೂಪ್–ಡಿ ಹುದ್ದೆಗಳ ಎದುರು ಅರ್ಹ ಮಾನವ ಸಂಪನ್ಮೂಲ ಸಂಸ್ಥೆಗಳಿಂದ ಹೊರಗುತ್ತಿಗೆ ಆಧಾರದ ಮೇಲೆ ಗ್ರೂಪ್–ಡಿ (Multipurpose worker) ಸೇವೆಯನ್ನು 1 ವರ್ಷದ ಅವಧಿಗೆ ಪಡೆಯಲು ಅಲ್ಪಾವಧಿ ಮರು ಇ-ಟೆಂಡರ್ ಕರೆಯಲಾಗಿದ್ದು (ಟೆಂಡರ್ ಅಂದಾಜು ಮೊತ್ತ ರೂ. 47.10 ಲಕ್ಷ) ಟೆಂಡರ್ ವೇಳಾಪಟ್ಟಿ ಮತ್ತು ಇತರೆ ವಿವರಗಳನ್ನು ವೆಬ್ ಸೈಟ್ www.kppp.karnataka.giv.in kppp Tender No: AYD/2023- 24/ SE0034/CALL-3ರಲ್ಲಿ ನೋಡಬಹುದಾಗಿದೆ.
(ಹೆಚ್ಚಿನ ಮಾಹಿತಿಗಾಗಿ ಕಛೇರಿಯಲ್ಲಿ ಸಂಪರ್ಕಿಸಿವುದು)
ಸಹಿ/– ಜಿಲ್ಲಾ ಆಯುಷ್ ಅಧಿಕಾರಿಗಳು, ಜಿಲ್ಲಾ ಆಯುಷ್ ಕಛೇರಿ, ಶಿವಮೊಗ್ಗ.
ವಾ.ಸಾ.ಸಂ.ಇ/ಕೆಎಸ್ಎಂಸಿಎ/66/06/24–25/102

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನಿಯರ್ ರವರ ಕಾರ್ಯಾಲಯ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚನ್ನರಾಯಪಟ್ಟಣ
ಕಛೇರಿ ದೂರವಾಣಿ: 08176–252749

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:02/2024–25 ದಿನಾಂಕ: 12.06.2024

ಕರ್ನಾಟಕ ಸರ್ಕಾರದ ರಾಜ್ಯಪಾಲರ ಪರವಾಗಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚನ್ನರಾಯಪಟ್ಟಣ, ವ್ಯಾಪ್ತಿಯ ಚನ್ನರಾಯಪಟ್ಟಣ ತಾಲ್ಲೋಕಿಗೆ 2022–23ನೇ ಸಾಲಿನ ವಿವೇಕ ಯೋಜನೆಯಡಿ ಅನುಮೋದನೆಯಾಗಿರುವ ಚನ್ನರಾಯಪಟ್ಟಣ ತಾ: ಚನ್ನರಾಯಪಟ್ಟಣ ಟೌನ್ ಸರ್ಕಾರಿ ಪದವಿ ಪೂರ್ವ ಕಾಲೇಜಿಗೆ ಕೊಠಡಿಗಳ ನಿರ್ಮಾಣ (5 ಕೊಠಡಿಗಳು) LL0044 ಟೆಂಡರ್ ಮೊತ್ತ ರೂ 109.04 ಲಕ್ಷಗಳಿಗೆ ಲೋಕೋಪಯೋಗಿ ಇಂಜಿನಿಯರಿಂಗ್ ಇಲಾಖೆಯಲ್ಲಿ ನೊಂದಾಯಿತ/ಎನ್ರೋಲ್ ಮಾಡಿಸಿರುವ ಅರ್ಹ ಗುತ್ತಿಗೆದಾರರಿಂದ ಸ್ಪರ್ಧಾತ್ಮಕ ಟೆಂಡರನ್ನು KPPP ಅಂತರ್ಜಾಲದಲ್ಲಿ ದಿನಾಂಕ: 29.06.2024ರ ಸಂಜೆ 5.00ಘಂಟೆಯವರೆಗೆ ಟೆಂಡರನ್ನು ನಿಗಧಿತ ನಮೂನೆಗಳನ್ನು https://kppp.karnataka.gov.in/kpppನಲ್ಲಿ ಡೌನ್ಲೋಡ್ ಮಾಡಿ ಅವಶ್ಯ ಮಾಹಿತಿಗಳೊಂದಿಗೆ ಹಾಗೂ ನಿಗಧಿತ ಇ.ಎಂ.ಡಿ.ಯೊಂದಿಗೆ ದಿನಾಂಕ: 29.06.2024ರ ಸಂಜೆ 5.00 ಗಂಟೆಯೊಳಗೆ ಅಪ್ಲೋಡ್ ಮಾಡತಕ್ಕದ್ದು. ದಿನಾಂಕ 28.06.2024 ರವರೆಗೆ ಗುತ್ತಿಗೆದಾರರು ಈ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಯಾವುದೇ ಮಾಹಿತಿಯನ್ನು ಪಡೆಯಬಹುದಾಗಿರುತ್ತದೆ. ದಿನಾಂಕ: 01.07.2024ರಂದು ಬೆಳಿಗ್ಗೆ 11.00 ಗಂಟೆಗೆ ಗುತ್ತಿಗೆದಾರರ ತಾಂತ್ರಿಕ ಬಿಡ್ಡನ್ನು ತೆರೆಯಲಾಗುವುದು. ತಾಂತ್ರಿಕ ಬಿಡ್ಡ್ ಅನುಮೋದನೆಯಾದ ನಂತರ ಗುತ್ತಿಗೆದಾರರ ಆರ್ಥಿಕ ಬಿಡ್ಡನ್ನು ತೆರೆಯಲಾಗುವುದು. ಕಾಮಗಾರಿಗಳ ವಿವರಗಳು ಇ–ಪ್ರಕ್ಯೂರ್ಮೆಂಟ್ ಅಂತರ್ಜಾಲದಲ್ಲಿ ಲಭ್ಯವಿರುತ್ತವೆ. ಸದರಿ ಕಾಮಗಾರಿಗೆ ಸಂಬಂಧಪಟ್ಟಂತೆ ಒಂದು ವೇಳೆ ಏನಾದರೂ ತಿದ್ದುಪಡಿ ಉಂಟಾದಲ್ಲಿ ಸದರಿ ತಿದ್ದುಪಡಿಯನ್ನು ವೆಬ್ಸೈಟ್ನಲ್ಲಿ ಅಪ್ಲೋಡ್ ಮಾಡಲಾಗುವುದು ಟೆಂಡರನ್ನು ಯಾವುದೇ ಕಾರಣ ನೀಡದೇ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ.

ಸಹಿ/–ಕಾರ್ಯಪಾಲಕ ಇಂಜಿನಿಯರ್, ಪ.ರಾಜ್. ಇಂ.ವಿಭಾಗ,
ಚನ್ನರಾಯಪಟ್ಟಣ.
ವಾಸಾಸಂಇ/ಹಿಸನಿ/ಹಾಸನ/49/ಕೆಎಸ್ಎಂಸಿಎ/2024–25

ಪುರಸಭೆ ಕಾರ್ಯಾಲಯ ಕುಡಚಿ

ಅಲ್ಪಾವಧಿ ಟೆಂಡರ ಪ್ರಕಟಣೆ

ಪುರಸಭೆ ಕುಡಚಿಯ ಸನ್ 2023–24ನೇ ಸಾಲಿನ ಎಸ್ಎಫ್ಸಿ ಶೇ 24.10%ಅನುದಾನ ಇಂಡೆಂಟ ಸಂಖ್ಯೆ DMA/2023-24/BD/WORK_INDENT13383/call-2,DMA/2023-24/ BD/WORK _INDENT 13380/call-2 ಎಸ್ಎಫ್ಸಿ ಕುಡಿಯುವ ನೀರಿನ ಅನುದಾನದಲ್ಲಿ ಕಾಮಗಾರಿ ಇಂಡೆಂಟ್ ನಂ:DMA/2024-25/WT/WORK_INDENT17973/call-2, ಹಾಗೂ ಘನ ತ್ಯಾಜ್ಯ ವಸ್ತು ನಿರ್ವಹಣೆ ಅನುದಾನದಲ್ಲಿ ಇಂಡೆಂಟ ನಂ DMA/2024-25/OW/WORK_INDENT18329,DMA/2024-25/OW/WORK_INDENT18331,DMA/2024-25/OW/WORK_INDENT18332, DMA/2024-25/EL/WORK_INDENT18334, DMA/2024-25/OW/WORK_INDENT18326 KTTP ಕಾಯ್ದೆ–2000ರ ಪ್ರಕಾರ ಕೆಡಬ್ಲ್ಯು–1 ಮತ್ತು ಕೆಡಬ್ಲ್ಯು–3 ನಿಭಂದನೆಗಳೊಪಟ್ಟು ಎಕ ಲಕೋಟೆ/ದ್ವಿ–ಲಕೋಟೆ ಮುಖಾಂತರ ಟೆಂಡರವನ್ನು ಅಹ್ವಾನಿಸಲಾಗಿದ್ದು ಅಪಲೋಡ ಮಾಡುವ ದಿನಾಂಕ 10/06/2024 ರಿಂದ ದಿನಾಂಕ 02/07/2024 ಸಾಯಂಕಾಲ 4:30 ಗಂಟೆ ವರೆಗೆ ಟೆಂಡರ ತೆರೆಯುವ ದಿನಾಂಕ 04.07.2024ರಂದು ಪೂವಾಹ್ನ 11:00 ಗಂಟೆಗೆ ಹೆಚ್ಚಿನ ಮಾಹಿತಿಗಾಗಿ https://kpppuat.Karnataka.gov.in ನಲ್ಲಿ ಆನ್ಲೈನ್ ಮೂಲಕ ಸಂಪರ್ಕಿಸಬಹುದಾಗಿದೆ. ಕಾಮಗಾರಿಗಳ ಅವಧಿ 3 ತಿಂಗಳು.

ಸಹಿ/–ಮುಖ್ಯಾಧಿಕಾರಿ
ಪುರಸಭೆ ಕುಡಚಿ
DIPR/BGM/RO-NO-86/KSMCA/2024-25

ಕರ್ನಾಟಕ ಸರಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿಕ್ಕೋಡಿ
ನಂ.ಲೋ.ಇ./ಚಿ.ವಿ./ಸ.ಇಂ.–1/ಟೆಂಡರ/2024–25/726 ದಿನಾಂಕ:13/06/2024

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

ಲೋಕೋಪಯೋಗಿ ಇಲಾಖೆ ಚಿಕ್ಕೋಡಿ ವಿಭಾಗದಡಿ 2023–24 ನೇ ಸಾಲಿನ ಲೆಕ್ಕ ಶಿರ್ಷಿಕೆ 4059–ಇಲಾಖಾ ಕಟ್ಟಡಗಳು ಅಡಿ 3 ಕಾಮಗಾರಿಗಳು, ಗುತ್ತಿಗೆ ಇಟ್ಟ ಕನಿಷ್ಟ ಮೊತ್ತ ರೂ. 15.00 ಲಕ್ಷ ಹಾಗೂ ಗರಿಷ್ಟ ಮೊತ್ತ ರೂ. 208.33 ಲಕ್ಷ ಇರುವ ಕಾಮಗಾರಿಗಳಿಗೆ ಟೆಂಡರ್ ಆವ್ಹಾನಿಸಲಾಗಿದೆ.
ಗುತ್ತಿಗೆ ಪ್ರಕ್ರಿಯೆಯ ನಿಗದಿತ ದಿನಾಂಕಗಳು ಈ ಕೆಳಗಿನಂತೆ ಇರುವುದು
1)ಗುತ್ತಿಗೆ ಪೂರ್ವಭಾವಿ ಸಭೆ ವಿಭಾಗ ಕಚೇರಿಯಲ್ಲಿ:20–06–2024 ರಂದು (11.00 ಗಂಟೆಗೆ), 2)ಆಕ್ಷೇಪಣೆ – ಸಂದೇಹ ಮತ್ತು ವಿವರಣೆಗಳಿಗೆ ಕೊನೆಯ ದಿನಾಂಕ:21–06–2024 (ಸಾಯಂಕಾಲ 5.30 ಗಂಟೆಯ ವರೆಗೆ), 3)ಗುತ್ತಿಗೆ ಪತ್ರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ:24–06–2024 (ಸಾಯಂಕಾಲ 5.00 ಗಂಟೆಯವರೆಗೆ), 4)ಹಣಕಾಸು ಬಿಡ್ನ್ನು ತೆರೆಯುವ ದಿನಾಂಕ (Two Cover System):26–06–2024 (ಸಾಯಂಕಾಲ 4.30 ಗಂಟೆಗೆ), 5)ತಾಂತ್ರಿಕ ಬಿಡ್ನ್ನು ತೆರೆಯುವ ದಿನಾಂಕ (Two Cover System): 26–06–2024 (ಸಾಯಂಕಾಲ 4.30 ಗಂಟೆಗೆ), 6)ಹಣಕಾಸು ಬಿಡ್ನ್ನು ತೆರೆಯುವ ದಿನಾಂಕ (Two Cover System): "ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ", 7)ಯಾವುದೇ ಗುತ್ತಿಗೆ ಅಂತಿಮ ದಿನಾಂಕದಂದು ಸ್ವೀಕೃತವಾಗದಿದ್ದಲ್ಲಿ ಇ–ಪ್ರಾಕ್ ದಲ್ಲಿ ಸ್ವಯಂಚಾಲಿತವಾಗಿ ಗುತ್ತಿಗೆ ಸಲ್ಲಿಸುವ ದಿನಾಂಕ 2 ದಿನ ವಿಸ್ತರಣೆಯಾಗುವುದು.
ಕಾಮಗಾರಿಗಳ ಎಲ್ಲ ವಿವರಗಳಿಗಾಗಿ ಇಲಾಖೆಯ ವೆಬಸೈಟ್ www.eproc.karnataka.gov.in ನ್ನು ಮತ್ತು ಟೆಂಡರ ಪ್ರಕಟಣೆಗಾಗಿ www.kpwd.gov.in ನ್ನು ಗಮನಿಸಲು ಅಥವಾ ಲೋಕೋಪಯೋಗಿ ಇಲಾಖೆ ವಿಭಾಗ ಚಿಕ್ಕೋಡಿ ಕಾರ್ಯಾಲಯವನ್ನು ಕಚೇರಿಯ ವೇಳೆಯಲ್ಲಿ ಸಂಪರ್ಕಿಸಲು ಕೋರಲಾಗಿದೆ.

ಸಹಿ/–ಕಾರ್ಯನಿರ್ವಾಹಕ ಇಂಜಿನೀಯರರು,
ಲೋಕೋಪಯೋಗಿ ಇಲಾಖೆ, ವಿಭಾಗ ಚಿಕ್ಕೋಡಿ.
DIPR/BGM/RO-NO-103/KSMCA/2024-25

ನಾವು ಗ್ಯಾರಂಟಿಗಳನ್ನು ಮತಕ್ಕಾಗಿ ತಂದಿಲ್ಲ, ಬಡವರಿಗಾಗಿ ಜಾರಿಗೆ ತಂದಿದ್ದೇವೆ

ಗ್ಯಾರಂಟಿ ಯೋಜನೆ ನಿಲ್ಲದು: ಸಿಎಂ

ಮೈಸೂರು: ರಾಜ್ಯದಲ್ಲಿ ಈಗ ಚಾಲ್ತಿಯಲ್ಲಿರುವ ಗ್ಯಾರಂಟಿ ಯೋಜನೆಗಳು ಯಾವುದೇ ಕಾರಣಕ್ಕೂ ನಿಲ್ಲುವುದಿಲ್ಲ ಹಾಗೂ ಈ ಬಗ್ಗೆ ಮರು ಪರಿಶೀಲನೆಯಾಗುವುದೂ ಇಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಪುನರುಚ್ಚರಿಸಿದ್ದಾರೆ.

ಮಂಡಕಳ್ಳಿ ವಿಮಾನ ನಿಲ್ದಾಣದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ನಾವು ಗ್ಯಾರಂಟಿಗಳನ್ನು ಮತಕ್ಕಾಗಿ ಜಾರಿಗೆ ತಂದಿಲ್ಲ. ಬಡವರಿಗಾಗಿ ಜಾರಿಗೆ ತಂದಿದ್ದೇವೆ. ಲೋಕಸಭಾ ಚುನಾವಣೆಯಲ್ಲಿ ನಮಗೆ ಹಿನ್ನಡೆಯಾಗಿರಬಹುದು. ಆದರೆ ಮತಗಳಿಕೆ ಶೇ.13 ರಷ್ಟು ಹೆಚ್ಚಾಗಿದೆ. ಮೈಸೂರು ಕ್ಷೇತ್ರದಲ್ಲಿ ಸೋತ್ತಿರುವುದು ಸತ್ಯ, ಆದರೆ ಚಾಮರಾಜನಗರದಲ್ಲಿ ಗೆದ್ದಿದ್ದೇವೆ. ಹಾಗೆಂದು ಸೋಲಿಗೆ ಕಾರಣಗಳನ್ನು ಮಾಧ್ಯಮದವರಿಗೆ ಹೇಳುವುದಿಲ್ಲ, ಕಾಂಗ್ರೆಸ್ ಹೈಕಮಾಂಡ್‌ಗೆ ಹೇಳುತ್ತೇನೆ. ರಾಜ್ಯದಲ್ಲಿ 1 ರಿಂದ 9 ಸ್ಥಾನ ಗೆದಿದ್ದೇವೆ, ಹೀಗಾಗಿ ಯಾವುದೇ ಕಾರಣಕ್ಕೂ ಗ್ಯಾರಂಟಿ ನಿಲ್ಲುವುದಿಲ್ಲ ಎಂದು ಸ್ಪಷ್ಟನೆ ನೀಡಿದರು.

ನನ್ನ ಬಳಿ ಯಾರೂ ಬಂದಿಲ್ಲ: ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಬಂಧಿತರಾದ ನಟ ದರ್ಶನ್ ಮತ್ತು ಆತನ ಗ್ಯಾಂಗ್ ಸದಸ್ಯರಿಗೆ ವಿಶೇಷ ವ್ಯವಸ್ಥೆ ಕಲ್ಪಿಸಿರುವ ಬಗ್ಗೆ ಕೇಳಿದ ಪ್ರಶ್ನೆಗೆ, ಪೊಲೀಸರು ಯಾವ ಕಾರಣಕ್ಕೆ ಠಾಣೆಗೆ ಶಾಮಿಯಾನ ಹಾಕಿದ್ದಾರೋ ಗೊತ್ತಿಲ್ಲ. ಸಾಮಾನ್ಯ ಜನರಿಗೆ ತೊಂದರೆ ಆಗದಂತೆ ಕೆಲಸ ಮಾಡುತ್ತಿದ್ದಾರೆ. ದರ್ಶನ್ ವಿಚಾರದಲ್ಲಿ ನನ್ನ ಹತ್ತಿರ ಯಾವ ಪ್ರಭಾವಿಗಳೂ ಬಂದಿಲ್ಲ. ಬಂದಿದ್ದಾರೆ ಎಂಬುದು ಸುದ್ದಿ ಅಷ್ಟೇ ಆಗಿದೆ. ಆದರೂ ಬಿಜೆಪಿಯವರು ಸುಮ್ಮನೆ ಹೇಳಿಕೆ ನೀಡುತ್ತಿದ್ದು, ನಾವು ಕಾನೂನು ಪ್ರಕಾರ ಕೆಲಸ ಮಾಡುತ್ತಿದ್ದೇವೆ ಹೊರತು, ಅದನ್ನು ಬಿಟ್ಟು ಏನೂ ಮಾಡಲ್ಲ ಎಂದು ಮುಖ್ಯಮಂತ್ರಿ ಸ್ಪಷ್ಟಪಡಿಸಿದರು.

ಸಚಿವರಾದ ಡಾ.ಎಚ್.ಸಿ. ಮಹದೇವಪ್ಪ, ಕೆ. ವೆಂಕಟೇಶ್, ಸಂಸದ ಸುನಿಲ್ ಬೋಸ್, ಮಾಜಿ ಶಾಸಕ ಎಂ.ಕೆ. ಸೋಮಶೇಖರ್ ಇತರರು ಹಾಜರಿದ್ದರು.

- ದರ್ಶನ್ ವಿಚಾರದಲ್ಲಿ ನನ್ನ ಹತ್ತಿರ ಯಾವ ಪ್ರಭಾವಿಗಳೂ ಬಂದಿಲ್ಲ
- ಸಾಮಾನ್ಯ ಜನರಿಗೆ ತೊಂದರೆ ಆಗದಂತೆ ಕೆಲಸ ಮಾಡುತ್ತಿದ್ದಾರೆ
- ನಾವು ಕಾನೂನು ಪ್ರಕಾರ ಕೆಲಸ ಮಾಡುತ್ತಿದ್ದೇವೆ
- ಬಿಜೆಪಿ ಹೇಳಿಕೆಗಳಿಗೆ ಸಿಎಂ ಸಿದ್ದರಾಮಯ್ಯ ಕಿಡಿ

ದರ್ಶನ್ ಪ್ರಕರಣದಲ್ಲಿ ಪ್ರಭಾವ ಬಳಸಲು ನನ್ನ ಬಳಿ ಬಂದಿದ್ದರು ಎಂಬುದು ಸುದ್ದಿಯಷ್ಟೇ, ಆದರೆ ಇದ್ಯಾವುದು ಸತ್ಯವಲ್ಲ. ನನ್ನ ಬಳಿ ಯಾರೂ ಬಂದಿಲ್ಲ, ಯಾವ ಪ್ರಭಾವವೂ ನಡೆದಿಲ್ಲ.
– ಸಿದ್ದರಾಮಯ್ಯ, ಸಿಎಂ

ದ್ವೇಷ ರಾಜಕಾರಣ ಇಲ್ಲ

ಯಡಿಯೂರಪ್ಪ ಅವರಿಗೆ ಜಾಮೀನು ಸಿಕ್ಕ ವಿಚಾರದ ಬಗ್ಗೆ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ, ಕೋರ್ಟ್ ಆದೇಶದ ಬಗ್ಗೆ ಮಾತನಾಡಲ್ಲ. ಆದರೆ ಕಾಂಗ್ರೆಸ್ ಯಾವತ್ತಿಗೂ ದ್ವೇಷದ ರಾಜಕಾರಣ ಮಾಡಲ್ಲ. ಕಾನೂನು ರೀತಿ ಕೆಲಸ ಮಾಡಲಿದ್ದು, ವಿರೋಧ ಪಕ್ಷಗಳ ಎಲ್ಲ ಆರೋಪಗಳಿಗೆ ನಾನು ಉತ್ತರ ಕೊಡಬೇಕಿಲ್ಲ. ನಾನು ಮತ್ತೆ ಮತ್ತೆ ಸ್ಪಷ್ಟಪಡಿಸುತ್ತೇನೆ, ಯಾವುದೇ ಪ್ರಕರಣದಲ್ಲೂ ಕಾಂಗ್ರೆಸ್ ಯಾವತ್ತಿಗೂ ದ್ವೇಷದ ರಾಜಕಾರಣ ಮಾಡಲ್ಲ ಎಂದರು.

ಬಿಸಿಯೂಟ ಸೇವಿಸಿ 100 ಕ್ಕೂ ಹೆಚ್ಚು ಶಾಲಾ ಮಕ್ಕಳು ಅಸ್ವಸ್ಥ

ಬಿಸಿಯೂಟ ಸೇವಿಸಿ ಅಸ್ವಸ್ಥಗೊಂಡಿರುವ ದೋರನಹಳ್ಳಿ ಸರಕಾರಿ ಶಾಲೆಯ ವಿದ್ಯಾರ್ಥಿಗಳು.

ಶಹಾಪುರ: ತಾಲೂಕಿನ ದೊರನಹಳ್ಳಿ ಸರಕಾರಿ ಹಿರಿಯ ಪ್ರಾಥಮಿಕ ಶಾಲೆ, ಪ್ರೌಢ ಶಾಲೆ, ಮಹಾಂತೇಶ್ವರ ಶಾಲೆ, ಸರಕಾರಿ ಉರ್ದು ಶಾಲೆ, ಸರಕಾರಿ ಅಂಬೇಡ್ಕರ್ ಶಾಲೆಗಳಿಗೆ ಖಾಸಗಿ ಎನ್‌ಜಿಒ ಮೂಲಕ ಮಕ್ಕಳಿಗೆ ಸಿಗುವ ಮಧ್ಯಾಹ್ನದ ಬಿಸಿಯೂಟ ಸೇವಿಸಿ 100 ಕ್ಕೂ ಹೆಚ್ಚು ಮಕ್ಕಳು ಅಸ್ವಸ್ಥಗೊಂಡಿದ್ದು, ವಿದ್ಯಾರ್ಥಿ ಗಳನ್ನು ತಾಲೂಕು ಆಸ್ಪತ್ರೆಗೆ ದಾಖಲಿಸಲಾಗಿದೆ.

ಬಿಸಿಯೂಟಕ್ಕೆ ವಿದ್ಯಾರ್ಥಿಗಳಿಗೆ ಅನ್ನ ಮತ್ತು ಬೇಳೆ ಸಾರು ನೀಡಲಾಗಿತ್ತು. ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಬಿಸಿಯೂಟ ಸೇವಿಸಿದ ಮಕ್ಕಳಲ್ಲಿ ವಾಂತಿ ಕಾಣಿಸಿಕೊಂಡಿದೆ. ತಕ್ಷಣ ಅವರನ್ನು ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಚಿಕಿತ್ಸೆ ನೀಡಲಾಗಿದೆ. ಕೆಲ ಮಕ್ಕಳಿಗೆ ತೀವ್ರ ಹೊಟ್ಟೆನೋವು ಕಾಣಿಸಿಕೊಂಡಿದ್ದು, ನಗರದ ತಾಲೂಕ ಸಾರ್ವಜನಿಕ ಆಸ್ಪತ್ರೆ ದಾಖಲಿಸಿದ್ದು ಚಿಕಿತ್ಸೆ ಪಡೆಯುತ್ತಿದ್ದಾರೆ.

ಬಿಸಿಯೂಟ ಸೇವಿಸಿದ ಮಕ್ಕಳು ಮಧ್ಯಾಹ್ನದ ತರಗತಿಗೆ ಹಾಜರಾಗಿದ್ದರು. ತಕ್ಷಣ ಎಲ್ಲರನ್ನೂ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗಿದೆ. ಆಹಾರ ಕಲುಷಿತಗೊಂಡಿರುವ ಸಾಧ್ಯತೆ ಇದೆ ಎಂದು ಟಿಎಚ್‌ಒ ಡಾ. ರಮೇಶ್ ಗುತ್ತೇದಾರ ತಿಳಿಸಿದ್ದಾರೆ. ಮಕ್ಕಳಿಗೆ ಅಗತ್ಯ ಚಿಕಿತ್ಸೆ ನೀಡಲಾಗಿದ್ದು, ಎಲ್ಲರೂ ಚೇತರಿಸಿಕೊಳ್ಳುತ್ತಿದ್ದಾರೆ. ಸ್ಥಳಕ್ಕೆ ಜಿಲ್ಲಾಧಿಕಾರಿ, ಸಿಇಒ ಭೇಟಿ ನೀಡಿದ್ದಾರೆ. ಮಕ್ಕಳಿಗೆ ಆಹಾರ ಪೂರೈಸುವ ಖಾಸಗಿ ಎನ್‌ಜಿಒ ಸಚಿವ ಶರಣಬಸಪ್ಪಗೌಡ ದರ್ಶನಪುರ ಸಹೋದರರಿಗೆ ಸೇರಿದ್ದಾಗಿದೆ ಎಂದು ತಿಳಿದು ಬಂದಿದೆ.

ತುಮಕೂರಿನ ಸಿದ್ದಗಂಗಾ ಮಠ, ಸಿದ್ಧರಬೆಟ್ಟಮಠಕ್ಕೆ ರೈಲ್ವೆ, ಜಲ ಶಕ್ತಿ ಖಾತೆ ಸಹಾಯಕ ಸಚಿವ ಭೇಟಿ

ಪ್ರಧಾನಿ ಮೋದಿ, ಜನರ ನಿರೀಕ್ಷೆ ತಕ್ಕಂತೆ ಕೆಲಸ ಮಾಡುವೆ: ಸೋಮಣ್ಣ

ತುಮಕೂರು: ಸಿದ್ದಗಂಗಾ ಮಠಕ್ಕೆ ಕೇಂದ್ರದ ಜಲಶಕ್ತಿ ಹಾಗೂ ರೈಲ್ವೆ ರಾಜ್ಯಖಾತೆ ಸಚಿವ ವಿ. ಸೋಮಣ್ಣ, ಭೇಟಿ ನೀಡಿ ಲಿಂ. ಡಾ.ಶ್ರೀ ಶಿವಕುಮಾರ ಸ್ವಾಮೀಜಿಯವರ ಗದ್ದುಗೆಗೆ ಪೂಜೆ ಸಲ್ಲಿಸಿ, ಮಠಾಧ್ಯಕ್ಷ ಶ್ರೀ ಸಿದ್ದಲಿಂಗ ಸ್ವಾಮೀಜಿಯ ಆಶೀರ್ವಾದ ಪಡೆದರು.

ನಂತರ ಸುದ್ದಿಗಾರರೊಂದಿಗೆ ಮಾತನಾಡಿ, ಪ್ರಧಾನಿ ನರೇಂದ್ರ ಮೋದಿಯವರು ನನ್ನನ್ನು ಕೇಂದ್ರ ಮಂತ್ರಿಯಾಗಿ ನೇಮಕ ಮಾಡುವ ಮೂಲಕ ಎರಡು ಹೊಣೆಗಾರಿಕೆ ನೀಡಿದ್ದಾರೆ. ದೇಶದ ಜನತೆ ಹಾಗೂ ಪ್ರಧಾನಿ ನಿರೀಕ್ಷೆಗೆ ತಕ್ಕಂತೆ ಶಕ್ತಿಮೀರಿ ಕೆಲಸ ಮಾಡುತ್ತೇನೆ ಎಂದರು. ಮಧುಗಿರಿಯ ಚಿನ್ನೇನಹಳ್ಳಿಯಲ್ಲಿ ಆಗಿರುವ ಕಹಿ ಘಟನೆ ಕುರಿತು ತುಮಕೂರು ಜಿಲ್ಲಾ ಉಸ್ತುವಾರಿ ಸಚಿವರೊಂದಿಗೆ ಮಾತನಾಡಿದ್ದೇನೆ. ಈ ಘಟನೆ ಯಾವ ರೀತಿ ಆಗಿದೆ ಎಂಬ ವಿಮರ್ಶೆ ಮಾಡುತ್ತಿದ್ದು, ಅಧಿಕಾರಿಗಳಿಂದ ವರದಿ ಕೇಳಿದ್ದೇವೆ ಎಂದರು.

ಕೊರಟಗೆರೆ ತಾಲೂಕಿನ ಸಿದ್ಧರಬೆಟ್ಟಮಠಕ್ಕೆ ಕೇಂದ್ರ ಜಲಶಕ್ತಿ, ರೈಲ್ವೆ ಸಚಿವ ವಿ. ಸೋಮಣ್ಣ ಭೇಟಿ ನೀಡಿ, ಶ್ರೀಗಳ ಆಶೀರ್ವಾದ ಪಡೆದರು. ಎಂಎಲ್‌ಸಿ ಚಿದಾನಂದಗೌಡ, ಮಾಜಿ ಸಂಸದ ಜಿ.ಎಸ್ ಬಸವರಾಜು,ಮಾಜಿ ಶಾಸಕರಾದ ಅಂದನಪ್ಪ, ವೀರಭದ್ರಯ್ಯ,ಬಿಜೆಪಿ ಮುಖಂಡ ಅನಿಲ್‌ಕುಮಾರ್ ಇದ್ದರು.

ತುಮಕೂರು ಸಿದ್ಧಗಂಗಾ ಮಠದ ಸಿದ್ಧಲಿಂಗ ಸ್ವಾಮೀಜಿಯನ್ನು ಶುಕ್ರವಾರ ಭೇಟಿಮಾಡಿದ ಕೇಂದ್ರ ಸಚಿವ ವಿ.ಸೋಮಣ್ಣ ಆಶೀರ್ವಾದ ಪಡೆದುಕೊಂಡರು. ಬಿಜೆಪಿ, ಜೆಡಿಎಸ್ ಮುಖಂಡರಾದ ಸೊಗಡು ಶಿವಣ್ಣ, ಎಂ.ವಿ.ವೀರಭದ್ರಯ್ಯ, ಆರ್.ಸಿ.ಆಂಜಿನಪ್ಪ, ಜಿ.ಎಸ್.ಬಸವರಾಜು, ಶಾಸಕರಾದ ಬಿ. ಸುರೇಶ್‌ಗೌಡ, ಜಿ.ಬಿ.ಜ್ಯೋತಿಗಣೇಶ್ ಇತರರು ಹಾಜರಿದ್ದರು.

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
Ref: 1) No: EE/ UTP/PB-3/2024-25/426 Dated: 13-06-2024

ಅಲ್ಪಾವಧಿ ಟೆಂಡರ್ ಪ್ರಕಟಣೆ ಕರೆ (KPPP ಪೋರ್ಟಲ್ ಮುಖಾಂತರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ, ಬೆಂಗಳೂರು ಇವರ ಪರವಾಗಿ ಕಾರ್ಯನಿರ್ವಾಹಕ ಇಂಜಿನೀಯರರು, ಕನೀನಿನಿ, ತುಂ.ಮೇ.ಯೋಜನಾ ವಿಭಾಗ, ರಾಣೇಬೆನ್ನೂರು ಇವರು KPPP–ಪೋರ್ಟಲ್ ಮುಖಾಂತರ ಅರ್ಹ ಗುತ್ತಿಗೆದಾರರಿಂದ ಉಲ್ಲೇಖಿತ ಪತ್ರ (1) ರನ್ವಯ ಒಟ್ಟು ರೂ 99.70ಲಕ್ಷ (ಜಿಎಸ್‌ಟಿ ಹೂರತುಪಡಿಸಿ) ಲಕ್ಷ ಮೊತ್ತದ 4701 ಲೆಕ್ಕ ಶೀರ್ಷಿಕೆಯ ಕಾಮಗಾರಿಯ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಅಕ್ಸೆಸ್ ಮಾಡುವ ದಿನಾಂಕ:14–06–2024 to 24–06–2024 ರ ಸಂಜೆ 4.30 ರ ವರೆಗೆ ಇರುವುದು. ಟೆಂಡರ್ ಬಗ್ಗೆ ವಿಚಾರಣೆಗೆ ಕೊನೆಯ ದಿನಾಂಕ 19–06–2024ಸಂಜೆ 5.00ರ ವರೆಗೆ ಇರುತ್ತದೆ. ದಿನಾಂಕ 25–06–2024ರಂದು ಸಂಜೆ 5.00 ಗಂಟೆಗೆ ತಾಂತ್ರಿಕ/ಆರ್ಥಿಕ ಬಿಡ್‌ನ್ನು ಕಾರ್ಯನಿರ್ವಾಹಕ ಇಂಜಿನೀಯರರು, ಕನೀನಿನಿ, ತುಂ.ಮೇ.ಯೋಜನಾ ವಿಭಾಗ, ರಾಣೆಬೆನ್ನೂರು ಇವರ ಕಚೇರಿಯಲ್ಲಿ ತೆರೆಯಲಾಗುವುದು. ಆರ್ಥಿಕ ಬಿಡ್‌ನ್ನು ತಾಂತ್ರಿಕ ಬಿಡ್ ಅನುಮೋದನೆ ನಂತರ ತೆರೆಯಲಾಗುವುದು. ಹೆಚ್ಚಿನ ವಿವರಗಳನ್ನು KPPP–ಪೋರ್ಟಲ್ ಮುಖಾಂತರ ನೋಡಿಕೊಳ್ಳತಕ್ಕದ್ದು.
ಸದರಿ ಟೆಂಡರ್‌ನಲ್ಲಿ ಏನಾದರೂ ತಿದ್ದುಪಡಿ ಮಾಡಿದಲ್ಲಿ ಇ–ಪ್ರೊಕ್ಯುರ್‌ಮೆಂಟ್ ಪೋರ್ಟಲ್‌ನಲ್ಲಿ/ ದಿನ ಪತ್ರಿಕೆಗಳಲ್ಲಿ ಪ್ರಚುರ ಪಡಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಈ ಕಚೇರಿ ದೂರವಾಣಿ ಸಂ. (08373) 297332 ಕ್ಕೆ ಸಂಪರ್ಕಿಸುವುದು. ಟೆಂಡರ್ ಅಂಗೀಕರಿಸುವ ಅಧಿಕಾರಿಯು ಟೆಂಡರ್‌ನ್ನು ಯಾವುದೇ ಕಾರಣ ನೀಡದೇ ರದ್ದು ಪಡಿಸುವ ಅಧಿಕಾರ ಹೊಂದಿರುತ್ತಾರೆ.

ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು,
ಕನೀನಿನಿ, ತುಂ.ಮೇ.ಯೋಜನಾ ವಿಭಾಗ, ರಾಣೇಬೆನ್ನೂರು.
99

ಮತ್ತಷ್ಟು ಸಾಕ್ಷ್ಯ; ದರ್ಶನ್ ಲಾಕ್

← ಮೊದಲಪುಟದಿಂದ

ದರ್ಶನ್ ಅಭಿಮಾನಿಗಳಾದ ಜಗದೀಶ್ ಮತ್ತು ಅನುಕುಮಾರ್ ರೇಣುಕಾಸ್ವಾಮಿಯನ್ನು ಬೆಂಗಳೂರಿಗೆ ಕರೆ ತಂದಿದ್ದರು. ಇವರಿಗೆ ತನ್ನ ಕಾರು ಒದಗಿಸಿದ್ದ ರವಿ ಚಾಲಕನಾಗಿ ಆಗಮಿಸಿದ್ದ. ರಾತ್ರಿ ಕೊಲೆ ವಿಷಯ ತಿಳಿದ ಬಳಿಕ, ಬಾಡಿಗೆ ಪಡೆದು ಚಿತ್ರದುರ್ಗಕ್ಕೆ ವಾಪಸ್ಸಾಗಿದ್ದ ರವಿ, ತಲೆ ಮರೆಸಿಕೊಂಡಿದ್ದ. ಚಿತ್ರದುರ್ಗದ ಕಾರು ಮಾಲೀಕರ ಸಂಘದ ಸಲಹೆ ಮೇರೆಗೆ ರವಿ ಗುರುವಾರ ಪೊಲೀಸರಿಗೆ ಶರಣಾಗಿದ್ದ. ಈ ಮೂವರನ್ನೂ ಇದೀಗ ಬೆಂಗಳೂರು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಈ ನಡುವೆ ರೇಣಕಾಸ್ವಾಮಿಯನ್ನು ಕಿಡ್ನಾಪ್ ಮಾಡಿರುವ ದೃಶ್ಯಾವಳಿಗಳು ಇದೀಗ ಸಿಕ್ಕಿದ್ದು, ಸಿಸಿಟಿವಿಯಲ್ಲಿ ಜೂನ್ 8ರ ಬೆಳಗ್ಗೆ 11:30ಕ್ಕೆ ಗುಯಿಲಾಳ್ ಟೋಲ್ ಬಳಿ ಕಾರಿನಲ್ಲಿ ಅಪಹರಣ ಮಾಡಿಕೊಂಡು ಹೋಗುತ್ತಿರುವ ದೃಶ್ಯ ಸೆರೆಯಾಗಿದೆ. ಕಾರಿನ ಮುಂಭಾಗ ಚಾಲಕ ರವಿ ಹಾಗೂ ರಾಘವೇಂದ್ರ ಕುಳಿತಿದ್ದರು. ಹಿರಿಯೂರು ಮಾರ್ಗವಾಗಿ ಬೆಂಗಳೂರು ಕಡೆ ಪ್ರಯಾಣ ಮಾಡಿರುವ ಈ ಗ್ಯಾಂಗ್ ವಿಐಪಿ ಕಾರ್ಡ್ ತೋರಿಸಿ ಹೋಗಿದ್ದಾರೆ. ಮಾತ್ರವಲ್ಲದೇ ದರ್ಶನ್ ಸಂಘದ ಅಧ್ಯಕ್ಷ ಎಂದು ಹೇಳಿ ಹೋಗಿರುವ ದೃಶ್ಯವೆಲ್ಲವೂ ಹಿರಿಯೂರು ಗುಯಿಲಾಳ್ ಟೋಲ್ ಸಮೀಪದ ಸಿಸಿಟಿವಿಯಲ್ಲಿ ಸೆರೆಯಾಗಿದೆ. ಇನ್ನುಳಿದ ನಾಲ್ಕು ಮಂದಿ ಜತೆ ರೇಣುಕಾಸ್ವಾಮಿಯನ್ನು ಬೆಂಗಳೂರಿಗೆ ಬಿಟ್ಟು ಜೂನ್ 9ರ ಬೆಳಗಿನ ಜಾವ 4:30ಕ್ಕೆ ಚಿತ್ರದುರ್ಗದತ್ತ ಚಾಲಕ ರವಿ ವಾಪಸ್ ಆಗಿದ್ದಾನೆ.

ಚಲನಚಿತ್ರ ಮಂಡಳಿಯಿಂದ ಡಿಕೆಶಿ ಭೇಟಿ: ಕೆಪಿಸಿಸಿ ಕಚೇರಿಯಲ್ಲಿ ಡಿಸಿಎಂ ಡಿ.ಕೆ. ಶಿವಕುಮಾರ್ ಅವರನ್ನು ಕರ್ನಾಟಕ ವಾಣಿಜ್ಯ ಚಿತ್ರ ಮಂಡಳಿ ಸದಸ್ಯರು ಭೇಟಿ ಮಾಡಿದರು. ಬಳಿಕ ಮಂಡಳಿ ಅಧ್ಯಕ್ಷ ಎಂ.ಎನ್.ಸುರೇಶ್ ಮಾತನಾಡಿ, ತನಿಖೆಯಾಗುವವರೆಗೆ ನಟ ದರ್ಶನ್ ವಿರುದ್ಧ ನಿಷೇಧ ಕ್ರಮವಿಲ್ಲ ಸಂಜಯ್ ದತ್, ಸಲ್ಮಾನ್ ಖಾನ್ ಬೇರೆ ಪ್ರಕರಣ. ಪೊಲೀಸರು ತನಿಖೆ ಮಾಡುತ್ತಿದ್ದಾರೆ. ಈಗಲೇ ಯಾವ ನಿರ್ಧಾರವನ್ನೂ ತೆಗೆದುಕೊಳ್ಳಲ್ಲ. ನಿರ್ಮಾಪಕರು ಚಿತ್ರಗಳಿಗೆ ಬಂಡವಾಳ ಹಾಕಿದ್ದಾರೆ. ಹಾಗಾಗಿ ತನಿಖೆಯಾಗುವವರೆಗೆ ಏನೂ ಕ್ರಮವಿಲ್ಲ ಎಂದು ತಿಳಿಸಿದರು.

30 ಲಕ್ಷ ರು. ಸುಪಾರಿ ಹಣ ವಶ

ಕೊಲೆ ಪ್ರಕರಣದಲ್ಲಿ ನಟ ದರ್ಶನ್ ಹೆಸರು ಹೇಳದಿರಲು ಡೀಲ್ ಮಾಡಲಾಗಿದ್ದ 30 ಲಕ್ಷ ರು. ಹಣವನ್ನು ಪೊಲೀಸರು ಜಪ್ತಿ ಮಾಡಿದ್ದಾರೆ. ದರ್ಶನ್ ಆಪ್ತನೊಬ್ಬನ ಮನೆ ಮೇಲೆ ದಾಳಿ ನಡೆಸಿದ ಪೊಲೀಸರು ಹಣವನ್ನು ವಶಕ್ಕೆ ಪಡೆದಿದ್ದಾರೆ. ವಿಚಾರಣೆ ವೇಳೆ ಆರೋಪಿಗಳು ಹಣದ ಬಗ್ಗೆ ಬಾಯಿಬಿಟ್ಟಿದ್ದಾರೆ. ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣವನ್ನು ಒಪ್ಪಿಕೊಳ್ಳಲು, ಮೃತದೇಹ ಸಾಗಿಸಲು ಮತ್ತು ನಟ ದರ್ಶನ್ ಹೆಸರನ್ನು ಬಾಯಿಬಿಡದಿರಲು ಬಂಧಿತರ ಪೈಕಿ ಐವರಿಗೆ 30 ಲಕ್ಷಕ್ಕೆ ಸುಪಾರಿ ನೀಡಲಾಗಿತ್ತು. ಮೃತದೇಹ ಯಾರಿಗೂ ಸಿಗದಂತೆ ಸಾಗಿಸಲು 3 ಆರೋಪಿಗಳಿಗೆ ಮುಂಗಡವಾಗಿ ಒಟ್ಟು 5 ಲಕ್ಷ ಸಂದಾಯ ಮಾಡಲಾಗಿತ್ತು.

ಚುನಾವಣೆ ಕಣಕ್ಕಿಳಿಯಲು ಸಜ್ಜಾಗಿದ್ದರೇ ನಟ ದರ್ಶನ್?

ಚನ್ನಪಟ್ಟಣ ಉಪಚುನಾವಣೆಯಲ್ಲಿ ಕಣಕ್ಕಿಳಿಸಲು ಡಿಕೆಶಿ ಸಹೋದರರು ಯೋಜನೆ ರೂಪಿಸಿದ್ದರು ಎಂದು ಮಾಜಿ ಸಚಿವ ಸಿ.ಪಿ ಯೋಗೇಶ್ವರ್ ಹೇಳಿದ್ದಾರೆ. ಕಾಂಗ್ರೆಸ್‌ನಿಂದ ಅಚ್ಚರಿ ಅಭ್ಯರ್ಥಿ ಹಾಕುತ್ತೇವೆ ಎಂದಿದ್ದ ಡಿ.ಕೆ ಸುರೇಶ್ ಹೇಳಿಕೆ ಕುರಿತು ಮಾತನಾಡಿದ ಅವರು, ಕಾಂಗ್ರೆಸ್‌ನವರ ಅಚ್ಚರಿ ಅಭ್ಯರ್ಥಿ ಇದೀಗ ಜೈಲುಪಾಲಾಗಿದ್ದಾರೆ. ಆ ವ್ಯಕ್ತಿ ಯಾರು ಅಂತ ನೀವೇ ಊಹೆ ಮಾಡಿಕೊಳ್ಳಿ ಎಂದು ಹೇಳುವ ಮೂಲಕ ಪರೋಕ್ಷವಾಗಿ ದರ್ಶನ್ ಸ್ಪರ್ಧೆಗೆ ಬಯಸಿದ್ದರು ಎನ್ನುವ ಸುಳಿವು ನೀಡಿದ್ದಾರೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು – 560 020.
ನಂ:ಬೆಂಅಪ್ರಾ/ನಯೋಸ/CLU–61/563/2024–25 ದಿನಾಂಕ:14.06.2024

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ಸಾರ್ವಜನಿಕ ಮತ್ತು ಅರೆ ಸಾರ್ವಜನಿಕ ಭೂಉಪಯೋಗ ವಲಯದಿಂದ ವಾಣಿಜ್ಯ ಉಪಯೋಗಕ್ಕೆ ಭೂಉಪಯೋಗ ನಿಗದಿಪಡಿಸಲು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ನಿಗದಿಪಡಿಸಲು ಕೋರಿರುವ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ನಿಗದಿಪಡಿಸಲು ಕೋರಿರುವ ಪ್ರಸ್ತಾವನೆ ಸಂಬಂಧ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ/ಗುಂ	ಪರಿಷ್ಕೃತ ಮಹಾ ಯೋಜನೆ 2015ರ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀಮತಿ ಜರಿನಾ ಕಾಂಜಿ W/o ಖಾದರ್ ನವಾಜ್ ಶರೀಫ್ # 46, ಫ್ಲಾಟ್ ನಂ. A-3 ಹೆಯಾನ್ಸ್ ರಸ್ತೆ, ಫ್ರೇಜರ್‌ಟೌನ್, ಬೆಂಗಳೂರು ಉತ್ತರ, ಬೆಂಗಳೂರು–560 005	ಯಲಹಂಕ	ಯಲಹಂಕ	ತಿರುಮೇನಹಳ್ಳಿ	21/1 21/2 & 24	ಒಟ್ಟು 8ಎ– 13 ಗುಂ	ಸಾರ್ವಜನಿಕ ಮತ್ತು ಅರೆ ಸಾರ್ವಜನಿಕ	ವಾಣಿಜ್ಯ

ಸಹಿ/– ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು

ಸಂಘಟನೆ ಮರೆತ ಸಂ.ಕಾರ್ಯದರ್ಶಿ!

← ಮೊದಲಪುಟದಿಂದ

ಸಂತೋಷ್ ಆಪ್ತರೇ ಹೆಚ್ಚಿದ್ದರು ಎನ್ನುವ ಆರೋಪ: ಬಿಜೆಪಿ ಮೂಲಗಳ ಪ್ರಕಾರ ಈ ಹಿಂದಿದ್ದ ವಿಭಾಗವಾರು ಸಂಘಟನಾ ಕಾರ್ಯದರ್ಶಿಗಳಲ್ಲಿ ಬಹುತೇಕರು ಬಿ.ಎಲ್.ಸಂತೋಷ್ ಅವರ ಆಪ್ತ ವಲಯದಲ್ಲಿ ಗುರುತಿಸಿಕೊಂಡ ವರೇ ಆಗಿದ್ದರು. ಈ ರೀತಿ ಗುರುತಿಸಿಕೊಂಡಿದ್ದ ಅನೇಕರು, ಪಕ್ಷದ ಸಂಘಟನೆಯ ಹೊರತಾಗಿ, ರಾಜಕೀಯ ಮಾಡಿಕೊಂಡು ಓಡಾಡುತ್ತಿದ್ದರು ಎನ್ನುವ ಆರೋಪವಿದೆ. ಕೆಲವು ಸಂಘಟನಾ ಕಾರ್ಯದರ್ಶಿಗಳ ಬಗ್ಗೆ ಗುಂಪುಗಾರಿಕೆ ಮತ್ತು ಹುನ್ನಾರ ನಡೆಸುತ್ತಾರೆ ಎಂಬ ಆರೋಪಗಳಿದ್ದವು. ಆದ್ದರಿಂದ ವಿಜಯೇಂದ್ರ ಅವರು ಬಿಜೆಪಿ ರಾಜ್ಯಾಧ್ಯಕ್ಷರಾಗುತ್ತಿದ್ದ, ಹಂತ ಹಂತವಾಗಿ ವಿಭಾಗವಾರು ಸಂಘಟನಾ ಕಾರ್ಯದರ್ಶಿ ಹುದ್ದೆಗೆ ಬ್ರೇಕ್ ಹಾಕುವ ಪ್ರಯತ್ನ ಮಾಡಿದ್ದರು. ಇದೀಗ ಅಧಿಕೃತವಾಗಿ ವಿಭಾಗವಾರು ಸಂಘಟನಾ ಕಾರ್ಯದರ್ಶಿ ಹುದ್ದೆಯಿಂದ ಅವರನ್ನು ಹಿಂಪಡೆಯಲಾಗಿದೆ. ಆದರೆ ಆಯಕಟ್ಟಿನ ಸ್ಥಾನವ ನ್ನು ಖಾಲಿ ಬಿಟ್ಟಿರುವುದು ಪಕ್ಷದಲ್ಲಿ ಹಲವು ಚರ್ಚೆಗೆ ಕಾರಣವಾಗಿದೆ.

ಸಂಘಟನಾ ಕಾರ್ಯದರ್ಶಿಗಳೆಂದರೇನು?

ಪಕ್ಷ ಹಾಗೂ ಆರ್‌ಎಸ್‌ಎಸ್ ನಡುವೆ ಕೊಂಡಿಯಾಗಿ, ಪಕ್ಷದ ಸಂಘಟನೆಯನ್ನು ಗಟ್ಟಿಗೊಳಿಸುವ ನಿಟ್ಟಿನಲ್ಲಿ ಕಾರ್ಯಕ್ರಮ, ಬೈಠಕ್‌ಗಳನ್ನು ಆಯೋಜಿಸುವುದು ಸಂಘಟನಾ ಕಾರ್ಯದರ್ಶಿಗಳ ಕೆಲಸ. ಇದನ್ನು ವಿಕೇಂದ್ರೀಕರಣಗೊಳಿಸಲು ಎರಡು ಮೂರು ಜಿಲ್ಲೆಗಳಿಗೆ ಒಬ್ಬ ವಿಭಾಗವಾರು ಸಂಘಟನಾ ಕಾರ್ಯದರ್ಶಿಯನ್ನು ನೇಮಿಸಲಾಗುತ್ತದೆ. ಈ ಹಿಂದೆ ಪೂರ್ಣಪ್ರಮಾಣದ ಪ್ರಚಾರಕರನ್ನೇ ಈ ಹುದ್ದೆಗೆ ನೇಮಿಸಲಾಗುತ್ತಿತ್ತು. ಆದರೆ ಕಳೆದ ಬಾರಿ ಇತರೆ ಉದ್ಯಮ, ಕೆಲಸ ಮಾಡಿಕೊಂಡಿರುವವರನ್ನು ನೇಮಿಸಲಾಗಿತ್ತು.

ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ
ನಂ. 333/1, 1ನೇ ಮಹಡಿ, ವಿ.ಜೆ. ಕಾಂಪ್ಲೆಕ್ಸ್, ಸೂಲಿಬೆಲೆ ರಸ್ತೆ, ದೇವನಹಳ್ಳಿ ಟೌನ್, ಬೆಂಗಳೂರು ಗ್ರಾಮಾಂತರ ಜಿಲ್ಲೆ–562 110.
ಸಂ: ಬಿಐಎಎಪಿಎ/ಟಿಪಿ/ಭೂಉಬ/10/2024–25/478 ದಿನಾಂಕ : 11.06.2024

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14 (ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ಭೂಉಪಯೋಗ ವಲಯದಿಂದ ವಸತಿ ಭೂಉಪಯೋಗ ವಲಯಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ ಪ್ರದೇಶ ಯೋಜನಾ ಪ್ರಾಧಿಕಾರ, ದೇವನಹಳ್ಳಿ ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗು	ಮಹಾ ಯೋಜನೆಯ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	ಶ್ರೀ ರಮೇಶ್ ವಿ.ಆರ್ ಬಿನ್ ರಂಗೇಗೌಡ & ಶ್ರೀ ನಾರಾಯಣಸ್ವಾಮಿ ಎಲ್.ಎನ್ ಬಿನ್ ಲೇ॥ ನಾರಾಯಣಪ್ಪ	ದೇವನಹಳ್ಳಿ	ಕಸಬಾ	ಗೋಕರೆ	203/1	3–20	ವ್ಯವಸಾಯ	ವಸತಿ

ಷರಾ :– ಪ್ರಸ್ತಾವನೆಯಲ್ಲಿನ ಅರ್ಜಿದಾರರುಗಳು ಪ್ರಶ್ನಿತ ಜಮೀನನ್ನು ವ್ಯವಸಾಯ ಉಪಯೋಗಕ್ಕೆ ಬಳಸಿಕೊಳ್ಳಲು ಸಾಧ್ಯವಾಗುತ್ತಿಲ್ಲವೆಂದೂ, ಹಾಗೂ ಪರಿಸರದಲ್ಲಿ ವಾಸದ ಬೆಳವಣಿಗೆಗೆ ಅತಿ ಹೆಚ್ಚು ಬೇಡಿಕೆ ಇದ್ದು, ಸದರಿ ಜಮೀನನ್ನು ವ್ಯವಸಾಯ ವಲಯದಿಂದ ವಸತಿ ವಲಯಕ್ಕೆ ಭೂಉಪಯೋಗ ಬದಲಾವಣೆಗೊಂಡ ನಂತರ ವಸತಿ ಉದ್ದೇಶಕ್ಕೆ ಭೂಪರಿವರ್ತಿಸಿ, ಪ್ರಾಧಿಕಾರದಿಂದ ಅನುಮೋದನೆ ಪಡೆದು, ಯೋಜನಾ ಬದ್ಧ ಅಭಿವೃದ್ಧಿ ಕಾರ್ಯಗಳಿಂದ ಸ್ಥಳೀಯರಿಗೆ ಉದ್ಯೋಗಾವಕಾಶ ಸೃಷ್ಟಿ ಹಾಗೂ ಮೂಲ ಸೌಕರ್ಯ ಅಭಿವೃದ್ಧಿಯಾಗುವುದರಿಂದ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು 'ವ್ಯವಸಾಯ ಭೂಉಪಯೋಗ ವಲಯ' ದಿಂದ 'ವಸತಿ ಭೂಉಪಯೋಗ ವಲಯ' ಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/–
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿಗಳು, ಬಿ.ಐ.ಎ.ಎ.ಪಿ.ಎ, ದೇವನಹಳ್ಳಿ.
ವಾ.ಸಾ.ಸಂ.ಇ/ವಾಪ್ರ/353/2024–25

ಬಿಎಸ್‌ವೈಗೆ ರಿಲೀಫ್

← ಮೊದಲಪುಟದಿಂದ

ಹೀಗಿದ್ದರೂ, ಕೋರ್ಟ್‌ಗೆ ಹೋಗಿ ಬಂಧನದ ವಾರಂಟ್ ತರುವ ಅವಶ್ಯಕತೆ ಏನಿತ್ತು? ಅವರು ಒಬ್ಬ ಮಾಜಿ ಮುಖ್ಯಮಂತ್ರಿ. ಅವರೇನೂ ದೇಶ ಬಿಟ್ಟು ಓಡಿ ಹೋಗುತ್ತಿದ್ದರೇ?, ನಾಲ್ಕೈದು ದಿನ ತಡವಾಗಿ ವಿಚಾರಣೆಗೆ ಹಾಜರಾದರೆ ಆಕಾಶವೇ ಕಳಚಿ ಬೀಳುತ್ತಿತ್ತೇ?, ಒಬ್ಬ ಮಾಜಿ ಮುಖ್ಯಮಂತ್ರಿಗೇ ಹೀಗಾದರೆ, ಸಾಮಾನ್ಯ ಜನರ ಗತಿ ಏನು ಎಂದು ಚಾಟಿ ಬೀಸಿತು. ಬಳಿಕ, ಯಡಿಯೂರಪ್ಪ ಅವರನ್ನು ಮುಂದಿನ ವಿಚಾರಣೆವರೆಗೆ ಬಂಧಿಸಬಾರದು ಎಂದು ನ್ಯಾ.ಕೃಷ್ಣ ದೀಕ್ಷಿತ್ ಅವರು ಆದೇಶ ಹೊರಡಿಸಿದರು. ಹಾಗೆಯೇ, ಜೂ. 17ರಂದು ತನಿಖಾಧಿಕಾರಿ ಎದುರು ಯಡಿಯೂರಪ್ಪ ಅವರು ವಿಚಾರಣೆಗೆ ಹಾಜರಾಗಬೇಕು ಎಂದು ಸೂಚಿಸಿ, ವಿಚಾರಣೆಯನ್ನು ಎರಡು ವಾರ ಮುಂದೂಡಿದರು.

ಏನಿದು ಪ್ರಕರಣ?: 2024ರ ಫೆಬ್ರವರಿ 2ರಂದು ಮಾಜಿ ಮುಖ್ಯಮಂತ್ರಿ, ಬಿ.ಎಸ್.ಯಡಿಯೂರಪ್ಪ ಅವರು 17 ವರ್ಷದ ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ ಎಂದು ಮಾ.14ರಂದು ಪೋಕ್ಸೊ ಕಾಯಿದೆಯಲ್ಲಿ ಸದಾಶಿವನಗರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಲಾಗಿತ್ತು. ಇದಾದ ಬಳಿಕ ಬಿ.ಎಸ್.ಯಡಿಯೂರಪ್ಪ ಅವರು ಸಿಐಡಿ ಅಧಿಕಾರಿಗಳ ವಿಚಾರಣೆಗೂ ಹಾಜರಾಗಿದ್ದರು. ಆದರೆ, ಎಫ್‌ಐಆರ್ ದಾಖಲಾದ ಮೂರು ತಿಂಗಳ ಬಳಿಕ ಪ್ರಕರಣವೀಗ ಮತ್ತೆ ಮುನ್ನೆಲೆಗೆ ಬಂದಿದೆ. ಜೂ. 12ರಂದೇ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಚಾರಣೆಗೆ ಹಾಜರಾಗಬೇಕು ಎಂಬುದಾಗಿ ಜೂ. 11ರಂದೇ ಸಿಐಡಿ ಅಧಿಕಾರಿಗಳು ನೋಟಿಸ್ ನೀಡಿದ್ದರು.

ಸಮಾಚಾರ ಸಣ್ಣದಲ್ಲ

ವಾಹನ ಡಿಕ್ಕಿ: ಜಿಂಕೆ ಸಾವು

ಕುಶಾಲನಗರ: ಇಲ್ಲಿಗೆ ಸಮೀಪದ ಆನೆಕಾಡು ಮೀಸಲು ಅರಣ್ಯ ವ್ಯಾಪ್ತಿಯಲ್ಲಿ ರಸ್ತೆ ದಾಟುತ್ತಿದ್ದ ಜಿಂಕೆಯೊಂದು ಶುಕ್ರವಾರ ಕಾರಿಗೆ ಸಿಲುಕಿ ಮೃತಪಟ್ಟಿದೆ. ಇಲ್ಲಿನ ಬಂಟ್ವಾಳ- ಮೈಸೂರು ರಾಷ್ಟ್ರೀಯ ಹೆದ್ದಾರಿಯಲ್ಲಿ 11 ವರ್ಷ ವಯಸ್ಸಿನ ಜಿಂಕೆ ರಸ್ತೆಯ ಈ ಬದಿಯಿಂದ ಆ ಬದಿಗೆ ಹೋಗುತ್ತಿದ್ದ ವೇಳೆ ಕಾರಿಗೆ ಸಿಲುಕಿದೆ. ಸ್ಥಳಕ್ಕೆ ಅರಣ್ಯಾಧಿಕಾರಿಗಳು ಭೇಟಿನೀಡಿ ಪರಿಶೀಲಿಸಿದ್ದಾರೆ.

ಬಿಎಸ್‌ವೈ ವಿರುದ್ಧ ಸಚಿವರ ಷಡ್ಯಂತ್ರ

ದಾವಣಗೆರೆ: ರಾಜಕೀಯ ಷಡ್ಯಂತ್ರದ ಭಾಗವಾಗಿ ಮಾಜಿ ಸಿಎಂ ಯಡಿಯೂರಪ್ಪ ವಿರುದ್ಧದ ಪೋಕ್ಸೊ ಪ್ರಕರಣಕ್ಕೆ ಮರುಜೀವ ಕೊಡಲಾಗಿದೆ ಎಂದು ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ದೂರಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹಲವಾರು ವರ್ಷಗಳಿಂದ ಕುಟುಂಬದಿಂದ ದೂರವಿದ್ದ ಸಂತ್ರಸ್ತೆಯ ಸಹೋದರನಿಗೆ ಆಮಿಷವೊಡ್ಡಿ ದೂರು ಕೊಡಿಸಲಾಗಿದೆ. ಯಡಿಯೂರಪ್ಪ ವಿರುದ್ಧದ ಪ್ರಕರಣಕ್ಕೆ ಮರುಜೀವ ನೀಡಲು ಸ್ವತಃ ಮುಖ್ಯಮಂತ್ರಿ ಸಿದ್ದರಾಮಯ್ಯನವರಿಗೆ ಇಷ್ಟವಿಲ್ಲದಿದ್ದರೂ ಅವರ ಮೇಲೂ ಒತ್ತಡ ತರಲಾಗಿದೆ. ರಾಜ್ಯದ ಪ್ರಭಾವಿ ಸಚಿವರೊಬ್ಬರು ಈ ಎಲ್ಲದರ ಹಿಂದೆ ಇದ್ದಾರೆ. ಅವರು ಯಾರೂ ಎಂಬುದನ್ನು ಮುಂದಿನ ದಿನಗಳಲ್ಲಿ ಸೂಕ್ತ ಸಮಯದಲ್ಲಿ ಬಹಿರಂಗಗೊಳಿಸುವುದಾಗಿ ತಿಳಿಸಿದರು. ಯಡಿಯೂರಪ್ಪರನ್ನು ಬಂಧಿಸಿದರೆ ರಾಜ್ಯಾದ್ಯಂತ ಹೋರಾಟ ನಡೆಸಲಾಗುವುದು ಎಂದು ರೇಣುಕಾಚಾರ್ಯ ಎಚ್ಚರಿಕೆ ಕೊಟ್ಟರು.

ಬಿಎಸ್‌ವೈ ಪರ ನಿಂತ ಶಾಮನೂರು

ದಾವಣಗೆರೆ: ಆರೋಪ ಸಾಬೀತಾದ ಮೇಲೆ ಬಂಧನ ಅಂದರೆ ಸರಿ. ಯಾರೋ ಹೆಣ್ಣು ಮಗಳು ದೂರು ಕೊಟ್ಟ ಮಾತ್ರಕ್ಕೆ ಬಂಧನ ಅಂದರೆ ಹೇಗೆ? ಅದಕ್ಕೆ ಅರ್ಥ ಇದೆಯೇ ಎಂದು ಶಾಸಕ ಶಾಮನೂರು ಶಿವಶಂಕರಪ್ಪ ಪ್ರಶ್ನಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿ, ಯಾರೋ ದಾರಿಯಲ್ಲಿ ಹೋಗೋರು ಕಂಪ್ಲೆಂಟ್ ಕೊಟ್ರೆ ಅರೆಸ್ಟ್ ಎಂದರೆ ಏನು ಅರ್ಥ. ಆಕೆ 55 ಜನರ ವಿರುದ್ಧವೂ ದೂರು ನೀಡಿದ್ದಾಳೆ. ಇಂತಹದಕ್ಕೆ ಬೆಲೆ ಇದೆಯೇ ಎಂದು ಪ್ರಶ್ನಿಸಿದರು. ನಟ ದರ್ಶನ್ ಮಾಡಿದ್ದು ತಪ್ಪು. ಯಾರೂ ಕಾನೂನನ್ನು ಕೈಗೆ ತೆಗೆದು ಕೊಳ್ಳಬಾರದು. ಬುದ್ಧಿ ಹೇಳಿ ಕಳಿಸಬೇಕಿತ್ತು. ಅದನ್ನು ಬಿಟ್ಟು ಸಾಯುವ ಹಾಗೆ ಹೊಡೆಯಬಾರದಿತ್ತು. ದರ್ಶನ್ ಮೇಲೆ ಕ್ರಮ ಕೈಗೊಳ್ಳುವಂತೆ ಅಖಿಲ ಭಾರತ ವೀರಶೈವ ಮಹಾಸಭಾದಿಂದ ಸರಕಾರಕ್ಕೆ ಪತ್ರ ಬರೆದಿದ್ದೇವೆ ಎಂದರು.

ಹೊರಗಿನವರು ಶಾಂತಿ ಕೆಡಿಸಬೇಡಿ

ಮಂಗಳೂರು: ಮಂಗಳೂರು ಕ್ಷೇತ್ರದಲ್ಲಿ ಸರ್ವಧರ್ಮದ ಜನರು ಸೌಹಾರ್ದದಿಂದ ವಾಸವಾಗಿದ್ದಾರೆ. ಕೆಲವು ಯುವಕರಿಂದಾಗಿ ಕ್ಷೇತ್ರಕ್ಕೆ ಕೆಟ್ಟ ಹೆಸರು ಬಂದಿದೆ. ಬೋಳಿಯಾರ್ ಘಟನೆಯ ಬಳಿಕ ಸ್ಥಳೀಯರೇ ಮುಂದೆ ನಿಂತು ಸೌಹಾರ್ದ ನೆಲೆಸುವಂತೆ ಮಾಡಿದ್ದಾರೆ. ಹೊರಗಿನವರು ಅಲ್ಲಿಗೆ ಹೋಗಿ ಶಾಂತಿ ಕೆಡಿಸುವ ಕೆಲಸ ಮಾಡುವುದು ಬೇಡ ಎಂದು ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಹೇಳಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿ, ರಾಜಕಾರಣ ಮಾಡದೆ ಎಲ್ಲರೂ ನೆಮ್ಮದಿಯಿಂದ ಇರಲು ಅವಕಾಶ ಮಾಡಿಕೊಡಬೇಕು. ಕ್ಷೇತ್ರದ ಶೇ.99ರಷ್ಟು ಒಳ್ಳೆಯವರನ್ನು ನೋಡುವ ಜವಾಬ್ದಾರಿ ನನ್ನದು. ಉಳಿದ ಶೇ.1ರಷ್ಟು ಸಮಸ್ಯೆ ಸೃಷ್ಟಿಸುವವರನ್ನು ಪೊಲೀಸರು ನೋಡಿಕೊಳ್ಳುತ್ತಾರೆ. ಆಸ್ಪತ್ರೆಯಲ್ಲಿದ್ದವರು ಒಳ್ಳೆಯವರಾಗಿದ್ದರೆ ಹೋಗಿ ನೋಡುತ್ತಿದ್ದೆ ಎಂದರು. ಕ್ಷೇತ್ರದ ಶಾಸಕರು ಕಾಣೆಯಾಗಿದ್ದಾರೆ ಎಂದು ಸಾಮಾಜಿಕ ಜಾಲತಾಣದಲ್ಲಿ ಯಾರೋ ಹರಿಯಬಿಟ್ಟಿದ್ದಾರೆ. ಯಾರು ಹಾಕಿದ್ದಾರೆ ಎಂದು ಹೇಳಿದರೆ ನಾನೇ ಅವರಿಗೆ ಐದು ಸಾವಿರ ರು. ಕೊಡುತ್ತೇನೆ. ನಾನು ಒಳ್ಳೆಯವರಿಗೆ ಕಾಣುತ್ತೇನೆ ಎಂದರು.

ಜು.15ರೊಳಗೆ ಕ್ರಿಯಾಯೋಜನೆ ಸಿದ್ಧಪಡಿಸುವಂತೆ ಸೂಚನೆ। ಒಟ್ಟು 14,228 ಕೋಟಿ ಅನುದಾನದಲ್ಲಿ 10,342.90 ಕೋಟಿ ವೆಚ್ಚ। ಶಿಕ್ಷಣ, ಆರೋಗ್ಯ ಮತ್ತು ಉದ್ಯೋಗ ಸೃಜನೆಗೆ ಹೆಚ್ಚು ಒತ್ತು

ಕಲ್ಯಾಣ ಕರ್ನಾಟಕ ಅಭಿವೃದ್ಧಿಗೆ ಐದು ಸಾವಿರ ಕೋಟಿ: ಸಿಎಂ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಕೈ ಬಲಪಡಿಸಿರುವ ಕಲ್ಯಾಣ ಕರ್ನಾಟಕದ ಸರ್ವತೋಮುಖ ಅಭಿವೃದ್ಧಿಗೆ ಮುಂದಾಗಿರುವ ರಾಜ್ಯ ಸರಕಾರ, ಜು.15ರೊಳಗೆ ಐದು ಸಾವಿರ ಕೋಟಿ ರು. ವೆಚ್ಚದ ಯೋಜನೆಗಳಿಗೆ ಕ್ರಿಯಾಯೋಜನೆ ಸಿದ್ಧಪಡಿಸಲು ಮುಂದಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ಗೃಹ ಕಚೇರಿ ಕೃಷ್ಣಾದಲ್ಲಿ ನಡೆದ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ ಪ್ರಗತಿ ಸಭೆಯಲ್ಲಿ, ಅಧಿಕಾರಿಗಳೊಂದಿಗೆ ಚರ್ಚಿಸಿದ ಮುಖ್ಯಮಂತ್ರಿಗಳು, ಇನ್ನೊಂದು ತಿಂಗಳಲ್ಲಿ ಐದು ಸಾವಿರ ಕೋಟಿ ರು. ವೆಚ್ಚದ ಕ್ರಿಯಾಯೋಜನೆ ಸಿದ್ಧಪಡಿಸುವಂತೆ ಸೂಚನೆ ನೀಡಿದ್ದಾರೆ.

ವಿಧಾನಸಭಾ ಚುನಾವಣಾ ಪ್ರಣಾಳಿಕೆ ಹಾಗೂ ಬಜೆಟ್‌ನಲ್ಲಿ ವರ್ಷಕ್ಕೆ ಐದು ಸಾವಿರ ಕೋಟಿ ರು. ಕಲ್ಯಾಣ ಕರ್ನಾಟಕ ಭಾಗಕ್ಕೆ ನೀಡುವ ಬಗ್ಗೆ ಭರವಸೆ ನೀಡಲಾಗಿದೆ. ಈ ಮೊತ್ತವನ್ನು ವೆಚ್ಚ ಮಾಡಲು ಅನುವಾಗುವಂತೆ ಜು. 15 ರೊಳಗೆ ಕ್ರಿಯಾ ಯೋಜನೆ ಸಿದ್ಧಪಡಿಸುವಂತೆ ಸೂಚಿಸಿದರು. ಈಗ ಅನುಮೋದನೆಯಾದ ಟೆಂಡರ್ ಕರೆಯದಿರುವ ಕಾಮಗಾರಿಗಳಿಗೆ ಕೂಡಲೇ ಟೆಂಡರ್ ಕರೆಯಬೇಕು, ಕಾಮಗಾರಿಗಳ ಮೌಲ್ಯಮಾಪನ ಮಾಡಬೇಕು ಎಂದು ಆದೇಶಿಸಿದರು.

ಶಿಕ್ಷಣ, ಆರೋಗ್ಯ, ಉದ್ಯೋಗಕ್ಕೆ ಒತ್ತು: ಸಭೆಯಲ್ಲಿ ಶಿಕ್ಷಣ, ಆರೋಗ್ಯ ಮತ್ತು ಉದ್‌ಯೋಗ ಸೃಜನೆಗೆ ಹೆಚ್ಚು ಒತ್ತು ನೀಡಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದರು. ಎರಡು ವರ್ಷಗಳನ್ನು ಶೈಕ್ಷಣಿಕ ವರ್ಷ ಎಂದು ಘೋಷಿಸಿ, ಶೇ.25ರಷ್ಟು ಅನುದಾನ ವೆಚ್ಚ ಮಾಡಬೇಕು. ಆರೋಗ್ಯ ಕ್ಷೇತ್ರದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಬೇಡಿಕೆಯಿದ್ದು, ಇದಕ್ಕೆ ಒತ್ತು ನೀಡಲು ಸಭೆಯಲ್ಲಿ ತೀರ್ಮಾನಿಸಲಾಯಿತು. ನಿಗದಿತ ಮಾನದಂಡಗಳಂತೆಯೇ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸ್ಥಾಪನೆಗೆ ಪ್ರಸ್ತಾವನೆ ಸಲ್ಲಿಸುವಂತೆ ಮುಖ್ಯಮಂತ್ರಿಗಳು ಸೂಚಿಸಿದರು .

ಈಗಾಗಲೇ ಉನ್ನತ ಶಿಕ್ಷಣ ಕ್ಷೇತ್ರದಲ್ಲಿ 41 ಮಹಿಳಾ ಪದವಿ ಕಾಲೇಜು ಪ್ರಾರಂಭಿಸುವುದಾಗಿ ಪ್ರಣಾಳಿಕೆಯಲ್ಲಿ ಘೋಷಿಸಲಾಗಿದೆ. ಇದನ್ನು ಪ್ರಾರಂಭಿಸಲು ಅಗತ್ಯ ಕ್ರಮ ಕೈಗೊಳ್ಳಲು ಸೂಚಿಸಿದರು. ಅರಣ್ಯೀಕರಣ ಮತ್ತು ಶುದ್ಧ ಕುಡಿಯುವ ನೀರು, ಚೆಕ್ ಜಲಾಶಯಗಳಿಗೆ ಆದ್ಯತೆ ನೀಡುವ ಮೂಲಕ ಅಂತರ್ಜಲ ಪ್ರಮಾಣ ಹೆಚ್ಚಿಸಲು ಅಗತ್ಯ ಕ್ರಮ ಕೈಗೊಂಡು, ಕಾರ್ಯಕ್ರಮಗಳನ್ನು ರೂಪಿಸುವಂತೆ ಸೂಚನೆ ನೀಡಿದರು.

ಸಭೆಯಲ್ಲಿ ಸಚಿವರಾದ ಡಾ. ಶರಣಪ್ರಕಾಶ್ ಪಾಟೀಲ, ರಹೀಂ ಖಾನ್, ಈಶ್ವರ್ ಖಂಡ್ರೆ, ಜಮೀರ್ ಅಹ್ಮದ್, ಶರಣಬಸಪ್ಪ ದರ್ಶನಾಪೂರ, ಎನ್.ಎಸ್. ಭೋಸರಾಜು, ಶಿವರಾಜ್ ತಂಗಡಗಿ, ಡಿ.ಸುಧಾಕರ್, ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ ಅಧ್ಯಕ್ಷ ಡಾ. ಅಜಯ್ ಸಿಂಗ್, ಮುಖ್ಯಮಂತ್ರಿಯವರ ಆರ್ಥಿಕ ಸಲಹೆಗಾರ ಬಸವರಾಜ ರಾಯರೆಡ್ಡಿ ಸೇರಿದಂತೆ ಮತ್ತಿತರರು ಭಾಗವಹಿಸಿದ್ದರು.

ಗೃಹ ಕಚೇರಿ ಕೃಷ್ಣಾದಲ್ಲಿ ನಡೆದ ಕಲ್ಯಾಣ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿಯ ಪ್ರಗತಿ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿದರು.

ಒಟ್ಟು 14,228 ಕೋಟಿ ರು. ಅನುದಾನದಲ್ಲಿ 10,342.90 ಕೋಟಿ ವೆಚ್ಚವಾಗಿದೆ. 2885.90 ಕೋಟಿ ಉಳಿದಿದೆ. ಬಾಕಿ ಉಳಿದ ಕಾಮಗಾರಿಗಳ ಕುರಿತು ನಿಯಮಿತವಾಗಿ ಪ್ರಗತಿ ಪರಿಶೀಲನೆ ನಡೆಸಿ, ಅನುಷ್ಠಾನಕ್ಕೆ ಇರುವ ತೊಡಕುಗಳನ್ನು ನಿವಾರಿಸಬೇಕು. ಬಾಕಿ ಉಳಿದಿರುವ 3528 ಕಾಮಗಾರಿಗಳನ್ನು ಜುಲೈ ಅಂತ್ಯದೊಳಗೆ ಪ್ರಾರಂಭಿಸಬೇಕು.

-ಸಿದ್ದರಾಮಯ್ಯ, ಮುಖ್ಯಮಂತ್ರಿ

ಸಭೆಯಲ್ಲಿನ ಪ್ರಮುಖಾಂಶ

- ಕಲ್ಯಾಣ ಕರ್ನಾಟಕ ಭಾಗದ ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ ಸುಧಾರಣೆ ತರುವ ನಿಟ್ಟಿನಲ್ಲಿ ಕ್ರಮವಹಿಸಿ
- ಯಾವ ಯಾವ ಕ್ಷೇತ್ರದಲ್ಲಿ ಹಿಂದುಳಿದಿದ್ದೇವೆಯೋ ಆ ಕ್ಷೇತ್ರಗಳಿಗೆ ಒತ್ತು ನೀಡಬೇಕು
- ಹಾಸ್ಟೆಲುಗಳು, ಅಂಗನವಾಡಿ ಹಾಗೂ ವಸತಿ ಶಾಲೆಗಳ ಮೂಲ ಸೌಕರ್ಯ ಅಭಿವೃದ್ಧಿಗೆ ಒತ್ತು ನೀಡಬೇಕು
- ರಸ್ತೆ, ಕುಡಿಯುವ ನೀರು, ನೀರಾವರಿ ಮತ್ತಿತರ ಮೂಲಸೌಕರ್ಯಗಳಿಗೆ ಒತ್ತು ನೀಡಬೇಕು
- ಪ್ರೌಢಶಾಲೆ, ಪದವಿಪೂರ್ವ ಹಾಗೂ ಪದವಿ ಕಾಲೇಜುಗಳ ಸ್ಥಾಪನೆಗೆ ಆಡಳಿತ ಇಲಾಖೆಯ ಮಂಜೂರಾತಿಗೆ ಸೂಚನೆ
- ಸಿಎಸ್.ಆರ್ ಅಡಿಯಲ್ಲಿ ಕಲ್ಯಾಣ ಕರ್ನಾಟಕ ಭಾಗದ ಶಾಲೆಗಳ ಅಭಿವೃದ್ಧಿಗೆ ಒತ್ತು ನೀಡಬೇಕು
- ಗುಲ್ಬರ್ಗಾ ವಿವಿಯಲ್ಲಿನ ಬೋಧಕ ಸಿಬ್ಬಂದಿ ಕೊರತೆಗೆ ಸಂಬಂಧಿಸಿದಂತೆ ಕ್ರಮವಹಿಸಿ

ಕಾಂಗ್ರೆಸ್ ಎಂದಿಗೂ ದ್ವೇಷದ ರಾಜಕಾರಣ ಮಾಡಲ್ಲ। ಬಿಎಸ್‌ವೈ ಪ್ರಕರಣದಲ್ಲಿ ಮೂಗು ತೂರಿಸುವ ಅಗತ್ಯವಿಲ್ಲ

ದ್ವೇಷದ ರಾಜಕಾರಣ ಮಾಡಿದ್ದು ಬಿಜೆಪಿಯವರು

ಬೆಂಗಳೂರು: ದ್ವೇಷದ ರಾಜಕಾರಣ ನಿಜವಾದ ಅರ್ಥದಲ್ಲಿ ಮಾಡುತ್ತಿರುವುದು ಬಿಜೆಪಿಗರು. ಯಡಿಯೂರಪ್ಪ ಅವರ ಪ್ರಕರಣವನ್ನು ದ್ವೇಷದ ರಾಜಕಾರಣ ಎನ್ನುತ್ತಿರುವ ಬಿಜೆಪಿಗರು, ನನ್ನನ್ನು ಜೈಲಿಗೆ ಕಳುಹಿಸಿದ್ದು, ರಾಹುಲ್ ಗಾಂಧಿ ಅವರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿದ್ದು ಯಾವ ರಾಜಕಾರಣ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಪ್ರಶ್ನಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಯಡಿಯೂರಪ್ಪ ವಿರುದ್ಧದ ಪ್ರಕರಣದ ಬಗ್ಗೆ ಹೆಚ್ಚು ಮಾಹಿತಿ ಪಡೆದಿಲ್ಲ. ಕಾಂಗ್ರೆಸ್ ಯಾರ ಮೇಲೂ ದ್ವೇಷ ಮಾಡುವುದಿಲ್ಲ. ದ್ವೇಷ ರಾಜಕಾರಣದ ಬಗ್ಗೆ ನಾನು ಮಾತನಾಡಿದರೆ ವಿಚಾರ ಎಲ್ಲೆಲ್ಲೋ ಹೋಗುತ್ತದೆ. ಈ ವಿಚಾರದಲ್ಲಿ ನನಗೂ ಅಯ್ಯೋ ಎನಿಸುತ್ತದೆ. ಇಂತಹ ಕಠಿಣ ಪರಿಸ್ಥಿತಿಯನ್ನು ನಾವು ಅನುಭವಿಸಿದ್ದೇವೆ. ರಾಹುಲ್ ಗಾಂಧಿ ಅವರು ಬೆಂಗಳೂರಿಗೆ ಬಂದು ನ್ಯಾಯಾಲಯದ ಮುಂದೆ ಹಾಜರಾದರು. ಅವರ ವಿರುದ್ಧ ಕೇಸು ಹಾಕಿರುವುದು ಯಾವ ರಾಜಕಾರಣ? ಬಿಜೆಪಿಯ ವಿರುದ್ಧದ ಜಾಹೀರಾತಿಗೂ ರಾಹುಲ್‌ಗಾಂಧಿ ಅವರಿಗೂ ಏನು ಸಂಬಂಧ? ದ್ವೇಷ ರಾಜಕಾರಣ ಮಾಡುತ್ತಿರುವವರು ಬಿಜೆಪಿಯವರು. ಆ ಜಾಹೀರಾತು ಕೊಟ್ಟಿದ್ದು ರಾಹುಲ್ ಗಾಂಧಿ ಅವರೇ? ರಾಹುಲ್ ಗಾಂಧಿ ಎಐಸಿಸಿ ಅಧ್ಯಕ್ಷರಾ ಅಥವಾ ಕೆಪಿಸಿಸಿ ಅಧ್ಯಕ್ಷರಾ? ಎಂದು ಪ್ರಶ್ನಿಸಿದರು.

2028ಕ್ಕೆ ಅಧಿಕಾರಕ್ಕೆ ಬರುವುದು ನನ್ನ ಜವಾಬ್ದಾರಿ: ಒಕ್ಕಲಿಗ ನಾಯಕರ ಸಭೆಗೆ ಸಂಬಂಧಿಸಿದಂತೆ ಪ್ರತಿಕ್ರಿಯಿಸಿ, ನಾವು ನಮ್ಮ ಸಮಾಜದ ಬಗ್ಗೆ, ಲೋಕಸಭೆ ಚುನಾವಣೆ ಮತದಾನದ ಬಗ್ಗೆ ಚರ್ಚೆ ಮಾಡಿದ್ದೇವೆ. ನಾವು ಸೋತಿದ್ದು, ಸೋಲನ್ನು ಒಪ್ಪಿದ್ದೇವೆ. ರಾಜಕಾರಣದಲ್ಲಿ ಇದು ಸಹಜ. ಚೆಲುವರಾಯಸ್ವಾಮಿ, ಬಾಲಕೃಷ್ಣ ಅವರು 50 ಸಾವಿರ ಮತಗಳ ಅಂತರದಲ್ಲಿ ಸೋತಿದ್ದರು. ಈಗ ಅವರು ಮತ್ತೆ ಗೆದ್ದಿದ್ದಾರೆ. ಈ ಸೋಲು ಶಾಶ್ವತವಲ್ಲ. ಜನರ ಭಾವನೆ, ಆಲೋಚನೆ ಆರು ತಿಂಗಳಿಗೆ ಬದಲಾಗುತ್ತದೆ. ಕಳೆದ ಚುನಾವಣೆಯಲ್ಲಿ ನಮ್ಮ ಪಕ್ಷ ಕೇವಲ ಒಂದು ಸ್ಥಾನ ಗೆದ್ದಿತ್ತು. ಈಗ 9 ಸ್ಥಾನ ಗೆದ್ದಿದೆ. ಇನ್ನು ನಾಲ್ಕೈದು ಕ್ಷೇತ್ರ ನಾವು ನಿರೀಕ್ಷೆ ಮಾಡಿದ್ದೆವು. 2028ಕ್ಕೆ ಮತ್ತೆ ಕಾಂಗ್ರೆಸ್ ಸರಕಾರವನ್ನು ಅಧಿಕಾರಕ್ಕೆ ತರುವುದು ನನ್ನ ಜವಾಬ್ದಾರಿ. ನಾನು ಸಿದ್ದರಾಮಯ್ಯ, ಎಲ್ಲಾ ಸಚಿವ ಸಂಪುಟ ಸದಸ್ಯರು ಒಟ್ಟಾಗಿ ದುಡಿದು ಈ ಸರಕಾರ ಮತ್ತೆ ತರುತ್ತೇವೆ ಎಂದರು.

ಬಿಜೆಪಿ ಶಾಸಕ ಯತ್ನಾಳ್ ಹೇಳಿಕೆ ಹಾಗೂ ಮಾಧ್ಯಮಗಳ ವರದಿ ಆಧರಿಸಿ ಆ ಜಾಹೀರಾತನ್ನು ಕೆಪಿಸಿಸಿ ವತಿಯಿಂದ ನಾನು ಕೊಟ್ಟಿದ್ದೆ. ನಮ್ಮ ಮೇಲೆ ಕೇಸ್ ಹಾಕಿದ್ದಾರೆ. ಈ ಕೇಸ್ ಹಾಕಿಸುವಾಗ ವಿಜಯೇಂದ್ರಗೆ ಸಾಮಾನ್ಯ ಪ್ರಜ್ಞೆ ಇರಲಿಲ್ಲವೇ? ನಾವು ಅವರಂತೆ ನೀಚ ರಾಜಕಾರಣ ಮಾಡುವುದಿಲ್ಲ. ಬಿಜೆಪಿಯವರು ಸದಾ ದ್ವೇಷ ಮಾಡುತ್ತಾರೆ ಹೊರತು ಕಾಂಗ್ರೆಸ್ ಪಕ್ಷವಲ್ಲ.

-ಡಿ.ಕೆ.ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ

ದರ್ಶನ್ ಪ್ರಕರಣದಲ್ಲಿ ಯಾವುದೇ ಒತ್ತಡವಿಲ್ಲ

ದರ್ಶನ್ ಪ್ರಕರಣದಲ್ಲಿ ಯಾವುದೇ ಒತ್ತಡವಿಲ್ಲ. ಈ ಬಗ್ಗೆ ನಾನು ವಿಚಾರಿಸಿದ್ದೇನೆ. ಪ್ರಕರಣದಲ್ಲಿ 13 ಆರೋಪಿಗಳಿದ್ದು, ಮಾಧ್ಯಮಗಳು ಬೆಳಗ್ಗೆಯಿಂದ ಸಂಜೆವರೆಗೂ ಕ್ಯಾಮೆರಾ ಹಿಡಿದಿರುತ್ತೀರಿ. ಪೊಲೀಸರಿಗೆ ಸ್ವತಂತ್ರವಾಗಿ ವಿಚಾರಣೆ ನಡೆಸಲು ಆಗುತ್ತಿಲ್ಲ ಎಂದು ಅವರು ಶಾಮಿಯಾನ ಹಾಕಿಕೊಂಡಿದ್ದಾರೆ. ಈ ಪ್ರಕರಣದ ಪೊಲೀಸ್ ತನಿಖೆಯಲ್ಲಿ ಗೃಹ ಸಚಿವರಿಂದ ಹಿಡಿದು ಯಾರೊಬ್ಬರೂ ಹಸ್ತಕ್ಷೇಪ ಮಾಡಿಲ್ಲ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದರು.

ಪೋಕ್ಸೊ ಪ್ರಕರಣದಲ್ಲಿ ರಾಜಕೀಯವಿಲ್ಲ

ಹುಬ್ಬಳ್ಳಿ: ಮಾಜಿ ಸಿಎಂ ಬಿ.ಎಸ್. ಯಡಿಯೂರಪ್ಪ ವಿರುದ್ಧ ರಾಜಕೀಯ ದ್ವೇಷದ ಪ್ರಶ್ನೆಯೇ ಇಲ್ಲ. ಅವರ ವಿರುದ್ಧ ಪೋಕ್ಸೊ ಕಾಯ್ದೆ ಅಡಿ ಪ್ರಕರಣ ದಾಖಲಾಗಿದೆ ಎಂದು ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಅಪ್ರಾಪ್ತ ವಯಸ್ಸಿನ ಮಕ್ಕಳ ಮೇಲೆ ದೌರ್ಜನ್ಯವಾದರೆ ಅದಕ್ಕೆ ಪೋಕ್ಸೊ ಕಾಯಿದೆ ಅನ್ವಯ ಮಾಡಲಾಗುತ್ತದೆ. ಈ ಕಾಯಿದೆ ಅತ್ಯಂತ ಗಂಭೀರವಾದದ್ದು. ಹೀಗಾಗಿ ಯಾವುದೇ ಸರಕಾರ ಹಸ್ತಕ್ಷೇಪ ಮಾಡಲು ಬರಲ್ಲ ಎಂದರು.

ಹೈಕೋರ್ಟ್ ವಾರಂಟ್ ಜಾರಿ ಮಾಡಿದೆ. ಅದರ ನಿರ್ದೇಶನ ಇರಬೇಕಾದರೆ ಕಾಂಗ್ರೆಸ್, ಬಿಜೆಪಿಯ ಪ್ರಶ್ನೆ ಬರಲ್ಲ. ಇದರಲ್ಲಿ ಯಡಿಯೂರಪ್ಪ ತಪ್ಪಿತಸ್ಥರು ಹೌದೋ ಅಲ್ಲವೋ ಅನ್ನುವುದನ್ನು ನ್ಯಾಯಾಲಯ ನಿರ್ಧರಿಸುತ್ತದೆ. ಸಂತ್ರಸ್ತೆಯೇ ನ್ಯಾಯಾಧೀಶರ ಎದುರು ಹೇಳಿಕೆ ಕೊಟ್ಟಿದ್ದಾರೆ. ಕಾನೂನು ಪ್ರಕಾರ ಕ್ರಮ ಕೈಗೊಳ್ಳಬೇಕಾಗುತ್ತದೆ ಎಂದರು.

ಸಿಎಂ ಖುರ್ಚಿ ಖಾಲಿ ಇಲ್ಲ: ಗ್ಯಾರಂಟಿಗಳ ಕುರಿತು ಚರ್ಚಿಸುತ್ತೇವೆ. ಅವುಗಳನ್ನು ರದ್ದುಮಾಡುವ ಪ್ರಸ್ತಾವನೆ ನಮ್ಮ ಬಳಿ ಸದ್ಯಕ್ಕಿಲ್ಲ. ಸಿಎಂ ಯಾರು ಆಗಬೇಕು ಅನ್ನುವುದನ್ನು ಪಕ್ಷ ತೀರ್ಮಾನಿಸುತ್ತದೆ. ಸಿಎಂ ಆಗಲು ಶಾಸಕರ ಬೆಂಬಲ ಬೇಕು. ಕಾಂಗ್ರೆಸ್ ಹೈಕಮಾಂಡ್ ನಿರ್ಧಾರ ಕೈಗೊಳ್ಳುತ್ತದೆ ಎಂದು ಹೇಳಿದರು.

ಕೊಲೆ ಪ್ರಕರಣದಲ್ಲಿ ಬಂಧಿತ ನಟ ದರ್ಶನ್‌ಗೆ ರಾಜಮರ್ಯಾದೆಯ ಪ್ರಶ್ನೆಯೇ ಇಲ್ಲ. ಆರೋಪಿ ಆರೋಪಿಯೇ. ಆರೋಪ ಸಾಬೀತಾದರೆ ಅವರಿಗೆ ಶಿಕ್ಷೆ ಆಗುತ್ತದೆ. ದರ್ಶನ್ ಕೃಷಿ ಇಲಾಖೆ ರಾಯಭಾರಿಯಾಗಿ ಮುಂದುವರೆಯುವ ಪ್ರಶ್ನೆಯೇ ಇಲ್ಲ. ಇಂತಹ ಘಟನೆಯಾದ ನಂತರ ರಾಯಭಾರಿಯಾಗಿ ಮುಂದುವರಿಸಲು ಆಗಲ್ಲ .

-ಎಂ.ಬಿ. ಪಾಟೀಲ, ಕೈಗಾರಿಕಾ ಸಚಿವ

ಶಾಮಿಯಾನದ ರಕ್ಷಣೆ ನಾಚಿಕೆಗೇಡು: ಸಿ.ಟಿ. ರವಿ

ಬೆಂಗಳೂರು: ಚಿತ್ರದುರ್ಗ ನಿವಾಸಿ ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಅನ್ನಪೂರ್ಣೇಶ್ವರಿ ನಗರ ಠಾಣೆ ಪೊಲೀಸರು ನಡೆದುಕೊಳ್ಳುತ್ತಿರುವ ರೀತಿ ಸಾಕಷ್ಟು ಅನುಮಾನಗಳಿಗೆ ಎಡೆ ಮಾಡಿಕೊಟ್ಟಿದೆ ಎಂದು ವಿಧಾನಪರಿಷತ್ ಸದಸ್ಯ ಸಿ.ಟಿ.ರವಿ ಅಸಮಾಧಾನ ಹೊರಹಾಕಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೊಲೆ ಆರೋಪ ಹೊತ್ತ ಚಿತ್ರನಟ ದರ್ಶನ್ ಅವರನ್ನು ರಕ್ಷಣೆ ಮಾಡಲು ಅನ್ನಪೂರ್ಣೇಶ್ವರಿ ನಗರ ಠಾಣೆ ಪೊಲೀಸರು ಪ್ರಯತ್ನಿಸಿದಂತೆ ಕಾಣಿಸುತ್ತಿದೆ. ಇತಿಹಾಸದಲ್ಲಿಯೇ ಮೊದಲ ಬಾರಿಗೆ ಠಾಣೆಗೆ ಶಾಮಿಯಾನ ಹಾಕಿರುವುದು ನಾಚಿಕೆಗೇಡಿನ ಸಂಗತಿ ಎಂದು ವಾಗ್ದಾಳಿ ನಡೆಸಿದರು.

ರೇಣುಕಾಸ್ವಾಮಿ ಹತ್ಯೆ ಮನುಕುಲ ಕ್ಷಮಿಸುವಂತದ್ದಲ್ಲ. ಯಾವುದೇ ನಾಗರಿಕ ಸಮಾಜವು ಒಪ್ಪುವುದಿಲ್ಲ. ಆದರೆ ಪೊಲೀಸರ ವರ್ತನೆ ನೋಡಿದರೆ ಪ್ರಕರಣವನ್ನು ಮುಚ್ಚಿ ಹಾಕಲು ವ್ಯವಸ್ಥಿತ ಸಂಚು ರೂಪಿಸಿದಂತೆ ಕಾಣುತ್ತಿದೆ. ಸಾರ್ವಜನಿಕ ಹಿತದೃಷ್ಟಿಯಿಂದಲಾದರೂ ಪೊಲೀಸರು ಸರಿಯಾಗಿ ನಡೆದುಕೊಳ್ಳಿ, ಜನರ ನಂಬಿಕೆ ಉಳಿಸಿಕೊಳ್ಳುವ ಕೆಲಸ ನೀವು ಮಾಡದಿದ್ದರೆ ಮನುಕುಲ ಕ್ಷಮಿಸುವುದಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

ವೃತ್ತಿಪರರು ಈ ರೀತಿ ಮಾಡಿರಲ್ಲ: ವೃತ್ತಿಪರ ರೌಡಿಗಳು ಕೂಡ ಈ ರೀತಿ ಹತ್ಯೆ ಮಾಡುವುದಿಲ್ಲ. ಸಾವಿನ ಹಿಂದೆ ಯಾರೇ ಇದ್ದರೂ ನಿರ್ದಾಕ್ಷಿಣ್ಯವಾಗಿ ಕ್ರಮ ಜರುಗಿಸಲಿ. ರೇಣುಕಾಸ್ವಾಮಿ ಪತ್ನಿ ಈಗ ಐದು ತಿಂಗಳ ಗರ್ಭಿಣಿ. ಬೇಕರಿ ವ್ಯಾಪಾರ ಮಾಡಿಕೊಂಡು ಜೀವನ ನಡೆಸುತ್ತಿದ್ದಾರೆ. ಈಗ ಅವರಿಗೆ ಯಾರು ಆಸರೆ, ಸರಕಾರ ಅವರಿಗೆ ಆರ್ಥಿಕ ನೆರವು ನೀಡಲಿ. ಪಿಯುಸಿ ಓದಿರುವ ಸಹನಾ ಅವರಿಗೆ ಮಾನವೀಯತೆ ದೃಷ್ಟಿಯಿಂದ ಸರಕಾರಿ ಹುದ್ದೆ ನೀಡಬೇಕೆಂದು ಆಗ್ರಹಿಸಿದರು.

ರೇಣುಕಾಸ್ವಾಮಿ ಮನೆಗೆ ಭೇಟಿ ನೀಡಿದ್ದೆ. ಅತ್ಯಂತ ಬಡ ಕುಟುಂಬ ಅನಾಥವಾಗಿದೆ. 15 ಕಡೆ ರೇಣುಕಾಸ್ವಾಮಿ ಮೈಮೇಲೆ ಗಾಯಗಳಾಗಿವೆ ಭೀಕರವಾಗಿ ಹಿಂಸೆ ನೀಡಿ ಕೊಂದಿದ್ದಾರೆ. ಮರ್ಮಾಂಗದಲ್ಲಿ ರಕ್ತ ಬಂದಿದೆ. ರೌಡಿಗಳೂ ಕೊಲೆ ಮಾಡುವ ರೀತಿ ಮಾಡಿದ್ದಾರೆ. ತಪ್ಪಿತಸ್ಥರ ಜನ್ಮ ಜಾಲಾಡಬೇಕು.

-ರವಿಕುಮಾರ್, ವಿಧಾನಪರಿಷತ್ ಸದಸ್ಯ

ನೀತಿ ಸಂಹಿತೆ ಹಿನ್ನಲೆ ಸ್ಥಗಿತಗೊಂಡಿದ್ದ ನಮಸ್ತೆ ಚಿಕ್ಕಬಳ್ಳಾಪುರ। ನಗರದ ಸುಬ್ಬರಾಯ ಪೇಟೆಯಲ್ಲಿ ಜನರ ಸಮಸ್ಯೆ ಆಲಿಸಿದ ಶಾಸಕ

ಮನೆ ಮನೆಗೆ ಮತ್ತೆ ಶಾಸಕ ಪ್ರದೀಪ್ ಈಶ್ವರ್

ಚಿಕ್ಕಬಳ್ಳಾಪುರ: ಲೋಕಸಭೆ ಚುನಾವಣೆಯಲ್ಲಿ ಡಾ.ಕೆ. ಸುಧಾಕರ್ ಗೆದ್ದಿರುವ ಹಿನ್ನೆಲೆ ನಾನು ರಾಜೀನಾಮೆ ಕೊಡುವ ಪ್ರಶ್ನೆಯೇ ಇಲ್ಲ ಅದು ಅಪ್ರಸ್ತುತ. ನಾಯಕರಿಗಾಗಿ ಕಾರ್ಯಕರ್ತರನ್ನು ಎಂದೂ ಬಲಿಕೊಡುವುದಿಲ್ಲ. ನನ್ನ ರಾಜೀನಾಮೆ ವಿಷಯದಲ್ಲಿ ಬಿಜೆಪಿ ಕನಸು ಕಾಣುವುದು ಬೇಡ. ಸುಖಾಸುಮ್ಮನೆ ಯಾರ ಮೇಲೂ ಎಫ್‌ಐಆರ್ ಹಾಕಿಸುವುದಿಲ್ಲ ಎಂದು ಶಾಸಕ ಪ್ರದೀಪ್ ಈಶ್ವರ್ ಹೇಳಿದರು.

ಚಿಕ್ಕಬಳ್ಳಾಪುರ ನಗರದ 16ನೇ ವಾರ್ಡಿನ ಸುಬ್ಬರಾಯನಪೇಟೆಯಲ್ಲಿ ಶುಕ್ರವಾರ ನಡೆಸಿದ ನಮಸ್ತೆ ಚಿಕ್ಕಬಳ್ಳಾಪುರ ಕಾರ್ಯಕ್ರಮದ ಪುನರಾರಂಭದ ನಡುವೆ ಸುದ್ದಿಗಾರರೊಂದಿಗೆ ಮಾತನಾಡಿ, ನಾನು ರಾಜೀನಾಮೆ ಸವಾಲಿಗೆ ಇಂದಿಗೂ ಸಿದ್ಧವಾಗಿದ್ದೇನೆ. ಆದರೆ ನನ್ನ ಈ ಸವಾಲನ್ನು ಬಿಜೆಪಿಯವರು ಒಪ್ಪಿದ್ದರಾ? ಅವರು ಸವಾಲು ಸ್ವೀಕರಿಸಿಯೇ ಇರಲಿಲ್ಲ. ನಾನ್ಯಾಕೆ ರಾಜೀನಾಮೆ ಕೊಡಬೇಕು. ನೀವು ಪ್ರಶ್ನೆಪತ್ರಿಕೆಯೇ ನೀಡದಿರುವಾಗ ನಾನು ಬರೆದಿರುವ ಉತ್ತರ ಸರಿಯಿಲ್ಲ ಎಂದರೆ ನಾವು ಕೇಳ್ತೀವಾ? ಬಿಜೆಪಿ ಟೀಮ್ ಸುಧಾಕರ್ ಗೆದ್ದ ತಕ್ಷಣ ರಾಜೀನಾಮೆ ಕೊಡಬೇಕು ಎಂದು ಕೇಳುತ್ತಿರುವ ಈ ಬಿಜೆಪಿಯವರಿಗೆ ಮಾನ ಮಾರ್ಯಾದೆ ಇಲ್ಲ. ರಾಜೀನಾಮೆ ಕೇಳುವ ಮುನ್ನ ನನ್ನ ಹೇಳಿಕೆಯನ್ನು ಪೂರ್ತಿ ಕೇಳಬೇಕು. ಕೇಳುವ ವ್ಯವಧಾನವೂ ಈ ಬಿಜೆಪಿ ಅವರಿಗೆ ಇಲ್ಲ. ಪ್ರದೀಪ್ ಈಶ್ವರ್ ರಾಜೀನಾಮೆ ಕೊಟ್ಟರೆ ನಮ್ಮನ್ನು ಬೈಯ್ಯುವವರು ಯಾರೂ ಇರಲ್ಲ ಎಂದು ಬಿಜೆಪಿ ಜನ ಭಾವಿಸಿದ್ದಾರೆ. ನಾನು ಅದಕ್ಕೆ ಆಸ್ಪದ ಕೊಡುವುದಿಲ್ಲ. 4 ವರ್ಷಗಳ ಕಾಲ ನಾನೇ ಎಂಎಲ್‌ಎ ಆಗಿ ಇರುವುದರಿಂದ ಬಿಜೆಪಿಯನ್ನು ಬೈಯುತ್ತಲೇ ಇರುತ್ತೇನೆ ಎಂದು ಹೇಳುವ ಮೂಲಕ ರಾಜೀನಾಮೆ ಪ್ರಶ್ನೆಗೆ ಪೂರ್ಣವಿರಾಮ ಇಟ್ಟರು.

ಕೆ.ಪಿ.ಬಚ್ಚೇಗೌಡರಿಂದ ಲಾಭ: ಕೆ.ಪಿ.ಬಚ್ಚೇಗೌಡರು ಜೆಡಿಎಸ್ ತೊರೆದು ಕಾಂಗ್ರೆಸ್‌ಗೆ ಬಂದ ಕಾರಣ ಪಕ್ಷಕ್ಕೆ ನಷ್ಟಕ್ಕಿಂತ ಲಾಭವೇ ಆಗಿದೆ.ಈ ಭಾಗದ ಒಕ್ಕಲಿಗ ಸಮುದಾಯದ ಪ್ರಭಾವಿ ನಾಯಕರಿವರು.ಇವರ ಮೂಲಕವೂ ಲೋಕಸಭೆಯಲ್ಲಿ ಹೆಚ್ಚಿನ ಮತಗಳು ನಮಗೆ ಬಂದಿವೆ.ಅವರ ಆಗಮನದಿಂದ ಏನೂ ಆಗಿಲ್ಲ ಎಂಬುದೆಲ್ಲಾ ಸುಳ್ಳು ಎಂದು ಹೇಳಿದರು.

ಅಸ್ತಿತ್ವದ ಪ್ರಶ್ನೆ: ಸುಧಾಕರ್ ಸಂಸದರಾದ ಬಳಿಕ ಕ್ಷೇತ್ರದಲ್ಲಿ ಕಾಂಗ್ರೆಸ್ ಕಾರ್ಯಕರ್ತರ ಮೇಲೆ ದಬ್ಬಾಳಿಕೆ ಜಾಸ್ತಿ ಆಗಿದೆ ಎನ್ನುವ ಪ್ರಶ್ನೆಗೆ ಉತ್ತರಿಸಿದ ಶಾಸಕರು ಹೌದು ನನ್ನ ಮನೆ ಮೇಲೆ ಕಲ್ಲು ತೂರಾಟ ನಡೆಸಿದರು, ನಕಲಿ ರಾಜೀನಾಮೆ ಪತ್ರ ಸೃಷ್ಟಿ, ಕಾರ್ಯಕರ್ತರ ಮೇಲೆ ದೌರ್ಜನ್ಯ ಸೇರಿದಂತೆ ಇದುವರೆಗೆ ನಾಲ್ಕೈದು ದಾಳಿ ನಡೆದಿದೆ. ನಾನು ಇದಕ್ಕೆ ಕೂಡಲೇ ಪ್ರತಿಕ್ರಿಯಿಸುವುದಿಲ್ಲ. ರಾಜಕೀಯ ನಾಯಕರಿಗಾಗಿ ನಮ್ಮ ಕಾರ್ಯಕರ್ತರು ಜಗಳ ಆಡುವುದು ಬೇಡ. ಇದು ನನ್ನ ಅಸ್ತಿತ್ವದ ಪ್ರಶ್ನೆ. ಹಾಗಾಗಿ ನಾನೇ ಅಖಾಡಕ್ಕೆ ಇಳಿಯುತ್ತೇನೆ ಎನ್ನುವ ಮೂಲಕ ಕಾರ್ಯಕರ್ತರಿಗೆ ಬುದ್ಧಿ ಹೇಳಿದರು.

ನಮಸ್ತೆ ಚಿಕ್ಕಬಳ್ಳಾಪುರ: ಲೋಕಸಭೆ ಚುನಾವಣೆ ಹಿನ್ನೆಲೆ ಕ್ಷೇತ್ರದ ಸಂಪರ್ಕಕ್ಕೆ ಬರುವುದಾಗಲಿ ನಗರಕ್ಕೆ ಭೇಟಿಯಾಗಲಿ ಸಾಧ್ಯವಾಗಿರಲಿಲ್ಲ. ಇನ್ಮುಂದೆ ನಮಸ್ತೆ ಚಿಕ್ಕಬಳ್ಳಾಪುರ ಯಥಾಸ್ಥಿತಿ ಮುಂದುವರಿಯಲಿದೆ. ಪಿಂಚಣಿ, ಗೃಹ ಲಕ್ಷ್ಮಿ, ಜಮೀನು ಸಮಸ್ಯೆ, ರಸ್ತೆ ಸರಿಪಡಿಸುವುದು ಇತ್ಯಾದಿ ಸಮಸ್ಯೆಗಳ ಕುರಿತು ಸಾರ್ವಜನಿಕರು ನನ್ನ ಜಾಲತಾಣದಲ್ಲೂ ಮನವಿ ಸಲ್ಲಿಸಿದ್ದಾರೆ. ಈ ಭೇಟಿಯ ವೇಳೆ ದೈಹಿಕವಾಗಿಯೂ ಹೇಳಿಕೊಂಡಿದ್ದಾರೆ. ಇವೆಲ್ಲಾ ಅರ್ಜಿಗಳನ್ನು ಪರಿಶೀಲಿಸಿ ಶೀಘ್ರ ಸಮಸ್ಯೆ ಇತ್ಯರ್ಥಗೊಳಿಸಲಾಗುವುದು ಎಂದರು.

ಗ್ಯಾರಂಟಿ ಯೋಜನೆಗಳು ನಿಲ್ಲುವುದಿಲ್ಲ: ನಗರದ 16ನೆ ವಾರ್ಡ್‌ನ ಸುಬ್ಬರಾಯನಪೇಟೆಯಲ್ಲಿ ನಮಸ್ತೆ ಚಿಕ್ಕಬಳ್ಳಾಪುರ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದ್ದು ಶಾಸಕ ಪ್ರದೀಪ್ ಈಶ್ವರ್ ನಾಗರೀಕರ ಅಹವಾಲುಗಳನ್ನು ಆಲಿಸಿ ಸ್ಥಳದಲ್ಲಿಯೇ ಪರಿಹಾರೋಪಾಯಗನ್ನು ಕಲ್ಪಿಸಿದ್ದು ನಾಗರೀಕರ ಸಂತೋಷಕ್ಕೆ ಕಾರಣವಾಗಿತ್ತು.ಈ ಭೇಟಿಯ ವೇಳೆಯಲ್ಲಿ ಕೆಲವು ಹಿರಿಯರು ಗ್ಯಾರಂಟಿ ಯೋಜನೆ ನಿಲ್ಲಿಸಲಾಗುವುದಂತೆ ಹೌದೇ ಎಂದು ಪ್ರಶ್ನಿಸಿದ ಅಪರೂಪದ ಪ್ರಸಂಗಗಳೂ ನಡೆದವು. ಇದಕ್ಕೆ ಉತ್ತರಿಸಿದ ಶಾಸಕ ಪ್ರದೀಪ್ ಈಶ್ವರ್ ಯಾವ ಕಾರಣಕ್ಕೂ ಈ ಯೋಜನೆಗಳು ನಿಲ್ಲುವುದಿಲ್ಲ ಎಂದು ಭರವಸೆ ನೀಡಿದ್ದು ಕಂಡು ಬಂತು.

ತಪ್ಪಿತಸ್ಥರಿಗೆ ಶಿಕ್ಷೆಯಾಗಲಿ: ರೇಣುಕಸ್ವಾಮಿ ಕೊಲೆ ಖಂಡನೀಯ. ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಆಗಬೇಕು. ರಾಜ್ಯ ಪೊಲೀಸ್ ವ್ಯವಸ್ಥೆ ಸಮರ್ಥವಾಗಿದೆ. ಕಾನೂನು ಎಲ್ಲರಿಗೂ ಒಂದೇ. ಅದರಂತೆ ಶಿಕ್ಷೆ ಆಗಲಿ ಎಂದರು.

ಚಿಕ್ಕವರು ದೊಡ್ಡವರಾಗಬೇಕು: ಕ್ಷೇತ್ರದಲ್ಲಿ ಒಂದು ವರ್ಷದಿಂದ ನೆಮ್ಮದಿಯಿದೆ. ವಿನಾಕಾರಣ ಕೇಸುಗಳನ್ನು ಹಾಕಿ ಅವರ ನೆಮ್ಮದಿ ಹಾಳು ಮಾಡುವ ಪೈಕಿ ನಾನಲ್ಲ. ಎಂಎಲ್‌ಎ ಆಗಿರುವ ನನಗೆ 150 ಬೆದರಿಕೆ ಕರೆಗಳು ಬಂದಿವೆ.ಇವುಗಳನ್ನು ಪೊಲೀಸ್ ಇಲಾಖೆಯ ದಾಖಲೆಗಳೇ ಹೇಳುತ್ತಿವೆ. ಇದರಲ್ಲಿ ವಿದ್ಯಾರ್ಥಿಗಳು ಸಾಕಷ್ಟಿದ್ದಾರೆ. ಇವರ ಮೇಲೆ ಎಫ್‌ಐಆರ್ ಹಾಕಿಸಿ, ಯಾವುದಾರೂ ಸೆಕ್ಷನ್ ಅಡಿಫಿಟ್ ಮಾಡಿಸುವುದು ಕಷ್ಟವೇನಲ್ಲ.ಇವರು ಯಾರ ಮಾತೋ ಕೇಳಿ ಹೀಗೆ ಮಾಡಿರುತ್ತಾರೆ. ಇಷ್ಟಾದರೂ ನಾನು ಯಾರ ಮೇಲೂ ಪ್ರಕರಣ ದಾಖಲಿಸದಂತೆ ಪೊಲೀಸರಿಗೆ ಹೇಳಿದ್ದೇನೆ. ದೊಡ್ಡವರು ಸಣ್ಣವರಾದಾಗ ಸಣ್ಣವರು ದೊಡ್ಡವರಾಗಬೇಕಾಗುತ್ತದೆ ಎಂದರು.

ನೂತನ ಸಂಸದರಾಗಿ ಆಯ್ಕೆ ಆಗಿರುವ ಡಾ.ಕೆ. ಸುಧಾಕರ್ ಅವರಿಗೆ ಧನ್ಯವಾದ ಅರ್ಪಿಸಿದ ಶಾಸಕ ಪ್ರದೀಪ್ ಈಶ್ವರ್ ದ್ವೇಷದ ರಾಜಕಾರಣ ಬಿಟ್ಟು ಈಗಲಾದರೂ ಕ್ಷೇತ್ರದಲ್ಲಿ ಶಾಂತಿ ಸಹಬಾಳ್ವೆಯಿಂದ ಜನತೆ ಬಾಳುವಂತೆ ಉತ್ತಮ ರೀತಿಯಲ್ಲಿ ಆಡಳಿತ ನಡೆಸಲಿ ಎಂದರು.

16ನೇ ವಾರ್ಡಿನ ಸುಬ್ಬರಾಯನಪೇಟೆಯಲ್ಲಿ ಮನೆ ಮನೆಗೆ ಭೇಟಿ ನೀಡಿದ ಶಾಸಕ ಪ್ರದೀಪ್ ಈಶ್ವರ್ .

ನಾವು ವಿಧಾನಸಭೆ ಚುನಾವಣೆ ಸಂದರ್ಭದಲ್ಲಿ ಕೊಟ್ಟ ಮಾತಿನಂತೆ ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸಿ ಮಾತು ಉಳಿಸಿಕೊಂಡಿದ್ದೇವೆ.ಆದರೆ ಲೋಕಸಭೆ ಚುನಾವಣೆಯಲ್ಲಿ ಮತ ಹಾಕುವ ಸಲುವಾಗಿ ನಾವು ಗ್ಯಾರಂಟಿ ಕೊಟ್ಟಿಲ್ಲ.ಗ್ಯಾರಂಟಿ ಯೋಜನೆ ಇದ್ದರೂ ಸೋಲಾಯಿತು ಎಂಬುದೆಲ್ಲಾ ಸುಳ್ಳು, ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳು ಸೋತಿರಬಹುದು.ಇದೇ ಕಾರಣ ಮುಂದಿಟ್ಟುಕೊಂಡು ನಮ್ಮ ಸರಕಾರ ಯಾವುದೇ ಕಾರಣಕ್ಕೂ ಗ್ಯಾರಂಟಿಗಳನ್ನು ನಿಲ್ಲಿಸುವುದಿಲ್ಲ.

-ಪ್ರದೀಪ್ ಈಶ್ವರ್, ಶಾಸಕ

ಪಕ್ಷ ವಿರೋಧಿಗಳಿಗೆ ಅವಕಾಶವಿಲ್ಲ

ನಾನು ಕಾಂಗ್ರೆಸ್‌ನ ಸಿದ್ಧಾಂತಗಳನ್ನು ನಂಬಿ ಬಂದವನು. ಕಾಂಗ್ರೆಸ್ ಪಕ್ಷ ನನಗೆ ತಾಯಿಯಿದ್ದಂತೆ. ಇದೊಂದು ಜಾತ್ಯಾತೀತ ಪಕ್ಷ. ನನ್ನಂತ ಅಹಿಂದ ಸಮುದಾಯದವರ ಬೆಳೆವಣಿಗೆ ಕೇವಲ ಕಾಂಗ್ರೆಸ್ ಪಕ್ಷದಲ್ಲಿ ಮಾತ್ರ ಸಾಧ್ಯ.ಇಂತಹ ಪಕ್ಷಕ್ಕಾಗಿ ಸದಾ ಪ್ರಾಮಾಣಿಕತೆಯಿಂದ ದುಡಿಯುತ್ತೇನೆ. ಶತಮಾನಕ್ಕೂ ಮೀರಿದ ಇತಿಹಾಸ ಇರುವ ಪಕ್ಷವನ್ನು ಅನೇಕರು ಕಟ್ಟಿ ಬೆಳೆಸಿದ್ದಾರೆ.ಅಂತಹ ಪಕ್ಷದಲ್ಲಿ ಇದ್ದುಕೊಂಡು ಪಕ್ಷವಿರೋಧಿ ಚಟವಟಿಕೆ ಮಾಡಿದರೆ ಹೇಗೆ?ಯಾರು ಪಕ್ಷಕ್ಕೆ ದ್ರೋಹ ಮಾಡುತ್ತಾರೋ ಅಂತಹವರನ್ನು ಮುಲಾಜಿಲ್ಲದೆ ಉಚ್ಚಾಟಿಸಲಾಗುವುದು ಎಂದು ಹೇಳುವ ಮೂಲಕ ಪಕ್ಷದ್ರೋಹಿಗಳಿಗೆ ಎಚ್ಚರಿಕೆ ನೀಡಿದರು.

ಗೆಲುವು 5 ವರ್ಷ ಮುಂದೆ ಹೋಗಿದೆ

ಚಿಕ್ಕಬಳ್ಳಾಪುರ ಲೋಕಸಭಾ ಚುನಾವಣೆಯ ಸೋಲು ನನ್ನ ಪ್ರಕಾರ ಸೋಲಲ್ಲ. ಚುನಾವಣೆಯಲ್ಲಿ ಸೋಲು ಗೆಲುವು ಸಹಜ. ನನ್ನ ಪ್ರಕಾರ ನಮ್ಮ ಗೆಲುವು 5 ವರ್ಷ ಮುಂದೆ ಹೋಗಿದೆ ಅಷ್ಟೇ. ಅಖಾಡದಲ್ಲಿ ನಾನು ಇದ್ದಿದ್ದರೆ ಫಲಿತಾಂಶ ಬೇರೆಯೇ ಆಗುತ್ತಿತ್ತು.ಎಲ್ಲರೂ ಪ್ರದೀಪ್ ಈಶ್ವರ್ ಆಗಲು ಸಾಧ್ಯವಿಲ್ಲ ಎಂದು ಅಚ್ಚರಿಯ ಹೇಳಿಕೆ ನೀಡಿದರು.

ನಕಲಿ ರಾಜೀನಾಮೆ ಪತ್ರ: ಮೂವರ ಪತ್ತೆ

ನಕಲಿ ರಾಜೀನಾಮೆ ಪತ್ರದ ಕುರಿತಾಗಿ ಪ್ರತಿಕ್ರಿಯಿಸಿದ ಶಾಸಕರು, ನಕಲಿ ರಾಜೀನಾಮೆ ಪತ್ರ ಹರಿಬಿಟ್ಟವರ ಕುರಿತು ತನಿಖೆ ಆರಂಭವಾಗಿದೆ. ಮೈಸೂರಿನ ಮೂವರನ್ನು ಪತ್ತೆಹಚ್ಚಲಾಗಿದೆ. ಅವರ ವಿರುದ್ಧ ಕಾನೂನು ರೀತಿ ಕ್ರಮ ಜರುಗಲಿದೆ ಎಂದರು.

ಜನಸ್ಪಂದನ ಕಾರ್ಯಕ್ರಮದಲ್ಲಿ ಜನರ ಕಷ್ಟ ಕೇಳುತ್ತಿರುವ ಶಾಸಕ ಪ್ರದೀಪ್ ಈಶ್ವರ್.

ಸಂಪಾದಕೀಯ

ಎತ್ತಿನಹೊಳೆ: ಮುಗಿಯದ ಕಾಮಗಾರಿ

ಎತ್ತಿನಹೊಳೆ ಯೋಜನೆ ಕಾಮಗಾರಿ ಪೂರ್ಣಗೊಳಿಸಲು ಅಗತ್ಯವಿರುವ 500 ಎಕರೆ ಅರಣ್ಯ ಭೂಮಿಯನ್ನು ಒದಗಿಸಲು ಅರಣ್ಯ ಇಲಾಖೆ ಒಪ್ಪಿಗೆ ಸೂಚಿಸಿದೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದ್ದಾರೆ. ಕುಡಿಯುವ ನೀರು ಒದಗಿಸುವ ಹೆಸರಿನಲ್ಲಿ ಜಾರಿಗೆ ಬಂದ ಯೋಜನೆ ಆರಂಭವಾಗಿ 10 ವರ್ಷಗಳೇ ಕಳೆದಿವೆ. ಆದರೆ ಈ ತನಕ ಒಂದು ಹನಿ ನೀರನ್ನೂ ಹರಿಸಲು ಸಾಧ್ಯವಾಗಿಲ್ಲ. 2014ರಲ್ಲಿ ಯೋಜನೆ ಆರಂಭದಲ್ಲಿ ನಿಗದಿಪಡಿಸಿದ 12,912 ಕೋಟಿ ರೂ. ಯೋಜನಾ ವೆಚ್ಚ ಈಗ 30 ಸಾವಿರ ಕೋಟಿ ರೂ. ಮೀರಿ ಬೆಳೆದಿದೆ. ಈ ಕಾರಣಕ್ಕಾಗಿಯೇ ಸರಕಾರದ ವಲಯಗಳಲ್ಲಿ 'ಎತ್ತಿನ ಹೊಳೆಯಲ್ಲಿ ಮಿಂದುಂಡವನೇ ಜಾಣ' ಎಂಬ ಗಾದೆ ಹುಟ್ಟಿಕೊಂಡಿದೆ. ಈ ಯೋಜನೆಗಾಗಿ 13.90 ಹೆಕ್ಟೇರ್ ಅರಣ್ಯ ಭೂಮಿ ಬಳಸಿಕೊಳ್ಳುತ್ತಿದ್ದು 4,995 ಮರಗಳನ್ನು ಕಡಿಯಲಾಗುತ್ತದೆ ಎಂದು ಈ ಹಿಂದೆ ರಾಜ್ಯ ಸರಕಾರ ಸುಪ್ರೀಕೋರ್ಟ್‌ಗೆ ಮಾಹಿತಿ ನೀಡಿತ್ತು. ಪಶ್ಚಿಮ ಘಟ್ಟದ ದಟ್ಟ ಕಾಡಿನಲ್ಲಿ ಅನುಷ್ಠಾನಕ್ಕೆ ಬರುತ್ತಿರುವ ಯೋಜನೆಗೆ ಎಷ್ಟು ಮರಗಳನ್ನು ಕಡಿದುರುಳಿಸಿರಬಹುದೆಂದು ಅಲ್ಲಿಗೆ ಭೇಟಿ ನೀಡಿದವರಿಗೆ ಕಣ್ಣೋಟಕ್ಕೇ ಅಂದಾಜಿಸುವುದು ಕಷ್ಟವೇನಲ್ಲ. ಇದೀಗ 500 ಎಕರೆ ಅರಣ್ಯ ಭೂಮಿ ಎಂದ ಮೇಲೆ ಅಲ್ಲೂ ಸಾವಿರಾರು ಮರಗಳು ಉರುಳುವುದು ಖಚಿತ. ಅರಣ್ಯ ಸಚಿವ ಈಶ್ವರ ಖಂಡ್ರೆ, ಕಂದಾಯ ಸಚಿವ ಕೃಷ್ಣಬೈರೇಗೌಡ ಮತ್ತು ಹಿರಿಯ ಅಧಿಕಾರಿಗಳ ಸಭೆಯಲ್ಲಿ ಯೋಜನೆಗೆ ಬಳಸಿಕೊಳ್ಳುವ ಅರಣ್ಯ ಭೂಮಿಗೆ ಬದಲಾಗಿ ಕಂದಾಯ ಇಲಾಖೆಯ 500 ಎಕರೆ ಭೂಮಿ ನೀಡಲು ಒಪ್ಪಿಗೆ ಸೂಚಿಸಲಾಗಿದೆ ಎಂದು ಹೇಳಲಾಗಿದೆ. ಈ ಹಿಂದೆಯೂ, ಎತ್ತಿನ ಹೊಳೆಯಲ್ಲಿ ಉರುಳಿದ ಮರಗಳಿಗೆ ಪರ್ಯಾಯವಾಗಿ ಅರಣ್ಯ ಬೆಳೆಸಲಾಗುವುದೆಂದು ಹೇಳಲಾಗಿತ್ತು. ಆದರೆ ಇದುವರೆಗೆ ಅದು ಕಾರ್ಯರೂಪಕ್ಕೆ ಬಂದಿಲ್ಲ. ಹಾಸನ, ಕೋಲಾರ,ಚಿಕ್ಕಬಳ್ಳಾಪುರ, ಬೆಂಗಳೂರು ಗ್ರಾಮಾಂತರ, ರಾಮನಗರ ಮತ್ತು ತುಮಕೂರು ಜಿಲ್ಲೆಗಳಿಗೆ ಕುಡಿಯುವ ನೀರು ಪೂರೈಸುವ ಮಹತ್ವಾಕಾಂಕ್ಷೆಯ ಈ ಯೋಜನೆ ಆರಂಭದಿಂದಲೂ ಗೊತ್ತು ಗುರಿ ಇಲ್ಲದೆ ಸಾಗುತ್ತಿದೆ. ಎತ್ತಿನ ಹೊಳೆಯಲ್ಲಿ 24 ಟಿಎಂಸಿ ನೀರು ಲಭ್ಯ ಎಂಬ ಕರ್ನಾಟಕ ನೀರಾವರಿ ನಿಗಮ ನಿಯಮಿತದ ಅಧಿಕಾರಿಗಳ ಮಾತಿಗೆ ಇನ್ನೂ ಪುರಾವೆ ಸಿಕ್ಕಿಲ್ಲ. ಈ ನಡುವೆಯೇ ದಕ್ಷಿಣ ಕನ್ನಡದ ನೇತ್ರಾವತಿ ನದಿ ಸೇರುತ್ತಿದ್ದ ಹೊಂಗಡಹಳ್ಳ, ಎತ್ತಿನ ಹೊಳೆ, ಕಾಡುಮನೆ ಹೊಳೆ, ಕೇರಿ ಹೊಳೆಗಳ ನೀರನ್ನು ಪೂರ್ವಾಭಿಮುಖವಾಗಿ ಸಾಗಿಸುವ ಪ್ರಯತ್ನಕ್ಕೆ ಚಾಲನೆ ನೀಡಲಾಗಿದೆ. ಜಲ ಸಂಗ್ರಹಾಗಾರಗಳ ಕಾಮಗಾರಿಯೂ ಮುಗಿದಿದೆ. ಆದರೆ ಮುಂದಿನ ತಿಂಗಳು 48 ಕಿ.ಮೀ.ವರೆಗೆ ನೀರು ಹರಿಸುವ ಡಿಸಿಎಂ ಶಿವಕುಮಾರ್ ಅವರ ಭರವಸೆ ಈಡೇರುವುದು ಇನ್ನೂ ಸಂಶಯವಾಗಿ ಕಾಣುತ್ತಿದೆ.

ಸೊಂಪಾದಕೀಯ

ಗುಡಿ ಕೈಗಾರಿಕೆ

ನಮ್ಮ ದೇಶದಲ್ಲಿ ಜನ ಅತಿ ಹೆಚ್ಚು ಪ್ರೀತಿಸೋದು, ದೇವರ ಮಟ್ಟಕ್ಕೆ ಕೊಂಡೊಯ್ಯೋದು ಸಿನಿಮಾ ತಾರೆಗಳನ್ನ ಮತ್ತು ಕ್ರಿಕೆಟ್ ಆಟಗಾರರನ್ನ. ಅದರಲ್ಲೂ ದಕ್ಷಿಣ ಭಾರತದಲ್ಲಿ ಸಿನಿಮಾ ನಟ ನಟಿಯರ ಮೇಲಿನ ಕ್ರೇಜ್ ತುಂಬಾ ದೊಡ್ಡದು. ಕರ್ನಾಟಕದಲ್ಲಿ ಡಾ. ರಾಜ್ ಕುಮಾರ್ ಅವರ ಮೇಲೆ ಜನ ಇಟ್ಟಿರೋ ಪ್ರೀತಿ ಎಲ್ಲರಿಗೂ ಗೊತ್ತು. ಅದರಂತೆ ರಜಿನಿಕಾಂತ್, ಎನ್ ಟಿ ಆರ್, ಎಂಜಿಆರ್‌ಗಳೂ ಜನರ ಪ್ರೀತಿಯ ಸಾಗರದಲ್ಲಿ ಮಿಂದೆದ್ದವರೇ. ಇಂಥ ಫೇಮಸ್ ಸ್ಟಾರ್‌ಗಳ ಹೆಸರಿನಲ್ಲಿ ಅನೇಕ ಒಳ್ಳೆಯ ಕೆಲಸಗಳೂ ಆಗುತ್ತವೆ. ಜೊತೆಗೆ ಇವರ ಹೆಸರುಗಳು ಮತ್ತು ಪ್ರತಿಮೆಗಳು ಆಯಾ ರಾಜ್ಯದ ಎಲ್ಲಾ ಕಡೆ ರಾರಾಜಿಸುತ್ತವೆ. ಕರ್ನಾಟಕದಲ್ಲಿ ಅದೆಷ್ಟು ರಸ್ತೆಗಳಿಗೆ ರಾಜ್ ಕುಮಾರ್ ಅವರ ಹೆಸರಿದೆ, ಅದೆಷ್ಟು ರಸ್ತೆ, ಸರ್ಕಲ್‌ಗಳಲ್ಲಿ ರಾಜ್ ಅವರ ಪ್ರತಿಮೆ ಇದೆ ಅಂತ ಕಂಡು ಹಿಡಿಯೋಕೆ ಸೆನ್ಸಸ್ ಮಾಡಬೇಕಾಗಿ ಬರುತ್ತದೆ. ಆದರೆ ಅದ್ಯಾಕೆ ಹೀಗೆ ರಸ್ತೆಗಳಿಗೆ ಹೆಸರಿಡೋದು, ಪ್ರತಿಮೆ ಇಡೋದು ಇವೆಲ್ಲ ಪುರುಷ ನಟರಿಗೆ ಮಾತ್ರ ಆಗುತ್ತದೆ ಅನ್ನೋದು ಆಸಕ್ತಿಕರ. ಹೀರೋಯಿನ್‌ಗಳ ಹೆಸರು ರಸ್ತೆಗೆ ಇಟ್ಟಿದ್ದು, ಹೀರೋಯಿನ್‌ಗಳ ಪ್ರತಿಮೆ ನಿರ್ಮಿಸಿರೋದು ತೀರಾ ಕಮ್ಮಿ. ಹಾಗಂತ ಸಿನಿಮಾಗಳಂತೆ ನಮ್ಮ ಸಮಾಜ ಕೂಡಾ ಪುರುಷ ಪ್ರಧಾನ ಅಂತ ತೀರ್ಮಾನ ಮಾಡೋ ಹಾಗಿಲ್ಲ. ಯಾಕಂದ್ರೆ, ಹೀರೋಯಿನ್‌ಗಳನ್ನು ನಮ್ಮ ಪ್ರೇಕ್ಷಕ ಪ್ರಭು ಆರಾಧಿಸಿದ ಎಷ್ಟೋ ಉದಾಹರಣೆಗಳಿವೆ. ಶ್ರೀದೇವಿ, ಮಾಧುರಿ ದೀಕ್ಷಿತ್ ನಮ್ಮ ಕನ್ನಡದ ಮಾಲಾಶ್ರೀ ಅವರು ಅನೇಕ ಪ್ರೇಕ್ಷಕರ ಕನಸಿನ ರಾಣಿಯರು. ಮಾಲಾಶ್ರೀ ಅವರಿಗೆ, ನಟಿ ಸೌಂದರ್ಯ ಅವರಿಗೆ ದೇವಸ್ಥಾನ ಕಟ್ಟಿಸುತ್ತೇವೆ ಅನ್ನೋ ಮಟ್ಟಕ್ಕೆ ಅವರ ಕ್ರೇಜ್ ಇತ್ತು. ಅದು ಈ ಕಾಲದ ಸನ್ನಿ ಲಿಯೋನಿವರೆಗೂ ಇದೆ. ಈಗ ಸದ್ಯಕ್ಕೆ ನಟಿ ಸಮಂತಾ ಅವರಿಗೆ ಅಭಿಮಾನಿಯೊಬ್ಬ ಆಂಧ್ರದಲ್ಲಿ ದೇವಸ್ಥಾನ ಕಟ್ಟಿಸಿದ್ದಾನಂತೆ. ಅಲ್ಲಿಗೆ ಸಿನಿ ಪ್ರೇಕ್ಷಕರ ಅಭಿಮಾನದಲ್ಲಿ ಕೊಂಚ ಮಟ್ಟಿಗಿನ ಲಿಂಗ ಭೇಧ ಇದ್ದರೂ ಹೀರೋಯಿನ್‌ಗಳನ್ನು ಕೊಂಚ ಕಡೆಗಣಿಸಿದರೂ ಕೆಲವು ಅದೃಷ್ಟವಂತ ಹೀರೋಯಿನ್ ಗಳಿಗಾದರೂ ದೇವಸ್ಥಾನ ಕಟ್ಟಿಸಿಕೊಳ್ಳುವ ಭಾಗ್ಯ ಇರುತ್ತದೆ ಅನ್ನೋದಂತೂ ಸತ್ಯ.

ಸಂಪಾದಕರ ಸದ್ಯಶೋಧನೆ

ಸಂಕ್ಷಿಪ್ತ ತೆರಿಗೆ ಪದಕೋಶ

ಇತ್ತೀಚೆಗೆ ಸ್ನೇಹಿತರಾದ ಸುಬ್ರಾಯ ಎಂ.ಹೆಗಡೆ ಗೌರಿಬಣ್ಣಿಗೆ ಅವರು ತಾವು ರಚಿಸಿದ 'ಸಂಕ್ಷಿಪ್ತ ತೆರಿಗೆ ಪದಕೋಶ' (ಇಂಗ್ಲಿಷ್ – ಕನ್ನಡ) ಕೃತಿಯನ್ನು ನೀಡಿದರು. ಸುಮಾರು 220 ಪುಟಗಳ ಈ ಕೃತಿಯನ್ನು ನೋಡಿ ಸಂತಸವಾಯಿತು. ತೆರಿಗೆ ವಿಷಯದ ಬಗ್ಗೆ ನಿಘಂಟನ್ನು ರಚಿಸಿದ ಹೆಗಡೆಯವರ ಪ್ರಯತ್ನ ವಿಶೇಷ ಎಂದೆನಿಸಿ, ಅವರ ಬಗ್ಗೆ ಅಭಿಮಾನ ಮೂಡಿತು. ಈ ಕೃತಿಯನ್ನು ಹೆಗಡೆಯವರು, ಶಿವಣ್ಣ ಡಿ. ಎಂಬುವವರೊಂದಿಗೆ ಸೇರಿ ರಚಿಸಿದ್ದಾರೆ. 1985 ರಲ್ಲಿ ಹೆಗಡೆಯವರು ಕರ್ನಾಟಕ ವಾಣಿಜ್ಯ ತೆರಿಗೆಗಳ ಇಲಾಖೆಯಲ್ಲಿ , ವಾಣಿಜ್ಯ ತೆರಿಗೆ ಅಧಿಕಾರಿಯಾಗಿ ಸೇರಿ, ಮೂವತ್ತು ವರ್ಷಗಳ ಕಾಲ ರಾಜ್ಯದ ಬೇರೆ ಬೇರೆ ನಗರಗಳಲ್ಲಿ ಸೇವೆ ಸಲ್ಲಿಸಿ, ವಾಣಿಜ್ಯ ತೆರಿಗೆ ಜಂಟಿ ಆಯುಕ್ತರಾಗಿ 2015 ರಲ್ಲಿ ನಿವೃತ್ತರಾದವರು. ಶಿವಣ್ಣ ಅವರೂ ವಾಣಿಜ್ಯ ತೆರಿಗೆ ಇಲಾಖೆಯಲ್ಲಿ ಪ್ರಥಮ ದರ್ಜೆ ಸಹಾಯಕರಾಗಿ ಸೇರಿ, ರಾಜ್ಯದ ವಿವಿಧೆಡೆ ಮೂವತ್ತೂರು ವರ್ಷಗಳ ಕಾಲ ಸೇವೆ ಸಲ್ಲಿಸಿ, ವಾಣಿಜ್ಯ ತೆರಿಗೆ ಅಧಿಕಾರಿಯಾಗಿ ನಿವೃತ್ತರಾದವರು. ನಿವೃತ್ತಿಯ ಬಳಿಕ ಇಬ್ಬರೂ ತಮ್ಮ ಅನುಭವಗಳನ್ನು ಧಾರೆಯೆರೆದು ಈ ಅಪರೂಪದ ಕೃತಿಯನ್ನು ರಚಿಸಿ ಕನ್ನಡ ಅಕ್ಷರಲೋಕವನ್ನು ಶ್ರೀಮಂತಗೊಳಿಸಿದ್ದಾರೆ. ಸರಕಾರದ ಸಂಪನ್ಮೂಲ ತೆರಿಗೆ ಸಂಗ್ರಹದಿಂದಲೇ ಬರುವಂಥದ್ದು. ತೆರಿಗೆ ಇಲಾಖೆ ಸರಿಯಾಗಿ ಕೆಲಸ ಮಾಡದಿದ್ದರೆ, ಯಾವ ಸರಕಾರವೂ ಸಮರ್ಥವಾಗಿ, ಪರಿಣಾಮಕಾರಿಯಾಗಿ ಕೆಲಸ ಮಾಡಲು ಸಾಧ್ಯವಿಲ್ಲ. ತೆರಿಗೆ ಇಲಾಖೆಯ ರಚನೆ, ಕಾರ್ಯವ್ಯಾಪ್ತಿ, ಕಾರ್ಯವಿಧಾನಗಳನ್ನು ಅರ್ಥ ಮಾಡಿಕೊಳ್ಳುವುದು ಸುಲಭವಲ್ಲ. ತೆರಿಗೆಯ ಭಾಷೆ ಅಂಕೆ-ಸಂಖ್ಯೆಗಳಿಂದಲೇ ಕೂಡಿರುತ್ತದೆ ಎಂಬ ಭಾವನೆ ಅನೇಕರಿಗಿದೆ. ಅದು ನಿಜವೂ ಇದ್ದಿರಬಹುದು. ಹೀಗಾಗಿ ಬಹುತೇಕರು ತಮಗೆ ಇದು ಕಬ್ಬಿಣದ ಕಡಲೆ ಎಂದು ಭಾವಿಸುವುದುಂಟು. ಅದರಲ್ಲೂ 2005 ರಲ್ಲಿ ಮೌಲ್ಯವರ್ಧಿತ ತೆರಿಗೆ ಕಾಯ್ದೆ ಮತ್ತು 2017 ರಲ್ಲಿ ಸರಕು ಹಾಗೂ ಸೇವಾ ತೆರಿಗೆ ಕಾಯ್ದೆ ಜಾರಿಗೆ ಬಂದ ಬಳಿಕ, ತೆರಿಗೆ ಸಂಬಂಧಿ ಪದಗಳ ಅರ್ಥಗಳನ್ನು ಅರಿಯುವ ಅಗತ್ಯ ಮತ್ತು ಅನಿವಾರ್ಯ ಎಂದಿಗಿಂತ ಹೆಚ್ಚಾಗಿದೆ. ತೆರಿಗೆಗೆ ಸಂಬಂಧಿಸಿದಂತೆ ಕನ್ನಡದಲ್ಲಿರುವ ಪದಗಳ ಅರ್ಥವನ್ನು ಸರಳೀಕರಿಸುವುದು ಮತ್ತು ಇಂಗ್ಲಿಷಿನಲ್ಲಿರುವ ಪದಗಳಿಗೆ ಸಮನಾದ ಕನ್ನಡ ಪದಗಳನ್ನು ಟಂಕಿಸುವುದು ನಿಜಕ್ಕೂ ಸವಾಲಿನ ಕೆಲಸವೇ. ಹೆಗಡೆ ಮತ್ತು ಶಿವಣ್ಣ ಅವರ ನಿಜವಾದ ಜಾಣ್ಮೆ ಮತ್ತು ಕಸರತ್ತು ಅಡಗಿರುವುದು ಇಲ್ಲಿಯೇ. ಇದು ತೆರಿಗೆ ಇಲಾಖೆಯಲ್ಲಿನ ಸಿಬ್ಬಂದಿ, ಅಧಿಕಾರಿಗಳನ್ನು ಗಮನದಲ್ಲಿಟ್ಟುಕೊಂಡು ರಚಿಸಿದ ಪದಕೋಶವಲ್ಲ. ತೆರಿಗೆ ವಿಷಯಕ್ಕೆ ಸಂಬಂಧಿಸಿದಂತೆ ಎಲ್ಲರಿಗೂ ಉಪಯುಕ್ತವಾಗಬೇಕು ಮತ್ತು ಎಲ್ಲರನ್ನೂ ಒಳಗೊಳ್ಳಬೇಕು ಎಂಬ ವಿಶಾಲ ಆಶಯದೊಂದಿಗೆ ರಚಿಸಿರುವುದು ಗಮನಾರ್ಹ. ಈ ಪದಕೋಶವನ್ನು ರಚಿಸುವ ಹಿಂದಿನ ಆಶಯದ ಬಗ್ಗೆ ಹೆಗಡೆ ಮತ್ತು ಶಿವಣ್ಣ ಹೀಗೆ ಹೇಳಿದ್ದಾರೆ – 'ಮೌಲ್ಯವರ್ಧಿತ ತೆರಿಗೆ ಕಾಯ್ದೆ ಹಾಗೂ ಸರಕು ಮತ್ತು ಸೇವಾ ತೆರಿಗೆ ಕಾಯ್ದೆಗಳು ರಾಷ್ಟ್ರದಾದ್ಯಂತ ಜಾರಿಗೆ ಬಂದ ಸಂದರ್ಭಗಳಲ್ಲಿ ಮತ್ತು ಕರ್ನಾಟಕ ವಾಣಿಜ್ಯ ತೆರಿಗೆಗಳ ಇಲಾಖೆಯಲ್ಲಿನ ನಮ್ಮಿಬ್ಬರ ತೆರಿಗೆಯಾನದ ಹಲವು ಸನ್ನಿವೇಶಗಳಲ್ಲಿ ಇಲಾಖೆಯ ಆಯುಕ್ತರುಗಳು ಹಾಗೂ ಹಿರಿಯ ಅಧಿಕಾರಿಗಳು ಈ ತೆರಿಗೆ ಕಾಯ್ದೆ-ಕಾನೂನು, ಅಧಿಸೂಚನೆ ಮುಂತಾದುವುಗಳನ್ನು ಇಂಗ್ಲಿಷಿನಿಂದ ಕನ್ನಡಕ್ಕೆ ಭಾಷಾಂತರ ಮಾಡುವ ಅವಕಾಶ ಕಲ್ಪಿಸಿದ ಸಂದರ್ಭಗಳಲ್ಲಿ, ಕನ್ನಡದಲ್ಲಿಯೂ ಒಂದು ತೆರಿಗೆ ಪದಕೋಶದ ಅಗತ್ಯತೆ ಕಂಡುಬಂದಿತ್ತು. ಅದರಲ್ಲೂ ಜುಲೈ 2017ರಿಂದ ಒಂದು ದೇಶ ಒಂದು ತೆರಿಗೆ'(One Nation-One Tax) ಪರಿಕಲ್ಪನೆಯಡಿ ಜಾರಿಗೆ ತರಲಾದ ಸರಕು ಮತ್ತು ಸೇವಾ ತೆರಿಗೆ ಕಾಯ್ದೆಗಳ ಹಿನ್ನೆಲೆಯಲ್ಲಿ, ಪರೋಕ್ಷ ತೆರಿಗೆ ಕ್ಷೇತ್ರಕ್ಕೆ ಸಂಬಂಧಿಸಿದ ಪ್ರತ್ಯೇಕವಾದ ಒಂದು ಇಂಗ್ಲಿಷ್-ಕನ್ನಡ ಪದಕೋಶದ ಅವಶ್ಯಕತೆ ಇದೆ ಎಂಬುದನ್ನು ನಾವು ಗಮನಿಸಿದ್ದರಿಂದ ಈ 'ಸಂಕ್ಷಿಪ್ತ ತೆರಿಗೆ ಪದಕೋಶ' ಸಂಕಲನ ಕಾರ್ಯಕ್ಕೆ ತೊಡಗಿಕೊಳ್ಳಲು ಕಾರಣವಾಯಿತು. ಇದರಿಂದ ತೆರಿಗೆ ಭಾಷೆಯಲ್ಲಿ ಇನ್ನಷ್ಟು ಖಚಿತತೆ, ಸ್ಪಷ್ಟತೆ ಮತ್ತು ಏಕರೂಪತೆ ಬಂದು ತೆರಿಗೆ ಆಡಳಿತಗಾರರು, ಕರದಾತರು, ಲೆಕ್ಕಪರಿಶೋಧಕರು, ತೆರಿಗೆ ಸಲಹೆಗಾರರು ಹಾಗೂ ತರಬೇತುದಾರರೂ ಸೇರಿದಂತೆ ತೆರಿಗೆ ಕ್ಷೇತ್ರದ ಎಲ್ಲ ಭಾಗೀದಾರರಿಗೆ ಮತ್ತು ತೆರಿಗೆಯನ್ನು ಪರೋಕ್ಷವಾಗಿ ಭರಿಸುತ್ತಿರುವ ಎಲ್ಲಾ ನಾಗರಿಕರಿಗೂ ಹೆಚ್ಚಿನ ಪ್ರಯೋಜನವಾಗುವುದೆಂದು ಆಶಿಸಿ, ಈ ಕೃತಿಯನ್ನು ರಚಿಸಿದೆವು.' ನಿಜಕ್ಕೂ ಹೆಗಡೆ ಮತ್ತು ಶಿವಣ್ಣ ಅಭಿನಂದನಾರ್ಹರು.

ಒಂದಾನೊಂದು ಕಾಲದಲ್ಲಿ ಪಶ್ಚಿಮ ಬಂಗಾಳ

ವೀಕೆಂಡ್ ವಿತ್ ಮೋಹನ್
ಮೋಹನ್ ವಿಶ್ವ
camohanbn@gmail.com

ಸ್ವಾತಂತ್ರ್ಯ ಪೂರ್ವದಲ್ಲಿ ಬ್ರಿಟಿಷರ ವಿರುದ್ಧ ಹೋರಾಡುವ ಮಹಾನ್ ಕ್ರಾಂತಿಕಾರಿಗಳ ರಾಜ್ಯವಾಗಿತ್ತು ಬಂಗಾಳ. ಬಂಗಾಳದಲ್ಲಿದ್ದಂತಹ ಸ್ವಾತಂತ್ರ್ಯದ ಕಿಚ್ಚಿನ ಭಯದಿಂದ ಬ್ರಿಟಿಷರು ರಾಜಧಾನಿಯನ್ನು 'ದೆಹಲಿ'ಗೆ ವರ್ಗಾಯಿಸಬೇಕಾಯಿತು. ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ಬಂಗಾಳದವರೆಂದರೆ ಸಾಕು ದೇಶಭಕ್ತರು, ಬುದ್ಧಿವಂತರು, ಕಾನೂನಿನ ವಿಚಾರಗಳನ್ನು ಹೆಚ್ಚು ಅರಿತವರು, ಅಪ್ರತಿಮ ಕ್ರಾಂತಿಕಾರಿಗಳೆಂದು ದೇಶದ ಜನ ಮಾತನಾಡಿಕೊಳ್ಳುತ್ತಿದ್ದರು. ಸುಭಾಷ್ ಚಂದ್ರ ಬೋಸ್‌ರಂತಹ ಮಹಾನ್ ಕ್ರಾಂತಿಕಾರರನ್ನು ಭಾರತ ಮಾತೆಯಾ ಸೇವೆಗೆ ನೀಡಿದ ರಾಜ್ಯ ಬಂಗಾಳ. ಬೋಸರು ಅಹಿಂಸಾವಾದದಿಂದ ಸ್ವಾತಂತ್ರ್ಯ ಸಿಗುವುದಿಲ್ಲವೆಂದು ಅರಿತ ಮೇಲೆ, ವೀರ ಸಾವರ್ಕರ್‌ರ ಸಲಹೆಯನ್ವಯ ಜರ್ಮನಿ ಹಾಗೂ ಜಪಾನ್ ದೇಶದಲ್ಲಿದ್ದಂತಹ ಭಾರತೀಯ ಬ್ರಿಟಿಷ್ ಯುದ್ಧ ಕೈದಿಗಳನ್ನು ಒಂದೆಡೆ ಸೇರಿಸಿ 'ಇಂಡಿಯನ್ ನ್ಯಾಷನಲ್ ಆರ್ಮಿ'ಯನ್ನು ಕಟ್ಟಿ ಬ್ರಿಟಿಷರ ಮೇಲೆ ಆಕ್ರಮಣ ಮಾಡಿರಲಿಲ್ಲವೆಂದಿದ್ದರೆ ನಮಗೆ ಸ್ವಾತಂತ್ರ್ಯ ಸಿಗುತ್ತಿರಲಿಲ್ಲ. ಮೊಟ್ಟ ಮೊದಲ ಬ್ರಿಟಿಷೇತರ 'ಸಂಪೂರ್ಣ ಭಾರತೀಯ ಸರಕಾರ' ಸ್ಥಾಪಿಸಿದ ಕೀರ್ತಿ ಬೋಸರಿಗೆ ಸಲ್ಲಬೇಕು. ಬ್ರಿಟಿಷರ 'ಗೃಹ ಬಂಧನ'ದಿಂದ ತಪ್ಪಿಸಿಕೊಂಡು ದೇಶಬಿಟ್ಟು, ತಿಂಗಳು ಗಟ್ಟಲೆ ಹಡಗುಗಳಲ್ಲಿ, ಸಬ್ ಮರೀನ್‌ಗಳಲ್ಲಿ ಕದ್ದುಮುಚ್ಚಿ ಜರ್ಮನ್‌ಗೆ ತೆರಳಿ ಹಿಟ್ಲರ್‌ನ ಸ್ನೇಹ ಸಂಪಾದಿಸಿ ಭಾರತೀಯ ಯುದ್ಧ ಕೈದಿಗಳನ್ನು ಬಿಡುಗಡೆ ಮಾಡುವಂತೆ ಒತ್ತಾಯಿಸಿ ಬ್ರಿಟಿಷರ ವಿರುದ್ಧ ಸೈನ್ಯ ಕಟ್ಟುವುದು ಅಷ್ಟು ಸುಲಭದ ಕೆಲಸವಾಗಿರಲಿಲ್ಲ, ಇಂತಹ ಮಹಾನ್ ಕಾರ್ಯವನ್ನು ಮಾಡಿದಂತಹ ಬೋಸರು ಹುಟ್ಟಿದ ನಾಡು ಬಂಗಾಳ. ಬ್ರಿಟಿಷರನ್ನು ಭಾರತದಿಂದ ಓಡಿಸಲು ಬಹುದೊಡ್ಡ ಸೈನ್ಯವನ್ನೇ ಕಟ್ಟಿದ್ದ ಬೋಸರ ಬಂಗಾಳದ ಇಂದಿನ ಪರಿಸ್ಥಿತಿ ಏನಾಗಿದೆ ? ಪಕ್ಕದ ಬಾಂಗ್ಲಾದೇಶದಿಂದ ಲಕ್ಷಾಂತರ ಮುಸ್ಲಿಮರನ್ನು ಕಮ್ಯುನಿಸ್ಟ್ ಹಾಗು ಮಮತಾ ಬ್ಯಾನರ್ಜಿ ನೇತೃತ್ವದ ಸರಕಾರ ಅಕ್ರಮವಾಗಿ ಒಳಗೆ ಬಿಟ್ಟುಕೊಂಡಿದೆ, ಅವರಿಗೆ ಇಲ್ಲಸಲ್ಲದ ಸವಲತ್ತುಗಳೆಲ್ಲವನ್ನೂ ನೀಡಿ ಭದ್ರವಾದಂತಹ ಮತ ಬ್ಯಾಂಕ್ ಮಾಡಿಕೊಂಡಿದೆ. ಬೋಸರು ದೇಶದ ಸ್ವಾತಂತ್ರ್ಯಕ್ಕಾಗಿ ತಮ್ಮ ಪ್ರಾಣವನ್ನೇ ತ್ಯಾಗ ಮಾಡಿದರೆ, ಕಮ್ಯುನಿಸ್ಟರು ತಮ್ಮ ಸ್ವಾರ್ಥಕ್ಕಾಗಿ ಅಸಂಖ್ಯಾತ ಮೂಲ ಬಂಗಾಳಿಗರ ರಕ್ತ ಚೆಲ್ಲುವ ಕೆಲಸವನ್ನು ಸುಮಾರು 50 ವರ್ಷಗಳ ಆಡಳಿತದಲ್ಲಿ ಮಾಡಿದ್ದಾರೆ. ಬ್ರಿಟಿಷರನ್ನು ದೇಶದಿಂದ ಓಡಿಸಿದ ಬೋಸರ ಬಂಗಾಳದ ಇಂದಿನ ಪರಿಸ್ಥಿತಿಯಂತೂ ಎಷ್ಟು ಹೀನಾಯವಾಗಿದೆಯೆಂದರೆ, ಹಿಂದೂ ಹಬ್ಬಗಳನ್ನು ಸಾರ್ವಜನಿಕವಾಗಿ ಸಂಭ್ರಮಿಸಲು ಸಂಪೂರ್ಣ ಸ್ವಾತಂತ್ರ್ಯವಿಲ್ಲ, ಆದರೆ ಮುಸಲ್ಮಾನರಿಗೆ ಮಾತ್ರ ತಮ್ಮ ಹಬ್ಬಗಳನ್ನು ಆಚರಿಸಲು ಎಲ್ಲಿಲ್ಲದ ಸ್ವಾತಂತ್ರ್ಯ ಬಂಗಾಳದಲ್ಲಿದೆ. ತನ್ನ ಆಡಳಿ ತಾವಧಿಯುದ್ದಕ್ಕೂ ಮುಸಲ್ಮಾನರ ಓಲೈಕೆಯಲ್ಲಿ ತೊಡಗಿರುವ ಮಮತಾ ಬ್ಯಾನರ್ಜಿ ಆಡಳಿತದಲ್ಲಿ ನೂರಾರು ಹಿಂದೂ ಕಾರ್ಯಕರ್ತರ ಕೊಲೆಗಳಾದವು. ಅಲ್ಲೇ ಹುಟ್ಟಿ ಅಲ್ಲೇ ಬೆಳೆದ ಬಂಗಾಳದ ಮೂಲ ಜನರ ಜೊತೆಗೆ ನಿಲ್ಲದೇ ಬಾಂಗ್ಲಾದೇಶದಿಂದ ಬಂದಂತಹ ಮುಸಲ್ಮಾನರ ಜೊತೆಗೆ ನಿಲ್ಲುವ ಮೂಲಕ ಬಂಗಾಳದ ಸ್ವಾತಂತ್ರ್ಯ ವೀರರಿಗೆ ದೊಡ್ಡ ಅವಮಾನ ಮಾಡಿದ್ದಾರೆ.

ತರುಣರ ಆಶಾಕಿರಣ ಸ್ವಾಮಿ ವಿವೇಕಾನಂದರು ಜನಿಸಿದಂತಹ ನಾಡು ಬಂಗಾಳ, ಹತ್ತೊಂಬತ್ತನೆಯ ಶತಮಾನದಲ್ಲಿ ಬಂಗಾಳದಿಂದ ಇಡೀ ದೇಶದ ಯುವಕರನ್ನು ಪ್ರೇರೇಪಿಸಿ ಸದೃಢ ದೇಶ ಕಟ್ಟುವ ಸಲುವಾಗಿ ಇಡೀ ದೇಶವನ್ನೇ ಸುತ್ತಿ ದೊಡ್ಡದೊಂದು ಯುವ ಪಡೆಯನ್ನು ಸಜ್ಜಾಗಿಸಿದವರು ಸ್ವಾಮಿ ವಿವೇಕಾನಂದರು. ಒಂದು ಶತಮಾನದ ಹಿಂದೆ ಅವರು ಹೇಳಿದ ಮಾತುಗಳನ್ನು ಕೇಳಿದರೆ ಇಂದಿಗೂ ರೋಮಾಂಚನವಾಗುತ್ತದೆ. ವಿವೇಕಾನಂದರ ಸುಂದರ ಭಾರತದ ಕಲ್ಪನೆಯ ಹಿಂದಿನ ಶಕ್ತಿ ನವ ತರುಣರು, ಅವರು ಹಾಕಿದ ಭದ್ರ ಬುನಾದಿಯು ಇಂದಿಗೂ ಸಮಾಜ ಕಟ್ಟುವಲ್ಲಿ ತರುಣರಿಗೆ ಯಥಾಪ್ರಕಾರ ಅನ್ವಯವಾಗುತ್ತದೆ. ವಿವೇಕಾನಂದರ ದೂರದೃಷ್ಟಿ ಎಷ್ಟಿತ್ತೆಂದರೆ ನಾವು ಈಗ ಯೋಚಿಸುವ ಭವ್ಯ ಭಾರತದ ಕನಸನ್ನು ನೂರು ವರ್ಷಗಳ ಹಿಂದೆಯೇ ಕಂಡಿದ್ದರು. ತರುಣ ಪಡೆಯನ್ನು ದೇಶದ ಅಭಿವೃದ್ಧಿಗಾಗಿ ಸಜ್ಜುಗೊಳಿಸಿದರೆ ಭಾರತವು ಪಾಶ್ಚಿಮಾತ್ಯ ದೇಶಗಳಿಗಿಂತಲೂ ಮುಂದುವರೆಯುವುದರಲ್ಲಿ ಯಾವುದೇ ಅನುಮಾನವಿಲ್ಲವೆಂಬ ಕನಸು ಅವರದ್ದಾಗಿತ್ತು. ಅಮೆರಿಕದ ಚಿಕಾಗೊ ಸಮ್ಮೇಳನದಲ್ಲಿ ಶತಮಾನದ ಹಿಂದೆ ಸರ್ವ ಧರ್ಮ ಸಮ್ಮೇಳನದಲ್ಲಿ ಹಿಂದೂ ಧರ್ಮದ ಬಗ್ಗೆ ಅವರು ಮಾಡಿದ ಭಾಷಣವು ಇಡೀ ವಿಶ್ವವನ್ನೇ ಮಂತ್ರಮುಗ್ಧರನ್ನಾಗಿ ಮಾಡಿತ್ತು. ನಮ್ಮ ಧರ್ಮವನ್ನು ಆಡಿಕೊಂಡು ನಗುತ್ತಿದ್ದವರ ಮುಂದೆ ಭಾರತೀಯರ ಶಕ್ತಿಯನ್ನು ಆಳವಾಗಿ ಪಾಶ್ಚಿಮಾತ್ಯರಿಗೆ ಪರಿಚಯಿಸಿದ ಕೀರ್ತಿ ಸ್ವಾಮಿ ವಿವೇಕಾನಂದರಿಗೆ ಸಲ್ಲಬೇಕು. ಕಿರಿಯ ವಯಸ್ಸಿನಲ್ಲಿಯೇ ಸನ್ಯಾಸ ಸ್ವೀಕರಿಸಿ ದೇಶದ ಒಳಿತಿಗಾಗಿ ತರುಣರ ಪಡೆಯನ್ನು ಸಜ್ಜುಪಡಿಸಿ, ತಮ್ಮ ವಾಕ್ಚಾತುರ್ಯದ ಮೂಲಕ ಯುವಕರನ್ನು ದೇಶ ಕಟ್ಟುವ ಕೆಲಸದೆಡೆಗೆ ಕರೆತಂದಂತಹ ಮಹಾನ್ ಸಂತನು ಜನಿಸಿದ ಬಂಗಾಳದಲ್ಲಿ ಇಂದು ಹಿಂದೂಗಳ ಪರಿಸ್ಥಿತಿ ಏನಾಗಿದೆ? ದುರ್ಗಾಷ್ಟಮಿಯ ದಿನದ ಮೆರವಣಿಗೆಯನ್ನು ನಡೆಸಲು ಮಮತಾ ಬ್ಯಾನರ್ಜಿ ನೇತೃತ್ವದ ಸರಕಾರದ ಅನುಮತಿ ಕೇಳಬೇಕಾದಂತಹ ಪರಿಸ್ಥಿತಿ ಒದಗಿ ಬಂದಿದೆ. ಅನುಮತಿ ನೀಡಿದರೂ ರಾತ್ರಿ ಹತ್ತು ಘಂಟೆಯ ಮೇಲೆ ಮೆರವಣಿಗೆ ಮಾಡುವಂತಿಲ್ಲ, ಅನ್ಯ ಧರ್ಮದವರಿಗೆ ಧಕ್ಕೆಯುಂಟಾಗುತ್ತದೆಯೆಂಬ ಕಾರಣ ನೀಡಿ ಹಲವೆಡೆ ಅನುಮತಿಯನ್ನೇ ನೀಡುತ್ತಿರಲಿಲ್ಲ. ಶತಮಾನದ ಹಿಂದೆ ಪಾಶ್ಚಿಮಾತ್ಯರ ಮುಂದೆ ಹಿಂದೂ ಧರ್ಮದ ವಿಚಾರಧಾರೆಗಳನ್ನು ಆಳವಾಗಿ ಮಂಡಿಸಿದ ಸ್ವಾಮಿ ವಿವೇಕಾನಂದರ ಬಂಗಾಳದಲ್ಲಿ ಇಂದು ಹಿಂದೂ ಧರ್ಮದ ಆಚರಣೆಗಳಿಗೆ ಯಾವ ರೀತಿಯ ತೊಡಕುಂಟಾಗಿದೆ. ಹಿಂದೂ ಧರ್ಮದ ಪರವಾಗಿ ಮಾತನಾಡುವ ತರುಣರ ಕೊಲೆಗಳಾಗುತ್ತವೆ, ಮೂರು ದಶಕಗಳ ಕಾಲ ಆಳಿದ ಕಮ್ಯುನಿಸ್ಟರು ಬಂಗಾಳದ ಯುವಕರನ್ನು ನಿರುದ್ಯೋಗಿಗಳನ್ನಾಗಿಸಿದರು. ಸ್ವಾಮಿ ವಿವೇಕಾನಂದರ ಆಶಯದಂತೆ ಬಂಗಾಳದ ಯುವಕರನ್ನು ಬಳಸಿ ದೇಶ ಕಟ್ಟುವುದಿರಲಿ, ಕನಿಷ್ಠ ಬಂಗಾಳ ರಾಜ್ಯವನ್ನು ಅಭಿವೃದ್ಧಿ ಮಾಡಲಿಲ್ಲ,ಹಿಂದುಳಿದ ರಾಜ್ಯಗಳ ಪಟ್ಟಿಯಲ್ಲಿ ಪಶ್ಚಿಮ ಬಂಗಾಳ ರಾಜ್ಯವೂ ಸೇರುವಂತೆ ಮಾಡಿದ ಕೀರ್ತಿ ಬ್ಯಾನರ್ಜಿಗೆ ಸಲ್ಲಬೇಕು. ಕೆಲಸವಿಲ್ಲದ ಕೋಲ್ಕತ್ತಾದ ತರುಣರು ಕೆಲಸ ಅರಿಸಿ ದೇಶದ ವಿವಿಧ ನಗರಗಳಿಗೆ ವಲಸೆ ಬರುವಂತಾಯಿತು. ಕಳೆದ ಹತ್ತು ವರ್ಷಗಳಲ್ಲಿ ಬೆಂಗಳೂರಿನಲ್ಲಿ ವಲಸಿಗ ಬಂಗಾಳಿಗಳರ ಸಂಖ್ಯೆ ಅದೆಷ್ಟು ಹೆಚ್ಚಾಗಿದೆಯೆಂದರೆ ತಮಿಳರಗಿಂತಲೂ ಹೆಚ್ಚಾಗಿ ಬಂಗಾಳಿಗಳು ಕಾಣಸುತ್ತಾರೆ. ಕಾವಿ ತೊಟ್ಟು ಸರ್ವ ಧರ್ಮ ಸಮ್ಮೇಳನದಲ್ಲಿ ಪಾಶ್ಚಿಮಾತ್ಯರ ಮುಂದೆ ನಿಂತಂಹ ಬಂಗಾಳದ ಸ್ವಾಮಿ ವಿವೇಕಾನಂದರ ನಾಡಿನಲ್ಲಿ ಕೇಸರಿ ಬಣ್ಣ ಕಂಡರೆ ಮಮತಾ ಬ್ಯಾನರ್ಜಿ ಉರಿದು ಬೀಳುತ್ತಾರೆ, ಇಂತಹ ಸಂತ ಹುಟ್ಟಿದ ನಾಡಿನಲ್ಲಿ ಕಾವಿಗಿರುವ ಪ್ರಸ್ತುತ ಬೆಲೆಯಿದು. ಜೈ ಶ್ರೀರಾಮ್ ಘೋಷಣೆ ಕೂಗಿದವರ ಕೊಲೆಗಳಾಗುತ್ತವೆ, ಪಾಕಿಸ್ತಾನದ ಉಗ್ರ ಸಂಘಟನೆಗಳಿಗಿಂತಲೂ ಉಗ್ರವಾಗಿ ಹಿಂದೂ ಕಾರ್ಯಕರ್ತರ ಬರ್ಬರ ಕೊಲೆಗಳು ಬಂಗಾಳದಲ್ಲಿ ಕಳೆದ ಒಂದು ದಶಕದಲ್ಲಾಗಿವೆ. ಒಂದು ಕಾಲದಲ್ಲಿ ಬ್ರಿಟಿಷರ ರಾಜಧಾನಿಯಾಗಿದ್ದಂತಹ ಕೋಲ್ಕತ್ತಾ ನಗರದಲ್ಲಿ ಇಂದಿಗೂ ಸಾರ್ವಜನಿಕ ಸಾರಿಗೆಯಲ್ಲಿ ಓಡಾಡಲು ಕಷ್ಟವಾಗುತ್ತದೆ. ಅಲ್ಲಿ ಓಡಾಡುವ ಸಾರ್ವಜನಿಕ ಬಸ್ಸುಗಳ ಪರಿಸ್ಥಿತಿ ಅಷ್ಟೊಂದು ಚಿಂತಾಜನಕವಾಗಿದೆ.

ಪಶ್ಚಿಮ ಬಂಗಾಳದಲ್ಲಿ ನೂತನ ಕಂಪನಿಗಳು ಹೊಸದೊಂದು ಕಾರ್ಖಾನೆಯನ್ನು ಶುರುಮಾಡಬೇಕಾದರೆ ಭಯ ಪಡುತ್ತವೆ. ಕಮ್ಯುನಿಸ್ಟರಿಗೆ ತಾವು ಉದ್ಧಾರವಾಗಬಾರದು, ಮಾಲೀಕನೂ ಉದ್ಧಾರವಾಗಬಾರದು, ತನ್ನ ಪ್ರಜೆಗಳೂ ಸಹ ಉದ್ಧಾರವಾಗಬಾರದು. ತಾನು ಆಳುತ್ತಿರುವ ರಾಜ್ಯ ಬಡತನದಿಂದಲೇ ಕೂಡಿರಬೇಕು, ಜಗತ್ತಿಗೆ ಅದನ್ನೇ ತೋರಿಸಿ ತಮ್ಮ ಪ್ರಾಬಲ್ಯ ಮೆರೆಯಬೇಕು. ಬಂಗಾಳದಲ್ಲಿ ಕಮ್ಯುನಿಸ್ಟರ ಹಾವಳಿ ಅದೆಷ್ಟಿತ್ತೆಂದರೆ, 1962 ರ ಚೀನಾ ಯುದ್ಧದಲ್ಲಿ ಭಾರತಕ್ಕೆ ಅಮೆರಿಕ ಕಳುಹಿಸಿಕೊಟ್ಟಂತಹ ಶಸ್ತ್ರಾಸ್ತ್ರಗಳು ಕೋಲ್ಕತ್ತಾ ವಿಮಾನ ನಿಲ್ದಾಣದಲ್ಲಿ ಬಂದಿಳಿದಾಗ, ಅಸ್ತ್ರಗಳನ್ನು ವಿಮಾನದಿಂದ ಕೆಳಗಿಳಿಸಲು ಕೂಲಿಯಾಳುಗಳು ವಿಮಾನ ನಿಲ್ದಾಣವನ್ನು ಪ್ರವೇಶಿಸದಂತೆ ದೊಡ್ಡದೊಂದು ಪ್ರತಿಭಟನೆಯನ್ನು ಮಾಡಿಸಲಾಯಿತು. ಒಂದು ವಾರಗಳ ಕಾಲ ಪ್ರತಿಭಟನೆ ಮಾಡಿ ನಮ್ಮ ಸೈನಿಕರಿಗೆ ಶಸ್ತ್ರಾಸ್ತ್ರಗಳಿಲ್ಲದಂತೆ ಮಾಡಲಾಯಿತು. ಜ್ಯೋತಿ ಬಸುವೆಂಬ ಕಮ್ಯುನಿಸ್ಟ್ ಮುಖ್ಯಮಂತ್ರಿ 23 ವರ್ಷಗಳ ಕಾಲ ಪಶ್ಚಿಮ ಬಂಗಾಳದಲ್ಲಿ ಆಡಳಿತ ನಡೆಸಿ ರಾಜ್ಯವನ್ನು ಅಧಃಪತನದೆಡೆಗೆ ತೆಗೆದುಕೊಂಡು ಹೋಗಿದ್ದನ್ನು ಮರೆಯುವ ಹಾಗಿಲ್ಲ. ಬಾವಿಯೊಳಗಿನ ಕಪ್ಪೆಯಂತೆ ಅಲ್ಲಿನ ಜನರು ಇವರ ಆಡಳಿತವೇ ಅಂತಿಮವೆಂಬಂತೆ ಹೊರಜಗತ್ತಿನ ಸ್ಪರ್ಧೆಯ ಬಗ್ಗೆ ಚಿಂತಿಸಲೇ ಇಲ್ಲ.

ಸ್ವಾಮಿ ವಿವೇಕಾನಂದರ ಆದರ್ಶಗಳನ್ನು ನೆಲಮಟ್ಟದಲ್ಲಿ ಅನುಷ್ಠಾನಗೊಳಿಸಿದ ಕೀರ್ತಿ ಸೋದರಿ ನಿವೇದಿತರಿಗೆ ಸಲ್ಲಬೇಕು. ದೂರದ ಯೂರೋಪಿನಿಂದ ಬಂದು ಬಂಗಾಳದಲ್ಲಿ ನೆಲೆಸಿ ಸ್ವಾಮೀಜಿಯ ಚಿಂತನೆಗಳನ್ನು ಬಂಗಾಳದ ಯುವಕ, ಯುವತಿಯರಿಗೆ ಆದರ್ಶವನ್ನಾಗಿಸಿ ದ್ದರು. ರಾಜಕೀಯವಾಗಿಯೂ ನಿವೇದಿತಾ ಅದೆಷ್ಟು ಪ್ರಬುದ್ಧರಾಗಿದ್ದರೆಂದರೆ ದೊಡ್ಡ ದೊಡ್ಡ ರಾಜಕೀಯ ನಾಯಕರೆಲ್ಲರೂ ಅವರ ಸಲಹೆ ಪಡೆಯುತ್ತಿದ್ದರು. ಜಗದೀಶ್ ಚಂದ್ರ ಬೋಸ್‌ರಂತಹ ಬಂಗಾಳದ ಖ್ಯಾತ ವಿಜ್ಞಾನಿ ಸೋದರಿ ನಿವೇದಿತಾರ ಸಲಹೆಯನ್ನು ಪಡೆಯುತ್ತಿದ್ದರು. ವಿಜ್ಞಾನ ಜಗತ್ತಿಗೆ ಬಂಗಾಳದ ಜಗದೀಶ್ ಚಂದ್ರ ಬೋಸರ ಕೊಡುಗೆಯನ್ನು ಹೇಗೆ ತಾನೇ ಮರೆಯಲು ಸಾಧ್ಯ? ಭೌತಶಾಸ್ತ್ರ, ಸಸ್ಯಶಾಸ್ತ್ರ, ರೇಡಿಯೋ ವಿಜ್ಞಾನಗಳಲ್ಲಿ ಅಪಾರ ಸಾಧನೆಗೈದ ವಿಜ್ಞಾನಿಯೋರ್ವ ಬಂಗಾಳದವರಾಗಿರುವುದು ಅಲ್ಲಿನ ಜನರ ಹೆಮ್ಮೆ. ಇಂತಹ ವಿಜ್ಞಾನಿ ಹುಟ್ಟಿದ ಬಂಗಾಳದ ಇಂದಿನ ವಿಜ್ಞಾನದ ಪರಿಸ್ಥಿತಿ ಏನಾಗಿದೆ? ಸ್ವಾತಂತ್ರ್ಯ ಪೂರ್ವದಲ್ಲಿ ಬಂಗಾಳದಲ್ಲಾದ ಚಳುವಳಿಗಳು, ಕ್ರಾಂತಿಕಾರಕ ನಿರ್ಧಾರಗಳು, ಬ್ರಿಟಿಷರ ವಿರುದ್ಧದ ಹೋರಾಟಗಳು, ವಿಜ್ಞಾನದಲ್ಲಾದಂತಹ ಆವಿಷ್ಕಾರಗಳು, ತರುಣರನ್ನು ಹುರಿದುಂಬಿಸಿದ ಘಟನೆಗಳನ್ನೊಮ್ಮೆ ನೆನೆದು ಇಂದಿನ ಬಂಗಾಳದ ಪರಿಸ್ಥಿತಿಯನ್ನು ನೆನೆದರೆ ಕಣ್ಣುಗಳು ಒದ್ದೆಯಾಗುತ್ತವೆ. ಎಂತೆಂತ ಘಟಾನುಘಟಿಗಳನ್ನು ಭಾರತಾಂಬೆಯ ಸೇವೆಗೆ ನೀಡಿದ ರಾಜ್ಯದಲ್ಲಿ ದೇಶವಿರೋಧಿ ಕೃತ್ಯಗಳು ದಶಕಗಳಿಂದ ನಡೆದುಕೊಂಡು ಬರುತ್ತಿರುವುದು ದುರದೃಷ್ಟಕರ ಸಂಗತಿ. ಭಾರತಕ್ಕೆ ರಾಷ್ಟ್ರಗೀತೆಯನ್ನು ಕೊಡುಗೆಯಾಗಿ ನೀಡಿದಂತಹ ರವೀಂದ್ರನಾಥ ಟಾಗೋರ್ ಬಂಗಾಳದವರು. ಇಂತಹ ಬಂಗಾಳದಲ್ಲಿ ರಾಷ್ಟ್ರಗೀತೆಯನ್ನು ಹಾಡಿ ಪೊಲೀಸರಿಂದ ಏಟು ತಿಂದಂತಹ ಪ್ರಸಂಗಗಳು ಮಮತಾ ಬ್ಯಾನರ್ಜಿಯ ಆಡಳಿತದಲ್ಲಿ ಕೇಳಿಬರುತ್ತಲೇ ಇವೆ. ಅತಿ ಹೆಚ್ಚು ಅಪರಾಧ ಚಟುವಟಿಕೆಗಳಲ್ಲಿ ತೊಡಗಿರುವ ರೋಹಿಂಗ್ಯಾ ಮುಸಲ್ಮಾನರಿಗಂತೂ ಮಮತಾ ಬ್ಯಾನರ್ಜಿ ಮಾಡಿರುವ ಸಹಾಯ ಅಂತಿಂತದ್ದಲ್ಲ, ಬಂಗಾಳದ ಮೂಲ ನಾಗರಿಕರಿಗೆ ಸಿಗದ ಸೌಲಭ್ಯಗಳನ್ನು ರೋಹಿಂಗ್ಯಗಳಿಗೆ ಮಮತಾ ನೀಡಿದ್ದಾರೆ. ವಂದೇ ಮಾತರಂ ಭಾರತೀಯರು ಹೆಮ್ಮೆ ಪಟ್ಟು ಭಾರತಾಂಬೆಯ ನೆನೆದು ಹಾಡುವ ಹಾಡು, ಭಾರತೀಯ ಸೈನಿಕರು ಗಡಿಯಲ್ಲಿ ಶತ್ರುಗಳನ್ನು ಸದೆಬಡಿಯಬೇಕಾದರೆ ತಮ್ಮ ಆತ್ಮಸ್ಥೈರ್ಯಕ್ಕಾಗಿ ಹಾಡುವ ಹಾಡು, ಕ್ರೀಡೆಯಲ್ಲಿ ವಿಜೇತರಾದ ಬಳಿಕ ಪ್ರತಿಯೊಬ್ಬ ಭಾರತೀಯನ ಸಂಭ್ರಮದಲ್ಲಿ ಅಡಗಿರುವ ಹಾಡು, ಇಂತಹ ಹಾಡನ್ನು ಬರೆದ ಕವಿಯನ್ನು ಕೊಟ್ಟಂತಹ ರಾಜ್ಯ ಬಂಗಾಳದಲ್ಲಿ ಇಂದು ವಂದೇ ಮಾತರಂ ಹೇಳಿದರೆ ಮಮತಾ ಬ್ಯಾನರ್ಜಿಗೆ ಮೆಣಸಿನಕಾಯಿ ತಿಂದಂತಹ ಅನುಭವವಾಗುತ್ತದೆ.

ರಾಮಕೃಷ್ಣ ಪರಮಹಂಸ,ಸ್ವಾಮಿ ವಿವೇಕಾನಂದ, ಸುಭಾಷ್ ಚಂದ್ರ ಬೋಸ್, ಸಿಸ್ಟರ್ ನಿವೇದಿತಾ, ಬಂಕಿಮ ಚಂದ್ರ ಚಟರ್ಜಿ, ಜಗದೀಶ್ ಚಂದ್ರ ಬೋಸ್, ರವೀಂದ್ರನಾಥ್ ಠಾಗೋರ್‌ರಂತಹ ಅಪ್ರತಿಮ ದೇಶಭಕ್ತರು, ವಿಜ್ಞಾನಿಗಳು, ಕವಿಗಳನ್ನು ದೇಶಕ್ಕೆ ನೀಡಿದಂತಹ ಬಂಗಾಳದ ಸ್ವಾತಂತ್ರ್ಯ ನಂತರದ ಇತಿಹಾಸ ಬಹಳ ಕಠಿಣವಾಗಿದೆ. ಸ್ವಾತಂತ್ರ್ಯಾನಂತರ ಆಳಿದ ಪಕ್ಷಗಳು ಬಂಗಾಳದ ಐತಿಹಾಸಿಕ ಸಾಧನೆಗಳನ್ನು ಮರೆತವು, ಪಶ್ಚಿಮ ಬಂಗಾಳವೆಂದರೆ ವಾಕರಿಕೆ ಬರುವ ರೀತಿಯಲ್ಲಿ ಆಡಳಿತ ನಡೆಸಿದ ಕೀರ್ತಿ ಕಮ್ಯುನಿಸ್ಟ್ ಹಾಗೂ ಮಮತಾ ಬ್ಯಾನರ್ಜಿಗೆ ಸಲ್ಲಬೇಕು. ಇವರ ಆಡಳಿತದಲ್ಲಿ ಬಂಗಾಳದಲ್ಲಿ ಸ್ವಾಮಿ ವಿವೇಕಾನಂದರ ಆದರ್ಶಗಳಿಗೆ ಬೆಲೆಯಿಲ್ಲದಂತಾಗಿದೆ, ಬ್ರಿಟಿಷರ ವಿರುದ್ಧ ಸುಭಾಷ್ ಚಂದ್ರ ಬೋಸರಿಗಿದ್ದಂತಹ ಕ್ರಾಂತಿಕಾರಿ ನಿಲುವುಗಳು ಪುನಃ ಪುಟಿದೇಳಲಿಲ್ಲ, ರವೀಂದ್ರನಾಥ್ ಠಾಗೂರರು ರಚಿಸಿದ ರಾಷ್ಟ್ರಗೀತೆಗೆ ಎಗ್ಗಿಲ್ಲದೆ ಅಪಮಾನಗಳಾದರೂ ಸಹ ಅದನ್ನು ಖಂಡಿಸುವ ಸರಕಾರ ಬಂಗಾಳದಲ್ಲಿ ಅಧಿಕಾರಕ್ಕೇರಲಿಲ್ಲ, ಮಹಾನ್ ನಾಯಕರ ಗತವೈಭವ ಬಂಗಾಳದಲ್ಲಿ ಮತ್ತೊಮ್ಮೆ ಮರುಕಳಿಸುವ ಕಾಲಕ್ಕೆ ಕಾಯಬೇಕಿದೆ.

ಕಲೆಯ ವಿರುದ್ಧ ರಾಜಕಾರಣದ ಗೆಲುವು



ಅಭಿಮತ
ಶಿವಸುಬ್ರಹ್ಮಣ್ಯ ಕೆ.
vveditoped@gmail.com

ಚುನಾವಣಾ ನೀತಿ ಸಂಹಿತೆ ಜಾರಿಗೆ ಬರುವ ಮುನ್ನ ರಾಜ್ಯ ಸರಕಾರದ ಎಲ್ಲ ಅಕಾಡೆಮಿಗಳಿಗೆ ಅಧ್ಯಕ್ಷರು, ಸದಸ್ಯರನ್ನು ಆಯ್ಕೆ ಮಾಡಿ ಪ್ರಕಟವಾದ ಪಟ್ಟಿ ನೋಡಿದಾಗ ಅಚ್ಚರಿ ಆಗಿತ್ತು. ಕಾರಣವಿಷ್ಟೇ, ಮೈಸೂರಿನ ನೃತ್ಯಗಿರಿ ಸಂಸ್ಥೆಯ ನಿರ್ದೇಶಕಿ ನೃತ್ಯ ವಿದುಷಿ ಡಾ.ಕೃಪಾ ಫಡ್ಕೆ ಅವರನ್ನು ಸಂಗೀತ ನೃತ್ಯ ಅಕಾಡೆಮಿಯ ಅಧ್ಯಕ್ಷರಾಗಿ ಆಯ್ಕೆ ಮಾಡಲಾಗಿತ್ತು. ನಾನೂ ಅಭಿನಂದನೆ ಸಲ್ಲಿಸಿದ್ದೆ. ಅವರು ನನ್ನ ಅತ್ತಿಗೆ ಕೂಡಾ.

ಡಾ.ಕೃಪಾ ಫಡ್ಕೆ ಅವರು ಯಾವುದೇ ಲಾಬಿ ನಡೆಸದೇ ಕನಿಷ್ಠ ಆ ಸ್ಥಾನದ ಯೋಚನೆ ಕೂಡ ಮಾಡದೇ ಇದ್ದಾಗ ಈ ಸ್ಥಾನ ಅರಸಿ ಬಂದಾಗ ಅವರನ್ನು ದಶಕಗಳಿಂದ ಬಲ್ಲವರಿಗೆ ತುಂಬಾ ಸಂತೋಷವಾಗಿತ್ತು. ಸುಮಾರು ಮೂವತ್ತು ವರ್ಷಗಳಿಂದ ಮೈಸೂರಿನ ಕಲಾ ಪ್ರಪಂಚದ ಅತ್ಯಂತ ಸಶಕ್ತ ಕಲಾವಿದೆ ಮಾತ್ರವಲ್ಲದೆ ಅತ್ಯುತ್ತಮ ಸಂಘಟನೆಯ ಶಕ್ತಿಯಾಗಿಯೂ ಹೆಸರಾದವರು. ಕಲಾ ಪ್ರಪಂಚದ ನೂರಾರು ಕಲಾವಿದರನ್ನು ವೇದಿಕೆ ಒದಗಿಸಿ ಕಲೆಯ ನಿಜ ಉದ್ದೇಶವನ್ನು ಸಾರ್ಥಕಗೊಳಿಸಿದ್ದರು. ಮೈಸೂರು ವಿಶ್ವವಿದ್ಯಾನಿಲಯದಿಂದ ಪಿಎಚ್.ಡಿ ಪದವಿಯನ್ನೂ ಪಡೆದವರು.

ಮೈಸೂರಿನ ಮಾಧ್ಯಮವೂ ಇವರ ಕಲಾ ಸೇವೆಯನ್ನು ಅತ್ಯಂತ ಹತ್ತಿರದಿಂದ ನೋಡುತ್ತಿದ್ದ ಕಾರಣ ಆ ಹುದ್ದೆಗೆ ಅತ್ಯಂತ ಸಮರ್ಥರು ಎಂದೇ ಸಂತಸ ಪಟ್ಟಿದ್ದರು. ದಿವಂಗತ ಪಂಡಿತ್ ರಾಜೀವ್ ತಾರಾನಾಥ್‌ರಂತವರೂ ಕರೆ ಮಾಡಿ ಸಂತಸ ವ್ಯಕ್ತಪಡಿಸಿ, ಅಭಿನಂದನೆ ಸಲ್ಲಿಸಿದ್ದರು. ಯಾರು ಯಾವ ಹುದ್ದೆ ಅಲಂಕರಿಸಲಿ. ಯಾರು ಎಲ್ಲೇ ಕಾರ್ಯಕ್ರಮಗಳನ್ನು ನೀಡಲಿ, ಅದಕ್ಕಾಗಿ ಖುಷಿ ಪಡುವವರಷ್ಟೇ ಹೊಟ್ಟೆ ಕಿಚ್ಚಿನಿಂದ ನರಳುವವರೂ ಇದ್ದಾರೆ. ಕರ್ನಾಟಕದ ಕಲಾ ಜಗತ್ತಿನ ಅತ್ಯಂತ ದೊಡ್ಡ ಸಮಸ್ಯೆಯೇ ಅಸೂಯೆ. ಕೃಪಾ ಫಡ್ಕೆಯವರು ಕಳೆದ 30 ವರ್ಷಗಳಲ್ಲಿ ರಾಜ್ಯ, ರಾಷ್ಟ್ರದ ಅನೇಕ ವೇದಿಕೆಗಳಲ್ಲಿ ಕಾರ್ಯಕ್ರಮ ನೀಡಿದ್ದಾರೆ. ರಾಷ್ಟ್ರಕವಿ ಕುವೆಂಪು ಅವರ 'ಬಲಿದಾನ' ನಾಟಕದಲ್ಲಿ ಮುಖ್ಯ ಪಾತ್ರ ಮಾಡಿದವರು ಕೃಪಾ ಫಡ್ಕೆ. ಕನಕದಾಸರ ಕೀರ್ತನೆಗಳಿಗೆ ನೃತ್ಯ ಸಂಯೋಜನೆ ಮಾಡಿ ಹಲವಾರು ಕಾರ್ಯಕ್ರಮ ನೀಡಿದವರು. ಮೈಸೂರಿನ ಶಕ್ತಿಧಾಮದಲ್ಲಿ ನೃತ್ಯ ತರಬೇತಿ ನೀಡಿದವರು. ರಾಜ್ಯ, ರಾಷ್ಟ್ರದ ಅನೇಕ ಪ್ರಮುಖ ವೇದಿಕೆಗಳಲ್ಲಿ ಕಾರ್ಯಕ್ರಮ ನೀಡಿದವರು.

ಕಾಂಗ್ರೆಸ್ ಸರಕಾರದ ಆಯೋಜಿಸಿದ ಕಾರ್ಯಕ್ರಮಗಳಲ್ಲಿ ರೈತ ಗೀತೆಗೆ ನೃತ್ಯ ಸಂಯೋಜನೆ ಮಾಡಿದರೆ, ಬಿಜೆಪಿ ಸರಕಾರದ ಕಾರ್ಯಕ್ರಮ ಗಳಲ್ಲಿ ವಂದೇ ಮಾತರಂ ನೃತ್ಯ ಸಂಯೋಜನೆ ಕೂಡ ಮಾಡಿದ್ದರು. ಕುಮಾರಸ್ವಾಮಿ ಅವರ ಸರಕಾರ ನಡೆಸಿದ ಜಾನಪದ ಉತ್ಸವದಲ್ಲಿ ಹೆಣ್ಣು ಮಕ್ಕಳಿಂದ ಡೊಳ್ಳು ಕುಣಿತ, ಕಂಸಾಳೆಯನ್ನು ಪ್ರದರ್ಶಿಸಿ ನೃತ್ಯ ಅಷ್ಟೇ ತಮ್ಮ ವೃತ್ತಿಯೆಂದು ಬದುಕಿದವರು. ಆದರೆ, ಸಂಗೀತ ನೃತ್ಯ ಅಕಾಡೆಮಿಯ ಅಧ್ಯಕ್ಷರಾಗಿ ಸರಕಾರ ಘೋಷಣೆ ಮಾಡಿದ ಕ್ಷಣದಿಂದ ಅವರ ಆತ್ಮವಿಶ್ವಾಸ ಕುಸಿಯುವಂತೆ ಮಾಡುವ ಪ್ರಯತ್ನ ಮಾಡಲಾಯಿತು.

ಅಕಾಡೆಮಿಯೊಂದಕ್ಕೆ ಅಧ್ಯಕ್ಷರಾಗಿ ನಿಯೋಜಿತರಾಗಿದ್ದ ವ್ಯಕ್ತಿ ಪದೇ ಪದೇ ಕಾಲ್ ಮಾಡಿ ರಾಜಿನಾಮೆ ಕೊಡೋದು ಒಳ್ಳೇದು ಎಂದು ಮತ್ತೊಂದು ದಿನ ಏನು ತೀರ್ಮಾನ ಕೈಗೊಂಡಿರಿ ಎಂದು ಕೇಳುತ್ತಲೇ ಇದ್ದರು. ಅವರ ವಿಶೇಷ ಆಸಕ್ತಿ ಬಗ್ಗೆ ಕುತೂಹಲ ಮೂಡಿತ್ತು. ಕೊನೆಗೂ ಕೃಪಾ ಫಡ್ಕೆಯ ವರು ಎಚ್ಚರಿಕೆ ನೀಡಿದ ನಂತರ ಕರೆ ಮಾಡುವುದನ್ನು ನಿಲ್ಲಿಸಿ ದರು. ಮೈಸೂರಿನ ಆಂಗ್ಲ ಪತ್ರಿಕೆಯ ವರದಿಗಾರ ಒಬ್ಬ ಯಾರೋ ಎಲ್ಲೋ ಹೇಳಿದ್ದನ್ನು ಕೇಳಿಸಿಕೊಂಡು ವರದಿ ಬರೆ ದ. ಬೆಂಗಳೂರಿನ ಕನ್ನಡ ಪತ್ರಿಕೆಯಲ್ಲಿ ಕೆಲಸ ಮಾಡುವ ಒಬ್ಬ ಈ ವಿಷಯದಲ್ಲೇ ವರದಿ ಬರೆದು ಅದಕ್ಕೆ ತನ್ನ ಹೆಸರನ್ನು ಹಾಕಿಸಿ ವಿಶೇಷ ವರದಿ ಎಂದು ಬರೆದು ಪ್ರಕಟಿಸಿ ಕಲೆಯ ವಿರುದ್ಧ ಸಮರಕ್ಕೆ ಇಳಿದ ಗುಂಪಿನ ವಕಾಲತ್ತು ವಹಿಸಿದರು.

ಪತ್ರಿಕೆಯ ಆಡಳಿತ ಮಂಡಳಿಯ ಒಬ್ಬರು ಅವರಿಗೆ ಎಚ್ಚರಿಕೆ ನೀಡಿದರು. ಮರು ದಿನವೇ ಕೃಪಾ ಫಡ್ಕೆಯ ವರಿಗೆ ಕಾಲ್ ಮಾಡಿ ಹಾಗಲ್ಲ ಹೀಗಲ್ಲ... ಎಂದು ಸಮಜಾಯಿಷಿ ನೀಡಿ ತಡವರಿಸಿ ದರು. ಇನ್ನೋರ್ವ ಅಂಕಣಕೋರ ಲೇಖನ ಬರೆದು, ಕೃಪಾ ಫಡ್ಕೆ ಅಷ್ಟೇನೂ ಕಲಾವಿದರೇ ಅಲ್ಲ ಎಂದು ವಾಂತಿ ಮಾಡಿಕೊಂಡಂತೆ ಬರೆ ದರು. ಅಸೂಯೆ, ಹತಾಶೆಯಿಂದ ಪತ್ರಿಕೆ ಗಳಲ್ಲಿ ಕೃಪಾ ವಿರುದ್ಧ ಕೆಲವು ಭರತ ನಾಟ್ಯ ಕಲಾವಿದರು ಬರೆಸಿದರು. ಆಪ್ತರಂತೆ ನಟಿಸಿ ದವರು ಮೂಗರ್ಜಿ ಬರೆದರು. ಎಲ್ಲ ಪತ್ರಿಕೆಗಳಲ್ಲಿ ಕೃಪಾ ಅವರಿಗೂ ಮಿತ್ರರಿದ್ದಾರೆ ಎಂಬ ಸಾಮಾನ್ಯ ಅರಿವು ಆ ವ್ಯಕ್ತಿಗಳಿಗೆ ಇರಲಿಲ್ಲ!

ಹುದ್ದೆ ತಪ್ಪಿಸಲು ಬಿರುಸಿನಿಂದ ಪ್ರಯತ್ನ ನಡೆಯುತ್ತಿದ್ದ ಹೊತ್ತಿನಲ್ಲಿ ಡಾ.ಕೃಪಾ ಫಡ್ಕೆಯವರು ಹೇಳುತ್ತಿದ್ದ ಮಾತು ಒಂದೇ-'ನಾನಾಗಿ ಕೇಳಿಕೊಂಡು ಹೋಗಿಲ್ಲ, ಸರಕಾರ ತಾನಾಗಿಯೇ ಆಯ್ಕೆ ಮಾಡಿದೆ, ಅವರಾಗಿಯೇ ಬದಲಾವಣೆ ಮಾಡಿದರೂ ಎಳ್ಳಷ್ಟು ದುಃಖ ಇರದು. ಆದರೆ ವರದಿ ಪ್ರಕಟಿಸಿ, ಮೂಗರ್ಜಿ ಬರೆದು ಹೆದರಿಸಿದರೆ ಖಂಡಿತವಾಗಿ ರಾಜೀನಾಮೆ ನೀಡಲಾರೆ'. ಕೃಪಾ ಫಡ್ಕೆಯವರು ಹೆದರಲಿಲ್ಲ, ಹೆದರುವವರೂ ಅಲ್ಲ, ಅವರು ಹೆದರದಂತೆ, ಅವರ ರಕ್ಷಣೆಗೆ ನಾನು ಮತ್ತು ನನ್ನ ಕುಟುಂಬವಂತೂ ಸದಾ ನಿಂತಿದೆ.

ಒಂದರ್ಥದಲ್ಲಿ ಡಾ.ಕೃಪಾ ಫಡ್ಕೆಯವರು ಈಗ ನಿಜಕ್ಕೂ ನಿರಾಳಭಾವವನ್ನು ಈಗ ಅನುಭವಿಸುತ್ತಿರುವುದು ಅಭಿಮಾನಿಗಳಾದ, ಬಂಧುಗಳಾದ ನಮಗೆ ಖುಷಿ. ಕಳೆದ ಎರಡು ತಿಂಗಳಿಂದ ಒಂದು ಅತಂತ್ರಭಾವ ಅವರಲ್ಲಿ ಇತ್ತು. ಅದಕ್ಕೊಂದು ಮುಕ್ತಾಯ ಸಿಕ್ಕಿದೆ. ಒಬ್ಬ ವ್ಯಕ್ತಿಗೆ ಅಧಿಕಾರ, ಗೌರವ ಬಂದಾಗ ಸುತ್ತಲಿನ ಜನರ ವರ್ತನೆಗಳು ಬದಲಾಗುತ್ತವೆ ಅನ್ನುವುದು ಈ ಹೊತ್ತಿನಲ್ಲಿ ಸತ್ಯವಾಗಿ ತಿಳಿಯಿತು. ಸರಕಾರದಲ್ಲಿ ಇರುವವರು ಕಲೆ, ಸಾಹಿತ್ಯ, ಕ್ರೀಡೆ ಮೊದಲಾದ ವಿಷಯಗಳಲ್ಲಿ ರಾಜಕಾರಣ ತೂರಬಾರದು. ಉನ್ನತ ಹುದ್ದೆಗಳಲ್ಲಿ ಇರುವವರು ಹಿತ್ತಾಳೆ ಕಿವಿ ಆಗಬಾರದು.

ಈ ರಾಜ್ಯದಲ್ಲಿ ವಿಚಿತ್ರ ಪರಿಸ್ಥಿತಿಯೆಂದರೆ ಕಾಂಗ್ರೆಸ್ , ಜನತಾದಳ, ಬಿಜೆಪಿ ಸರಕಾರ ಇರುವಾಗ ಅವರ ಆಪ್ತರಂತೆ ವರ್ತಿಸಿ ವೇದಿಕೆಗಳಲ್ಲಿ ಓಡಾಡುವವರು ಹುದ್ದೆ ಅಲಂಕರಿಸುತ್ತಾರೆ. ಅವರಿಗೆ ಯಾವುದೇ ಹಣೆಪಟ್ಟಿ ಇರುವುದಿಲ್ಲ. ಅದರೆ, ಕೃಪಾ ಫಡ್ಕೆ ಸಂಘ ಪರಿವಾರದವರು ಎಂದು ಕೆಲವರು ಹಣೆಪಟ್ಟಿ ಕಟ್ಟಿದರು. ಕೃಪಾ ಫಡ್ಕೆಯವರು ಕಾಂಗ್ರೆಸ್ ಸರಕಾರದಲ್ಲಿ ಹುದ್ದೆ ಅಲಂಕರಿಸುತ್ತಿದ್ದಾರೆ ಎಂದು ಸಂಘ ಪರಿವಾರದವರು ಹುಬ್ಬೇರಿಸಿದರು.

ಕಲಾಸೇವೆಯೇ ಮುಖ್ಯ ಎಂದು ಭಾವಿಸಿದ್ದ ಕೃಪಾ ಫಡ್ಕೆಯವರು ಈ ಎರಡರ ಮಧ್ಯೆ ಸಿಲುಕಿ ಅವರ ಮನಸ್ಸು ಕಿರಿಕಿರಿ ಆಗಿದ್ದಂತೂ ನಿಜ. ಪತ್ರಿಕೋದ್ಯಮ, ಶಿಕ್ಷಣ, ಕಲೆ, ಸಾಹಿತ್ಯ ಕ್ಷೇತ್ರಗಳಲ್ಲಿ ಕೆಲಸ ಮಾಡುವವರನ್ನು ಯಾವುದೇ ಪಂಥ, ಧರ್ಮದ, ಗುಂಪಿನ ಚೌಕಟ್ಟಿನಲ್ಲಿ ನೋಡುವುದು ಉತ್ತಮ ಸಮಾಜದ ಬೆಳವಣಿಗೆಗೆ ಮಾರಕ. ಅದರಲ್ಲೂ ಕಲಾವಿದರನ್ನು ಹೀಗೆ ನೋಡುವುದು ಕ್ಷುಲ್ಲಕ. ಈ ಲೇಖನದಲ್ಲಿನ ಮಾತು ಎಲ್ಲಾ ಪಕ್ಷಗಳಿಗೂ ಅನ್ವಯವಾಗುತ್ತದೆ. ಅವರ ನೇಮಕದ ಆದೇಶ ಹೊರಬಿದ್ದಾಗ, ಕೃಪಾ ಅಕ್ಕಾ... ಎಂದು ಸದಾ ಕರೆಯುತ್ತಿದ್ದವರು ಹಸಿ ಮೆಣಸು ತಿಂದವರಂತೆ ಕೊರಗಿದರು. ನೂರಾರು ಜನರು ಅಭಿನಂದನೆಗಳನ್ನು ಸಲ್ಲಿಸಿದರೆ, ಕೆಲವು ಸ್ನೇಹಿತರು, ಹಿರಿಯರು ಅಂದುಕೊಂಡಿದ್ದ ವರ ವ್ಯತಿರಿಕ್ತ ವರ್ತನೆ ಅಚ್ಚರಿಯನ್ನೂ ಮೂಡಿಸಿತು. ಅವರನ್ನು ಹಲವಾರು ವರ್ಷಗಳಿಂದ ಹತ್ತಿರದಿಂದ ನೋಡಿದವರು, ಅಪಪ್ರಚಾರದಲ್ಲಿ ತೊಡಗಿದವರಿಗೆ ಮಾಹಿತಿದಾರರಾಗಿ ವರ್ತಿಸಿದ್ದೂ ಇದೆ!

ಕಳೆದ ಮೂರು ದಶಕಗಳಲ್ಲಿ ಸಾವಿರಾರು ವಿದ್ಯಾರ್ಥಿಗಳು ನೃತ್ಯಗಿರಿಯಿಂದ ನೃತ್ಯ ಕಲಿತು, ಅವರ ಪೈಕಿ ಹಲವು ವಿದ್ಯಾರ್ಥಿಗಳು ತಮ್ಮದೇ ನೃತ್ಯ ಶಾಲೆಗಳನ್ನು ನಡೆಸುತ್ತಿದ್ದಾರೆ ನೃತ್ಯಗಿರಿಯ ವೇದಿಕೆಯಲ್ಲಿ ನೂರಾರು ಕಲಾವಿದರು ಹಾಡಿ ನರ್ತಿಸಿ ಹೋಗಿದ್ದಾರೆ. ನೂರಾರು ಮಕ್ಕಳಿಗೆ ನೃತ್ಯ ಕಲಿಸಿದ ಆತ್ಮ ತೃಪ್ತಿ ಅವರಿಗೆ ಇದೆ. ಹಣಕಾಸು ಮುಗ್ಗಟ್ಟು ಇದ್ದ ಪೋಷಕರ ಮಕ್ಕಳಿಗೆ ಉಚಿತವಾಗಿ ಕಲಿಸಿದ ಹೆಮ್ಮೆ ಅವರಿಗಿದೆ. ಕಲೆ ಅವರಿಗೆ ಯಾವತ್ತೂ ವ್ಯಾಪಾರವಾಗಿಲ್ಲ, ಅನ್ನ ಕೊಟ್ಟ ದಾರಿಯಾಗಿದೆ.

ಅವರ ಕೈಯಲ್ಲಿ ಗುರುಗಳು ನೀಡಿದ ವಿದ್ಯೆಯಿದೆ. ಬದುಕಲು ನಿಷ್ಠೆ ಪ್ರಾಮಾಣಿಕತೆ ಇದೆ, ನೋವಾದಾಗ ಸಂತೈಸಲು ಅತ್ಯಂತ ಸುಸಂಸ್ಕೃತ ಕುಟುಂಬವಿದೆ. ಇನ್ನು ಮುಂದೆಯೂ ನೃತ್ಯಗಿರಿಯಲ್ಲಿ ನಟುವಾಂಗದ ಸದ್ದು ಅವರ ಉಸಿರಿರುವ ತನಕ ಕೇಳುತ್ತದೆ. ಅನಂತರ ಅದನ್ನು ಮುಂದುವರಿಸಲು ಅವರ ಪುತ್ರಿಯೂ ಭರತನಾಟ್ಯ ಕಲಾವಿದೆಯಾಗಿ ಸಮರ್ಥಳಿದ್ದಾಳೆ.

ಓದುಗರ ಒಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಖಾತೆಗೆ ನ್ಯಾಯಕೊಡಿ!

ಕರ್ನಾಟಕದಿಂದ ಆಯ್ಕೆಗೊಂಡಿರುವ ಕೇಂದ್ರ ಸಚಿವರಿಂದ ಕಾರ್ಯಭಾರ ಶುರು ಎಂಬ ಸುದ್ದಿ ನಿಜಕ್ಕೂ ಸಂತೋಷಜನಕ. ಈಗಾಗಲೇ ಸಂಬಂಧಪಟ್ಟ ಅಧಿಕಾರಿಗಳೊಡನೆ ಸಭೆ, ಚರ್ಚೆ, ವಿಷಯ ಸಂಗ್ರಹ ಇತ್ಯಾದಿ ನಡೆದಿದ್ದೂ ಒಳ್ಳೆಯ ಬೆಳವಣಿಗೆ.

ಆದರೆ, ನಮ್ಮ ಪ್ರತಿನಿಧಿಗಳಲ್ಲಿ ಕೇಳಿಕೊಳ್ಳುವುದಿಷ್ಟೇ. ಪೂಜೆ, ಹೋಮ, ಹವನ, ವಾಸ್ತು ಎಂದೆಲ್ಲ ಕಾಲ ಹರಣ ಮಾಡಬೇಡಿ. ನಿಮ್ಮ ಕೆಲಸವೇ ಪೂಜೆ, ಅದೇ ವಾಸ್ತು!

ಸಾಮಾನ್ಯವಾಗಿ ಯಾರೇ ಹೊಸಬರು, ಅದರಲ್ಲೂ ವಿಶೇಷವಾಗಿ ಮೊದಲ ಬಾರಿಗೆ ಅಧಿಕಾರ ಪಡೆದು, ತಮ್ಮ ಕಚೇರಿ ಪ್ರವೇಶಿಸುವವರಿಗೆ ಹಲವು ಕನಸುಗಳು ಇರುತ್ತವೆ. ಅವುಗಳನ್ನು ಸಾಕಾರಗೊಳಿಸುವಲ್ಲಿ ಸಾಕಷ್ಟು ಶ್ರಮವನ್ನೂ ವಹಿಸುತ್ತಾರೆ. ಆದರೂ ಕೆಲವೊಮ್ಮೆ, ಕೆಲವರು ತಮಗೆ ಸಿಕ್ಕ ಅಧಿಕಾರದ ದರ್ಪದಿಂದಲೋ, ಇದೊಂದು ಅವಕಾಶ ಅಂತಲೋ, ತಮ್ಮ ಕಚೇರಿಯ ನವೀಕರಣ, ಹೊಸ ಹೊಸ ಉಪಕರಣಗಳ ಹೆಸರಿನಲ್ಲಿ ಸರಕಾರದ ಬೊಕ್ಕಸಕ್ಕೆ ಕನ್ನ ಹಾಕುವವರೂ ಇದ್ದಾರೆ. ಹೊಸ ವಾಹನದ ಬೇಡಿಕೆಯೂ ಸೇರುತ್ತದೆ. ಏನೋ ಇರುವಷ್ಟು ಕಾಲ ಮಜಾ ಮಾಡಿ ಹೋಗುವಾ ಅನ್ನುವವರೂ ಇದ್ದಾರೆ.

ಹೀಗಾಗಿ, ನಮ್ಮ ರಾಜ್ಯದ ಕೇಂದ್ರ ಸಚಿವರಲ್ಲಿ ಕಳಕಳಿಯ ಪ್ರಾರ್ಥನೆ ಅಂದರೆ, ಇವಾವುದಕ್ಕೂ ಅವಕಾಶ ಕೊಡದೇ, ನಿಮಗೆ ವಹಿಸಿದ ಜವಾಬ್ದಾರಿಯನ್ನು ಪ್ರಾಮಾಣಿಕವಾಗಿ, ಆಸಕ್ತಿಯಿಂದ ಮಾಡಿ. ಇದರಿಂದ ಕೇವಲ ನಿಮಗಷ್ಟೇ ಅಲ್ಲ ನಿಮ್ಮನ್ನು ಆರಿಸಿ ಕಳುಹಿಸಿದ ನಮಗೂ ಸಮಾಧಾನ ಮತ್ತು ಸಾರ್ಥಕತೆ ಸಿಕ್ಕೀತು. ಕೇಂದ್ರ ಸಚಿವರಾದವರಲ್ಲಿ ಕುಮಾರಸ್ವಾಮಿ ಮತ್ತು ಸೋಮಣ್ಣ ಅವರು ರಾಜ್ಯದಲ್ಲಿ ಹಲವು ಇಲಾಖೆಗಳನ್ನು ನಿಭಾಯಿಸಿದ ಅನುಭವ ಇದ್ದರೂ, ಕೇಂದ್ರದ ಕೆಲಸಗಳ ವೈಖರಿಯೇ ಭಿನ್ನವಾಗಿದ್ದು, ಪೂರಾ ದೇಶದ ಮಾಹಿತಿ ಪಡೆಯುವುದೂ ಆವಶ್ಯಕ. ಒಬ್ಬ ಉತ್ತಮ ರಾಜ್ಯದ ಮುಖ್ಯಮಂತ್ರಿ ಆದವ, ಕೇಂದ್ರದ ಸಚಿವ ಸ್ಥಾನವನ್ನು ಏನೂ ತೊಂದರೆ ಇಲ್ಲದೇ ತೂಗಿಸಿಕೊಂಡು ಹೋಗಬಲ್ಲ ಎನ್ನಲಾಗದು. ಇವೆರಡೂ ತೀರ ಭಿನ್ನ ಜವಾಬ್ದಾರಿ. ಇಲ್ಲಿ ಇನ್ನೊಂದು ಸಮಸ್ಯೆ ಅಂದರೆ ಭಾಷೆ. ಇದು ಅನೇಕ ಅಡಚಣೆ ತಂದೊಡ್ಡುತ್ತದೆ. ದೇಶದ ಉದ್ದಗಲಗಳಲ್ಲಿ ಅದೆಷ್ಟು ಭಾಷೆಗಳಿವೆ, ಅದೆಷ್ಟು ಸಂಪ್ರದಾಯ, ವ್ಯವಹಾರ ನೀತಿಗಳಿವೆ ಎಂಬ ಸಂಪೂರ್ಣ ಅರಿವಿನ ಅವಶ್ಯಕತೆಯೂ ಇದೆ. ಸಹಾಯಕ್ಕೆ ಅಧಿಕಾರಿಗಳೇನೋ ಇರುತ್ತಾರೆ. ಆದರೆ ಸಂಪೂರ್ಣ ಅವರನ್ನೇ ನಂಬಿ ಕಾರ್ಯ ನಿರ್ವಹಣೆ ಮಾಡುವುದೂ ಅಷ್ಟು ಉಚಿತವಾಗಲಾರದು. ಅವೆಲ್ಲವನ್ನೂ ಅರಿತು ವ್ಯವಹರಿಸುವಂತಾಗಿ, ಕೊಟ್ಟ ಖಾತೆಗೆ ನ್ಯಾಯ ದೊರಕುವಂತಾಗಲಿ ಎಂಬುದೇ ನಮ್ಮೆಲ್ಲರ ಮನದಾಸೆ!

-ಶಂಕರನಾರಾಯಣ ಭಟ್ ಮಾಡಗೇರಿ, ಹೊನ್ನಾವರ

ಮೌಲ್ಯ ಮರೆತ ಪರೀಕ್ಷಾ ವ್ಯವಸ್ಥೆ!

ಶೈಕ್ಷಣಿಕ ವ್ಯವಸ್ಥೆಯಲ್ಲಿ ಪರೀಕ್ಷೆ ಎಂಬುದು ಅತ್ಯಂತ ಮಹತ್ವದ ಪಾತ್ರವನ್ನು ವಹಿಸುತ್ತದೆ. ತಮ್ಮ ಕನಸಿನ ಉನ್ನತ ಶಿಕ್ಷಣವಾಗಲಿ, ಉದ್ಯೋಗವಾಗಲಿ ಪಡೆಯಲು ವಿದ್ಯಾರ್ಥಿಗಳಿಗೆ ಪರೀಕ್ಷೆ ಒಂದು ಸಾಧನವಾಗಿದೆ. ಭಾರತದಲ್ಲಿ ವಿವಿಧ ರಾಜ್ಯ ಸರಕಾರಗಳು, ಕೇಂದ್ರ ಸರಕಾರಗಳು ತಮ್ಮದೇ ಆದ ಪರೀಕ್ಷಾ ಮಂಡಳಿ, ಏಜೆನ್ಸಿಗಳನ್ನು ಹೊಂದಿದೆ. ಆದರೆ ಕಳೆದ ಹಲವು ವರ್ಷಗಳನ್ನು ಗಮನಿಸುವುದಾದರೆ ಪರೀಕ್ಷಾ ಅಕ್ರಮಗಳಿಂದ ವಿವಿಧ ಪರೀಕ್ಷಾ ಮಂಡಳಿಗಳು ಸುದ್ದಿಯಲ್ಲಿವೆ. ನಮ್ಮ ಕರ್ನಾಟಕದ ಕೆಪಿಎಸ್‌ಸಿಯನ್ನೇ ನೋಡುವುದಾದರೆ ಸದಾ ಒಂದಿಲ್ಲೊಂದು ಪರೀಕ್ಷಾ ಅಕ್ರಮದ ವಿಷಯಕ್ಕೆ ಸುದ್ದಿಯಲ್ಲಿರುತ್ತದೆ. ಇದರಿಂದ ಬೆಸತ್ತ ಅಭ್ಯರ್ಥಿಗಳ ರೋಧನೆ ನಾವು ಕೇಳಿದ್ದೇವೆ.

ಇದೇ ದಾರಿಯನ್ನು ಕೇಂದ್ರದ ಎನ್ ಟಿ ಎ ಯಂತಹ ಪರೀಕ್ಷಾ ಪ್ರಾಧಿಕಾರವು ಪಾಲಿಸುತ್ತಿದೆ ಎಂದಾದರೆ ಮಕ್ಕಳು, ಪಾಲಕರು, ಉದ್ಯೋಗಾರ್ಥಿಗಳ ಮನಸ್ಸಿನಲ್ಲಿ ಭಾರತದ ಪರೀಕ್ಷಾ ವ್ಯವಸ್ಥೆಯ ಬಗ್ಗೆ ವಿಶ್ವಾಸ ಇರಲು ಸಾಧ್ಯವೇ? ಪರೀಕ್ಷೆಯಲ್ಲಿ ಕಡಿಮೆ ಫಲಿತಾಂಶದ ಬಂತು ಎಂಬ ಕಾರಣಕ್ಕೆ ಆತ್ಮಹತ್ಯೆ ಮಾಡಿಕೊಳ್ಳುವ ವಿದ್ಯಾರ್ಥಿಗಳ ಮನಸ್ಥಿತಿಯನ್ನು ಅರ್ಥ ಮಾಡಿಕೊಳ್ಳದೇ, ತಪ್ಪಿನ ಮೇಲೆ ತಪ್ಪು ಮಾಡುತ್ತಾ ಸಂಪೂರ್ಣ ಪರೀಕ್ಷಾ ವ್ಯವಸ್ಥೆಯನ್ನೇ ಹಾಳು ಮಾಡಿ ಮಕ್ಕಳ ಭವಿಷ್ಯದ ಜೊತೆ ಚೆಲ್ಲಾಟವಾಡುವುದು ಸರಿಯಲ್ಲ. ಬಹುಶಃ ಈ ಪರಿಸ್ಥಿತಿಯನ್ನು ಗಮನಿಸಿಯೇ ಇರಬೇಕು, ಬಹುತೇಕ ಮಕ್ಕಳು, ಉದ್ಯೋಗಾರ್ಥಿಗಳು ವಿದೇಶಕ್ಕೆ ಹೋಗಿ ನೆಲೆಸಲು ಇಷ್ಟಪಡುತ್ತಿರುವುದು. ಇದೆಲ್ಲಾ ಗಮನಸಿದಾಗ ಭಾರತದ ಪರೀಕ್ಷಾ ವ್ಯವಸ್ಥೆ ಮೌಲ್ಯ ಕಳೆದುಕೊಂಡಿತೇ ಎಂಬ ಶಂಕೆ ಬರುತ್ತದೆ.

-ಸುರೇಂದ್ರ ಪೈ ಭಟ್ಕಳ

ಜಯ ಕಂಡ ಈಶ್ವರಪ್ಪ

ಲೋಕಸಭಾ ಚುನಾವಣೆಯಲ್ಲಿ ತನ್ನದೇ ಮಾತೃಪಕ್ಷದ ಅಭ್ಯರ್ಥಿಗೆ ಸೆಡ್ಡು ಹೊಡೆದು ಜಯ ತನಗೆ ಶತಃಸಿದ್ಧ ಎಂದು ತೋಳು ತಟ್ಟಿ ಸ್ಪರ್ಧಿಸಿದ ಈಶ್ವರಪ್ಪ ಠೇವಣಿಯನ್ನೂ ಕಳೆದು ಕೊಂಡಿದ್ದು ಅನಿರೀಕ್ಷಿತವಲ್ಲ. ಇದನ್ನು ಮೊದಲೇ ತಿಳಿದಿದ್ದ ಈಶ್ವರಪ್ಪನವರು ಸ್ಪರ್ಧಿಸಿ ಸೋತರೂ ಸೈದ್ಧಾಂತಿಕ ನಿಲುವನ್ನು ಸ್ಪಷ್ಟಪಡಿಸಿ ಕರ್ನಾಟಕದಲ್ಲಿ ವಂಶಾಡಳಿತದ ಬಗ್ಗೆ ಹೈಕಮಾಂಡಿಗೆ ಸಂದೇಶ ರವಾನಿಸುವಲ್ಲಿ ಅಪೂರ್ವ ಸಾಧನೆ ಮಾಡಿದ್ದಾರೆ. ಅತ್ಯಂತ ಪ್ರಭಾವಿ ನಾಯಕ ಪ್ರತಾಪ ಸಿಂಹ, ಸಿ.ಟಿ.ರವಿ ಅನಂತಕುಮಾರ ಹೆಗ್ಡೆ, ಸಿಂಹ ಘರ್ಜನೆಯ ಯತ್ನಾಳ್ ಅವರ ಅವಗಣನೆಯಲ್ಲಿನ ರಹಸ್ಯ ಬಯಲು ಮಾಡಿ ಮಾಡಿ ಸೂಕ್ತ ಕ್ರಮ ಕೈಗೊಂಡಿದ್ದಾರೆ ಎಂದು ಅನೇಕರು ಸಂಭ್ರಮಿಸಿದ್ದಾರೆ. ಕೆಲವು ಪಕ್ಷಗಳಲ್ಲಿ ಈಶ್ವರಪ್ಪನಂತಹ ಧೀಮಂತ ನಾಯಕರಿಲ್ಲದಿರುವುದರಿಂದ ವಂಶಾಡಿತದ ಪ್ರಭಾವಕ್ಕೆ ಸಿಲುಕಿ ದಿನದಿಂದ ದಿನಕ್ಕೆ ಅವು ಕುಂದುತ್ತಿವೆ.

ಈಶ್ವರಪ್ಪ ಅವರ ಬಂಡಾಯದ ಹಿಂದಿನ ಮರ್ಮ ಗುರುತಿಸಿ ಅವರನ್ನು ಪಕ್ಷವಿರೋಧಿ ಎಂದು ಪರಿಗಣಿಸದೆ ಪಕ್ಷ ಹಿತೈಷಿ ನಿಷ್ಠಾವಂತ ನಾಯಕ ಎಂದು ಪರಿಗಣಿಸಿ ಹೈಕಮಾಂಡ್ ಅವರಿಗೆ ಸೂಕ್ತ ಸ್ಥಾನಮಾನ ಕಲ್ಪಿಸಲು ಮುಂದಾಗಲಿ.

-ಸತ್ಯಬೋಧ ಬೆಂಗಳೂರು

545 ಎಸ್‌ಐ ರಿಸಲ್ಟ್ ಯಾವಾಗ?

ಐದು ತಿಂಗಳಿನಿಂದ ಎಸ್‌ಐ ಹುದ್ದೆಗಳ ನೇಮಕಾತಿಗೆ ಹಿಡಿದಿರುವ ಗ್ರಹಣ ಇನ್ನು ಬಿಡುತ್ತಿಲ್ಲ. ಫಲಿತಾಂಶಕ್ಕಾಗಿ ಕಾದು ಕಾದು ಸುಸ್ತಾಗಿರುವ ನೂರಾರು ಅಭ್ಯರ್ಥಿಗಳು ಆಯ್ಕೆ ಪಟ್ಟಿ ಪ್ರಕಟಗೊಳ್ಳದ ಕಾರಣ ಮಾನಸಿಕವಾಗಿ ಕುಗ್ಗಿ ಹೋಗಿದ್ದಾರೆ. ರಾಜ್ಯ ಸರಕಾರವನ್ನೇ ನಡುಗಿಸಿದ್ದ ಪಿಎಸ್‌ಐ ಹಗರಣದ ತನಿಖೆ ನಡೆದು ಅಂತಿಮವಾಗಿ ಹೈಕೋರ್ಟ್ ಆದೇಶದಂತೆ ಜನವರಿಯಲ್ಲಿ ಮರುಪರೀಕ್ಷೆ ನಡೆದಿತ್ತು, ಆದರೆ ಪರೀಕ್ಷೆ ನಡೆದ್ದು ಐದು ತಿಂಗಳ ಕಳೆದರೂ ಫಲಿತಾಂಶಕ್ಕಾಗಿ ರಾಜ್ಯ ಸರಕಾರದ ಪ್ರತಿಕ್ರಿಯಸದೆ ಇರುವುದು ಅಭ್ಯರ್ಥಿಗಳಲ್ಲಿ ಅಸಮಾಧನವನ್ನು ಉಂಟು ಮಾಡಿದೆ. ಅದಷ್ಟೇ ಅಲ್ಲದೆ ಅದೇಷ್ಟೋ ಅಭ್ಯರ್ಥಿಗಳ ಕನಸಾಗಿರುವ ಈ ಪರೀಕ್ಷೆಯ ಫಲಿತಾಂಶಕ್ಕಾಗಿ ಹಗಲು ರಾತ್ರಿ ಕಾಯುತ್ತಿದ್ದಾರೆ. ಆದರೆ ಅವರ ಕನಸಿನ ಅಂತಿಮ ಫಲಿತಾಂಶ ಯಾವಗ ಎನ್ನುವುದು ಅವರಲ್ಲಿ ಪ್ರಶ್ನೆಯಾಗಿ ಉಳಿಯುತ್ತದೆ ಎಂಬ ಆತಂಕ ಅವರಲ್ಲಿ ಮೂಡಿದೆ. ಸರಕಾರ ಆದಷ್ಟು ಬೇಗ ಇದರ ಕಡೆ ಗಮನಹರಿಸಿ ಸಾವಿರಾರು ವಿದ್ಯಾರ್ಥಿಗಳ ಭವಿಷ್ಯವನ್ನು ರೂಪಿಸುವಲ್ಲಿ ಕ್ರಮ ಕೈಗೊಳ್ಳಬೇಕಾಗಿದೆ.

-ದೀಕ್ಷಾ ಮುಚ್ಚಂಡಿ ಮಹಿಳಾ ವಿವಿ ವಿಜಯಪುರ

ಓದುಗರ ಒಣಿಗೆ ಭೇಟಿ ಕೊಡಿ
ನಿಮ್ಮ ಅಭಿಪ್ರಾಯಗಳನ್ನು
vveditoped@gmail.comಗೆ ಮೇಲ್
ಮಾಡಬಹುದು ಅಥವಾ ಕಚೇರಿಯ ವಿಳಾಸಕ್ಕೆ
ಕಳುಹಿಸಬಹುದು

ಭಟ್ಟರ್ ಸ್ಕಾಚ್

● **ಭೀಮರಾವ್ ಮನಗೂಳಿ, ಬಸವನಗುಡಿ**
ಉಸ್ಸಪ್ಪಾ, ಸಾಕಿನ್ನು ಬದುಕು ಎಂಬ ಭಾವನೆ ಮನಸ್ಸಿಗೆ ಬರಲು ಉಪಾಯ ಏನಾದರೂ ಇದೆಯಾ, ಭಟ್ರೇ?
- ಎರಡು ದಿನ ದರ್ಶನ್ ಜತೆಗೆ ಇದ್ದು ನೋಡಬೇಕಿತ್ತು!

● **ರಮೇಶ ಗೌಡ, ಮಳವಳ್ಳಿ**
ಭಟ್ರೇ, ಕುಮಾರಣ್ಣನ ಸ್ವಾಗತಕ್ಕೆ ದೊಡ್ಡ ಸೇಬಿನ ಹಾರವನ್ನೇ ಹಾಕಿದರಲ್ಲ?
- ಉಕ್ಕು ಮಂತ್ರಿ ಅಂತ ಸರಪಣಿ ಹಾಕೋಕಾಗುತ್ಯೇ?!

● **ವಿಶ್ವನಾಥ ಹೆಗಡೆ, ಶಿರಸಿ**
ಭಟ್ರೇ, ಪೊಲೀಸರಿಗೆ ದೂರು ನೀಡಿದ್ದರೆ ರೇಣುಕಾಸ್ವಾಮಿಯನ್ನು ಕೊಲೆ ಮಾಡುವ ಅಗತ್ಯವೇ ಬರುತ್ತಿರಲಿಲ್ಲವಲ್ಲ?
- ಪವಿತ್ರಾ ಗೌಡನ ಮುಂದೆ ನೀನು ಹೀರೋ ಆಗ್ತಾ ಇದ್ದೆಯಾ?!

● **ಶಂಕರ್ ಬಿ., ಪುಟ್ಟೇನಹಳ್ಳಿ**
ಭಟ್ರೇ, ನಾನೂ ಪವಿತ್ರಾ ಗೌಡಳಿಗೆ ಒಂದು ಅಶ್ಲೀಲ ಮೆಸೇಜ್ ಮಾಡಲಾ?
- ಹಾಗಾದ್ರೆ, ದರ್ಶನ ಶೆಡ್‌ನಲ್ಲಿ ಪ್ರತ್ಯಕ್ಷ!

● **ವೀರೇಶ ಪಟ್ಟಣ, ರಾಮದುರ್ಗ**
ಭಟ್ರೇ, 'ನನ್ನಂಥ ಕಚಡಾ ಯಾರೂ ಇಲ್ಲ' ಅಂತ ದರ್ಶನ್ ಹೇಳಿದ್ದಾನಲ್ಲ?
- ಅದನ್ನು ಆತ ಹೇಳಬೇಕಿರಲಿಲ್ಲ.. ಅದು ಗೊತ್ತಿರುವ ಸಂಗತಿಯೇ?!

● **ಬೆಂ.ಮು.ಮಾರುತಿ, ಬೆಂಗಳೂರು**
ಭಟ್ರೇ, ಇಲ್ಲೊಬ್ಬ 'ಡಿ' ಫಾರ್ ಡೆವಿಲ್ ಬಾಸ್ ಅಂತ ಹೇಳ್ತಿದ್ದಾನಲ್ಲ?
- ಏನೇ ಹೇಳು, 'ಡಿ' ಫಾರ್ ದರ್ಶನ್ ಅಂದ್ರೇ ಚೆಂದ!

● **ಕೃಷ್ಣ ಕುಮಾರ ಎ,. ಕೋಲಾರ**
ಭಟ್ರೇ, ಸದ್ಯ ಇಲ್ಲವೇ ಭವಿಷ್ಯದಲ್ಲಾಗಲಿ ಡೈವೋರ್ಸ್‌ಗಳನ್ನು ನಿಲ್ಲಿಸುವುದು ಸಾಧ್ಯವಿದೆಯೇ?
- ಖಂಡಿತ ಸಾಧ್ಯವಿದೆ.. ಮದುವೆಯಾಗುವುದನ್ನು ನಿಲ್ಲಿಸಿದರಾಯಿತಷ್ಟೆ!

● **ಉಮೇಶ್ ಎಂ. ಶಿರಾ, ರಾಮನಗರ**
ಭಟ್ರೇ, ರಾಜರಾಜೇಶ್ವರಿನಗರದ ವಾಸ್ತು ಸರಿ ಇಲ್ಲ ಅಂತ ಆರ್ಯವರ್ಧನ್ ಗುರೂಜಿ ಹೇಳಿದ್ದಾರಲ್ಲ?
- ಅವರ ತಲೆ ಸರಿ ಇದೆಯಾ ಅಂತ ಮೊದಲು ಕೇಳಬೇಕಿತ್ತು!

● **ಶಿವಲಿಂಗಪ್ಪ ಸಿಂಗಶೆಟ್ಟಿ, ಕಲಬುರ್ಗಿ**
ಭಟ್ರೇ, ಬೆಳಕು ಬೆಳಕಲ್ಲ.. ಅದು ದರ್ಶನ ಎಂಬ 'ಕಾಂತಾರ'ದ ಡೈಲಾಗ್ ನ್ನು ಹೇಗೆ ಮುಂದುವರಿಸುತ್ತೀರಿ?
- ಬೆಳಕು ಬೆಳಕಲ್ಲ.. ಅದು ಕೊಳಕು ದರ್ಶನ!

● **ನಾಗೇಶ ಕೈವಾರ, ಕೈವಾರ**
ಭಟ್ರೇ, ಪ್ರಜ್ವಲ್, ನಿವೇದಿತಾ ಗೌಡ, ಪವಿತ್ರಾ ಗೌಡ ಮತ್ತು ದರ್ಶನ್ ಅವರನ್ನು ಹಾಕಿ ವಿಡಿಯೋ ಮಾಡಿದರೆ ಯಾವ ಹಾಡು ಹಾಕಲಿ?
-'ಈ ಭೂಮಿಗೆ ಶಿವ ನೀಡಿದ ವರವೋ'!

ಅಭ್ಯಂಗ ಮಾಡಿ ಕೋವಿಡ್‌ನಿಂದ ಬಚಾವಾದೆ!

ಸ್ವಾಸ್ಥ್ಯವೆಂಬ ಸ್ವಾತಂತ್ರ್ಯ

ಡಾ.ಸಾಧನಶ್ರೀ

vveditoped@gmail.com

ಕೋವಿಡ್ ಸಮಯದಲ್ಲಿ ನಡೆದ ಒಂದು ಘಟನೆಯನ್ನು ನಿಮ್ಮ ಜೊತೆ ಹಂಚಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ. ಆಯುರ್ವೇದ ವೈದ್ಯೆಯಾದ ನಾನು ಸುಮಾರು ಒಂದು ವರ್ಷದ ನನ್ನ ಮಗು ಹಾಗೂ ಪತಿಯ ಜತೆ ಲಾಕ್‌ಡೌನ್‌ನಲ್ಲಿ ಇದ್ದಂತಹ ಸಮಯ. ಆಯುರ್ವೇದ ವೈದ್ಯೆಯಾದ ಕಾರಣ ಬಹಳ ಶಿಸ್ತಿನ ಜೀವನನಡೆಸುವ ಪ್ರಯತ್ನ ಸದಾ ಇತ್ತು. ದಿನಚರ್ಯೆಯ ಪಾಲನೆಯಂತೂ ಇದ್ದೇ ಇತ್ತು. ಬಹುಮುಖ್ಯವಾಗಿ ನಿತ್ಯವೂ 'ಅಭ್ಯಂಜನ ಸ್ನಾನ' ಮಾಡ್ತಾ ಇದ್ದೆ. ಅಂದರೆ ತಲೆ-ಮೈಗೆಲ್ಲ ಎಣ್ಣೆ ಹಚ್ಚಿ ಸ್ನಾನ ಮಾಡುವುದು. ನನ್ನ ಪುಟ್ಟ ಮಗುವಿಗೂ ಸಹ ನಿತ್ಯ ಎಣ್ಣೆ ಸ್ನಾನ ಇದ್ದೇ ಇತ್ತು. ಅವಳಿಗೆ ಕೆಲವು ಸಲ ದಿನಕ್ಕೆ ಎರಡರಿಂದ ಮೂರು ಬಾರಿ ಕೂಡ ಇತ್ತು. ಪತಿಯೂ ಸಹ ಸುಮಾರಷ್ಟು ಆಯುರ್ವೇದದ ಕ್ರಮಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡಿದ್ದರು. ಶಿಸ್ತಿನಿಂದ ಪಾಲಿಸುತ್ತಿದ್ದರು. ಆದರೆ ಕೊರೋನಾ ದಾಳಿ ಇಡುವ ಕೆಲವು ತಿಂಗಳ ಹಿಂದೆ ಕೆಲಸದ ಒತ್ತಡ ಹಾಗೂ ಸಮಯದ ಅಭಾವದಿಂದ ಅವರಿಗೆ ನಿತ್ಯ ಅಭ್ಯಂಗವನ್ನು ಮಾಡುವುದಕ್ಕೆ ಸಾಧ್ಯವಾಗಿರಲಿಲ್ಲ. ಯಾವುದೋ ಕೆಲಸದ ಮೇರೆಗೆ ಅವರು ಉತ್ತರ ಭಾರತಕ್ಕೆ ಹೋಗಿ ಬಂದ ಕೆಲವು ದಿನಗಳಲ್ಲಿಯೇ 'COVID Positive' ಅಂತ ಡಿಟೆಕ್ಟ್ ಆಯ್ತು. ಜ್ವರ, ನೆಗಡಿ, ಕೆಮ್ಮು, ತಲೆನೋವು- ಎಲ್ಲ ಲಕ್ಷಣಗಳೂ ಕಾಣಿಸಿಕೊಂಡಿತ್ತು. ನಾನು ಆಯುರ್ವೇದ ವೈದ್ಯೆ ಆಗಿದ್ದರಿಂದ ಮನೆಯಲ್ಲೇ ಚಿಕಿತ್ಸೆಯನ್ನು ಪ್ರಾರಂಭ ಮಾಡಿದೆ. ಆದರೆ ಎಲ್ಲರಿಗೂ ಆತಂಕ! ಮನೆಯಲ್ಲಿ ಒಂದು ವರ್ಷದ ಸಣ್ಣ ಮಗು ಇದೆ. ನೀನು ಇನ್ನೂ ಮಗುವಿಗೆ ಎದೆ ಹಾಲು ಕುಡಿಸ್ತಾ ಇದಿಯಾ. ಯಾಕೆ ರಿಸ್ಕ್ ತಗೊಳ್ತಿಯಾ? ಗಂಡನನ್ನು ಆಸ್ಪತ್ರೆಗೆ ಸೇರಿಸಿ 'treatmentಕೊಡಿಸೋಣ' ಅಂತ ಎಲ್ಲಾ ಕಡೆಯಿಂದ ಕಾಳಜಿಯ ಮಾತುಗಳು. ಆದರೆ ಆಯುರ್ವೇದವನ್ನು ಸಂಪೂರ್ಣ ನಂಬಿದ ನಾನು ಆಯುರ್ವೇದ ನಮ್ಮನ್ನು ಖಂಡಿತ ರಕ್ಷಿಸುತ್ತದೆ ಅನ್ನುವ ಭರವಸೆಯಿಂದ ಚಿಕಿತ್ಸೆಯನ್ನು ಮುಂದುವರಿಸಿದೆ. ಆಹಾರ-ಔಷಧಗಳನ್ನು ಕ್ರಮಬದ್ಧವಾಗಿ ನೀಡುವುದಕ್ಕೆ ಪ್ರಾರಂಭಿಸಿದೆ .Of course,ಬೇರೆ ಕೋಣೆಯಲ್ಲಿ ಅವರನ್ನು quarantineಮಾಡಿದ್ದೆ. ಮಗುವಿಗೆ'preventive care'ಮಾಡ್ತಾ ಮಾಡ್ತಾ ನಾನು ಸಹ ಅದೇ ರೀತಿಯ ಎಚ್ಚರ ಕ್ರಮಗಳನ್ನು ತೆಗೆದುಕೊಂಡೆ. ಒಂದೇ ವಾರದಲ್ಲಿ ಪತಿ ಪೂರ್ತಿ ಗುಣಮುಖರಾಗಿ ಕೋವಿಡ್‌ನಿಂದ ಆಚೆ ಬಂದರು. ಮುಂಚಿನಿಂದಲೂ ಆಯುರ್ವೇದದ ಶಿಸ್ತಿನ ಬದುಕನ್ನು ನಡೆಸುತ್ತಾ ಬಂದಿದ್ದರಿಂದ ಅವರಿಗೆ ಕೋವಿಡ್ ಹೆಚ್ಚಾಗಿ ತೊಂದರೆ ಮಾಡಲಿಲ್ಲ. ಜಾಸ್ತಿ ಅಪಾಯಗಳಿಲ್ಲದೆ ಬಹುಬೇಗನೆ ವ್ಯಾಧಿಯಿಂದ ಹೊರಬಂದರು. ಅಷ್ಟು ಹತ್ತಿರದಲ್ಲಿ, ಒಂದೇ ಮನೆಯಲ್ಲಿ ಇದ್ದರೂ ಸಹ ಕೊರೋನಾ ವೈರಸ್‌ಗೆ, ನನಗಾಗಲಿ ಅಥವಾ ನನ್ನ ಪುಟ್ಟ ಮಗುವಿಗಾಗಲಿ, ನಾವು ಹಾಕಿಕೊಂಡ ಲಕ್ಷ್ಮಣರೇಖೆಯನ್ನು ದಾಟಿ ಒಳ ನುಸುಳಿ ತೊಂದರೆ ಮಾಡಲು ಸಾಧ್ಯವಾಗಲಿಲ್ಲ. ಎಂತಹ ಒಂದು ಅಚ್ಚರಿಯ ವಿಷಯ ಅಲ್ವಾ?! ಇದು ಹೇಗೆ ಸಾಧ್ಯ ಆಯ್ತು? ಹಾಗಾದರೆ ನನಗೂ ಹಾಗೂ ನನ್ನ ಮಗುವಿಗೆ ಮಾಡಿಕೊಂಡ ಆ preventive careಯಾವುದು? ಒಂದೇ ಮಾತಿನಲ್ಲಿ ಹೇಳಬೇಕೆಂದರೆ - ನಮ್ಮನ್ನು ಕೋವಿಡ್ ನಿಂದ ಬಚಾವ್ ಮಾಡಿದ್ದೇ -'ಅಭ್ಯಂಗ ಸ್ನಾನ'. ಆಶ್ಚರ್ಯ ಆಯ್ತಾ ಸ್ನೇಹಿತರೆ? ಇಡೀ ಜಗತ್ತನ್ನೇ ಬೆಚ್ಚಿ ಬೀಳಿಸಿದ COVIDನಂತಹ ಘೋರ ವ್ಯಾಧಿಯನ್ನೂ ಸಹ ಅಭ್ಯಂಜನದಿಂದ ದೂರ ಇಡಬಹುದು ಅಂದರೆ ಇದರ ಬಗ್ಗೆ ಸ್ವಲ್ಪ ತಿಳಿದುಕೊಳ್ಳಲೇ ಬೇಕು ಅಲ್ವಾ?! ಅಭ್ಯಂಗ ಅಂದರೆ ನಿಜವಾಗಲೂ ಏನು ಅಂತ ಅರ್ಥ ಮಾಡಿಕೊಳ್ಳಲು ಈ ಘಟನೆ ನಿಮ್ಮನ್ನು ಸಾಕಷ್ಟು ಪ್ರೇರೇಪಿಸಿದೆ ಅಂತ ನಂಬಿ ಮುಂದುವರಿಸುತ್ತೇನೆ.

ಆಯುರ್ವೇದ ಒಂದು ವೈದ್ಯಕೀಯ ಪದ್ಧತಿ ಅಷ್ಟೇ - ಅಂದರೆ ಖಾಯಿಲೆ ಬಂದಾಗ ಮಾತ್ರ ಆಯುರ್ವೇದ ಪ್ರಸ್ತುತ ಅಂತ ನಂಬಿರುವವರಿಗೆ, ಈ ವಿಷಯ ಹೊಸದಾಗಿರಬಹುದು- ಅದು ಏನು ಅಂದರೆ- ಆಯುರ್ವೇದ treatmentಗಿಂತಲೂ ಹೆಚ್ಚಾದ ಪ್ರಾಮುಖ್ಯತೆಯನ್ನು prevention ಗೆ ನೀಡಿದೆ. ಖಾಯಿಲೆ ಬಂದಮೇಲೆ ಎಚ್ಚೆತ್ತುಕೊಳ್ಳುವುದಕ್ಕಿಂತ, ಖಾಯಿಲೆಯೇ ಬಾರದ ಹಾಗೆ ನೋಡಿಕೊಳ್ಳುವುದು ಜಾಣತನ ಅನ್ನುವುದು ಆಯುರ್ವೇದದ ಹಿತೋಪದೇಶ. ಅದನ್ನು 'ಸ್ವಾಸ್ಥ್ಯ ರಕ್ಷಣೆ' ಎಂದು ಕರೆದು, ಅದರಲ್ಲಿ ದಿನಚರ್ಯೆ, ಋತುಚರ್ಯೆ ಹಾಗೂ ಸದ್ವೃತ್ತಗಳೆಂಬ ವಿಷಯಗಳನ್ನು ಬಹಳ ವಿಸ್ತಾರವಾಗಿ ಉಲ್ಲೇಖಿಸಿ, ಆಯುರ್ವೇದವು ಮನುಕುಲದ ಸ್ವಾಸ್ಥ್ಯವನ್ನು ಕಾಪಾಡುವಲ್ಲಿ ಅತ್ಯಂತ ಮುಖ್ಯ ಪಾತ್ರ ವಹಿಸಿದೆ.

ಸ್ನೇಹಿತರೆ, ಸ್ವಾಸ್ಥ್ಯವನ್ನು ಕಾಪಾಡಿಕೊಳ್ಳಲು ನೂರಾರು ವಿಘ್ನಗಳಿವೆ - ಬಿಸಿಲು, ಚಳಿ, ಮಳೆ ರೂಪದ ಋತುಗಳಿಂದ ಪರಿಸರದಲ್ಲಾಗುವ ಏರು-ಪೇರುಗಳಿಂದ ದೇಹದ ಮೇಲಾಗುವ ಕೆಟ್ಟ ಪ್ರಭಾವಗಳು ಒಂದಾದರೆ, ನಮ್ಮ ತಪ್ಪು ಆಹಾರ-ವಿಹಾರ-ವಿಚಾರಗಳಿಂದ ತೊಂದರೆ ಇನ್ನೊಂದು. ಪ್ರತಿದಿನವೂ ಈ ತೊಂದರೆಗಳಿಂದ ದೇಹದ ಮೇಲಾಗುವ ದುಷ್ಪರಿಣಾಮಗಳನ್ನು ತಡೆಗಟ್ಟುವ, ಸ್ವಾಸ್ಥ್ಯವನ್ನು ಸದಾ ಕಾಪಾಡಿಕೊಳ್ಳುವ ವಿಧಾನವೇ 'ದಿನಚರ್ಯೆ'. ದಿನಚರ್ಯೆಯ ಪಾಲನೆಯು ಸ್ವಾಸ್ಥ್ಯ ರಕ್ಷಣೆ ಮಾಡುವುದರ ಜೊತೆಗೆ ವರ್ಧನೆಯನ್ನೂ ಮಾಡುತ್ತದೆ. 'ದಿನಚರ್ಯಾ' ಎಂಬ ಶಬ್ದವೇ ತಿಳಿಸುವಂತೆ ಅದು ರಾತ್ರಿ ನಿದ್ರಿಸಿ ಬೆಳಿಗ್ಗೆ ಏಳುವುದರಿಂದ ಆರಂಭಿಸಿ, ಮತ್ತೆ ರಾತ್ರಿ ಮಲಗುವವರೆಗೆ ಆರೋಗ್ಯ ರಕ್ಷಣೆಯ ಸಲುವಾಗಿ ನಾವು ಮಾಡಬೇಕಾದ ಕ್ರಮಬದ್ಧವಾದ ಕೆಲಸಗಳು. ಇದು ಎಂದೋ ಒಂದೆರಡು ದಿನ ಆಚರಿಸುವ ಆಚರಣೆಯಲ್ಲ. ಇದು ಪ್ರತಿ ನಿತ್ಯ ಮಾಡುವ ಪ್ರಯಾಸ. ಈ ದಿನ ನಿತ್ಯದ ವ್ರತದ ಬಹುಮುಖ್ಯವಾದ ಭಾಗವೇ 'ಅಭ್ಯಂಗ'.

ಯಾಕೆ ಇದನ್ನು ಬಹುಮುಖ್ಯವಾದದ್ದು ಅಂತ ಹೇಳ್ತೀನಿ ಅಂದ್ರೆ - ಶಾಸ್ತ್ರದಲ್ಲಿ 'ಅಭ್ಯಂಗಂ ನಿತ್ಯಂ ಆಚರೇತ್' ಅಂತ ಹೇಳಿದ್ದಾರೆ. ಸಂಸ್ಕೃತ ವ್ಯಾಕರಣದ ಪರಿಚಯ ಇರುವವರಿಗೆ 'ಆಚರೇತ್' ಎಂಬ ಶಬ್ದ ಪ್ರಯೋಗದ ಪ್ರಾಮುಖ್ಯತೆ ಅರ್ಥವಾಗುತ್ತದೆ, ಇದು 'ವಿಧಿಲಿಂಗ್ ಲಕಾರ' ಪದ . ಅಂದರೆ ಇದೊಂದು 'ಆದೇಶ'. ಅಭ್ಯಂಗವನ್ನು ನಿತ್ಯ ಮಾಡಲೇಬೇಕು. ಬೇರೆ optionಇಲ್ಲ . Because it is so vital in maintaining our health. ಹಾಗಾಗಿ ಇನ್ಮೇಲೆ ನೀವೆಲ್ಲರೂ-ನಾವೆಲ್ಲರೂ ನಮ್ಮ ನಿತ್ಯ ಕರ್ಮಗಳಲ್ಲಿ ದಿನಚರಿಯಲ್ಲಿ ಸೇರಿಸಿಕೊಳ್ಳಲೇ ಬೇಕಾದಂತಹ ಕೆಲಸವೆಂದರೆ ಅದು 'ಅಭ್ಯಂಗ'!

ದಿನ ನಿತ್ಯದ ಈ ಆಚರಣೆಯು ಕಾಲ ಕಳೆದಂತೆ, ಸೋಮಾರಿತನ ಬೆಳೆದಂತೆ, ವಾರಕ್ಕೊಮ್ಮೆಗೆ ಇಳೀತು. ಹಾಗೆಯೇ ಸಮಯ ಸಿಕ್ಕಿದಾಗ ಯಾವಾಗಲಾದರೊಮ್ಮೆ ಮಾಡುವ ಹಂತ ತಲುಪಿತು. ನಂತರ ತೈಲಾಭ್ಯಂಜನದ ಹೆಸರಿನಲ್ಲಿ ವರುಷಕ್ಕೊಮ್ಮೆ ದೀಪಾವಳಿ ಹಬ್ಬದಲ್ಲಿ ಮಾತ್ರ ಪಾಲಿಸುವ ಆಚರಣೆಯಾಗಿ ಉಳಿಯಿತು. ಇಷ್ಟು ಮಾತ್ರವಲ್ಲದೆ- ಕೆಲವೊಮ್ಮೆ ತಲೆಗೆ, ಕೆಲವೊಮ್ಮೆ ದೇಹಕ್ಕೆ ಎಂಬ partial ಆಚರಣೆಯಾಗಿ ಬದಲಾಯಿತು. Fast paced worldನಲ್ಲಿ ಟೈಮ್ ಎಲ್ಲಿದೆ ಇದಕ್ಕೆಲ್ಲ, ಅನ್ನೋ ಕಾರಣವೇ ದೊಡ್ಡದಾಯಿತು. ಅದರ ಕಾರಣವಾಗಿಯೇ, ಇವತ್ತು ನಾವು ನೂರಾರು ಹೊಸ ಹೊಸ ರೋಗಗಳಿಗೆ ಬಲಿಯಾಗ್ತಾ, ಸ್ವಾಸ್ಥ್ಯವನ್ನು ರಕ್ಷಿಸಿಕೊಳ್ಳುವುದರಲ್ಲಿ fail ಆಗ್ತಾ ಇದ್ದೀವಿ. ಹಾಗಾಗಿ ಮತ್ತೊಮ್ಮೆ ಒತ್ತಿ ಹೇಳ್ತೀನಿ ಕೇಳಿ - 'ಅಭ್ಯಂಗಂ ನಿತ್ಯಂ ಆಚರೇತ್' - ಅಭ್ಯಂಗವನ್ನು ಎಲ್ಲರೂ ದಿನನಿತ್ಯ ಮಾಡಲೇಬೇಕು!!!

ಹಾಗಾದರೆ, ಅಭ್ಯಂಗ ಅಂದರೆ ಏನು? 'ಎಣ್ಣೆ/ ತುಪ್ಪ/ ಬೆಣ್ಣೆ ಮುಂತಾದ ಸ್ನೇಹಯುಕ್ತ, ಜಿಡ್ಡಿನಿಂದ ಕೂಡಿದ ದ್ರವ್ಯಗಳನ್ನು ಅನುಲೋಮವಾಗಿ, ಅಂದರೆ ಲೋಮಕ್ಕೆ ಅನುಗುಣವಾಗಿ/ಕೆಳಮುಖವಾಗಿ, ಸುಸ್ಥಿತಿಯಲ್ಲಿ ಇರಿಸಿದ ದೇಹದ ಭಾಗಕ್ಕೆ ಹಚ್ಚುವುದೇ ಅಭ್ಯಂಗ'. ಅಭ್ಯಂಗ ಎಂದ ಮಾತ್ರಕ್ಕೆ ಯಾವುದೋ ತೈಲ, ಯಾವುದೋ ಸಮಯದಲ್ಲಿ, ಯಾವುದೋ ಕ್ರಮದಿಂದ ಹಚ್ಚಿ ತೊಳೆಯುವುದಲ್ಲ. ಇದಕ್ಕೆ ಸಾಮಾನ್ಯ ಹಾಗೂ ವಿಶೇಷ ನಿಯಮಗಳಿವೆ. ವಿಧಿ ಇದೆ. ಕ್ರಮ ಇದೆ. ಕ್ರಮವನ್ನು ಸರಿಯಾಗಿ ಅರಿತು ಮಾಡಿದಾಗ ಮಾತ್ರ ಇದರಿಂದ ಸ್ವಾಸ್ಥ್ಯ ರಕ್ಷಣೆ ಸಾಧ್ಯ. ಇವತ್ತು ಸ್ವಲ್ಪ free time ಇದೆ ಅಥವಾ Festival discount ಇದೆ ಅಂತ ದೇಹದ ಸ್ಥಿತಿಯನ್ನು ಗಮನಿಸದೇ spaಗಳಿಗೆ/ Massage parlourಗಳಿಗೆ ಹೋಗಿ ಮಸಾಜ್ ಮಾಡಿಸಿಕೊಳ್ಳುವುದು ಖಂಡಿತವಾಗಿಯೂ ಇರುವ ತೊಂದರೆಗಳನ್ನು ಹೆಚ್ಚು ಮಾಡುವುದರಲ್ಲಿ ಸಂಶಯವಿಲ್ಲ. ಹಾಗಾಗಿ ಅಭ್ಯಂಗದ ವಿಧಾನವನ್ನು ತಿಳಿದು ಕೊಳ್ಳುವುದು ಅತ್ಯವಶ್ಯಕ.

ಅಭ್ಯಂಗವನ್ನು ಸಾಮಾನ್ಯವಾಗಿ ಎರಡು ವಿಧಾನಗಳಲ್ಲಿ ಕಾಣುತ್ತೇವೆ.

1. ಚಿಕಿತ್ಸಾ ಭಾಗವಾಗಿ ಮಾಡುವ ಅಭ್ಯಂಗ-ಇt is a part of specific treatment for specific diseases. ಇದರಲ್ಲಿ ರೋಗಿಗಳನ್ನು ಕನಿಷ್ಠ 45 ನಿಮಿಷಗಳ ಕಾಲ ಮಲಗಿಸಿ ಮಾಡುವಂಥದ್ದು. ಚಿಕಿತ್ಸಕರು/ ಸಹಾಯಕರು ಇದನ್ನು ಮಾಡುತ್ತಾರೆ. ಇದನ್ನು ವೈದ್ಯರ ಮಾರ್ಗದರ್ಶನದಲ್ಲಿ 7 ಬೇರೆ ಬೇರೆ ಭಂಗಿಗಳಲ್ಲಿ ಮಾಡುತ್ತಾರೆ.

2. ಮತ್ತೊಂದು ವಿಧಾನ- ದಿನಚರ್ಯೆಯ ಭಾಗವಾಗಿ ಮಾಡುವಂಥದ್ದು. ವ್ಯಕ್ತಿಯು ನಿಂತುಕೊಂಡು ಸ್ವತಃ ತಾನೇ ದೇಹ ಪೂರ್ತಿ ಎಣ್ಣೆ ಹಚ್ಚಿ, 6-7 ನಿಮಿಷಗಳ ಬಳಿಕ ಸ್ನಾನ ಮಾಡುವುದು. ಸ್ವಾಸ್ಥ್ಯ ರಕ್ಷಣೆಗಾಗಿ ನಾವು ಮಾಡಬೇಕಾಗಿರುವುದೇ ಈ ವಿಧಾನದ ಅಭ್ಯಂಗವನ್ನು.

ಹಾಗಾದರೆ ದಿನಚರ್ಯೆಯ ಭಾಗವಾಗಿ ಮಾಡುವ ವಿಧಾನ ಹೇಗೆ?

ಸಮಯ- ಬೆಳಿಗ್ಗೆ ಖಾಲಿ ಹೊಟ್ಟೆಯಲ್ಲಿ ಮಾಡಬೇಕು. ತಿಂಡಿ ತಿಂದು ಮಾಡುವುದು / ಹೊಟ್ಟೆಯಲ್ಲಿ ಆಹಾರ ಇನ್ನೂ ಜೀರ್ಣವಾಗುತ್ತಿರುವಾಗ ಮಾಡುವುದರಿಂದ ತೊಂದರೆಗಳಾಗುತ್ತದೆ. ಹಾಗಾಗಿ ಖಾಲಿ ಹೊಟ್ಟೆಯಲ್ಲಿಯೇ ಬೆಳಿಗ್ಗೆ ಮಾಡತಕ್ಕದ್ದು. Ideally ವ್ಯಾಯಮದ ಮುನ್ನ - ಎಣ್ಣೆ ಹಚ್ಚಿ ವ್ಯಾಯಾಮ ಮಾಡಿ ಸ್ನಾನ ಮಾಡುವುದು - ಇದು ಶಾಸ್ತ್ರೋಕ್ತ ಕ್ರಮ. ಇದಾಗದಿದ್ದಲ್ಲಿ ವ್ಯಾಯಾಮ-ಅಭ್ಯಂಗ-ಸ್ನಾನವನ್ನು ಮಾಡಬಹುದು.

ನಿತ್ಯಾಭ್ಯಂಗ ಮಾಡಲು ಬೆಳಿಗ್ಗೆ ಖಾಲಿ ಹೊಟ್ಟೆಯಲ್ಲಿ, ಬೆಚ್ಚಗೆ ಮಾಡಿದ ಎಣ್ಣೆಯನ್ನು ತೆಗೆದುಕೊಳ್ಳಬೇಕು. ಇಲ್ಲಿ ನಮಗೆ ಎರಡು ಪ್ರಶ್ನೆಗಳು ಬರುತ್ತವೆ. ಎಣ್ಣೆಯನ್ನು ಹೇಗೆ ಬೆಚ್ಚಗೆ ಮಾಡಬೇಕು ಹಾಗೂ ಯಾವ ಎಣ್ಣೆಯನ್ನು ತೆಗೆದುಕೊಳ್ಳಬೇಕು?

ಎಣ್ಣೆಯನ್ನು ಹೇಗೆ ಬೆಚ್ಚಗೆ ಮಾಡಬೇಕು? ಅನ್ನುವ ಪ್ರಶ್ನೆಗೆ, ತೈಲವನ್ನು ಕುದಿಸಿದಂತೆ ಅದು ಗುಣಹೀನವಾಗುತ್ತದೆ ಅಂತ ಆಯುರ್ವೇದ ಹೇಳಿದೆ. ಹಾಗಾಗಿ, ನೇರವಾಗಿ ಬೆಂಕಿಯ ಮೇಲೆ ಇದನ್ನು ಬಿಸಿ ಮಾಡುವ ಹಾಗೆ ಇಲ್ಲ. ಅಭ್ಯಂಗಕ್ಕೆ ಅಗತ್ಯವಿರುವ ತೈಲವನ್ನು ಬಟ್ಟಲಲ್ಲಿ ತೆಗೆದುಕೊಂಡು, ಬಿಸಿ ನೀರಿನಲ್ಲಿ ಸ್ವಲ್ಪ ಹೊತ್ತು ಇಟ್ಟು ಬೆಚ್ಚಗಾಗುವಷ್ಟು ಬಿಸಿ ಮಾಡಿದ ಎಣ್ಣೆಯಿಂದ ಅಭ್ಯಂಗವನ್ನು ಮಾಡಬೇಕು. ಚರ್ಮದ ರಂಧ್ರಗಳನ್ನು ತೆರೆಯುವುದಕ್ಕಾಗಿ ಎಣ್ಣೆಯನ್ನು ಬಿಸಿ ಮಾಡುವುದು ಅವಶ್ಯಕ.

ಇನ್ನು, ಯಾವ ಎಣ್ಣೆಯನ್ನು ಉಪಯೋಗಿಸಬೇಕು? ಸಾಮಾನ್ಯವಾಗಿ ಉಷ್ಣ ಪ್ರದೇಶದಲ್ಲಿ, ಉಷ್ಣ ಕಾಲದಲ್ಲಿ, ಉಷ್ಣ ಪ್ರಕೃತಿಯವರು ತುಪ್ಪ/ ಕೊಬ್ಬರಿ ಎಣ್ಣೆ ಬಳಸಬಹುದು. ಶೀತ ಪ್ರದೇಶ/ಶೀತಕಾಲ/ ಶೀತ ಪ್ರಕೃತಿಯವರು ಎಳ್ಳೆಣ್ಣೆಯನ್ನು ಬಳಸುವುದು ಉತ್ತಮ. ಇದು ಸಾಮಾನ್ಯ ನಿಯಮ. ಇವಲ್ಲದೆ, ರೋಗಕ್ಕೆ ಅನುಗುಣವಾಗಿ ಹಲವಾರು ಔಷಧೀಯ ಎಣ್ಣೆಗಳನ್ನು ಬಳಸಬಹುದು.

ಮುಂದೆ, ಮಾಡುವ ವಿಧಾನವನ್ನು ಗಮನಿಸೋಣ: ಬೆಚ್ಚಗಿನ ಎಣ್ಣೆಯನ್ನು ಅಂಗೈ ತುಂಬುವಷ್ಟು ತೆಗೆದುಕೊಂಡು ಮೊದಲು ನೆತ್ತಿ ನೆನೆಯುವಷ್ಟು ಹಾಕಬೇಕು. ಸಮಯವಿದ್ದರೆ ತಲೆಗೆ ಪೂರ್ತಿಯಾಗಿ ಸವರಿಕೊಳ್ಳಬಹುದು.

ನಂತರ ಬೆಚ್ಚಗಿನ ಎಣ್ಣೆಯ ಹನಿಗಳನ್ನು ಎರಡೂ ಕಿವಿಗಳಿಗೆ ಹಾಕಬೇಕು. ಇದಾದ ಮೇಲೆ, ಎಣ್ಣೆಯನ್ನು ನಿಧಾನವಾಗಿ ಮುಖಕ್ಕೆ ಸವರಿಕೊಂಡು, ಮೂಗಿಗೂ ಸಹ ಎರಡು ಹನಿ ಎಣ್ಣೆಯನ್ನು ಬಿಟ್ಟುಕೊಳ್ಳಬೇಕು. ಅಥವಾ, ಕಿರುಬೆರಳನ್ನು ಎಣ್ಣೆಯಲ್ಲಿ ಅದ್ದಿ ಮೂಗಿನ ಹೊಳ್ಳೆಗಳ ಒಳಗೆ ಸವರಿಕೊಳ್ಳುವುದು. ನಂತರ ಕತ್ತು, ಕೈಗಳು, ಎದೆ, ಹೊಟ್ಟೆ, ಬೆನ್ನು, ಪೃಷ್ಠ, ಕಾಲುಗಳಿಗೆ ನಂತರ ಪಾದಗಳಿಗೆ, ಅಭಿಮುಖವಾಗಿ ಮೇಲಿನಿಂದ ಕೆಳಮುಖವಾಗಿ ಅಂಗಾಂಗಗಳನ್ನು ಸ್ಥಿರವಾಗಿ ಇರಿಸಿ ಹಚ್ಚುವುದು. ನೆನಪಿಡಿ, ಯಾವಾಗಲೂ ಮೇಲಿನಿಂದ ಕೆಳಗೆ ಹಚ್ಚಬೇಕೇ ಹೊರತು ಕೆಳಗಿನಿಂದ ಮೇಲೆ ಉಜ್ಜಬೇಡಿ. ವಿಶೇಷವಾಗಿ ಕೆನ್ನೆ, ಹೊಟ್ಟೆ ಹಾಗೂ ಸಂಧಿ ಭಾಗಗಳಲ್ಲಿ ವರ್ತುಲಾಕಾರವಾಗಿ ಹಚ್ಚಬೇಕು. ಹೀಗೆ ಹಚ್ಚಿದ ಎಣ್ಣೆಯನ್ನು ಸುಮಾರು ಐದು ನಿಮಿಷಗಳ ಕಾಲ ಬಿಟ್ಟರೆ ಸಾಕು, ದೇಹವು ಚೆನ್ನಾಗಿ ಹೀರಿಕೊಳ್ಳುತ್ತದೆ. ಹಚ್ಚುವುದಕ್ಕೆ ಐದು ನಿಮಿಷ, ನೆನೆಯುವುದಕ್ಕೆ ಐದು ನಿಮಿಷ, ಒಟ್ಟು 10 ನಿಮಿಷದಲ್ಲಿ ಮುಗಿಸಬಹುದು ನಿತ್ಯಾಭ್ಯಂಗವನ್ನು. ಇದು ಯಾರಿಗೂ ಕಷ್ಟದ ಕೆಲಸವಲ್ಲ! ತೈಲಾಭ್ಯಾಂಜನದ ನಂತರ ಬೆಚ್ಚಗಿನ ನೀರಿನಲ್ಲಿ ಸ್ನಾನ ಮಾಡಿ ಹೊರಬಂದಾಗ ಸಿಗುವಷ್ಟು ಆನಂದ, ಆರಾಮ ಮತ್ತೆಲ್ಲೂ ಇಲ್ಲ! ಅಯ್ಯೋ 10 ನಿಮಿಷ ಕೂಡ ಟೈಮ್ ಇಲ್ಲಪ್ಪ ಅಂತ ಮುಖ ಮುರಿಯುವವರಿಗೆ ಇನ್ನೊಂದು secret ಹೇಳ್ಕೊಡ್ತೀನಿ. ಪೂರ್ತಿ ದೇಹಕ್ಕೆ ಎಣ್ಣೆ ಹಚ್ಚುವುದು ಸಾಧ್ಯವಿಲ್ಲದಿದ್ದಾಗ- ನೆತ್ತಿ, ಕಿವಿ, ಪಾದಗಳಿಗಾದರೂ ಹಚ್ಚುವುದರಿಂದ ದೇಹವನ್ನು ಸಾಕಷ್ಟು ಮಟ್ಟಿಗೆ ಕಾಪಾಡಿಕೊಳ್ಳಬಹುದು! Shortcut ಕೊಟ್ಟ ಮೇಲೂ ತಡ ಯಾಕೆ? ಮಳೆಗಾಲದಲ್ಲಂತೂ ಅಭ್ಯಂಗಕ್ಕಿಂತ ಮಿಗಿಲಾದ ರಕ್ಷಾಕವಚ ಮತ್ತೊಂದಿಲ್ಲ!

ಇಂದಿನಿಂದಲೇ ಆಚರಿಸಿ ಅಭ್ಯಂಗ ಸ್ನಾನವನ್ನು, ಇದು ಲಕ್ಷ್ಮಣರೇಖೆಯಾಗಿ ದೂರವಿಡುತ್ತದೆ ರೋಗರುಜಿನವನ್ನು!

ಪ್ರಸ್ತುತ

ಸರಸ್ವತಿ ವಿಶ್ವನಾಥ್ ಪಾಟೀಲ್

ಕೊರೋನಾಕ್ಕಿಂತ ಡೇಂಜರ್ ವಿಚ್ಛೇದನವೆಂಬ ವೈರಸ್

ಮದುವೆಯಾಗಿ ಇನ್ನೂ ವರ್ಷ ಕಳೆದಿಲ್ಲವಂತೆ ಡಿವೋರ್ಸ್ ಅಂತೆ, ಹೊಂದಾಣಿಕೆ ಇಲ್ಲಂತೆ ಡಿವೋರ್ಸ್ ಅಂತೆ, ಜೀವನ ಶೈಲಿಯಲ್ಲಿ ವ್ಯತ್ಯಾಸವಂತೆ ಡಿವೋರ್ಸ್ ಅಂತೆ, ಹೀಗೆ ಅಕ್ಕಪಕ್ಕದ ಮನೆಯ ಮಾತು ಅಥವಾ ವಾಟ್ಸಾಪ್ ಗ್ರೂಪ್ ಚಾಟಿಂಗ್‌ನಲ್ಲೋ ನೀವು ಈ ರೀತಿಯ ಮಾತುಗಳನ್ನು ಕೇಳಿರಬಹುದು. ಇತ್ತೀಚೆಗೆ ಮದುವೆಯಾದ ಒಂದು ವರ್ಷದೊಳಗೇ ವಿಚ್ಛೇದನಕ್ಕೆ ಅರ್ಜಿ ಹಾಕುವುದು ಶುರುವಾಗಿದೆ. ಒಮ್ಮೆ ಸಪ್ತಪದಿ ತುಳಿದ್ರೆ ಇಡೀ ಜೀವನ ಜೊತೆಗಿರಬೇಕು ಎಂಬ ಬೇಲಿ ಇಲ್ಲ. ದಾಂಪತ್ಯದಲ್ಲಿ ಸಣ್ಣ ಪುಟ್ಟ ಸಮಸ್ಯೆ ಬಂದರೂ ಕೋರ್ಟ್ ಮುಂದೆ ಹೋಗುತ್ತಾರೆ. ಹಿಂದೆ ವಿದೇಶಗಳಲ್ಲಿ ಸಾಮಾನ್ಯ ಎನ್ನುವಂತಿದ್ದ ವಿಚ್ಛೇದನ ಈಗ ಭಾರತದಲ್ಲೂ ಕಾಮನ್ ಆಗಿದೆ.

ಮದುವೆಯಾದ ಮೇಲೆ ಅನೇಕರಿಗೆ ತಮ್ಮ ಸಂಗಾತಿಗಿಂತ ತಾವೇ ಮೇಲು ಎನ್ನುವ ಅಹಂ ಬಂದುಬಿಡುತ್ತದೆ. ತನ್ನ ಒಳ್ಳೆಯತನಕ್ಕೆ, ತನ್ನ ಸೌಂದರ್ಯಕ್ಕೆ ಇವರಿಗಿಂತ ಉತ್ತಮರು ಬೇರೆಯವರು ಸಿಕ್ಕಿಬಿಡುತ್ತಿದ್ದರು. ನನಗೆ ಸರಿ ಹೊಂದಾಣಿಕೆಯಾಗದ ಇವರನ್ನು ನಾನು ಯಾಕೆ ಕಟ್ಟಿಕೊಂಡುಬಿಟ್ಟೆ, ನನ್ನ ಒಳ್ಳೆಯ ಗುಣಕ್ಕೆ ಇವರು ಸರಿಯಾದ ಜೋಡಿಯೇ ಅಲ್ಲ ಎನ್ನುವ 'ಈಗೋ' ಮನಸ್ಸಿನಲ್ಲಿಯೇ ಬಂದು ಇಬ್ಬರಲ್ಲೂ ಅಂತರ ಮೂಡಿಸಲು ಶುರುಮಾಡಿಬಿಡುತ್ತದೆ. ಸಮಯ ಕಳೆದಂತೆ ಸಂಗಾತಿ ಏನು ಒಳ್ಳೆಯ ಕೆಲಸ ಮಾಡಿದರೂ ಅದರಲ್ಲಿ ತಪ್ಪು ಕಂಡು ಹಿಡಿಯುವುದು, ಏನು ಮಾತಾಡಿದರೂ ತಪ್ಪು ಎನ್ನುವುದು, ತಮ್ಮದೇ ತಪ್ಪು ಅಂತ ಗೊತ್ತಿದ್ದರೂ ತಮ್ಮದೇ ಸರಿ ಎನ್ನುವ ಹಾಗೆ ಆಡುವ ಬಿಗುಮಾನ ತೋರುವುದು. ಈ ರೀತಿಯ ಕಲಹಗಳೇ ಈ ವಿಚ್ಛೇದನ ಯೋಚನೆ ಬರಲು ಕಾರಣವಾಗುತ್ತೆ.

ಒಮ್ಮೆ ವಿಚ್ಛೇದನದ ಯೋಚನೆ ಬಂದರೆ ಸಾಕು ನಿಮ್ಮನ್ನು ಭಾವನಾತ್ಮಕವಾಗಿ ಹಿಂಡಿ ಹಿಪ್ಪೆ ಮಾಡಿಬಿಡುತ್ತೆ. ಆ ಕ್ಷಣಕ್ಕೆ ಕಿರಿಕಿರಿ ಇಲ್ಲದ ಸ್ವತಂತ್ರ ಜೀವನನೇ ಲೇಸು ಅನ್ನಿಸೋದಕ್ಕೂ ಶುರು ಆಗುತ್ತೆ. ಆದರೆ ಈ ಮದುವೆ ಮತ್ತು ವಿಚ್ಛೇದನ ಅನ್ನೋದು ಬೇಕಾದಾಗ ಬರೋಕೆ, ಬೇಡದೇ ಇದ್ದಾಗ ಹೋಗೋಕೆ ಮಕ್ಕಳಾಟ ಅಲ್ಲ. ದಾಂಪತ್ಯ ಅನ್ನೋದು ಬರೀ ಎರಡು ಜೀವಗಳನ್ನಷ್ಟೇ ಬೆಸೆಯೋವಂತಹ ಸಂಬಂಧವಲ್ಲ, ಬದಲಿಗೆ ಅದು ಎರಡು ಕುಟುಂಬಗಳ ಬೆಸುಗೇನೂ ಹೌದು ಅನ್ನೋದನ್ನ ನೆನಪಲ್ಲಿ ಇಟ್ಕೋಬೇಕು.

ಕಾನೂನು ಕಾಗದದಲ್ಲಿ ಬೇರೆ ಮಾಡಬಹುದು ಅಷ್ಟೇ ಆದರೆ ಸೂತಕ ಹರಿಯುವುದಿಲ್ಲ, ವಿಚ್ಛೇದನದಿಂದ ರಕ್ತ ಸಂಬಂಧದ ಬಂಧ ತೊಳೆಯುವುದಿಲ್ಲ, ಜೊತೆಗೆ ಕಂಡ ಕನಸು, ನಡೆದು ಬಂದ ದಾರಿ ಯಾವುದು ಸುಲಭಕ್ಕೆ ಮರೆಯುವಂತದಲ್ಲ. ಪತಿ ಪತ್ನಿಯ ನಡುವೆ ನಡೆಯೋ ಕಲಹಕ್ಕೆ ವಿಚ್ಛೇದನವೇ ಪರಿಹಾರವಾಗಿದ್ದರೆ, ಬಾಲ್ಯದಿಂದ ಇಲ್ಲಿಯವರೆಗೂ ಅಣ್ಣತಮ್ಮಂದಿರೊಂದಿಗೆ, ಅಕ್ಕತಂಗಿಯರೊಂದಿಗೆ, ಸಂಬಂಧಿಕರೊಂದಿಗೆ, ಸ್ನೇಹಿತರೊಂದಿಗೆ ಆದ ಜಗಳ, ಮನಸ್ತಾಪಗಳಿಗೆ ವಿಚ್ಛೇದನ ನೀಡಿಲ್ಲವೇ? ಇಲ್ಲವಲ್ಲ ಆದ ಜಗಳಗಳೆನೆಲ್ಲ ಮರೆತು ಮತ್ತೆ ಒಂದಾಗಿದ್ದವು ಅಲ್ಲವೇ? ಅಂದಮೇಲೆ ಗಂಡ ಹೆಂಡತಿ ಜಗಳ ಕೂಡ ಸರಿ ಹೋಗುತ್ತೆ ಸ್ವಲ್ಪ ಕಾಲವಕಾಶ ಬೇಕು... ಕಾಲಕ್ಕೆ ಎಲ್ಲ ಮರೆಸುವ ಶಕ್ತಿ ಇದೆ.



ವಿಚ್ಛೇದನ ಸಾವಿಗೆ ಸಮಾನವಾದ ಅನುಭವ ನೀಡುತ್ತದೆ. ಸಾವು ಎಂದರೇ ಜೀವನದ ಕೊನೆ. ವಿಚ್ಛೇದನವೂ ಹೆಚ್ಚು ಕಡಿಮೆ ಇದೇ ಅನುಭವವನ್ನು ನೀಡುತ್ತದೆ. ಜೀವನದ ಎಲ್ಲ ಚಟುವಟಿಕೆಗಳು ಏಕಾಏಕಿ ಸ್ತಬ್ಧಗೊಳ್ಳುತ್ತವೆ. ಈಗ ಉಳಿದಿರುವುದು ಹಿಂದಿನ ಸುಂದರ ನೆನಪುಗಳು ಮಾತ್ರ. ವಿಚ್ಛೇದನದ ಬಳಿಕ ಹಿಂದಿನ ನೆನಪುಗಳನ್ನು ಕೆದಕುವ ಯಾವುದೇ ವಸ್ತು ಅಥವಾ ಪ್ರಸಂಗ ಎದುರಾದರೆ ಅದು ಭಾವನಾತ್ಮಕವಾಗಿ ಕುಗ್ಗಿಸುತ್ತೆ.

ಚಿಕ್ಕ ಪುಟ್ಟ ಕಾರಣಗಳಿಗೆ ವಿಚ್ಛೇದನ ಬೇಕು ಎಂದು ಸುಲಭವಾಗಿ ಹೇಳುವವರಿಗೆ ಇದರ ಕಷ್ಟಗಳೇನೆಂದು ಆಗ ತಿಳಿದಿಲ್ಲ. ಕೋರ್ಟ್ ಹೋದಾಗ ತಿಳಿಯುತ್ತದೆ. ವಕೀಲರ ಬೇಟಿ, ವಿಚ್ಛೇದನಕ್ಕೆ ಕಾರಣಗಳನ್ನು ವಿವರಿಸುವಾಗ ಎದುರಾಗುವ ಮುಜುಗರ, ಒಂದು ವೇಳೆ ಮಕ್ಕಳಾಗಿದ್ದರೆ ಅವರ ಯೋಗಕ್ಷೇಮದ ಮತ್ತು ಜವಾಬ್ದಾರಿಯ ಕುರಿತಾದ ಕಲಹ, ಹಣಕಾಸಿನ ಬಗ್ಗೆ ತಕರಾರು, ಮದುವೆ ಮತ್ತು ಆ ಬಳಿಕ ಆಗಿದ್ದ ಖರ್ಚುವೆಚ್ಚಗಳ ಬಗ್ಗೆ, ಆಸ್ತಿ, ಮನೆ, ಹಣಕಾಸಿನ ಕುರಿತು ಜಗಳ, ಒಬ್ಬರ ತಪ್ಪು, ಅವಗುಣಗಳನ್ನು ಇನ್ನೊಬ್ಬರು ಮಾಡುವುದು, ಒಬ್ಬರ ನ್ಯೂನ್ಯತೆ, ಕುಂದು ಕೊರತೆ, ವ್ಯಯಕ್ತಿಕ ದೌರ್ಬಲ್ಯಗಳನ್ನು ಇನ್ನೊಬ್ಬರು ಹೀಯಾಳಿಸಿ ಊರ ತುಂಬಾ ಹರಡುವುದು ಮೊದಲಾದವು ಜೀವನವನ್ನೇ ದುರ್ಭರವಾಗಿಸುತ್ತವೆ. ಎಷ್ಟೋ ಸಲ ಈ ತೊಂದರೆಗಳೆಲ್ಲ ಎದುರಾಗುತ್ತಿದ್ದಂತೆಯೇ ಅಹಂಭಾವ ತೋರ್ಪಡಿಸಿದ್ದ ವ್ಯಕ್ತಿಗೆ ಜ್ಞಾನೋದಯವಾಗಿ ಕ್ಷಮಾಪಣೆ ಕೇಳಿ, ಕೂಡಲೇ ಇಬ್ಬರು ತಮ್ಮದೇ ತಪ್ಪ ಎಂದು ಕ್ಷಮಾಪಣೆ ಕೇಳಿ ಒಂದಾಗಿದ್ದೂ ಇದೆ.

ವಿವಾಹದ ಬಳಿಕ ದಂಪತಿಗಳ ರೂಪದಲ್ಲಿ ನೋಡಿದ್ದ ಸಮಾಜ ವಿಚ್ಛೇದಿತರ ರೂಪದಲ್ಲಿ ನೋಡಿದಾಗ ಭಿನ್ನವಾಗಿ ಪ್ರತಿಕ್ರಿಯಿಸುತ್ತದೆ. ಎದುರಿಗಿರುವವರು ಏನೂ ಹೇಳದೇ ಇದ್ದರೂ ಅವರು ಈ ಬಗ್ಗೆ ಏನೆಂದುಕೊಳ್ಳುತ್ತಿದ್ದಾರೋ ಎಂದು ಅಳುಕುವ ಮನ ಜೀವನವನ್ನೇ ದುರ್ಭರವಾಗಿಸುತ್ತದೆ.

ಭಾವನೆಗಳು ಋಣಾತ್ಮಕವಾಗಿದ್ದು ಸದಾ ಬೇಸರ, ದುಗುಡ, ಯಾವುದರಲ್ಲಿಯೂ ಆಸಕ್ತಿಯಿಲ್ಲದಿರುವಿಕೆ, ಎಲ್ಲವನ್ನೂ ತನ್ನ ವಿಚ್ಛೇದನಕ್ಕೆ ಸಂಬಂಧಿಸಿರುವಂತೆ ಕಲ್ಪಿಸಿಕೊಂಡು ಅಪಾರ್ಥ ಮಾಡಿಕೊಳ್ಳುವುದು ಮೊದಲಾದ ತೊಂದರೆಗಳು ಎದುರಾಗುತ್ತವೆ. ಇದು ಮಾನಸಿಕವಾಗಿ ವ್ಯಕ್ತಿಯನ್ನು ಬಲುವಾಗಿ ಕುಗ್ಗಿಸುತ್ತದೆ. ಸಮಾಜದ ಗೊಡವೆಯೇ ಬೇಡ ಎಂದು ಮನೆಯಲ್ಲಿಯೇ ಕುಳಿತಿದ್ದರೂ ಮನೆಯ ಕಿಟಕಿಯಿಂದ ಬರುವ ಟೀಕಾಸ್ತ್ರಗಳೇ ಮಾನಸಿಕವಾಗಿ ಕುಗ್ಗಿಸಲು ಸಮರ್ಥವಾಗಿವೆ.

ಆದರೆ ನೆನಪಿಡಿ ಪ್ರಪಂಚದಲ್ಲಿ ಎಲ್ಲರೂ ಒಳ್ಳೆಯವರಲ್ಲ, ಎಲ್ಲರೂ ಕೆಟ್ಟವರಲ್ಲ. ಎಲ್ಲರಲ್ಲೂ ಒಂದು ರೀತಿಯ ಕಪ್ಪುಚುಕ್ಕೆ ಇದ್ದೇ ಇರುತ್ತದೆ. ಅದನ್ನು ಹುಡುಕುವ ಬದಲು, ಸಂಗಾತಿಯ ಒಳ್ಳೆಯ ಗುಣವನ್ನು ಪರಿಗಣಿಸಿ, ತಾವೇ ಒಳ್ಳೆಯವರು ಎನ್ನುವುದನ್ನು ಮನಸ್ಸಿನಿಂದ ತೆಗೆದುಹಾಕಿ. ಹೊಡಿಕೊಂಡು ಹೋಗುವುದೇ ಜೀವನ, ಇದು ನಮ್ಮ ಭಾರತೀಯ ಸಂಸ್ಕೃತಿಯು ಹೌದು.

ವಿವಾಹ ಎಂಬ ಪದವೇ ಎಷ್ಟು ಸುಂದರ, ಎಷ್ಟು ರೋಮಾಂಚಕ. ಇಬ್ಬರು ವ್ಯಕ್ತಿಗಳು ತಮ್ಮ ಮುಂದಿನ ಇಡಿಯ ಜೀವನವನ್ನು ಒಬ್ಬರಿಗೊಬ್ಬರು ಸಂಗಾತಿಗಳಾಗಿ ಕಳೆಯಲು ಸಂಕಲ್ಪತೊಡುವ, ಗುರುಹಿರಿಯರ ಆಶೀರ್ವಾದ ಪಡೆದು ನಡೆಸುವ ಹೊಸ ಜೀವನದ ಪ್ರಾರಂಭ. ಭಾರತೀಯ ಸಂಸ್ಕೃತಿಯಲ್ಲಂತೂ ಮದುವೆ ಎಂದರೆ ಗಂಡು ಹೆಣ್ಣುಗಳ ನಡುವೆ ಆಗುವ ಸಂಬಂಧಕ್ಕಿಂತಲೂ ಎರಡು ಕುಟುಂಬಗಳ ನಡುವೆ ಆಗುವ ಸಂಬಂಧ. ಈ ಬಂಧ ಚಿಕ್ಕ ಪುಟ್ಟ ಕಾರಣದಿಂದ ಅಂತ್ಯ ಕಾಣದಿರಲಿ.

(ಲೇಖಕರು: ಹವ್ಯಾಸಿ ಬರಹಗಾರರು)

ಧರ್ಮ-ರಾಜಕೀಯ-ಸಿನೆಮಾ ಎನ್ನುವ ಕಲಬೆರಕೆ

ಅಭಿಮತ

ಶ್ರೀವತ್ಸ ಬಲ್ಲಾಳ

ಫಿಲಡೆಲ್ಫಿಯಾ, ಅಮೆರಿಕ

vveditoped@gmail.com

ವ್ಯಕ್ತಿಪೂಜೆ ಎನ್ನುವುದನ್ನು ಅತ್ಯಂತ ಆಳವಾದ ನೆಲೆಯಲ್ಲಿ ಕಾಣಬಹುದಾದ ಸಮಾಜದ ಮೂರು ಮಗ್ಗುಲುಗಳೆಂದರೆ ಅದು ಧರ್ಮ-ರಾಜಕೀಯ-ಸಿನೆಮಾದ ಸಂಯೋಜನೆಯಡಿಲ್ಲಿಯೇ ಇರಬೇಕು. ಅದೂ ಭಾರತದ ಅಷ್ಟೂ ಜನಸಂಖ್ಯೆಯ ಬಹುತೇಕ ಭಾಗ ಈ ಸಂಯೋಜನೆಯ ಪರವಾಗಿದ್ದುಕೊಂಡು ಒಂದಿಲ್ಲೊಂದು ರೀತಿಯಲ್ಲಿ ವ್ಯಕ್ತಿಪೂಜೆಯ ಸಮರ್ಥನೆಯನ್ನು ಕಂಡಾಗ ನಮ್ಮ ದೇಶದಲ್ಲಿ ನಡೆಯುವ ವೈಪರೀತ್ಯಗಳು ಯಾರಿಗೂ ಆಶ್ಚರ್ಯವೆನಿಸದು. ಹಾಗಾಗಿ ಧರ್ಮ-ರಾಜಕೀಯ-ಸಿನೆಮಾದ ಸಂಯೋಜನೆ ಒಂದು ರೀತಿಯಲ್ಲಿ ಸಮಾಜದ ಭಾವನೆಗಳನೆಲ್ಲ ಹಿಡಿದಿಟ್ಟಿರುವ ಕಳ್ಳು ಅಥವಾ ಕಳ್ಳಭಟ್ಟಿ ಎಂದರೂ ಉತ್ಪ್ರೇಕ್ಷೆಯಾಗಲಾರದು.

ಭಾರತದಲ್ಲಿ, ಅದರಲ್ಲೂ ದಕ್ಷಿಣ ಭಾರತದಲ್ಲಿ ವ್ಯಕ್ತಿಪೂಜೆ ಸಿನೆಮಾ ನಾಯಕ-ನಾಯಕಿಯರಿಗೆ ಸಿಗುವ ಒಂದು ಬಹು ದೊಡ್ಡ ಗೌರವ ಎನ್ನುವುದು ಸುಮಾರು ಎಂಬತ್ತು-ನೂರು ವರುಷಗಳಿಂದ ದಕ್ಷಿಣ ಭಾರತದ ಅಭಿಮಾನಿಗಳನ್ನು ಗಮನಿಸಿ ನೋಡಿದರೆ ಗೊತ್ತಾಗುತ್ತದೆ. ಅಂಥಾ ವ್ಯಕ್ತಿಪೂಜೆಯ ಫಲಾನುಭವಿಗಳೇ ತಮಿಳುನಾಡು, ಆಂಧ್ರಪ್ರದೇಶದಂಥ ರಾಜ್ಯಗಳನ್ನು ಮೂರು-ನಾಕು ದಶಕಗಳಿಗೂ ಮೀರಿ ಮುನ್ನಡೆಸಿದ್ದು ಕೂಡ ಸಹಜವೇ. ಯಾಕೆಂದರೆ ನಮ್ಮಲ್ಲಿನ (ದುರ)ಅಭಿಮಾನಿಗಳ ಮತಯಾಚನೆಗೆ ಈ ನಾಯಕ-ನಾಯಕಿಯರು ಎಳ್ಳಷ್ಟೂ ಶ್ರಮ ಪಡಬೇಕಾಗಿರಲಿಲ್ಲ ಹಾಗಾಗಿ ಚುನಾವಣಾ ಪ್ರಚಾರ ಮತ್ತು ಫಲಿತಾಂಶ ಎನ್ನುವುದು ಹೂವೆತ್ತಿದಷ್ಟೇ ಸುಲಭವಾಗಿ ಆಗಿಹೋಗುತ್ತಿದ್ದ ಒಂದು ಪ್ರಕ್ರಿಯೆಯಾಗಿತ್ತು.

ಆದರೆ ಇಷ್ಟರವರೆಗೂ ಕರ್ನಾಟಕದ ಸಿನೆಮಾ-ರಾಜಕೀಯದ ನಂಟು ಯಾರಾದರೂ ಒಬ್ಬ ಮೇರುನಟ ಮುಖ್ಯಮಂತ್ರಿ ಸ್ಥಾನದವರೆಗೂ ತಲುಪಿ ರಾಜ್ಯವನ್ನು ಮುನ್ನಡೆಸುವ ಮಟ್ಟಕ್ಕೆ ಏರಿರಲಿಲ್ಲ. ಆಗಿದ್ದಿದ್ದರೆ ಬಹುಶಃ ಡಾ.ರಾಜಕುಮಾರ್ ಮಾತ್ರ ಅಂಥಾ ಸ್ಥಾನಕ್ಕೆ ಏರಬಹುದಾಗಿತ್ತು ಮತ್ತು ವ್ಯಕ್ತಿಗತವಾಗಿ ಅವರು ಅದಕ್ಕೆ ಅರ್ಹರೂ ಇದ್ದರು ಎಂದೆನಿಸುತ್ತದೆ. ಅವರನ್ನು ಹೊರತುಪಡಿಸಿ ಹಲವು ಖ್ಯಾತ ನಟರು ಶಾಸಕರಾಗಿ, ಮಂತ್ರಿಗಳಾಗಿ, ಕೇಂದ್ರ ಸಚಿವರಾಗಿ ರಾಜಕೀಯದಲ್ಲಿ ಸಕ್ರಿಯರಾದದ್ದು ನಾವು ಕಂಡಿದ್ದೇವೆ. ಹಾಗಾಗಿ ಕರ್ನಾಟಕದ ಚಿತ್ರಣ ನೆರೆಯ ರಾಜ್ಯಗಳಿಗಿಂತ ಸ್ವಲ್ಪ ಭಿನ್ನವೇ ಆದರೂ ಇಲ್ಲಿನ ಬಹುತೇಕ ಚಲನಚಿತ್ರ ರಸಿಕರು ಇಪ್ಪತ್ತು-ಮೂವತ್ತು ವರುಷಗಳ ಹಿಂದೆ ಡಾ.ರಾಜ್ ಅಭಿಮಾನಿ ಬಳಗ, ವಿಷ್ಣು ಅಭಿಮಾನಿ ಬಳಗ, ಅಂಬರೀಷ್ ಅಭಿಮಾನಿ ಬಳಗ, ಶಂಕರ್ ನಾಗ್ ಅಭಿಮಾನಿ ಬಳಗ ಎಂದೆಲ್ಲಾ ಸಂಘಟನೆಗಳನ್ನು ಒಟ್ಟು ಹಾಕಿಕೊಂಡು ತಮ್ಮ ಅಭಿಮಾನ ಮೆರೆಯುವುದರ ಜೊತೆಗೆ ಅಲ್ಲಲ್ಲಿ ಸಮಾಜ ಸೇವೆ, ರಾಜ್ಯೋತ್ಸವ, ಹಬ್ಬ-ಹರಿದಿನಗಳ ಆಚರಣೆಯಲ್ಲಿ ತೊಡಗಿಸಿಕೊಂಡಿದ್ದಿದ್ದರೆ ಇಂದಿನ ಕಳೆದ ಹತ್ತು-ಹದಿನೈದು ವರುಷಗಳ ಅವಧಿಯಲ್ಲಿ ಮಾರ್ಪಾಟುಗೊಂಡ ಈ (ದುರ)ಅಭಿಮಾನಿ ಬಳಗಗಳನ್ನು ಕಾಣುವಾಗ ವ್ಯಕ್ತಿಪೂಜೆಯ ಅಮಲು ಪರಾಕಾಷ್ಠೆಗೆ ಏರಿದೆ ಎನ್ನುವುದನ್ನು ಅರಿಯಲು ಯಾವ ವಿಶೇಷ ಜ್ಞಾನವೂ ಬೇಕಾಗಿಲ್ಲ.

ಕಳೆದಿಪ್ಪತ್ತು ವರುಷಗಳ ಚಲನಚಿತ್ರ ಮಾದರಿಯನ್ನು ಸ್ವಲ್ಪವೇ ಸೂಕ್ಷ್ಮವಾಗಿ ಗಮನಿಸಿದರೂ ನಾವು ಕಾಣುವುದು ಮಿತಿಮೀರಿದ ಹಿಂಸಾಚಾರ, ಸದ್ದು, ಗದ್ದಲ, ಅತಿರೇಕದ ಸಡಗರ, ಪ್ರೀತಿ-ಪ್ರೇಮ, ದ್ವೇಷ-ದಳ್ಳುರಿ, ಧರ್ಮ-ರಾಜಕೀಯ-ಸಮಾಜದ ಕಪೋಲಕಲ್ಪಿತ ಕಥೆಗಳನ್ನು ಆಧಾರಿಸಿ ನಿರ್ಮಾಣಗೊಂಡ ಚಿತ್ರಗಳೇ. ಮೊದಲಿನಿಂದಲೂ ಭಾರತದ ಜನಸಂಖ್ಯೆ ಅದರಲ್ಲೂ ದಕ್ಷಿಣಭಾರತದ ಸಿನಿರಸಿಕರು ತಮ್ಮ ತಮ್ಮ ಆರಾಧ್ಯದೈವಗಳೆಂದೇ ಜನಪ್ರಿಯರಾದ ನಟ-ನಟಿಯರನ್ನು ಬೆಳ್ಳಿತೆರೆಯ ಮೇಲೆ ಕಂಡು, ಸಂಭ್ರಮಿಸಿ ನಿಜಜೀವನಕ್ಕೂ ಸಿನೆಮಾಕ್ಕೂ ಯಾವುದೇ ಅಂತರವಿಲ್ಲವೆಂದು ಭ್ರಮಿಸಿಕೊಂಡು ಅವರಂತೆಯೇ ಬಾಳಿ-ಬದುಕಿ ತಮ್ಮತಮ್ಮ ಸಂಸಾರವನ್ನೂ ತಮಗಿಷ್ಟವಾದ ಚಿತ್ರಗಳಲ್ಲಿ ಕಂಡಂತೆ ಮುನ್ನಡೆಸಿಕೊಂಡು ಹೋದದ್ದನ್ನು ಕಂಡಿದ್ದೇವೆ, ಕೇಳಿದ್ದೇವೆ. ಕೆಲವರು ಅಂಥಾ ಒಂದು ಪ್ರಯತ್ನದಲ್ಲಿ ಯಶಸ್ವಿಯಾದರೆ ಬಹುತೇಕ ಮಂದಿ ಅತ್ತ ತಮ್ಮ ನೆಚ್ಚಿನ ನಾಯಕ-ನಾಯಕಿರ ಬೆಳ್ಳಿತೆರೆಯ ಮೇಲಿನ ಜೀವನಸುಖವನ್ನು ಅನುಭವಿಸಲಾರದೇ ಇತ್ತ ಜೀವನದಲ್ಲಿ ತಮಗಿದ್ದ ಕೆಲವೇ ಕೆಲವು ಅವಕಾಶಗಳನ್ನೂ ಚೆಲ್ಲಿ ಪಶ್ಚಾತ್ತಾಪ ಪಟ್ಟುದ್ದನ್ನೂ ಕಂಡಿದ್ದೇವೆ, ಕೇಳಿದ್ದೇವೆ. ಅಂಥಾ ನಿದರ್ಶನಗಳೇ ಸಮಾಜದೆದುರು ಸಾಕಷ್ಟಿರುವಾಗ ಇಂದಿನ ಅತ್ಯಂತ ವೇಗವಾಗಿ ಮುನ್ನುಗ್ಗುತ್ತಿರುವ ಮಾಹಿತಿ ತಂತ್ರಜ್ಞಾನದ ಆವಿಷ್ಕಾರಗಳಿಂದ ಇನ್ನೆನ್ನಿಲ್ಲದಂತೆ ಮುನ್ನಡೆಯುತ್ತಿರುವ ಸಮಾಜದ ಒಂದು ಭಾಗ ನಮ್ಮದಾದರೆ ಅದರ ಇನ್ನೊಂದು ಮಗ್ಗುಲು ಈ ಸಾಮಾನ್ಯ ಚಲನಚಿತ್ರ, ನಟ-ನಟಿಯರ (ದುರ)ಅಭಿಮಾನಿ ಬಳಗ. ಈ ಇನ್ನೊಂದು ಮಗ್ಗುಲು ಇಂದು ಸಮಾಜದ ಒಂದು ಬಹು ದೊಡ್ಡ ಹೊರೆಯೆಂದರೆ ಖಂಡಿತಾ ತಪ್ಪಾಗಲಾರದು. ಅದಕ್ಕೆ ಪೂರಕವೆನ್ನುವಂತೆ ಸರಕಾರದ ಹಲವಾರು ಯೋಜನೆಗಳು ಬಹುತೇಕ ಯುವ ಜನಾಂಗವನ್ನು ಆಲಸಿಗಳನ್ನಾಗಿ, ಸರಕಾರದ ಉಚಿತ ಯೋಜನೆಗಳ ಫಲಾನುಭವಿಗಳನ್ನಾಗಿಸಿ ಕೊನೆಯಲ್ಲಿ ಇಂಥಾ (ದುರ)ಅಭಿಮಾನಿಗಳ ಸಂಘಟನೆಗಳಲ್ಲಿ ತೊಡಗಿಸಿಕೊಳ್ಳುವತ್ತ ಪ್ರೇರಣೆ ನೀಡುತ್ತಿದೆ ಎನ್ನುವುದೂ ಸತ್ಯ. ಕೊನೆಯಲ್ಲಿ ವ್ಯಕ್ತಿಪೂಜೆಗೆ ಒಳಪಡುವ ಸಾಮಾನ್ಯ ಮನುಷ್ಯರೂ ವ್ಯಕ್ತಿಪೂಜೆಯನ್ನು ಮಾಡುವ ಯುವಜನಾಂಗವೂ ಒಟ್ಟಾಗಿಯೇ ಹಳ್ಳಕ್ಕೆ ಬೀಳುತ್ತಿರುವುದು ಕೂಡಾ ಅಷ್ಟೇ ಸತ್ಯ.

ಭಾರತ ಜಗತ್ತಿನಲ್ಲಿಯೇ ಅತ್ಯಂತ ಹೆಚ್ಚಿನ ಯುವ ಪ್ರಜೆಗಳನ್ನು ಹೊಂದಿರುವ ದೇಶ ಮತ್ತು ಮುಂದಿನ ಮೂವತ್ತು-ನಲವತ್ತು ವರುಶಗಳವರೆಗೂ ಅದರ ಲಾಭ ಭಾರತಕ್ಕಲ್ಲದೆ ಇನ್ನಾವ ದೇಶಕ್ಕೂ ಲಭಿಸಲಿಕ್ಕಿಲ್ಲ, ಲಭಿಸಲು ಸಾಧ್ಯವೂ ಇಲ್ಲ. ಒಂದು ದೇಶದ ಪ್ರಗತಿ, ಸಂಪತ್ತು, ಜಾಗತಿಕ ನಾಯಕತ್ವವೆಲ್ಲವೂ ನಿರ್ಧಾರವಾಗುವುದು ಆ ದೇಶದ ಒಟ್ಟೂ ಉತ್ಪಾದನಾ ಸೂಚ್ಯಂಕದ ಮಾಪನದಿಂದ. ಅಂಥಾ ಸೂಚ್ಯಂಕದ ಪಟ್ಟಿಯಲ್ಲಿ ಮೇಲೇರಲು ಇಂದಿನ ಯುವ ಜನಾಂಗದ ಕೊಡುಗೆಯನ್ನು ಎಷ್ಟು ನಿರೀಕ್ಷಿದರೂ ಕಡಿಮೆಯೇ. ಅಂಥಾ ಒಂದು ಸುವರ್ಣ ಘಳಿಗೆಯಲ್ಲಿ ಈ ದೇಶ ಮುನ್ನಡೆಯುತ್ತಿರುವಾಗ ಯಾವುದೇ ಒಂದು ಮೌಲ್ಯಾಧಾರಿತ ಜೀವನವನ್ನು ನಡೆಸಲು ಅನರ್ಹರೇ ಆಗಿರುವ ಬಹುತೇಕ ಧರ್ಮ-ರಾಜಕೀಯ-ಸಿನಿತಾರೆಯರ ಅಭಿಮಾನಿಗಳೆಂದು ದುರಭಿಮಾನ ಮೆರೆಯುತ್ತಾ, ಬೆಳ್ಳಿತೆರೆಯ ಮೇಲೆಯೋ ಅಥವಾ ಭಾಷಣ, ಬರಹಗಳಲ್ಲಿ ಕಂಡು ಬರುವ ಕ್ರೌರ್ಯ, ಅಟ್ಟಹಾಸ, ಹಿಂಸೆ, ಅತ್ಯಾಚಾರಗಳೆಲ್ಲವನ್ನೂ ನಿಜಜೀವನದಲ್ಲಿ ಅದೂ ಇದೇ ವ್ಯಕ್ತಿಪೂಜೆಯ ಫಲಾನುಭವಿಗಳಾದ ನಾಯಕ-ನಾಯಕಿಯರೆದುರೇ ನಡೆಸುವುದು ಕಾಣುವಾಗ ನಿಜಕ್ಕೂ ನಮ್ಮ ಸಮಾಜದ ಮನಸ್ಥಿತಿ ಏನೆಂದು ನಿಚ್ಚಳವಾಗುತ್ತದೆ. ಅದಕ್ಕೆ ಹೇಳಿದ್ದು ಎಲ್ಲದಕ್ಕೂ ಮೂಲಕಾರಣ ವ್ಯಕ್ತಿಪೂಜೆಯ ಮನೋಭಾವನೆಯೇ. ಅದು ಮೋದಿಯೇ ಆಗಿರಲಿ ಅಥವಾ ಇನ್ನಾವ ಧಾರ್ಮಿಕ ನಾಯಕರೇ ಇರಲಿ ಅಥವಾ ಸಿನಿಮಾ ತಾರೆಯರೇ ಇರಲಿ ಕೊನೆಯಲ್ಲಿ ಈ ಜೀವನವನ್ನು ನಡೆಸಿ ಬಾಳನ್ನು ಹಸನುಗೊಳಿಸುವ ಜವಾಬ್ದಾರಿ ಪ್ರತಿಯೊಬ್ಬ ಮನುಷ್ಯನ ಕೈಯಲ್ಲಿ ಮಾತ್ರ ಇರುವಂಥಾದ್ದು. ಯಾವುದೇ ಸಾಮಾನ್ಯ ಪ್ರಜೆಯೂ ಇನ್ನೋರ್ವ ವ್ಯಕ್ತಿಪೂಜೆಯ ಫಲದಿಂದ ತಾನು ಏರಬಲ್ಲ ಜೀವನದೆತ್ತರಕ್ಕೆ ಏರಲು ಸಾಧ್ಯವೇ ಇಲ್ಲ ಎನ್ನುವುದನ್ನು ಮನಗಾಣಬೇಕು. ಅದೆಷ್ಟೇ (ದುರ)ಅಭಿಮಾನ, (ಅ)ಗೌರವ, ಇತ್ಯಾದಿಗಳೇ ಇರಲಿ ಅದ್ಯಾವುವೂ ತಂತಮ್ಮ ಜೀವನದ ಯಶಸ್ಸಿಗೆ ಮತ್ತು ಪ್ರಗತಿಗೆ ಕಾರಣವಾಗಲು ಸಾಧ್ಯವೇ ಇಲ್ಲ ಎನ್ನುವುದು ಈ ಎಲ್ಲಾ (ದುರ)ಅಭಿಮಾನಿ ಬಳಗಗಳಿಗೆ ಗೊತ್ತಾಗಲೇಬೇಕು. ಸರಕಾರವೂ ಸಮಾಜದ ಈ ತರಹದ ದೋಷಗಳನ್ನು ಕಾನೂನಾತ್ಮಕವಾಗಿ ಹತ್ತಿಕ್ಕಲು ಇಂಥಾ ಸಂಘಟನೆಗಳ ಬಹಿಷ್ಕಾರವನ್ನೇಕೆ ಆಲೋಚಿಸಬಾರದು? ಸಮಾಜಸೇವೆಯ ಹೆಸರಿನಲ್ಲಿ (ದುರ)ಅಭಿಮಾನ ಮೆರೆದುಕೊಂಡು ಒಂದು ರೀತಿಯ ರೌಡಿ ಗ್ಯಾಂಗ್ ಗಳನ್ನೂ ಕಟ್ಟಿಕೊಂಡು ಮುನ್ನಡೆಯುವ ಎಲ್ಲಾ ಧರ್ಮ-ರಾಜಕೀಯ-ಸಿನೆಮಾ ಪ್ರೇರಿತ ಸಂಘಟನೆಗಳೂ ಬಹಿಷ್ಕಾರಗೊಂಡರೆ ಮಾತ್ರ ದೇಶದ ಯುವಜನಾಂಗ ಈ ಒಂದು ಅಮಲೇರಿದ ಮನಸ್ಥಿತಿಯಿಂದ ಪಾರಾಗಬಹುದೇನೋ? ಇಲ್ಲವಾದಲ್ಲಿ ಭಾರತದಷ್ಟು ಹಿಂಜರಿಯುವ ದೇಶ ಮುಂದಿನ ಎರಡು-ಮೂರು ದಶಕಗಳಲ್ಲಿ ಇನ್ನಾವುದೋ ಇರಲಿಕ್ಕಿಲ್ಲ. ದಂಡಂ ದಶಗುಣಂ ಭವೇತ್ ಎನ್ನುವ ಮಾತಿನಂತೆ ಸಮಾಜದ ಹಿತಚಿಂತಕರು ಇರುವಂಥಾ ನಾಯಕತ್ವ ಇಂದಿನ ಯುವ ಸಮಾಜವನ್ನು ವ್ಯಕ್ತಿಪೂಜೆಯಿಂದ ಮೇಲೇರುವಂತೆ ಪ್ರೇರಿಸಿ, ಸಾಮಾನ್ಯ ಧರ್ಮ-ರಾಜಕೀಯ- ಸಿನೆಮಾ ನಾಯಕ-ನಾಯಕಿಯರ ಮೇಲಿನ ಅತಿರೇಕಕ್ಕೇರಿದ (ದುರ)ಅಭಿಮಾನ ಪ್ರದರ್ಶನದ ಪರಾಕಾಷ್ಠೆಯನ್ನು ಕೆಳಕ್ಕಿಳಿಯುವಂತೆ ಮಾಡಲು ಮುಂದಾಗುತ್ತಾರೆಯೇ? ಅದಕ್ಕೆ ಕೆಲವಾದರೂ ಸದ್ಗುಣ-ಸಚ್ಚಾರಿತ್ರ್ಯ -ಸದ್ವಿಚಾರವುಳ್ಳ ಧರ್ಮ-ರಾಜಕೀಯ- ಸಿನೆಮಾ ನಾಯಕ ನಾಯಕರು ಬೆಂಬಲ ನೀಡುತ್ತಾರೆಯೇ? ಕನಿಷ್ಠ ಮುಂದಿನ ಪೀಳಿಗೆಯ ಮನೋಸ್ವಾಸ್ಥ್ಯದ ದೃಷ್ಟಿಯಿಂದಲಾದರೂ?

(ಲೇಖಕರು: ಹವ್ಯಾಸಿ ಬರಹಗಾರರು)

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393959/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:9, Issue:173

ಸಮಾಚಾರ ಸಣ್ಣದಲ್ಲ

ಬಾಂಬ್ ಸ್ಫೋಟ: ಇಬ್ಬರಿಗೆ ಗಾಯ

ನಾರಾಯಣಪುರ: ಛತ್ತೀಸಗಢದ ನಾರಾಯಣಪುರ ಜಿಲ್ಲೆಯಲ್ಲಿ ನಕ್ಸಲೀಯರು ಇಟ್ಟಿದ್ದ ಸುಧಾರಿತ ಸ್ಫೋಟಕ ಸಾಧನ (ಐಇಡಿ) ಸ್ಫೋಟಗೊಂಡು ಇಬ್ಬರು ಇಂಡೋ-ಟಿಬೆಟಿಯನ್ ಬಾರ್ಡರ್ (ಐಟಿಬಿಪಿ) ಸಿಬ್ಬಂದಿ ಗಾಯಗೊಂಡಿದ್ದಾರೆ. ಐಟಿಬಿಪಿಯ 53 ನೇ ಬೆಟಾಲಿಯನ್‌ನ ತಂಡವು ಪ್ರದೇಶದ ಹಿಡಿತ ಸಾಧಿಸುವ ಕಾರ್ಯಾಚರಣೆ ನಡೆಸುತ್ತಿದ್ದ ವೇಳೆ ಕುತುಲ್ ಗ್ರಾಮದ ಬಳಿ ಕಾಡಿನಲ್ಲಿ ಬೆಳಿಗ್ಗೆ 6.30 ರ ಸುಮಾರಿಗೆ ಈ ಘಟನೆ ನಡೆದಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಇಬ್ಬರು ಐಟಿಬಿಪಿ ಸಿಬ್ಬಂದಿ ಐಇಡಿ ಯೊಂದಿಗೆ ಸಂಪರ್ಕಕ್ಕೆ ಬಂದ ವೇಳೆ ಸ್ಫೋಟಗೊಂಡಿದೆ. ಗಾಯಗೊಂಡ ಸಿಬ್ಬಂದಿಯನ್ನು ಇಲ್ಲಿನ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಅಪಾಯದಿಂದ ಪಾರಾಗಿದ್ದಾರೆ. ಐಇಡಿ ಸ್ಫೋಟಗೊಂಡ ಪ್ರದೇಶದಲ್ಲಿ ಶೋಧ ಕಾರ್ಯಾಚರಣೆ ನಡೆಯುತ್ತಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.

ಸ್ಫೋಟ:ಕಾರ್ಖಾನೆಯ ನಿರ್ದೇಶಕರ ಬಂಧನ

ನಾಗ್ಪುರ: ಇಲ್ಲಿನ ಕಾರ್ಖಾನೆಯೊಂದರಲ್ಲಿ ಗುರುವಾರ ಸ್ಫೋಟ ಸಂಭವಿಸಿದ್ದು, ಆರು ಕಾರ್ಮಿಕರು ಮೃತಪಟ್ಟಿದ್ದಾರೆ. ಈ ಸಂಬಂಧ ಕಾರ್ಖಾನೆಯ ನಿರ್ದೇಶಕ, ವ್ಯವಸ್ಥಾಪಕರನ್ನು ಪೊಲೀಸರು ಶುಕ್ರವಾರ ಬಂಧಿಸಿದ್ದಾರೆ. ಚಾಮುಂಡಿ ಎಕ್ಸ್‌ಪ್ಲೋಸಿವ್ ಪ್ರೈವೇಟ್ ಲಿಮಿಟೆಡ್ ಕಾರ್ಖಾನೆ ನಿರ್ದೇಶಕ ಜಯ್ ಖೇಮ್ಕಾ ಹಾಗೂ ವ್ಯವಸ್ಥಾಪಕ ಸಾಗರ್ ದೇಶಮುಖ್ ಅವರನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ನಾಗ್ಪುರ ಸಮೀಪದ ಧಾಮ್ನಾ ಗ್ರಾಮದಲ್ಲಿರುವ ಸ್ಫೋಟಕ ತಯಾರಿಕಾ ಕಾರ್ಖಾನೆಯಲ್ಲಿ ಗುರುವಾರ ಮಧ್ಯಾಹ್ನ 1ರ ಸುಮಾರಿಗೆ ಸ್ಫೋಟ ಸಂಭವಿಸಿತ್ತು. ಗಾಯಗೊಂಡಿದ್ದ 9 ಮಂದಿಯನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಇವರಲ್ಲಿ ಐವರು ಮಹಿಳೆಯರು ಮತ್ತು ಒಬ್ಬ ಪುರುಷ ಚಿಕಿತ್ಸೆ ವೇಳೆ ಮೃತಪಟ್ಟಿದ್ದಾರೆ ಎಂದು ಪೊಲೀಸರು ಈಗಾಗಲೇ ಮಾಹಿತಿ ನೀಡಿದ್ದಾರೆ. ಸ್ಫೋಟ ಸಂಭವಿಸಿದಾಗ, ಸಂತ್ರಸ್ತರು ಪ್ಯಾಕಿಂಗ್ ವಿಭಾಗದಲ್ಲಿದ್ದರು ಎನ್ನಲಾಗಿದೆ. ನಿರ್ದೇಶಕ ಮತ್ತು ವ್ಯವಸ್ಥಾಪಕರ ವಿರುದ್ಧ ಐಪಿಸಿಯ ವಿವಿಧ ಸೆಕ್ಷನ್‌ಗಳ ಅಡಿಯಲ್ಲಿ ಗುರುವಾರ ರಾತ್ರಿಯೇ ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು ಎಂದು ಹಿಂಗ್ನಾ ಪೊಲೀಸ್ ಠಾಣೆ ಅಧಿಕಾರಿಗಳು ತಿಳಿಸಿದ್ದಾರೆ.

ಕಾವೇರಿ ರೈತರಿಗೆ ತಮಿಳುನಾಡು ಪ್ಯಾಕೇಜ್

ಚೆನ್ನೈ : ಮೆಟ್ಟೂರು ಜಲಾಶಯದಿಂದ ಕಾವೇರಿ ನೀರು ಹರಿಸುವುದು ವಿಳಂಬವಾದ ಹಿನ್ನೆಲೆಯಲ್ಲಿ ರಾಜ್ಯದ ಜಲಾನಯನ ಪ್ರದೇಶದ ರೈತರಿಗೆ ತಮಿಳುನಾಡು ಸರ್ಕಾರ 78.67 ಕೋಟಿ ರು.ಗಳ ವಿಶೇಷ ಪ್ಯಾಕೇಜ್ ಘೋಷಿಸಿದೆ. ಮುಂಗಾರು ವಿಳಂಬ ಮತ್ತು ಜಲಾಶಯದಲ್ಲಿ ನೀರು ಕಡಿಮೆಯಿದ್ದ ಕಾರಣ ಜೂ. 12 ರಿಂದ ನೀರು ಹರಿಸದಿರಲು ಸ್ಟಾಲಿನ್ ಸರ್ಕಾರ ನಿರ್ಧರಿಸಿತ್ತು. ಹೀಗಾಗಿ ಅಲ್ಪಾವಧಿ ಬೆಳೆ ಬೆಳೆಯುವ ರೈತರ ಅನುಕೂಲಕ್ಕೆ ವಿಶೇಷ ಪ್ಯಾಕೇಜ್ ಬಿಡುಗಡೆ ಮಾಡಲಾಗಿದೆ ಎಂದು ಸಚಿವ ಎಂಆರ್‌ಕೆ ಪನ್ನೀರ್ ಸೆಲ್ವಂ ಹೇಳಿದ್ದಾರೆ. ಕಾವೇರಿ ಜಲಾನಯನ ಪ್ರದೇಶದ ಒಂದು ಲಕ್ಷ ಎಕರೆ ಪ್ರದೇಶಕ್ಕೆ 2000 ಮೆಟ್ರಿಕ್ ಟನ್ ಭತ್ತದ ಬಿತ್ತನೆಬೀಜವನ್ನು ಸಬ್ಸಿಡಿ ದರದಲ್ಲಿ ಪೂರೈಕೆ,ಯಂತ್ರೋಪಕರಣಗಳ ಖರೀದಿಗೆ 40 ಕೋಟಿ ಸಬ್ಸಿಡಿ,ಎಕರೆಗೆ 4 ಸಾವಿರ ರು. ಪರಿಹಾರ ಮೊದಲಾದುವು ಈ ಪ್ಯಾಕೇಜ್‌ನಲ್ಲಿ ಸೇರಿವೆ.

ಆಂಧ್ರದಲ್ಲಿ ಅಪಘಾತಕ್ಕೆ ಆರು ಮಂದಿ ಬಲಿ

ವಿಜಯವಾಡ: ಟ್ರಕ್‌ಗಳ ಮಧ್ಯೆ ಅಪಘಾತ ಸಂಭವಿಸಿದ್ದು ಆರು ಮಂದಿ ಸಾವನ್ನಪ್ಪಿದ್ದ ಘಟನೆ ಆಂಧ್ರಪ್ರದೇಶದ ಕೃಷ್ಣಾ ಜಿಲ್ಲೆಯ ಸೀತಾನಪಲ್ಲೆ ಬಳಿ ಶುಕ್ರವಾರ ನಡೆದಿದೆ. ಮೃತರೆಲ್ಲ ಪೂರ್ವ ಗೋದಾವರಿ ಹಾಗೂ ಕೋಣಸೀಮಾ ಜಿಲ್ಲೆಯವರಾಗಿದ್ದು ರೇವು ಭೂಷಣಮ್(26), ಧರ್ಮಾವರ ಪ್ರಸಾದ್(27), ಕನಕರಾಜು , ಚಿಂತಾ ಲೊವರಾಜು(32), ಮಗಪು ನಾಗರಾಜು, ಜಯರಾಮನ್ ಎಂದು ಗುರುತಿಸಲಾಗಿದೆ. ಅಪಘಾತದಲ್ಲಿ ಎರಡೂ ಟ್ರಕ್ ವಾಹನದ ಚಾಲಕರು ಹಾಗೂ ಮೂವರು ಪ್ರಯಾಣಿಕರು ಸ್ಥಳದಲ್ಲೇ ಸಾವನಪ್ಪಿದ್ದು, ಮತ್ತೋರ್ವ ಆಸ್ಪತ್ರೆಗೆ ಸಾಗಿಸುವ ಮಾರ್ಗದಲ್ಲಿ ಮೃತರಾಗಿದ್ದಾರೆ. ಟ್ರಕ್‌ನಲ್ಲಿದ್ದ ಇನ್ನೂ ಐವರು ಗಾಯಗೊಂಡಿದ್ದು ಸ್ಥಳಿಯ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಘಟನೆಯಲ್ಲಿ ಮೃತರಾದವರ ಕುಟುಂಬಕ್ಕೆ ಸರಕಾರ 5 ಲಕ್ಷರೂ ಪರಿಹಾರ ಘೋಷಿಸಿದೆ. ಸಚಿವ ಕೊಳ್ಳು ರವೀಂದ್ರ, ಸ್ಥಳಕ್ಕೆ ಭೇಟಿ ನೀಡಿದ್ದು ಮಚಿಲಿಪಟ್ಟಣಂ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವವರನ್ನ ಭೇಟಿಯಾಗಿ ಯೋಗಕ್ಷೇಮ ವಿಚಾರಿಸಿದ್ದಾರೆ.

ಸಗಟು ಹಣದುಬ್ಬರ ಗರಿಷ್ಠ ಮಟ್ಟಕ್ಕೆ ಏರಿಕೆ

ನವದೆಹಲಿ : ಆಹಾರ ಪದಾರ್ಥಗಳ ಬೆಲೆಯಲ್ಲಿ ಭಾರಿ ಏರಿಕೆಯೊಂದಿಗೆ ಮೇ ತಿಂಗಳಲ್ಲಿ ಸಗಟು ಹಣದುಬ್ಬರ ಪ್ರಮಾಣ 15 ತಿಂಗಳ ಗರಿಷ್ಠ ಮಟ್ಟಕ್ಕೆ ಏರಿದೆ. ಕಳೆದ ಏಪ್ರಿಲ್‌ನಲ್ಲಿ ಶೇ. 7.74 ರಷ್ಟಿದ್ದ ಹಣದುಬ್ಬರ ದರ ಮೇನಲ್ಲಿ ಶೇ. 9.82ಕ್ಕೆ ತೀವ್ರ ಹೆಚ್ಚಳ ಕಂಡಿದೆ. ಇದರಿಂದಾಗಿ ಹಣದುಬ್ಬರ ಪ್ರಮಾಣ ಶೇ.2.61 ರಷ್ಟು ಏರಿದಂತಾಗಿದೆ. ಬಿಸಿಗಾಳಿಯಂತಹ ಹವಾಮಾನ ವೈಪರೀತ್ಯದಿಂದಾಗಿ ತರಕಾರಿ ಮತ್ತು ಆಹಾರ ಪದಾರ್ಥಗಳ ಬೆಲೆ ಏರುಗತಿಯಲ್ಲಿವೆ. ವಿಶೇಷವಾಗಿ ಈರುಳ್ಳಿ ಮತ್ತು ಆಲೂಗಡ್ಡೆ ಬೆಲೆ ಹೆಚ್ಚಳ, ತಯಾರಿಕಾ ಸರಕುಗಳು, ಕಚ್ಚಾತೈಲ ಮತ್ತು ನೈಸರ್ಗಿಕ ಅನಿಲ ಮತ್ತು ಖನಿಜ ತೈಲದ ಬೆಲೆ ಏರಿದ್ದೇ ಹಣದುಬ್ಬರದ ತೀವ್ರತೆಗೆ ಕಾರಣ. ಇದು ಕಳೆದ 15 ತಿಂಗಳ ಗರಿಷ್ಠ ಮಟ್ಟದ ಏರಿಕೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ ಶುಕ್ರವಾರ ಅಂಕಿ-ಅಂಶ ನೀಡಿದೆ. ಈರುಳ್ಳಿ ಬೆಲೆ ಶೇ. 58.5, ಆಲೂಗಡ್ಡೆ ಶೇ.64.05 ಮತ್ತು ಬೇಳೆಕಾಳುಗಳ ಬೆಲೆ ಶೇ. 21.95 ರಷ್ಟು ಹೆಚ್ಚಳ ಕಂಡಿದೆ.

ಕಲಬುರಗಿ ಮೂಲದ ಓರ್ವ ಮೃತ್ಯು | ವಾಯುಪಡೆ ವಿಶೇಷ ವಿಮಾನದಲ್ಲಿ ಆಗಮನ

ಕುವೈತ್‌ನಿಂದ 45 ಮೃತದೇಹ ಭಾರತಕ್ಕೆ

ದೆಹಲಿ: ಕುವೈತ್‌ನ ಮಂಗಾಫ್ ನಗರದಲ್ಲಿ ನಡೆದ ಅಗ್ನಿ ದುರಂತದಲ್ಲಿ ಮೃತರಾದ 45 ಭಾರತೀಯರ ಮೃತದೇಹ ಶುಕ್ರವಾರ ಭಾರತ ತಲುಪಿದೆ. ವಾಯುಸೇನೆಯ ವಿಶೇಷ ವಿಮಾನದಲ್ಲಿ ಮೃತದೇಹಗಳನ್ನು ದೇಶಕ್ಕೆ ತರಲಾಗಿದ್ದು ಕೊಚ್ಚಿ ವಿಮಾನ ನಿಲ್ದಾಣದಲ್ಲಿ ಲ್ಯಾಂಡ್ ಆಗಿದೆ.

ಅಗ್ನಿ ದುರಂತದಲ್ಲಿ ಕೇರಳದ 23, ತಮಿಳುನಾಡಿನ 7, ಆಂಧ್ರಪ್ರದೇಶ ಮತ್ತು ಉತ್ತರಪ್ರದೇಶದ ಮೂವರು , ಒಡಿಶಾದ ಇಬ್ಬರು ಹಾಗೂ ಬಿಹಾರ್, ಪಂಜಾಬ್, ಕರ್ನಾಟಕ, ಮಹಾರಾಷ್ಟ್ರ, ಪಶ್ಚಿಮ ಬಂಗಾಳ, ಜಾರ್ಖಂಡ ಮತ್ತು ಹರಿಯಾಣದ ತಲಾ ಒಬ್ಬರು ಬಲಿಯಾಗಿದ್ದಾರೆ.

ಕೊಚ್ಚಿ ವಿಮಾನ ನಿಲ್ದಾಣಕ್ಕೆ ವಿಶೇಷ ವಿಮಾನ ಬರುತ್ತಿದ್ದಂತೆ ಪೋಷಕರ ಆಕ್ರಂದನ ಮುಗಿಲು ಮುಟ್ಟಿತ್ತು. ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್, ಕೇಂದ್ರ ಸಚಿವ ಸುರೇಶ್ ಗೋಪಿ , ವಿ ಮುರಳೀಧರನ್ ವಿಮಾನ ನಿಲ್ದಾಣಕ್ಕೆ ಭೇಟಿ ನೀಡಿ ಪಾರ್ಥಿವ ಶರೀರಕ್ಕೆ ಪುಷ್ಪನಮನ ಸಲ್ಲಿಸಿದ್ದಾರೆ. ತಮಿಳುನಾಡು ಹಾಗೂ ಕರ್ನಾಟಕ ಮೂಲದ ಕಾರ್ಮಿಕರ ಮೃತದೇಹವನ್ನು ಕೊಚ್ಚಿಯಿಂದ ಆಂಬುಲೆನ್ಸ್ ಮೂಲಕ ಆಯಾ ರಾಜ್ಯಗಳಿಗೆ ರವಾನಿಸಲಾಗಿದೆ. ಇನ್ನೂ 14 ಮೃತದೇಹಗಳನ್ನು ಹೊತ್ತು ವಿಮಾನ ದೆಹಲಿಗೆ ತೆರಳಿದೆ.

ಕುವೈತ್ ದುರಂತದ ಬಗ್ಗೆ ಮಾತನಾಡಿದ ವಿದೇಶಾಂಗ ರಾಜ್ಯ ಸಚಿವ ಕೀರ್ತಿ ವರ್ಧನ ಸಿಂಗ್, ಮೃತದೇಹಗಳನ್ನು ಭಾರತಕ್ಕೆ ಹಸ್ತಾಂತರಿಸುವ ಪ್ರಕ್ರಿಯೆಯನ್ನು ಶೀಘ್ರದಲ್ಲಿ ಮುಗಿಸುವಲ್ಲಿ ಕುವೈತ್ ಅಧಿಕಾರಿಗಳು ನೆರವಾಗಿದ್ದಾರೆ . ಪ್ರಧಾನಿ ಮೋದಿ ಅವರ ಸೂಚನೆ ಮೇರೆಗೆ ಎಲ್ಲಾ ಕೆಲಸಗಳು ಬೇಗ ಮುಗಿದು ಮೃತದೇಹಗಳನ್ನು ತ್ವರಿತವಾಗಿ ಭಾರತಕ್ಕೆ ತರುವಂತಾಯಿತು ಎಂದು ಹೇಳಿದ್ದಾರೆ. ಕೀರ್ತಿ ವರ್ಧನ್ ಸಿಂಗ್ ಅಗ್ನಿ ದುರಂತದ ಬಳಿಕ ಕುವೈತ್‌ಗೆ ತೆರಳಿದ್ದು ಮೃತದೇಹಗಳನ್ನು ಭಾರತಕ್ಕೆ ತರುವಲ್ಲಿ ಹಾಗೂ ಗಾಯಗೊಂಡವರ ಆರೋಗ್ಯ ವಿಚಾರಿಸಿ ಸೂಕ್ತ ಮಾಹಿತಿ ರವಾನಿಸುವಲ್ಲಿ ನೆರವಾಗಿದ್ದಾರೆ. ಬುಧವಾರ ಕೇರಳ ಮೂಲದ ವ್ಯಾಪಾರಿಗೆ ಸಂಬಂಧಿಸಿದ 6 ಮಹಡಿ ಕಟ್ಟಡದಲ್ಲಿ ಅಗ್ನಿ ಅವಘಡ ಸಂಭವಿಸಿದ್ದು 49 ಮಂದಿ ಸುಟ್ಟು ಕರಕಲಾಗಿದ್ದರು. ಅವರಲ್ಲಿ 45 ಮಂದಿ ಭಾರತೀಯರಾಗಿದ್ದು ಡಿಎನ್‌ಎ ಪರೀಕ್ಷೆ ಬಳಿಕ ಗುರುತು ಪತ್ತೆ ಹಚ್ಚಿ ಮೃತದೇಹಗಳನ್ನು ಕಾರ್ಮಿಕರ ಸ್ವಗ್ರಾಮಗಳಿಗೆ ರವಾನಿಸಲಾಗಿದೆ. ಇನ್ನೂ 6 ಮಂದಿ ಭಾರತೀಯರು ಗಾಯಗೊಂಡಿದ್ದು ಕುವೈತ್ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಭಾರತೀಯ ವಾಯ ಸೇನೆ 45 ಭಾರತೀಯರ ಮೃತದೇಹವನ್ನು ಹೊತ್ತು ಸ್ವದೇಶಕ್ಕೆ ಬಂದಿದೆ.

ಕರ್ನಾಟಕದ ವ್ಯಕ್ತಿ ಸಾವು

ಕುವೈತ್ ಅಗ್ನಿ ದುರಂತದಲ್ಲಿ ಕಲಬುರಗಿ ಅಳಂದದ ಸರಸಂಬಾ ಮೂಲದ ವ್ಯಕ್ತಿ ಸಾವನ್ನಪ್ಪಿದ್ದಾನೆ. ವಿಜಯ್‌ಕುಮಾರ್ ಹಲವು ವರ್ಷಗಳಿಂದ ಕುವೈತ್‌ನಲ್ಲಿ ನೆಲಸಿದ್ದ ರು ಎಂದು ತಿಳಿದು ಬಂದಿದೆ. ಅವರ ಪಾರ್ಥಿವ ಶರೀರವನ್ನ ಕೊಚ್ಚಿ ವಿಮಾನ ನಿಲ್ದಾಣದಿಂದ ಸ್ವಗ್ರಾಮಕ್ಕೆ ತರಲಾಗಿದೆ. ಮೃತರು ಮೂರು ಮಕ್ಕಳು, ಪತ್ನಿ,ತಂದೆ, ತಾಯಿಯನ್ನ ಅಗಲಿದ್ದಾರೆ.

ನೌಕಾಪಡೆಗೆ 26 ರಫೇಲ್ ಖರೀದಿ ಚರ್ಚೆ

ದೆಹಲಿ: ಭಾರತೀಯ ನೌಕಾಪಡೆಗೆ 26 ರಫೇಲ್ ಜೆಟ್‌ಗಳ ಖರೀದಿ ಒಪ್ಪಂದದ ಕುರಿತಂತೆ ಬೆಲೆ ಮತ್ತು ಇತರ ಸಂಬಂಧಿತ ವಿಷಯಗಳ ಕುರಿತಾಗಿ ಭಾರತ ಮತ್ತು ಫ್ರಾನ್ಸ್ ಅಧಿಕಾರಿಗಳು ಮಾತುಕತೆ ಆರಂಭಿಸಿದ್ದಾರೆ.

ಮೇ 30ರಂದೇ ಮಾತುಕತೆ ನಡೆಯಬೇಕಿತ್ತು. ಆದರೆ, ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ಜೂನ್ ಎರಡನೇ ವಾರಕ್ಕೆ ಮಾತುಕತೆ ಮುಂದೂಡಲಾಗಿತ್ತು. ಭಾರತಕ್ಕೆ ರಫೇಲ್ ಯುದ್ಧ ವಿಮಾನ ಮಾರಾಟದ ನಿರ್ವಹಣೆ ಮಾಡುವ ಫ್ರಾನ್ಸ್ ಯುದ್ಧೋಪಕರಣ ವಿಭಾಗದ ಡಿಜಿ ಸೇರಿದಂತೆ ಫ್ರೆಂಚ್ ನಿಯೋಗವು ದೆಹಲಿಗೆ ಬಂದಿದೆ ಎಂದು ರಕ್ಷಣಾ ಇಲಾಖೆಯ ಮೂಲಗಳು ತಿಳಿಸಿವೆ. ಭಾರತದ ಪರವಾಗಿ ರಕ್ಷಣಾ ಇಲಾಖೆಯ ಅಡಿಯಲ್ಲಿ ಬರುವ ಶಸ್ತ್ರಾಸ್ತ್ರ ಖರೀದಿ ವಿಭಾಗದ ಅಧಿಕಾರಿಗಳು ಮಾತುಕತೆಯಲ್ಲಿ ಭಾಗವಹಿಸಿದ್ದಾರೆ.

ಈ ಖರೀದಿ ಯೋಜನೆಯು ಸುಮಾರು 50,000 ಕೋಟಿ ರು. ಮೊತ್ತದ್ದಾಗಿದ್ದು, ಇವುಗಳ ಖರೀದಿ ಬಳಿಕ ಭಾರತದಲ್ಲಿ ರಫೇಲ್ ಯುದ್ಧ ವಿಮಾನಗಳ ಸಂಖ್ಯೆ 60 ದಾಟಲಿದೆ. ಈಗ ಭಾರತದಲ್ಲಿ 36 ರಫೇಲ್ ಯುದ್ಧ ವಿಮಾನಗಳಿವೆ. ನೌಕಾಪಡೆಗಾಗಿ ಖರೀದಿಸಲಾಗುತ್ತಿರುವ ಈ ಹೊಸ ಯುದ್ಧ ವಿಮಾನಗಳನ್ನು ಐಎನ್‌ಎಸ್ ವಿಕ್ರಮಾದಿತ್ಯ ಮತ್ತು ಐಎನ್‌ಎಸ್ ವಿಕ್ರಾಂತ್ ಯುದ್ಧನೌಕೆಗಳ ಮೂಲಕ ಕಾರ್ಯಾಚರಣೆ ನಡೆಸಬಹುದಾಗಿದೆ.

ಜಿ 7 ಶೃಂಗ ಸಭೆ- ವಿಶ್ವ ನಾಯಕರ ಜತೆ ಮೋದಿ ಮಾತುಕತೆ

ವಿಶ್ವನಾಯಕರ ಜೊತೆ ಮೋದಿ ಮಾತುಕತೆ

ಇಟಲಿ : ಅಪುಲಿಯಾದಲ್ಲಿ ನಡೆಯುತ್ತಿರುವ 50ನೇ ಜಿ 7 ಶೃಂಗ ಸಭೆಯಲ್ಲಿ ಪ್ರಧಾನಿ ಮೋದಿ ಭಾಗಿಯಾಗಿದ್ದು ವಿಶ್ವ ನಾಯಕರ ಜತೆ ಪ್ರಧಾನಿ ದ್ವಿಪಕ್ಷೀಯ ಮಾತುಕತೆ ನಡೆಸಿದ್ದಾರೆ. ಜೂನ್ 13ರಿಂದ 15ನೇ ವರೆಗೆ ನಡೆಯುತ್ತಿರುವ ಈ ಸಭೆಯಲ್ಲಿ ರಷ್ಯಾ -ಉಕ್ರೇನ್, ಇಸ್ರೇಲ್ ಯುದ್ಧ ಹಾಗೂ ಕೃತಕ ಬುದ್ಧಿಮತ್ತೆ ವಿಚಾರಗಳು ಪ್ರಮುಖವಾಗಿ ಚರ್ಚಿಸಲಾಗಿದೆ.

ಭಾರತ, ಅಮೆರಿಕಾ, ಕೆನಡಾ, ಜರ್ಮನಿ, ಫ್ರಾನ್ಸ್, ಉಕ್ರೇನ್, ಟರ್ಕಿ, ಯುಕೆ, ಸೇರಿ ಅನೇಕ ರಾಷ್ಟ್ರಗಳ ನಾಯಕರು ಭಾಗಿಯಾಗಿದ್ದಾರೆ. ಮೂರನೇ ಬಾರಿ ಪ್ರಧಾನಿಯಾಗಿ ಅಧಿಕಾರವಹಿಸಿಕೊಂಡಿರುವ ಮೋದಿಗೆ ಈ ಸಭೆಯಲ್ಲಿ ಅನೇಕ ರಾಷ್ಟ್ರಗಳ ನಾಯಕರ ಜತೆ ದ್ವಿಪಕ್ಷೀಯ ಚರ್ಚೆ ನಡೆಸಿದ್ದಾರೆ. ಈ ಜಿ7 ಶೃಂಗಸಭೆ ಮೋದಿ ಅವರ ಮೂರನೇ ಪ್ರಧಾನಿ ಅವಧಿಯ ಮೊದಲ ವಿದೇಶ ಪ್ರವಾಸವಾಗಿದೆ. ಯುದ್ಧ ಪೀಡಿತ ರಾಷ್ಟ್ರ ಉಕ್ರೇನ್‌ನ ಅಧ್ಯಕ್ಷ ವೊಲೊಡಿಮೀರ್ ಜೆಲೆನ್ಸ್ಕಿ ಭೇಟಿ ಮಾಡಿದ ಮೋದಿ ಉಕ್ರೇನ್ ಜತೆ ದ್ವಿಪಕ್ಷೀಯ ಸಂಬಂಧ ಇನ್ನಷ್ಟು ಗಟ್ಟಿಗೊಳಿಸಲು ಭಾರತ ಸಿದ್ಧವಿದೆ ಎಂದು ಹೇಳಿದ್ದಾರೆ. ಭಾರತ ಮಾನವ ಕೇಂದ್ರಿತ ವಿಧಾನದ ಮೇಲೆ ನಂಬಿಕೆ ಇಟ್ಟಿದ್ದು ಪರಸ್ಪರ ಮಾತುಕತೆ, ರಾಜತಾಂತ್ರಿಕ ವಿಧಾನದ ಮೂಲಕ ಶಾಂತಿ ಸ್ಥಾಪನೆ ಸಾಧ್ಯ ಎಂದು ಪ್ರಸ್ತುತ ಉಕ್ರೇನ್ ಮತ್ತು ರಷ್ಯಾ ನಡುವಿನ ಸಂಘರ್ಷದ ಬಗ್ಗೆ ಮೋದಿ ಹೇಳಿದ್ದಾರೆ.

ಸಭೆಯಲ್ಲಿ ಫ್ರಾನ್ಸ್ ಅಧ್ಯಕ್ಷ ಇಮ್ಯಾನ್ಯುವೆಲ್ ಮಾಕ್ರೋನ್ ಭೇಟಿಯಾದ ಮೋದಿ ರಕ್ಷಣಾ ವಲಯ, ಬಾಹ್ಯಾಕಾಶ ಸಂಶೋಧನೆ, ಸಂಪರ್ಕ ಮತ್ತು ಸಂಸ್ಕೃತಿ, ಶಿಕ್ಷಣ ಸೇರಿ ಹಲವು ಕ್ಷೇತ್ರಗಳಲ್ಲಿ ತಮ್ಮ ಪಾಲುದಾರಿಕೆಯನ್ನು ಮತ್ತಷ್ಟು ಬಲಿಷ್ಟಗೊಳಿಸುವ ಬಗ್ಗೆ ಮಾತುಕತೆ ನಡೆಸಿದ್ದಾರೆ ಎಂದು ವಿದೇಶಾಂಗ ಇಲಾಖೆ ಸಚಿವಾಲಯದ ವಕ್ತಾರ ರಣದೀರ್ ಜೈಸ್ವಾಲ್ ಮಾಹಿತಿ ನೀಡಿದ್ದಾರೆ.

ಸೆಮಿಕಂಡಕ್ಟರ್, ತಂತ್ರಜ್ಞಾನ ಮತ್ತು ವ್ಯಾಪಾರದಂತಹ ವಲಯಗಳಲ್ಲಿ ಸಹಕಾರವನ್ನು ಹೆಚ್ಚಿಸುವ ಹಾಗೇ 2030ರವರೆಗಿನ ಭಾರತ ಮತ್ತು ಯುಕೆಯ ಕಾರ್ಯಯೋಜನೆಗಳ ಕುರಿತು ಮೋದಿ ಹಾಗೂ ಯುಕೆ ಪ್ರಧಾನಿ ರಿಷಿ ಸುನಕ್ ಮಾತುಕತೆ ನಡೆಸಿದ್ದಾರೆ. ರಕ್ಷಣಾ ವಲಯದಲ್ಲಿ ಸಹಯೋಗವನ್ನು ಮತ್ತಷ್ಟು ಬಲಗೊಳಿಸುವ ಅವಕಾಶಗಳ ಕುರಿತು ಕೂಡ ಉಭಯ ನಾಯಕರು ಮಾತುಕತೆ ನಡೆಸಿದರು.

ಮುಖ್ಯಮಂತ್ರಿಯಿಂದ ಖಾತೆ ಹಂಚಿಕೆ

ಆಂಧ್ರಕ್ಕೆ ಪವನ್ ಡಿಸಿಎಂ

ಅಮರಾವತಿ: ಜನಸೇನಾ ನಾಯಕ ಪವನ್ ಕಲ್ಯಾಣ್ ಅವರನ್ನು ಆಂಧ್ರಪ್ರದೇಶದ ಉಪ ಮುಖ್ಯಮಂತ್ರಿಯಾಗಿ ಶುಕ್ರವಾರ ಘೋಷಣೆ ಮಾಡಲಾಗಿದೆ.

ಸರಕಾರ ರಚನೆ ಮಾತುಕತೆಯ ಆರಂಭದಿಂದಲೂ ಉಪ ಮುಖ್ಯಮಂತ್ರಿ ಸ್ಥಾನಕ್ಕೆ ಪವನ್ ಕಲ್ಯಾಣ್ ಹೆಸರು ಕೇಳಿ ಬಂದಿದ್ದು ಶುಕ್ರವಾರ ಅಧಿಕೃತವಾಗಿದೆ. ಸಿಎಂ ಚಂದ್ರಬಾಬು ನಾಯ್ಡು ಸಂಪುಟದಲ್ಲಿ ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿರುವ ಪವನ್ ಕಲ್ಯಾಣ್‌ಗೆ ಪಂಚಾಯತ್‌ರಾಜ್, ಗ್ರಾಮೀಣಾಭಿವೃದ್ಧಿ ಮತ್ತು ಅರಣ್ಯ ಖಾತೆಯನ್ನು ಹಂಚಿಕೆ ಮಾಡಲಾಗಿದೆ. ಇನ್ಮುಂದೆ ಈ ಇಲಾಖೆಗಳ ಜವಾಬ್ದಾರಿ ಜತೆಗೆ ಉಪ ಮುಖ್ಯಮಂತ್ರಿ ಸ್ಥಾನವನ್ನೂ ನಿಭಾಯಿಸಲಿದ್ದಾರೆ. ನಾಯ್ಡು ಸಂಪುಟದಲ್ಲಿ ಜನಸೇನಾ ಪಕ್ಷದ ಮೂರು ನಾಯಕರಿಗೆ ಸಚಿವ ಸ್ಥಾನ ನೀಡಲಾಗಿದ್ದು ಒಟ್ಟು 24 ಸಚಿವರು ಬುಧವಾರ ಪ್ರಮಾಣ ವಚನ ಸ್ವೀಕರಿಸಿದ್ದಾರೆ. ಸಿಎಂ ಚಂದ್ರಬಾಬು ನಾಯ್ಡು ಕಾನೂನು ಮತ್ತು ಸುವ್ಯವಸ್ಥೆ ಇಲಾಖೆ, ಸಾರ್ವಜನಿಕ ಉದ್ಯಮ ಖಾತೆಯನ್ನು ತಮ್ಮಲ್ಲಿ ಉಳಿಸಿಕೊಂಡಿದ್ದು 24 ಸಚಿವರಿಗೆ ಖಾತೆ ಹಂಚಿಕೆ ಮಾಡಿದ್ದಾರೆ.

ಅನಿತಾ ವಂಗಲ್ಪುಡಿ	ಗೃಹ ಇಲಾಖೆ ಮತ್ತು ವಿಪತ್ತು ನಿರ್ವಹಣೆ
ಪಯ್ಯವುಲ ಕೇಶವ್	ಹಣಕಾಸು ಇಲಾಖೆ
ಡಾ.ನಿಮ್ಮಲಾ ರಾಮನಾಯ್ಡು	ನೀರಾವರಿ ಇಲಾಖೆ
ನಾರಾ ಲೋಕೇಶ್	ಮಾನವ ಸಂಪನ್ಮೂಲ ಅಭಿವೃದ್ಧಿ, ಐಟಿ
ಕಿಂಜರಪು ಅಚ್ಚನ್ನಾಯ್ಡು	ಕೃಷಿ, ಸಹಕಾರ, ಹೈನುಗಾರಿಕೆ, ಮೀನುಗಾರಿಕೆ
ಕೊಳ್ಳು ರವೀಂದ್ರ	ಗಣಿ ಮತ್ತು ಅಬಕಾರಿ
ನಾದೆಂಡ್ಲಾ ಮನೋಹರ	ಆಹಾರ, ನಾಗರಿಕ ಸರಬರಾಜು
ಪೊಂಗುರು ನಾರಾಯಣ	ನಗರಾಭಿವೃದ್ಧಿ, ಪುರಸಭೆ ಆಡಳಿತ
ಸತ್ಯ ಕುಮಾರ ಯಾದವ್	ಆರೋಗ್ಯ, ಕುಟುಂಬ ಕಲ್ಯಾಣ, ವೈದ್ಯಕೀಯ ಶಿಕ್ಷಣ
ನಾಸ್ಯಂ ಮೊಹಮ್ಮದ್ ಫಾರೂಕ್	ಕಾನೂನು,ನ್ಯಾಯ, ಅಲ್ಪಸಂಖ್ಯಾತ ಕಲ್ಯಾಣ
ಆನಂ ರಾಮನಾರಾಯಣ ರೆಡ್ಡಿ	ಧಾರ್ಮಿಕ ದತ್ತಿ ಇಲಾಖೆ
ಅನಗಾನಿ ಸತ್ಯ ಪ್ರಸಾದ್	ಕಂದಾಯ ಇಲಾಖೆ
ಕೊಳುಸು ಪಾರ್ಥ ಸಾರಥಿ	ವಸತಿ ಇಲಾಖೆ
ಡೋಲಾ ಶ್ರೀ ಬಾಲಾ ವೀರಾಂಜನೇಯ ಸ್ವಾಮಿ	ಸಮಾಜ ಕಲ್ಯಾಣ ಇಲಾಖೆ
ಗೊಟ್ಟಿಪತಿ ರವಿ ಕುಮಾರ್	ಇಂಧನ ಇಲಾಖೆ
ಕಂಡುಲಾ ದುರ್ಗೇಶ್	ಪ್ರವಾಸೋದ್ಯಮ, ಸಂಸ್ಕೃತಿ ಇಲಾಖೆ
ಗುಮ್ಮಡಿ ಸಂಧ್ಯಾರಾಣಿ	ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ
ಬಿ ಸಿ ಜನಾರ್ದನ ರೆಡ್ಡಿ	ಮೂಲಸೌಕರ್ಯ ಅಭಿವೃದ್ಧಿ
ಟಿ ಜಿ ಭರತ್	ಕೈಗಾರಿಕೆ ಮತ್ತು ವಾಣಿಜ್ಯ, ಆಹಾರ ಸಂಸ್ಕರಣೆ
ಎಸ್ ಸವಿತಾ	ಕೈಮಗ್ಗ ಮತ್ತು ಜವಳಿ ಖಾತೆ
ವಾಸಂಸೆಟ್ಟಿ ಸುಭಾಶ್	ಕಾರ್ಮಿಕ, ಕಾರ್ಖಾನೆ ಇಲಾಖೆ
ಕೊಂಡಪಲ್ಲಿ ಶ್ರೀನಿವಾಸ	ಸೂಕ್ಷ್ಮ, ಮಧ್ಯಮ ಮತ್ತು ಸಣ್ಣ ಕೈಗಾರಿಕೆ
ಮಂಡಿಪಲ್ಲಿ ರಾಮಪ್ರಸಾದ ರೆಡ್ಡಿ	ಸಾರಿಗೆ ಮತ್ತು ಕ್ರೀಡಾ ಇಲಾಖೆ

ಇಟಲಿ ಸಂಸತ್‌ನಲ್ಲಿ ಹೊಡೆದಾಟ

ರೋಮ್ : ಇಟಲಿಯ ಸಂಸತ್ ಕಲಾಪದ ವೇಳೆ ಸಂಸದರ ಮಧ್ಯೆ ಗಲಾಟೆ ನಡೆದಿದ್ದು , ಗಾಯಗೊಂಡ ವಿಪಕ್ಷ ಮುಖಂಡನನ್ನ ಆಸ್ಪತ್ರೆಗೆ ದಾಖಲಿಸಿದ ಘಟನೆ ನಡೆದಿದೆ . ಜಿ 7 ಶೃಂಗಸಭೆ ಸಮಯದಲ್ಲಿ ಈ ಘಟನೆ ನಡೆದಿದ್ದು ಹಲವು ಟೀಕೆಗೆ ಗುರಿಯಾಗಿದೆ.

ಅಗತ್ಯವಿರುವ ಪ್ರದೇಶಗಳಿಗೆ ಸ್ವಾಯತ್ತತೆ ವಿಸ್ತರಿಸುವ ಮಸೂದೆಯನ್ನು ಆಡಳಿತ ಪಕ್ಷ ಮಂಡಿಸಿದೆ, ಈ ವೇಳೆ ಗದ್ದಲ ಆರಂಭವಾಗಿದ್ದು ಫೈವ್ ಸ್ಟಾರ್ ಮೂವ್‌ಮೆಂಟ್ ನಾಯಕ ಲಿಯಾನಾರ್ಡೋ ಡೊನ್ನೊ ಇಟಲಿಯ ಪ್ರಾದೇಶಿಕ ವ್ಯವಹಾರ ಸಚಿವ ರೊಬರ್ಟೊ ಕಾಲ್ಡೇರಿಯೊ ಕೊರಳಿಗೆ ಇಟಲಿ ಧ್ವಜವನ್ನು ಸುತ್ತಲು ಯತ್ನಿಸಿದ್ದಾರೆ. ಈ ವೇಳೆ ಆಡಳಿತರೂಢ ಹಾಗೂ ವಿಪಕ್ಷಗಳ ಸಚಿವರ ಮಧ್ಯೆ ಮಾರಾಮಾರಿ ನಡೆದಿದೆ. ಘಟನೆಯಲ್ಲಿ ಲಿಯಾನಾರ್ಡೊ ಡೊನ್ನೊ ಅವರಿಗೆ ಎದೆ ಮತ್ತು ತಲೆ ಭಾಗಕ್ಕೆ ಗಾಯಗಳಾಗಿದ್ದು ಅವರನ್ನು ವ್ಹೀಲ್ ಚೇರ್‌ನಲ್ಲಿ ಕರೆದುಕೊಂಡು ಹೋಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಜಾರ್ಜಿಯಾ ಮೆಲೋನಿ ಪಕ್ಷ ಈ ಘಟನೆಗೆ ಲಿಯಾನಾರ್ಡೊ ಡೊನ್ನೊ ಅವರ ನಡೆಯೇ ಕಾರಣ ಎಂದು ಆರೋಪಿಸಿದ್ದು, ವಿಪಕ್ಷಗಳು ಇದೊಂದು ನಾಚಿಕೆಗೇಡಿನ ಹಾಗೂ ಗಂಭೀರವಾದ ಘಟನೆ ಎಂದು ಆಕ್ರೋಶ ವ್ಯಕ್ತಪಡಿಸಿದೆ. ಹಲವು ರಾಜಕೀಯ ಮುಖಂಡರು ಸಂಸತ್ ಬಾಕ್ಸಿಂಗ್ ರಿಂಗ್ ಆಗಿ ಕಂಡು ಬಂದಿದೆ ಎಂದು ವ್ಯಂಗ್ಯವಾಡಿದ್ದಾರೆ. ರಾಜಕೀಯ ವಿಮರ್ಶಕರು ಈ ಸ್ವಾಯತ್ತತೆ ವಿಸ್ತರಿಸುವ ಯೋಜನೆಯನ್ನು ಟೀಕಿಸಿದ್ದಾರೆ. ಇಟಲಿಯ ಐಕ್ಯತೆಗೆ ಧಕ್ಕೆ ತರುವಂತಹದ್ದಾಗಿದೆ, ಸ್ವಾಯತ್ತತೆ ವಿಸ್ತರಣೆಯಿಂದ ಬಡತನದಲ್ಲಿರುವ ಪ್ರದೇಶಗಳಲ್ಲಿ ಸಾರ್ವಜನಿಕ ಸೇವೆ ಕಡಿತಗೊಳ್ಳುವ ಸಂಭವವಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ.

ರಕ್ಷಣಾ ಕ್ಷೇತ್ರದಲ್ಲಿ ಮೇಕ್ ಇನ್ ಇಂಡಿಯಾಗೆ ಪುಷ್ಠಿ

ಭಾರತೀಯ ಸೇನೆಗೆ ನಾಗಾಸ್ತ್ರ

ದೆಹಲಿ: ದೇಶದಲ್ಲೇ ತಯಾರಾದ ಪ್ರಬಲ ಯದ್ಧಸಾಮಾಗ್ರಿ, 'ನಾಗಾಸ್ತ್ರ -1' ಡ್ರೋನ್‌ಗಳ ಮೊದಲ ಬ್ಯಾಚ್ ಭಾರತೀಯ ಸೇನೆ ಸೇರಿದೆ. ನಾಗ್ಪುರದ ಸೋಲಾರ್ ಇಂಡಸ್ಟ್ರಿ ಎಕನಾ ಮಿಕ್ಸ್ ಎಕ್ಸ್‌ಪ್ಲೋಸಿವ್ ಲಿಮಿಟೆಡ್‌ಗೆ 480 ಯುದ್ಧ ಸಾಮರ್ಥ್ಯ ಡ್ರೋನ್‌ಗಳಿಗೆ ಭಾರತೀಯ ಸೇನೆ ಆರ್ಡರ್ ನೀಡಿದೆ. ಈಗ ಮೊದಲ ಹಂತದಲ್ಲಿ 120 ನಾಗಾಸ್ತ್ರ ಡ್ರೋನ್‌ಗಳನ್ನು ಸೇನೆಗೆ ಸರಬರಾಜು ಮಾಡಲಾಗಿದೆ.

ಇದೇ ಮೊದಲ ಬಾರಿಗೆ ಈ ಶ್ರೇಣಿಯ ನಾಗಾಸ್ತ್ರ ಡ್ರೋನ್‌ಗಳನ್ನು ಭಾರತದಲ್ಲಿ ತಯಾರಿಸಲಾಗಿದ್ದು 2ಮೀಟರ್ ಅಂತರದಲ್ಲಿ ಗುರಿಯಿಟ್ಟು ದಾಳಿ ನಡೆಸುವ ಸಾಮರ್ಥ್ಯ ಹೊಂದಿದೆ. ಸುಮಾರು ಶೇ.75ರಷ್ಟು ದೇಶೀಯ ಉಪಕರಣಗಳನ್ನು ಬಳಸಿಕೊಂಡು ನಾಗಾಸ್ತ್ರ1 ಡ್ರೋನ್‌ಗಳನ್ನು ತಯಾರಿಸಲಾಗಿದ್ದು ಇದು ರಕ್ಷಣಾ ಕ್ಷೇತ್ರದಲ್ಲೂ ಮೇಕ್ ಇನ್ ಇಂಡಿಯಾ ಹಾಗೂ ಆತ್ಮನಿರ್ಭರ ಭಾರತ ಯೋಜನೆಗಳಿಗೆ ಪುಷ್ಟಿ ನೀಡಿದಂತಾಗಿದೆ. ಈ ಯುದ್ಧ ಡ್ರೋನ್‌ಗಳು ಜಿಪಿಎಸ್ ಬೆಂಬಲಿತ ದಾಳಿಯನ್ನು ಕೂಡ ನಡೆಸಬಲ್ಲದಾಗಿದೆ. ಹಗಲು ಮತ್ತು ರಾತ್ರಿ ಎರಡೂ ಸಮಯದಲ್ಲಿ ಕಾರ್ಯಾಚರಣೆ ನಡೆಸಬಲ್ಲ ಕ್ಯಾಮೆರಾಗಳನ್ನು ಹೊಂದಿರುವ ಈ ಡ್ರೋನ್‌ಗಳು 1 ಕೆ ಜಿ ಸ್ಫೋಟಕಗಳನ್ನು ಹೊರುವ ಸಾಮರ್ಥ್ಯ ಹೊಂದಿದೆ. ಒಬ್ಬ ವ್ಯಕ್ತಿ ಆರಾಮವಾಗಿ ಹೊತ್ತೊಯ್ಯ ಬಲ್ಲ ಡ್ರೋನ್ ಇದಾಗಿದ್ದು 9 ಕೆಜಿ ತೂಕ ಹೊಂದಿದೆ. ಈ ನಾಗಾಸ್ತ್ರ-1 ವಿಶೇಷವೇನೆಂದರೆ ಸುಮಾರು 60 ನಿಮಿಷ 4,500 ಮೀಟರ್ ಎತ್ತರದಲ್ಲಿ ಹಾರಾಟ ನಡೆಸಬಲ್ಲ ಆಯುಧಗಳಾಗಿದ್ದು ರಿಮೋಟ್ ಕಂಟ್ರೋಲ್ ಬಳಸಿ ಇವುಗಳನ್ನು 15 ಕಿಮೀ ದೂರದವರೆಗೆ ಹಾರಿಸಬಹುದಾಗಿದೆ, ಜತೆಗೆ ಇದರ ಸ್ವಯಂ ಚಾಲಿತ ಶ್ರೇಣಿ 30 ಕಿ. ಮೀಟರ್ ಆಗಿದೆ. 200 ಮೀಟರ್ ಎತ್ತರಕ್ಕೆ ಹಾರಿದ ಮೇಲೆ ೯ ಡ್ರೋನ್‌ಗಳು ಕಣ್ಣಿಗೆ ಕಾಣದಷ್ಟು ಮರೆಯಾಗುತ್ತವೆ. ಇವುಗಳಿಗೆ ಪ್ಯಾರಾಚೂಟ್ ರಿಕವರಿ ವ್ಯವಸ್ಥೆಯನ್ನು ಕೂಡ ಅಳವಡಿಸಲಾಗಿದೆ.

ಈ ನಾಗಾಸ್ತ್ರ-1 ಭಾರತೀಯ ಸೇನೆಯ ಬಲ ಹೆಚ್ಚಿಸಿದ್ದು ಉಗ್ರರ ನೆಲೆ ಹೊಡೆದುರುಳಿಸಲು ನೆರವು ನೀಡಲಿದೆ.

ಷೇರು ವ್ಯವಹಾರ 5 ಕೋಟಿ ವಂಚನೆ

ಮುಂಬೈ: ಮುಂಬೈಯಲ್ಲಿ ಆನ್‌ಲೈನ್ ಷೇರು ವಹಿವಾಟು ವಂಚನೆ ಪ್ರಕರಣದಲ್ಲಿ ಸಾಫ್ಟ್‌ವೇರ್ ಎಂಜಿನಿಯರ್ ಮತ್ತು ಆತನ ಕುಟುಂಬ ಸದಸ್ಯರು ಸುಮಾರು 5.14 ಕೋಟಿ ರು. ಕಳೆದುಕೊಂಡಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಇಬ್ಬರು ಆರೋಪಿಗಳನ್ನು ಬಂಧಿಸಲಾಗಿದೆ. ಹಣಕಾಸು ವ್ಯವಹಾರ ನಡೆಸಲು ಸೈಬರ್ ವಂಚಕರಿಗೆ ಬ್ಯಾಂಕ್ ಖಾತೆ ಒದಗಿಸಿದ್ದ ಟ್ಯೂಷನ್ ಶಿಕ್ಷಕ ಮತ್ತು ಸೆಕ್ಯೂರಿಟಿ ಗಾರ್ಡ್‌ನನ್ನು ಬುಧವಾರ ಪೊಲೀಸರು ಬಂಧಿಸಿದ್ದಾರೆ ಎಂದು ಅಧಿಕಾರಿ ಹೇಳಿದ್ದಾರೆ.

ವಂಚನೆ ಕುರಿತು ಸಕಿನಾಕಾ ನಿವಾಸಿ ಸಾಫ್ಟ್ ವೇರ್ ಎಂಜಿನಿಯರ್ ಏಪ್ರಿಲ್‌ನಲ್ಲಿ ಮುಂಬೈ ಅಪರಾಧ ವಿಭಾಗದ ಸೈಬರ್ ಪೊಲೀಸರಿಗೆ ದೂರು ನೀಡಿದ ಬಳಿಕ ಪ್ರಕರಣ ಬೆಳಕಿಗೆ ಬಂದಿದೆ ಎಂದು ಅವರು ತಿಳಿಸಿದ್ದಾರೆ. ಜನವರಿಯಲ್ಲಿ ಆನ್‌ಲೈನ್ ಷೇರು ವ್ಯಾಪಾರಿಗಳ ವಾಟ್ಸ್‌ಆ್ಯಪ್ ಗ್ರೂಪ್‌ಗೆ ಸೇರ್ಪಡೆಗೊಂಡಿದ್ದು, ಷೇರು ವಹಿವಾಟಿನಲ್ಲಿ ಹೂಡಿಕೆ ಮಾಡುವ ಇಚ್ಛೆಯನ್ನು ವ್ಯಕ್ತಪಡಿಸಿದ್ದ. ಬಳಿಕ ಕರೆಯೊಂದನ್ನು ಸ್ವೀಕರಿಸಿದ್ದು, ತರಬೇತಿಗೆ ಸೇರಿಕೊಳ್ಳುವಂತೆ ತಿಳಿಸಲಾಯಿತು ಎಂದು ದೂರುದಾರರು ತಮ್ಮ ದೂರಿನಲ್ಲಿ ವಿವರಿಸಿದ್ದಾರೆ ಎಂದು ಅಧಿಕಾರಿ ಹೇಳಿದ್ದಾರೆ. ದೂರುದಾರರು ಅಪ್ಲಿಕೇಶನ್ ಅನ್ನು ಡೌನ್ಲೋಡ್ ಮಾಡಿಕೊಂಡಿದ್ದು, ಅವರ ವರ್ಚುವಲ್ ಖಾತೆಯನ್ನು ತೆರೆದಿದ್ದಾರೆ. ನಂತರ ಷೇರು ವಹಿವಾಟಿನಲ್ಲಿ ಹಣ ಹೂಡಲು ಆರಂಭಿಸಿದ್ದು, ಅವರ ಕುಟುಂಬ ಸದಸ್ಯರು 2ತಿಂಗಳಲ್ಲಿ 5.14 ಕೋಟಿ ರು. ವಿವಿಧ ಬ್ಯಾಂಕ್ ಖಾತೆಗಳಿಗೆ ವರ್ಗಾಯಿಸಿದ್ದಾರೆ. ಸಂತ್ರಸ್ತರು ತಮ್ಮ ಹಣವನ್ನು ಡೆಪಾಸಿಟ್ ಮಾಡಿದ್ದ ಬ್ಯಾಂಕ್ ಖಾತೆಗಳನ್ನು ಪರಿಶೀಲಿಸಿದಾಗ ಅದರಲ್ಲಿ ಒಂದು ಸೆಕ್ಯೂರಿಟಿ ಗಾರ್ಡ್ ಹಂಪ್ರೀತ್ ಸಿಂಗ್ ರಾಂಧ್ವಾ ಅವರಿಗೆ ಸೇರಿದ್ದು ಎಂಬುದು ದೃಢಪಟ್ಟಿದೆ.

ಬಿಜೆಪಿ, ಇಂಡಿಯಾ ಕೂಟಕ್ಕೆ ಆರೆಸ್ಸೆಸ್ ಚಾಟಿ

ದುರಹಂಕಾರಿಗಳಿಗೆ 241 ಸ್ಥಾನ.. !

ಜೈಪುರ: ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘ ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷಗಳೆಡನ್ನೂ ಮತ್ತೆ ತರಾಟೆಗೆ ತೆಗೆದುಕೊಂಡಿದೆ. ರಾಜಸ್ಥಾನದ ಜೈಪುರ ಸಮೀಪ ಕಾನೋತಾದಲ್ಲಿ ರಾಮರಥ ಅಯೋಧ್ಯಾ ಯಾತ್ರಾ ದರ್ಶನ್ ಪೂಜಾ ಮಹೋ ತ್ಸವದಲ್ಲಿ ಮಾತನಾಡಿದ

ಆರೆಸ್ಸೆಸ್ ಮುಖಂಡ ಇಂದ್ರೇಶ್‌ಕುಮಾರ್, ಚುನಾವಣೆಯಲ್ಲಿ ಬಿಜೆಪಿ ತೋರಿದ ದುರಹಂಕಾರ ಮತ್ತು ಇಂಡಿಯಾ ಕೂಟದ ರಾಮವಿರೋಧಿ ಧೋರಣೆ ಬಗ್ಗೆ ಕಟು ಟೀಕೆ ಮಾಡಿದರು.

ಎರಡೂ ಪಕ್ಷಗಳ ಹೆಸರು ಹೇಳದ ಅವರು, ಚುನಾವಣಾ ಫಲಿತಾಂಶ ಅವುಗಳ ಧೋರಣೆಯನ್ನು ಪ್ರತಿಬಿಂಬಿಸಿದೆ ಎಂದು ಸೂಚ್ಯವಾಗಿ ಹೇಳಿದರು. ತನ್ನ ಮೇಲೆ ಭಕ್ತಿ ತೋರಿದ, ಆದರೆ ದುರಹಂಕಾರಿ ಪಕ್ಷವನ್ನು ರಾಮ 241 ಸ್ಥಾನಗಳಿಗೆ ಸೀಮಿತಗೊಳಿಸಿದ ಎಂದು ಪರೋಕ್ಷವಾಗಿ ಬಿಜೆಪಿಯನ್ನು ಟೀಕಿಸಿದ ಇಂದ್ರಶ್ ಕುಮಾರ್, ಆದರೆ ರಾಮನ ಮೇಲೆ ನಂಬಿಕೆಯಿಲ್ಲದವರು ಒಟ್ಟಾಗಿ 234 ಸ್ಥಾನಗಳಿಗೆ ನಿಲ್ಲಬೇಕಾಯಿತು ಎಂದು ಇಂಡಿಯಾ ಕೂಟವನ್ನು ಉಲ್ಲೇಖಿಸಿ ಚಾಟಿ ಬೀಸಿದರು. ಪ್ರಜಾಪ್ರಭುತ್ವದಲ್ಲಿ ರಾಮರಾಜ್ಯದ ಕಾನೂ ನು ಹೇಗಿದೆ ನೋಡಿ. ರಾಮನ ಪೂಜೆ ಮಾಡಿದವರು ಕ್ರಮೇಣ ದುರಹಂಕಾ ರಿಗಳಾದರು. ಲೋಕಸಭಾ ಚುನಾವಣೆಯಲ್ಲಿ ಆ ಪಕ್ಷ ಅತಿದೊಡ್ಡ ಪಕ್ಷವಾಗಿ ಹೊರಹೊಮ್ಮಿದರೂ ಸ್ವಂತಬಲದಿಂದ ಆಡಳಿತ ನಡೆಸಲು ಅಗತ್ಯವಿರುವ ಸ್ಥಾನಗಳನ್ನು ಆ ದೇವರು ನೀಡಲಿಲ್ಲ. ಈ ಪರಿಸ್ಥಿತಿಗೆ ಆ ಪಕ್ಷದ ದುರಹಂಕಾರವೇ ಕಾರಣ ಎಂದು ಕುಮಾರ್ ಬಿಜೆಪಿಯನ್ನು ಪರೋಕ್ಷವಾಗಿ ತರಾಟೆಗೆ ತೆಗೆದುಕೊಂಡರು. ಇಷ್ಟಾಗಿಯೂ ರಾಮನ ವಿರೋಧಿಗಳಿಗೂ ಅಧಿಕಾರ ಸಿಗಲಿಲ್ಲ. ಎಲ್ಲರೂ ಪರಸ್ಪರ ಕೈಜೋಡಿಸಿದರೂ 2ನೇ ಸ್ಥಾನಕ್ಕೆ ಪರಿಮಿತಗೊಂಡರು ಎಂದ ಇಂದ್ರೇಶ್ ಕುಮಾರ್, ಭಗವಾನ್ ರಾಮ ಎಲ್ಲರಿಗೂ ನ್ಯಾಯ ನೀಡುತ್ತಾನೆ ಎಂದು ಮಾರ್ಮಿಕವಾಗಿ ನುಡಿದರು.

ಜೂ. 24 ರಿಂದ 18ನೇ ಲೋಕಸಭಾ ಅಧಿವೇಶನ | ಜೂ.26 ಸಭಾಧ್ಯಕ್ಷರ ಆಯ್ಕೆ

ಬಿಜೆಪಿ ಅಭ್ಯರ್ಥಿಗೆ ಜೆಡಿಯು-ಟಿಡಿಪಿ ಬೆಂಬಲ

ನವದೆಹಲಿ: 2024ರ ಲೋಕಸಭಾ ಚುನಾವಣೆ ಮುಗಿದ ಬೆನ್ನಲ್ಲೇ 18ನೇ ಸಂಸತ್ ಅಧಿವೇಶನಕ್ಕೆ ವೇದಿಕೆ ಸಜ್ಜಾಗಿದೆ. ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ಸತತ ಮೂರನೇ ಬಾರಿಗೆ ಅಧಿಕಾರಕ್ಕೆ ಬಂದಿರುವ ಎನ್‌ಡಿಎ ಈ ಬಾರಿ ಲೋಕಸಭಾಧ್ಯಕ್ಷರ ಆಯ್ಕೆ ವಿಚಾರದಲ್ಲಿ ಭಾರಿ ಕಸರತ್ತು ನಡೆಸಬೇಕಾಗಿದೆ.

ಆದರೆ ಸಭಾಧ್ಯಕ್ಷರ ಹುದ್ದೆಗೆ ಬಿಜೆಪಿ ನಿರ್ಧರಿಸುವ ಅಭ್ಯರ್ಥಿಗೆ ಬೆಂಬಲ ನೀಡುವುದಾಗಿ ಜೆಡಿಯು-ಟಿಡಿಪಿ ಸ್ಪಷ್ಟಪಡಿಸಿವೆ. ಸಂಸತ್ತಿನ ಅಧಿವೇಶನ ಜೂ. 24 ರಿಂದ ನಡೆಯಲಿದ್ದು, ಜೂ. 26 ರಂದು ಲೋಕಸಭಾಧ್ಯಕ್ಷರ ಹುದ್ದೆಗೆ ಚುನಾವಣೆ ನಡೆಯಲಿದೆ. ಸಾರ್ವತ್ರಿಕ ಚುನಾವಣೆ ನಂತರ ಹೊಸ ಸಂಸದರಿಗೆ ಇದು ಮೊದಲ ಅಧಿವೇಶನವಾಗಿದೆ. ಎನ್‌ಡಿಎ ಮಿತ್ರಪಕ್ಷಗಳಾಗಿರುವ ತೆಲುಗು ದೇಶಂ ಮತ್ತು ಜೆಡಿಯು ಮೂಲಕ ಪ್ರಧಾನಿ ಮೋದಿ ಮತ್ತು ಬಿಜೆಪಿಯನ್ನು ಹಣಿಯಲು ಪ್ರತಿಪಕ್ಷಗಳು ಹೊಸತಂತ್ರ ಹೂಡಿವೆ. ಸ್ಪೀಕರ್ ಆಯ್ಕೆಯಾದ ನಂತರ ಜೂ. 27 ರಂದು ಸಂಸತ್ತಿನ ಜಂಟಿ ಅಧಿವೇಶನವನ್ನುದ್ದೇಶಿಸಿ ರಾಷ್ಟ್ರಪತಿ ದ್ರೌಪದಿ ಮುರ್ಮು ಭಾಷಣ ಮಾಡಿ ಎನ್‌ಡಿಎ ಸರ್ಕಾರದ ಮುಂದಿನ ಐದು ವರ್ಷಗಳ



ಕಾರ್ಯಕ್ರಮದ ಬಗ್ಗೆ ವಿವರ ಒದಗಿಸಲಿದ್ದಾರೆ.

ಸಮ್ಮಿಶ್ರ ಸರ್ಕಾರಕ್ಕೆ ಬೆಂಬಲ ಅನಿವಾರ್ಯವೆನಿಸಿರುವ ಟಿಡಿಪಿ ಅಥವಾ ಜೆಡಿಯುಗೆ ಹೊಸ ಸ್ಪೀಕರ್ ಸ್ಥಾನ ನೀಡಬೇಕೆಂಬುದು ಕಾಂಗ್ರೆಸ್ ಹಾಗೂ ಇತರ ಪ್ರತಿಪಕ್ಷಗಳ ಒತ್ತಾಯ. ಇನ್ನೊಂದು ಮೂಲದ ಪ್ರಕಾರ , ತೆಲುಗು ದೇಶಂ ಸ್ಥಾಪಕ ಮತ್ತು ತೆಲುಗಿನ ಮೇರುನಟ ಎನ್.ಟಿ ರಾಮರಾವ್‌ರ ಪುತ್ರಿ ಪುರಂದೇಶ್ವರಿಗೆ ಸ್ಪೀಕರ್ ಹುದ್ದೆ ನೀಡಲು ಬಿಜೆಪಿ ಚಿಂತನೆ ನಡೆಸಿದೆ ಎನ್ನಲಾಗಿದೆ.

ಅಧಿವೇಶನದ ವೇಳಾಪಟ್ಟಿ

- ಜೂ. 24 ರಂದು ಸಂಸತ್ತಿನ ಅಧಿವೇಶನ ಆರಂಭ
- ಲೋಕಸಭೆಯ ಎಲ್ಲ ಚುನಾಯಿತ ಸದಸ್ಯರ ಪ್ರಮಾಣವಚನ
- ಜೂ. 26 ರಂದು ಲೋಕಸಭಾ ಸ್ಪೀಕರ್ ಸ್ಥಾನಕ್ಕೆ ಚುನಾವಣೆ
- ಜೂ.27 ರಂದು ರಾಜ್ಯಸಭೆ ಮತ್ತು ಲೋಕಸಭೆಯ ಜಂಟಿ ಅಧಿವೇಶನವನ್ನುದ್ದೇಶಿಸಿ ರಾಷ್ಟ್ರಪತಿ ಭಾಷಣ
- ಜು. 3 ರಂದು ಅಧಿವೇಶನಕ್ಕೆ ತೆರೆ

ಅಲ್ಲದೆ, ಪುರಂದೇಶ್ವರಿ ಆಯ್ಕೆಗೆ ಆಂಧ್ರ ಸಿಎಂ ಚಂದ್ರಬಾಬು ನಾಯ್ಡು ಒಪ್ಪಿಗೆ ಸೂಚಿಸುವ ಸಾಧ್ಯತೆಯೂ ಇದೆ.

ಪ್ರತಿಪಕ್ಷಗಳ ಒತ್ತಾಯ : ಲೋಕಸಭಾಧ್ಯಕ್ಷರ ಸ್ಥಾನಕ್ಕೆ ಸರ್ಕಾರ ಇನ್ನೂ ನಿರ್ಧಾರ ಪ್ರಕಟಿಸಿಲ್ಲ. ಆದರೆ ಟಿಡಿಪಿ ಮತ್ತು ಜೆಡಿಯು ಪಕ್ಷಗಳನ್ನು ಬಿಜೆಪಿ ವಿರುದ್ಧ ಛೂಬಿಡಲು ಪ್ರತಿಪಕ್ಷಗಳ ತಂತ್ರ ಹೂಡಿವೆ. ಎನ್‌ಡಿಎ ಸರ್ಕಾರದ ಸ್ಥಿರತೆಗೆ ಈ ಪಕ್ಷಗಳ ಬೆಂಬಲ ಅನಿವಾರ್ಯ. ಹೀಗಾಗಿ ಅವುಗಳ ಹಿತಾಸಕ್ತಿ ಮತ್ತು ಪ್ರಜಾತಂತ್ರ, ಸಂವಿಧಾನದ ಉಳಿವಿಗಾಗಿ ಮಿತ್ರಪಕ್ಷಗಳಿಗೆ ಸ್ಪೀಕರ್ ಹುದ್ದೆ ನೀಡಬೇಕೆಂದು ಆಮ್ ಆದ್ಮಿ ಪಕ್ಷ, ಕಾಂಗ್ರೆಸ್, ಉದ್ಧವ್ ಠಾಕ್ರೆ ಶಿವಸೇನೆ ಸೇರಿದಂತೆ ಇಂಡಿಯಾ ಕೂಟ ಬಹುತೇಕ ಪಕ್ಷಗಳು ಒತ್ತಾಯಿಸುತ್ತಿವೆ.

ಒಂದು ವೇಳೆ , ಲೋಕಸಭಾಧ್ಯಕ್ಷರ ಸ್ಥಾನ ಟಿಡಿಪಿ ಪಾಲಾದರೆ, ಪಕ್ಷದ ಸ್ಥಾಪಕ ಎನ್‌ಟಿಆರ್‌ರ ಪುತ್ರಿ ಹಾಗೂ ಸದ್ಯ ಲೋಕಸಭಾ ಸದಸ್ಯರಾಗಿರುವ ಪುರಂದೇಶ್ವರಿಗೆ ಹೊಸ ಸ್ಪೀಕರ್ ಯೋಗ ನಿಶ್ಚಿತ. ಆಕೆ ಬಿಜೆಪಿಯಲ್ಲಿದ್ದರೂ ಎನ್‌ಟಿಆರ್ ಮಗಳಾಗಿರುವುದರಿಂದ ಟಿಡಿಪಿಯಿಂದ ಆಕ್ಷೇಪಣೆ ವ್ಯಕ್ತವಾಗದು. ಹೀಗಾಗಿ ಒಂದೇ ಕಲ್ಲಿನಲ್ಲಿ ಎರಡು ಹಕ್ಕಿ ಹೊಡೆಯುವ ತಂತ್ರವನ್ನು ಬಿಜೆಪಿ ಅನುಸರಿಸುತ್ತದೆಯೇ ಎಂಬ ಬಗ್ಗೆ ಕುತೂಹಲ ಮನೆ ಮಾಡಿದೆ. ಈ ಹಿಂದೆ ವಾಜಪೇಯಿ ಪ್ರಧಾನಿಯಾಗಿದ್ದಾಗ ಟಿಡಿಪಿಯ ಜಿಎಂಸಿ ಬಾಲಯೋಗಿಯನ್ನು ಲೋಕಸಭಾಧ್ಯಕ್ಷರಾಗಿ ಆಯ್ಕೆಮಾಡಿ ಕಾಂಗ್ರೆಸ್‌ಗೆ ಬಿಜೆಪಿ ತಿರುಗೇಟು ನೀಡಿದ್ದನ್ನು ಇಲ್ಲಿ ಸ್ಮರಿಸಬಹುದು.



ಮಹಿಳಾ ಏಕದಿನ: ತಂಡದ ಸಿದ್ಧತೆ ತೋರಿಸಿದ ಶ್ರೇಯಾಂಕ

ಬೆಂಗಳೂರು: ಜೂನ್ 16ರಿಂದ ಆರಂಭಗೊಳ್ಳಲಿರುವ ದಕ್ಷಿಣ ಆಫ್ರಿಕಾ ಮತ್ತು ಭಾರತ ಮಹಿಳಾ ಏಕದಿನ ಸರಣಿಗೆ ಉಭಯ ತಂಡಗಳ ಆಟಗಾರ್ತಿಯರು ಬೆಂಗಳೂರಿನ ಎಂ. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಅಭ್ಯಾಸ ನಡೆಸಿದ್ದಾರೆ. ತಂಡದ ಸಿದ್ಧತೆ ಬಗ್ಗೆ ಶ್ರೇಯಾಂಕಾ ಪಾಟೀಲ್ ಕನ್ನಡದಲ್ಲೇ ವಿವರಿಸಿದ್ದಾರೆ. ಈ ವಿಡಿಯೊವನ್ನು ಆರ್‌ಸಿಬಿ ತನ್ನ ಅಧಿಕೃತ ಟ್ವಿಟರ್ ಎಕ್ಸ್‌ನಲ್ಲಿ ಹಂಚಿಕೊಂಡಿದೆ. ಉದಯೋನ್ಮುಖ ಆಟಗಾರ್ತಿಯಾಗಿರುವ ಶ್ರೇಯಾಂಕಾ ಏಕದಿನ ಮತ್ತು ಟಿ20 ಸರಣಿಯಲ್ಲಿ ಸ್ಥಾನ ಪಡೆದಿದ್ದಾರೆ.

ಭಾನುವಾರದಂದು ಮೊದಲ ಏಕದಿನ ಪಂದ್ಯ ನಡೆಯಲಿದೆ. ಒಟ್ಟು ಮೂರು ಪಂದ್ಯಗಳ ಏಕದಿನ ಸರಣಿ ಇದಾಗಿದ್ದು ಎಲ್ಲ ಪಂದ್ಯಗಳು ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ನಡೆಯಲಿದೆ. ಏಕೈಕ ಟೆಸ್ಟ್ ಮತ್ತು 3 ಟಿ20 ಪಂದ್ಯಗಳು ಚೆನ್ನೈಯ ಚೆಪಾಕ್ ಸ್ಟೇಡಿಯಂನಲ್ಲಿ ನಡೆಯಲಿದೆ.

ಪಂದ್ಯ ಸಿದ್ಧತೆ ಬಗ್ಗೆ ಮಾತನಾಡಿದ ಶ್ರೇಯಾಂಕ, ಎಲ್ಲರಿಗೂ ನಮಸ್ಕಾರ, ನಾವು ಬೆಂಗಳೂರಿನಲ್ಲಿದ್ದೇವೆ. ಇಲ್ಲಿನ ವಾತಾವರಣ ತುಂಬಾ ಹಿತ ನೀಡಿದೆ. ಮೊದಲ ಅಭ್ಯಾಸ ಅವಧಿಯನ್ನು ಅತ್ಯಂತ ಯಶಸ್ವಿಯಾಗಿ ಮುಗಿಸಿದ್ದೇವೆ. ಎಲ್ಲರು ತುಂಬಾ ಎನರ್ಜಿ ಯಿಂದ ಅಭ್ಯಾಸ ನಡೆಸಿದೆವು. ಬಲಿಷ್ಠ ದಕ್ಷಿಣ ಆಫ್ರಿಕಾ ವಿರುದ್ಧ ಆಡಲು ಕಾತರಗೊಂಡಿದ್ದೇವೆ. ಇಲ್ಲಿ ನಡೆದ ಡಬ್ಲ್ಯುಪಿಎಲ್ ಪಂದ್ಯಾವಳಿಯ ವೇಳೆ ಪ್ರೇಕ್ಷಕರು ದೊಡ್ಡ ಸಂಖ್ಯೆಯಲ್ಲಿ ಬಂದು ಸ್ಟೇಡಿಯಂ ತುಂಬಿ ಹೋಗಿತ್ತು. ಇದೀಗ ಏಕದಿನ ಸರಣಿಗೂ ಅದೇ ರೀತಿ ಸ್ಟೇಡಿಯಂಗೆ ಬಂದು ಟೀಮ್ ಇಂಡಿ ಯಾಕ್ಕೆ ಸಪೋರ್ಟ್ ಮಾಡಿ ಎಂದು ಕೇಳಿಕೊಂಡಿದ್ದಾರೆ.

ಏಕದಿನ ತಂಡ

ಹರ್ಮನ್‌ಪ್ರೀತ್ ಕೌರ್ (ನಾಯಕಿ), ಸ್ಮೃತಿ ಮಂಧಾನ (ಉಪನಾಯಕಿ), ಶಫಾಲಿ ವರ್ಮಾ, ದೀಪ್ತಿ ಶರ್ಮಾ, ಜೆಮಿಮಾ ರಾಡ್ರಿಗಸ್, ರಿಚಾ ಘೋಷ್ (ವಿಕೆಟ್ ಕೀಪರ್), ಉಮಾ ಚೆಟ್ರಿ (ವಿಕೆಟ್ ಕೀಪರ್), ದಯಾಳನ್ ಹೇಮಲತಾ, ರಾಧಾ ಯಾದವ್, ಆಶಾ ಶೋಭನ, ಶ್ರೇಯಾಂಕಾ ಪಾಟೀಲ್, ಸೈಕಾ ಇಶಾಕ್, ಪೂಜಾ ವಸ್ತ್ರಕರ್, ರೇಣುಕಾ ಸಿಂಗ್ ಠಾಕೂರ್, ಅರುಂಧತಿ ರೆಡ್ಡಿ, ಪ್ರಿಯಾ ಪೂನಿಯಾ.

ಯೋ-ಯೋ ಪರೀಕ್ಷೆಯ ಕಾರಣದಿಂದ ಯಾರನ್ನಾದರೂ ಆಯ್ಕೆ ಮಾಡದಿದ್ದರೆ, ಅದು ಸರಿಯಾದ ಮಾರ್ಗ ಎಂದು ನಾನು ಭಾವಿಸುವುದಿಲ್ಲ. ನೀವು ಆಟಗಾರರನ್ನು ಅವರ ಪ್ರತಿಭೆ, ಅವರ ಹೋರಾಟದ ಕೌಶಲ್ಯ, ಅವರ ಬೌಲಿಂಗ್ ಕೌಶಲ್ಯದ ಆಧಾರದ ಮೇಲೆ ಆಯ್ಕೆ ಮಾಡಬೇಕು.

-ಗೌತಮ್ ಗಂಭೀರ್, ಮಾಜಿ ಕ್ರಿಕೆಟಿಗ

ಸಂಭಾವನೆ ಪಡೆಯದ ಜಡೇಜ

ದೆಹಲಿ: ಅಫ್ಘಾನಿಸ್ತಾನ ಕ್ರಿಕೆಟ್ ತಂಡದ ಮೆಂಟರ್ ಆಗಿ ಕೆಲಸ ಮಾಡಿರುವ ಭಾರತದ ಮಾಜಿ ಕ್ರಿಕೆಟಿಗ ಅಜಯ್ ಜಡೇಜ ತಮ್ಮ ಕೆಲಸಕ್ಕಾಗಿ ಯಾವುದೇ

ಸಂಭಾವನೆ ಪಡೆಯಲು ನಿರಾಕರಿಸಿದ್ದರು ಎಂದು ಅಫ್ಘಾನಿಸ್ತಾನ ಕ್ರಿಕೆಟ್ ಮಂಡಳಿಯ (ಎಸಿಬಿ) ಸಿಇಒ ನಸೀಬ್ ಖಾನ್ ಹೇಳಿದ್ದಾರೆ. ಹಲವು ಬಾರಿ ನಾವು ಮನವಿ ಮಾಡಿದರೂ ಜಡೇಜ ಸಂಭಾವನೆ ಪಡೆಯಲು ನಿರಾಕರಿಸಿದರು ಎಂದು ಅವರು ಹೇಳಿದ್ದಾರೆ. 2023ರ ಏಕದಿನ ವಿಶ್ವಕಪ್ ವೇಳೆ ತಮ್ಮ ಕೆಲಸಕ್ಕೆ ಸಂಭಾವನೆ ಪಡೆಯಲು ಹಲವು ಬಾರಿ ನಾವು ಕೇಳಿಕೊಂಡರೂ ಜಡೇಜ ನಿರಾಕರಿಸಿದರು. ತಂಡ ಉತ್ತಮವಾಗಿ ಆಡಿದರೆ, ಅದೇ ನನಗೆ ಸಂಭಾವನೆ ಮತ್ತು ಬಹುಮಾನ ಎಂದು ಹೇಳಿದರು ಎಂಬುದಾಗಿ ನಸೀಬ್, ಅರಿಯಾನಾ ನ್ಯೂಸ್ಗೆ ಹೇಳಿದ್ದಾರೆ.

ಜಮೀನು ಒತ್ತುವರಿ: ಯುಸೂಫ್‌ಗೆ ನೋಟಿಸ್

ವಡೋದರಾ: ಮೊನೆಯಷ್ಟೇ ನಡೆದ ಲೋಕಸಭೆ ಚುನಾವಣೆಯಲ್ಲಿ ಬಹರಂಪುರ ಕ್ಷೇತ್ರದಿಂದ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಪಕ್ಷದಿಂದ

ಸ್ಪರ್ಧಿಸಿ ಸಂಸದರಾದ ಟೀಮ್ ಇಂಡಿಯಾ ಮಾಜಿ ಕ್ರಿಕೆಟಿಗ ಯೂಸುಫ್ ಪಠಾಣ್ ಸಂಕಷ್ಟವೊಂದರಲ್ಲಿ ಸಿಲುಕಿದ್ದಾರೆ. ನಾಗರಿಕರ ಜಮೀನನ್ನು ಒತ್ತುವರಿ ಮಾಡಿದ ಆರೋಪದ ಮೇಲೆ ವಡೋದರಾ ಮುನ್ಸಿಪಲ್ ಕಾರ್ಪೊರೇಷನ್ (ವಿಎಂಸಿ) ಯೂಸುಫ್ ಅವರಿಗೆ ನೋಟಿಸ್ ಜಾರಿಗೊಳಿಸಿದೆ. ಜೂನ್ 6 ರಂದು ಪಠಾಣ್ ಅವರಿಗೆ ನೋಟಿಸ್ ನೀಡಲಾಗಿದೆ ಎಂದು ತಿಳಿದುಬಂದಿದೆ.

ಬಿಜೆಪಿಯ ಮಾಜಿ ಕಾರ್ಪೊರೇಟರ್ ವಿಜಯ್ ಪವಾರ್ ಅವರು ಯೂಸುಫ್ ವಿರುದ್ಧ ಜಮೀನು ಒತ್ತುವರಿ ಆರೋಪ ಮಾಡಿದ್ದರು. 2012ರಲ್ಲಿ ಪಠಾಣ್‌ಗೆ ನಿವೇಶನ ಮಾರಾಟ ಮಾಡುವ ವಿಎಂಸಿ ಪ್ರಸ್ತಾವನೆಯನ್ನು ರಾಜ್ಯ ಸರಕಾರ ತಿರಸ್ಕರಿಸಿದ್ದರೂ, ಹೊಸದಾಗಿ ಆಯ್ಕೆಯಾದ ಸಂಸದರು ಕಾಂಪೌಂಡ್ ಗೋಡೆ ನಿರ್ಮಿಸಿ ನಿವೇಶನವನ್ನು ಒತ್ತುವರಿ ಮಾಡಿದ್ದಾರೆ ಎಂದು ಆರೋಪಿಸಿದ್ದರು.

ಯೂಸುಫ್ ಮೇಲೆ ನನಗೆ ಯಾವುದೇ ದ್ವೇಷವಿಲ್ಲ, ಟಿಪಿ 22ರ ಅಡಿಯಲ್ಲಿ ತನದಲ್ಜಾ ಪ್ರದೇಶದಲ್ಲಿನ ಪ್ಲಾಟ್ ವಿಎಂಸಿ ಒಡೆತನದ ವಸತಿ ಪ್ಲಾಟ್ ಆಗಿದೆ. 2012 ರಲ್ಲಿ ಪಠಾಣ್ ಅವರು ವಿಎಂಸಿಯಿಂದ ಈ ನಿವೇಶನವನ್ನು ಕೇಳಿದ್ದರು. ಆ ಸಮಯದಲ್ಲಿ ನಿರ್ಮಾಣ ಹಂತದಲ್ಲಿದ್ದ ಅವರ ಮನೆ, ಆ ಪ್ಲಾಟ್‌ನ ಪಕ್ಕದಲ್ಲಿ ಇತ್ತು. ಪಠಾಣ್ ಅವರು ನಿವೇಶನವನ್ನು ಒತ್ತುವರಿ ಮಾಡಿಕೊಂಡು ಸುತ್ತಲೂ ಕಾಂಪೌಂಡ್ ಗೋಡೆ ನಿರ್ಮಿಸಿದ್ದರು. ಹೀಗಾಗಿ ನಗರಸಭೆಗೆ ತನಿಖೆ ನಡೆಸುವಂತೆ ಕೋರಿದ್ದೇನೆ ಎಂದು ಪವಾರ್ ಹೇಳಿದ್ದಾರೆ.

ಅತಿಕ್ರಮಣಕ್ಕಾಗಿ ಅವರಿಗೆ ನೋಟಿಸ್ ನೀಡಲಾಗಿದೆ ಎಂದು ವಿಎಂಸಿಯ ಸ್ಥಾಯಿ ಸಮಿತಿ ಅಧ್ಯಕ್ಷ ಶೀತಲ್ ಮಿಸ್ತ್ರಿ ಹೇಳಿದ್ದಾರೆ. ಇತ್ತೀಚೆಗೆ, ಪಠಾಣ್ ಕಾಂಪೌಂಡ್ ಗೋಡೆಯನ್ನು ನಿರ್ಮಿಸಿದ ಬಗ್ಗೆ ನಮಗೆ ಕೆಲವು ದೂರುಗಳು ಬಂದವು. ಹೀಗಾಗಿ ಜೂನ್ 6ರಂದು ಪಠಾಣ್ ಅವರಿಗೆ ನೋಟಿಸ್ ನೀಡಿ ಎಲ್ಲ ಅತಿಕ್ರಮಣಗಳನ್ನು ತೆರವುಗೊಳಿಸುವಂತೆ ಹೇಳಿದ್ದೇವೆ. ನಾವು ಒಂದೆರಡು ವಾರಗಳ ಕಾಲ ಕಾಯುತ್ತೇವೆ ಮತ್ತು ನಂತರ ನಾವು ಮುಂದಿನ ಕ್ರಮವನ್ನು ನಿರ್ಧರಿಸುತ್ತೇವೆ. ಈ ಭೂಮಿ ವಿಎಂಸಿಗೆ ಸೇರಿದ್ದು, ಅದನ್ನು ವಾಪಸ್ ಪಡೆಯುತ್ತೇವೆ ಎಂದು ಮಿಸ್ತ್ರಿ ಹೇಳಿದ್ದಾರೆ.

ವಿರಾಮ
ಪ್ರತಿ ಭಾನುವಾರ

ಆರಾಮವಾಗಿ ದಕ್ಕಿದ ಗೆಲುವು | ಸರಣಿಯಿಂದ ಹೊರನಡೆದ ಪಪುವಾ ನ್ಯೂ ಗಿನಿಯಾ

ಅಫಘಾನಿಸ್ತಾನ ಸೂಪರ್ 8ಕ್ಕೆ

ಟ್ರಿನಿಡಾಡ್: ಶುಕ್ರವಾರ ನಡೆದ ಟಿ20 ವಿಶ್ವಕಪ್‌ನ ಸಿ ವಿಭಾಗದ ಪಂದ್ಯದಲ್ಲಿ ಅಫಘಾನಿಸ್ತಾನ ತಂಡ ಪಪುವಾ ನ್ಯೂ ಗಿನಿಯಾ ವಿರುದ್ಧ 7 ವಿಕೆಟ್ ಅಂತರದ ಗೆಲುವು ಸಾಧಿಸುವ ಮೂಲಕ ಸೂಪರ್-8 ಹಂತಕ್ಕೆ ಪ್ರವೇಶ ಪಡೆದಿದೆ. ಅಫಘಾನಿಸ್ತಾನ ಗೆಲುವಿನಿಂದ ನ್ಯೂಜಿಲ್ಯಾಂಡ್ ತಂಡ ಟೂರ್ನಿಯಿಂದ ಹೊರಬಿದ್ದ ಸಂಕಟಕ್ಕೆ ಸಿಲುಕಿದೆ.

ಇಲ್ಲಿನ ಟರೂಬದಲ್ಲಿರುವ ಬ್ರಿಯಾನ್ ಲಾರಾ ಮೈದಾನದಲ್ಲಿ ನಡೆದ ಈ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ನಡೆಸಿದ ಪಪುವಾ ನ್ಯೂ ಗಿನಿಯಾ ತಂಡ ಫಜಲ್ಹಕ್ ಫಾರೂಕಿ ಮತ್ತು ನವೀನ್ ಉಲ್ ಹಕ್ ಅವರ ಘಾತಕ ದಾಳಿಗೆ ನಲುಗಿ 95 ರನ್‌ಗೆ ಸರ್ವಪತನ ಕಂಡಿತು. ಈ ಅಲ್ಪ ಮೊತ್ತವನ್ನು ಬೆನ್ನಟ್ಟಿದ ಅಫಘಾನಿಸ್ತಾನ 15.1 ಓವರ್‌ಗಳಲ್ಲಿ ಕೇವಲ 3 ವಿಕೆಟ್ ಕಳೆದುಕೊಂಡು 101 ರನ್ ಬಾರಿಸಿ ಗೆಲುವು ದಾಖಲಿಸಿತು. ಅತ್ತ ಏಕದಿನ ಸೇರಿದಂತೆ ಕಳೆದ ಆರೂ ವಿಶ್ವಕಪ್ ಪಂದ್ಯಾವಳಿಗಳಲ್ಲಿ ಸೆಮಿಫೈನಲ್ ಪ್ರವೇಶಿಸಿದ್ದ ನ್ಯೂಜಿಲ್ಯಾಂಡ್ ಈ ಬಾರಿ ಲೀಗ್‌ನಿಂದಲೇ ಹೊರಬಿದ್ದ ಅವಮಾನಕ್ಕೆ ಸಿಲುಕಿತು.

ಚೇಸಿಂಗ್ ವೇಳೆ ಆಫ್ಘಾನ್ ಕೂಡ ಆರಂಭಿಕ ಆಘಾತ ಎದುರಿಸಿತು. ಆರಂಭಿಕರಾದ ಇಬ್ರಾಹಿಂ ಜದ್ರಾನ್(0) ಮತ್ತು ರಹಮಾನುಲ್ಲಾ ಗುರ್ಬಾಜ್(11) ವಿಕೆಟ್ ಬೇಗನೆ ಕಳೆದುಕೊಂಡಿತು. ಆದರೆ, 3ನೇ ಕ್ರಮಾಂಕದಲ್ಲಿ ಆಟವಾಡಿದ ಗುಲ್ಬದಿನ್ ನೈಬ್ ಅಜೇಯ 49 ರನ್ ಬಾರಿಸಿ ತಂಡವನ್ನು ಗೆಲುವಿನ ದಡ ಸೇರಿಸಿದರು. ಕೇವಲ ಒಂದು ರನ್ ಹಿನ್ನಡೆಯಲ್ಲಿ ಅರ್ಧಶತಕ ಬಾರಿಸುವ ಅವಕಾಶ ಕಳೆದುಕೊಂಡರು.

ಇದಕ್ಕೂ ಮುನ್ನ ಬ್ಯಾಟಿಂಗ್ ನಡೆಸಿದ ಪಪುವಾ ನ್ಯೂ ಗಿನಿಯಾ ಪರ ಕಿಪ್ಲಿನ್ ಡೋರಿಗಾ(27) ಹೊರತು ಪಡಿಸಿ ಉಳಿದೆಲ್ಲರು ನಿರೀಕ್ಷಿತ ಬ್ಯಾಟಿಂಗ್ ನಡೆಸುವಲ್ಲಿ ವಿಫಲರಾದರು. ಡೋರಿಗಾ ಅವರ ಸಣ್ಣ ಮಟ್ಟಿನ ಬ್ಯಾಟಿಂಗ್ ಹೋರಾಟದಿಂದ ತಂಡದ ಮೊತ್ತ ಕನಿಷ್ಠ 100 ಸನಿಹಕ್ಕೆ ಬಂದಿತು. ಕಳೆದ 2 ಪಂದ್ಯಗಳಲ್ಲಿ ಘಾತಕ ಬೌಲಿಂಗ್ ದಾಳಿ ನಡೆಸಿದ್ದ ಫಜಲ್ಹಕ್ ಫಾರೂಕಿ ಅವರ ಘಾತಕ ಬೌಲಿಂಗ್ ದಾಳಿ ಈ ಪಂದ್ಯದಲ್ಲಿಯೂ ಮುಂದುವರಿಯಿತು. ಈ ಪಂದ್ಯದಲ್ಲಿ 4 ಓವರ್ ಎಸೆದು ಕೇವಲ 16 ರನ್ ವೆಚ್ಚದಲ್ಲಿ 3 ವಿಕೆಟ್ ಕಿತ್ತು ಪಂದ್ಯ ಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು. ಉಳಿದಂತೆ ನವೀನ್ ಉಲ್ ಹಕ್ 4 ರನ್‌ಗೆ 2 ವಿಕೆಟ್ ಪಡೆದರು.

ರಾಜ್ಯಮಟ್ಟದ ಟೆನಿಸ್ ಟೂರ್ನಿಯಲ್ಲಿ ಆರ್.ವಿ ಕಾಲೇಜನ್ನು ಮಣಿಸಿದ ಪಿ.ಇ.ಎಸ್. ಮಂಡ್ಯ

ಟೆನಿಸ್ ಟೂರ್ನಿ: ಮಂಡ್ಯ ಪ್ರಥಮ

ಮಂಡ್ಯ: ಇಲ್ಲಿ ನಡೆದ ರಾಜ್ಯಮಟ್ಟದ ಟೆನಿಸ್ ಟೂರ್ನಿಯ ಪುರುಷರ ವಿಭಾಗದಲ್ಲಿ ಬೆಂಗಳೂರಿನ ಆರ್.ವಿ. ಎಂಜಿನಿಯರಿಂಗ್ ಕಾಲೇಜು ತಂಡ ಮತ್ತು ಮಹಿಳೆಯರ ವಿಭಾಗದಲ್ಲಿ ಮಂಡ್ಯದ ಪಿ.ಇ.ಎಸ್. ಎಂಜಿನಿಯರಿಂಗ್ ತಂಡ ಪ್ರಥಮ ಸ್ಥಾನ ಪಡೆದು ಬಹುಮಾನ ಗಳಿಸಿದವು.

ಮಂಡ್ಯದ ಪೀಪಲ್ಸ್ ಎಜುಕೇಶನ್ ಟ್ರಸ್ಟ್ ಮತ್ತು ಪಿ.ಇ.ಎಸ್ ಎಂಜಿನಿಯರಿಂಗ್ ಕಾಲೇಜಿನ ದೈಹಿಕ ಶಿಕ್ಷಣ ವಿಭಾಗದ ಸಂಯುಕ್ತಾಶ್ರಯದಲ್ಲಿ ಜೂನ್ 11ರಿಂದ 14ರವರೆಗೆ ವಿ.ಟಿ.ಯು ಅಂತರ ಕಾಲೇಜು ಪುರುಷ ಮತ್ತು ಮಹಿಳೆಯರ ವಿಭಾಗದ ಟೆನಿಸ್ ಹಾಗೂ ಫುಟ್ಬಾಲ್ ಚಾಂಪಿಯನ್‌ಶಿಪ್ ನಡೆಯಿತು.

ಪುರುಷರ ವಿಭಾಗದ ರೆಸ್ಟ್ ಆಫ್ ಬೆಂಗಳೂರು ಟೆನಿಸ್ ಟೂರ್ನಿಯಲ್ಲಿ ಪ್ರಥಮ ಸ್ಥಾನವನ್ನು ಮೈಸೂರಿನ ವಿದ್ಯಾವರ್ಧಕ ಕಾಲೇಜು, ದ್ವಿತೀಯ ಸ್ಥಾನವನ್ನು ಮೈಸೂರಿನ ಎನ್.ಐ.ಇ ಕಾಲೇಜು ತಂಡ ಗಳಿಸಿತು.

ಪುರುಷರ ವಿಭಾಗದ ಮೈಸೂರು ವಿಭಾಗದ ಫುಟ್ಬಾಲ್ ಪಂದ್ಯಾವಳಿಯಲ್ಲಿ ಮಂಡ್ಯದ ಪಿ.ಇ.ಎಸ್. ಎಂಜಿನಿಯರಿಂಗ್ ಕಾಲೇಜು ತಂಡ ಪ್ರಥಮ ಸ್ಥಾನವನ್ನು, ದ್ವಿತೀಯ ಸ್ಥಾನವನ್ನು ಮೈಸೂರಿನ ವಿದ್ಯಾವರ್ಧಕ ಎಂಜಿನಿಯರಿಂಗ್ ಕಾಲೇಜು ತಂಡ ಗಳಿಸಿತು.

ರಾಜ್ಯಮಟ್ಟದ ಫುಟ್ಬಾಲ್ ಪಂದ್ಯಾವಳಿಯಲ್ಲಿ ಪ್ರಥಮ ಸ್ಥಾನವನ್ನು ಮಂಗಳೂರಿನ ಪಿ.ಎ. ಎಂಜಿನಿಯರಿಂಗ್ ಕಾಲೇಜು ಮತ್ತು ದ್ವಿತೀಯ ಸ್ಥಾನವನ್ನು ಬೆಂಗಳೂರಿನ ಎನ್.ಎಂ.ಐ.ಟಿ ಕಾಲೇಜು ತಂಡಗಳು ಗಳಿಸಿದವು.

ಸಮಾರೋಪ ಸಮಾರಂಭ ಕಾರ್ಯಕ್ರಮದಲ್ಲಿ ಪ್ರಾಂಶುಪಾಲ ಎಚ್.ಎಂ. ನಂಜುಂಡಸ್ವಾಮಿ ವಿಜೇತ ತಂಡಗಳಿಗೆ 25 ಗ್ರಾಂ ಬೆಳ್ಳಿ ಪದಕ, ಟ್ರೋಫಿ ಹಾಗೂ ಪ್ರಶಸ್ತಿ ಪತ್ರ ವಿತರಿಸಿದರು.

ಕಾರ್ಯಕ್ರಮದಲ್ಲಿ ವಿಟಿಯು ಮೈಸೂರು ವಿಭಾಗಾಧಿಕಾರಿ ಮುರಳೀಧರ ಎಂ.ಪಿ., ಕ್ರೀಡಾ ಸಮಿತಿ ಸದಸ್ಯ ವಿಶ್ವನಾಥ ಸಿ.ಎನ್, ಜಿಲ್ಲಾ ಫುಟ್ಬಾಲ್ ಸಂಸ್ಥೆಯ ರೆಫ್ರಿ ಬೋರ್ಡ್ ಕಾರ್ಯದರ್ಶಿ ಸಂಜಯ್ ಕುಮಾರ್, ದೈಹಿಕ ಶಿಕ್ಷಣ ನಿರ್ದೇಶಕ ಅನಂತಪದ್ಮನಾಭ ಪ್ರಭು, ಸಹಾಯಕ ದೈಹಿಕ ಶಿಕ್ಷಣ ನಿರ್ದೇಶಕಿ ವಿದ್ಯಾ ಆರ್. ವಿ ಹಾಗೂ ಕಾಲೇಜಿನ ಇತರೆ ಸದಸ್ಯರು ಹಾಜರಿದ್ದರು.

ಟೂರ್ನಿಯಲ್ಲಿ ರಾಜ್ಯದ ವಿವಿಧ ಎಂಜಿನಿಯರಿಂಗ್ ಕಾಲೇಜುಗಳ 22 ಟೆನಿಸ್ ತಂಡಗಳು ಹಾಗೂ 21 ಫುಟ್ಬಾಲ್ ತಂಡಗಳು ಭಾಗವಹಿಸಿದ್ದವು.

ಸೂಪರ್-8 ಅರ್ಹತೆ ಪಡೆದ ಭಾರತ | ಅಕ್ಷರ್, ಜಡೇಜಾಗೂ ರೆಸ್ಟ್

ಕೆನಡಾ ವಿರುದ್ಧದ ಪಂದ್ಯದಲ್ಲಿ ಕೊಹ್ಲಿ ಇಲ್ಲ!

ನ್ಯೂಯಾರ್ಕ್: ಕಳೆದ ಮೂರು ಪಂದ್ಯಗಳಲ್ಲಿ ಸತತವಾಗಿ ಬ್ಯಾಟಿಂಗ್ ವೈಫಲ್ಯ ಕಂಡು ಒಂದಂಕಿಗೆ ಸೀಮಿತರಾದ ಕಿಂಗ್

ಖ್ಯಾತಿಯ ವಿರಾಟ್ ಕೊಹ್ಲಿ ಅವರನ್ನು ಕೆನಡಾ ವಿರುದ್ಧದ ಪಂದ್ಯದಿಂದ ಕೈಬಿಡುವ ಸಾಧ್ಯತೆ ಇದೆ ಎಂದು ತಂಡದ ಮೂಲಗಳು ತಿಳಿಸಿರುವುದಾಗಿ ವರದಿಯಾಗಿದೆ.

ಈಗಾಗಲೇ ಭಾರತ ಆಡಿದ ಎಲ್ಲ ಮೂರು ಪಂದ್ಯಗಳನ್ನು ಗೆದ್ದು ಸೂಪರ್-8ಗೆ ಅರ್ಹತೆ ಪಡೆದಿದೆ. ಹೀಗಾಗಿ ಕೊಹ್ಲಿ ಅವರಿಗೆ ಅಂತಿಮ ಪಂದ್ಯದಲ್ಲಿ ಬಿಸಿಸಿಐ ವಿಶ್ರಾಂತಿ ನೀಡಲು ಬಯಸಿದೆ ಎಂದು ತಿಳಿದುಬಂದಿದೆ. ಕೊಹ್ಲಿ ಮಾತ್ರವಲ್ಲದೆ ಅಕ್ಷರ್ ಪಟೇಲ್, ರವೀಂದ್ರ ಜಡೇಜಾ ಅವರಿಗೂ ವಿಶ್ರಾಂತಿ ನೀಡಿ ಅವರ ಸ್ಥಾನದಲ್ಲಿ ಕುಲ್‌ದೀಪ್ ಮತ್ತು ಯಜುವೇಂದ್ರ ಚಹಲ್ ಅವರನ್ನು ಆಡಿಸುವ ಸಾಧ್ಯತೆ ಕಂಡುಬಂದಿದೆ.

ಕಳೆದ ತಿಂಗಳು ಮುಕ್ತಾಯ ಕಂಡಿದ್ದ ಐಪಿಎಲ್ ಟೂರ್ನಿಯಲ್ಲಿ ಕೊಹ್ಲಿ 700ಕ್ಕೂ ಅಧಿಕ ರನ್ ಗಳಿಸಿ ಟೂರ್ನಿಯಲ್ಲೇ ಗರಿಷ್ಠ ರನ್ ಗಳಿಸಿದ ಆಟಗಾರ ಎನಿಸಿಕೊಂಡಿದ್ದರು. ಆದರೆ, ಈ ಯಶಸ್ಸು ಕೊಹ್ಲಿಗೆ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಕೈ ಹಿಡಿಯಲಿಲ್ಲ. 1, 4,0 ಇದು ಕೊಹ್ಲಿಯ ಈ ಬಾರಿಯ ಸ್ಕೋರ್ ಆಗಿದೆ. ಕೊಹ್ಲಿ ಸ್ಥಾನದಲ್ಲಿ ಯಶಸ್ವಿ ಜೈಸ್ವಾಲ್ ಅಥವಾ ಸಂಜು ಸ್ಯಾಮ್ಸನ್ ಆಡುವ ಸಾಧ್ಯತೆ ಇದೆ ಎಂಬ ಮಾತುಗಳು ಕೇಳಿ ಬಂದಿವೆ. ಕೆನಡಾ ವಿರುದ್ಧದ ಪಂದ್ಯ ನಡೆಯುವುದು ಕೂಡ ಅನುಮಾನ ಎನ್ನುವಂತಿದೆ. ಪಂದ್ಯ ನಡೆಯುವ ಫ್ಲೋರಿಡಾದಲ್ಲಿ ಈಗಾಗಲೇ ಭಾರೀ ಮಳೆ ಸುರಿದು ರಸ್ತೆಗಳೆಲ್ಲ ಹೊಳೆಯಂತಾಗಿದೆ. ಸೂಪರ್ 8ರಲ್ಲಿ ಆಸ್ಟ್ರೇಲಿಯಾ, ಅಫ್ಘಾನಿಸ್ತಾನ, ಬಾಂಗ್ಲಾದೇಶ ಭಾರತಕ್ಕೆ ಎದುರಾಗುವ ಸಾಧ್ಯತೆ ಕಂಡು ಬಂದಿದೆ. ಕೆನಡಾ ವಿರುದ್ಧದ ಪಂದ್ಯ ಮುಕ್ತಾಯ ಗೊಂಡ ತಕ್ಷಣ ಶುಭಮನ್ ಗಿಲ್ ಮತ್ತು ಅವೇಶ್ ಖಾನ್ ತವರಿಗೆ ಮರಳಲಿದ್ದಾರೆ ಎಂದು ಕ್ರಿಕ್‌ಬಜ್ ವರದಿ ಮಾಡಿದೆ. ಜೂ.15ರಂದು ಆಟಗಾರರು ಭಾರತಕ್ಕೆ ವಾಪಸ್ ಆಗಲಿದ್ದಾರೆ ಎಂದು ತಿಳಿಸಿದೆ. ಶುಭಮನ್ ಗಿಲ್ ಮತ್ತು ಅವೇಶ್ ಖಾನ್ ತಂಡದಲ್ಲಿ ಪ್ರಯಾಣ ಮೀಸಲು ಭಾಗವಾಗಿ ಸ್ಥಾನ ಪಡೆದಿದ್ದರು.

ಒಮನ್ ವಿರುದ್ಧದ ಪಂದ್ಯದಲ್ಲಿ ಆಂಗ್ಲರ ವಿರೋಚಕ ಜಯ | 47 ರನ್‌ಗಳ ಗುರಿಕೊಟ್ಟಿದ್ದ ಒಮನ್

ಮೂರು ಓವರ್‌ನಲ್ಲೇ ಇಂಗ್ಲೆಂಡ್ ಗೆಲುವು

ಆಂಟಿಗುವಾ: ವಿಶ್ವಕಪ್ ಟೂರ್ನಿಯಲ್ಲಿ ಒಮನ್ ವಿರುದ್ಧ ಇಂಗ್ಲೆಂಡ್ ಕೇವಲ 3 ಓವರ್‌ಗಳಲ್ಲೇ ಗೆಲುವು ದಾಖಲಿಸಿದೆ.

ಆಂಟಿಗುವಾದ ವಿವಿಯನ್ ರಿಚರ್ಡ್ಸ್ ಕ್ರೀಡಾಂಗಣದಲ್ಲಿ ಗುರುವಾರ ರಾತ್ರಿ ಪಂದ್ಯ ನಡೆಯಿತು. ಒಮನ್ ತಂಡ ಮೊದಲು ಬ್ಯಾಟ್ ಮಾಡಿತು. ಇಂಗ್ಲೆಂಡ್ ದಾಳಿಗೆ ತತ್ತರಿಸಿದ ಒಮನ್ ಪಡೆ 13.2 ಓವರ್‌ಗಳಲ್ಲಿ ಎಲ್ಲ ವಿಕೆಟ್ ಕಳೆದುಕೊಂಡು ಕೇವಲ 47 ರನ್ ಪೇರಿಸಿತು.

ಶೋಯಬ್ ಖಾನ್ ಮಾತ್ರ 11 ರನ್ ಹೊಡೆದರು. ಉಳಿದವರು ಎರಡಂಕಿ ದಾಟಲಿಲ್ಲ. ಇಂಗ್ಲೆಂಡ್‌ನ ರಶೀದ್ 4 ವಿಕೆಟ್ ಪಡೆದರು. ಅರ್ಚರ್, ಮಾರ್ಕ್ವುಡ್ ತಲಾ 3 ವಿಕೆಟ್ ಪಡೆದರು. ಸುಲಭದ ಗುರಿಯನ್ನು ಬೆನ್ನತ್ತಿದ ಇಂಗ್ಲೆಂಡ್ 3.1 ಓವರ್‌ಗಳಲ್ಲಿ 2 ವಿಕೆಟ್ ಕಳೆದುಕೊಂಡು 8 ವಿಕೆಟ್‌ಗಳ ಜಯ ದಾಖಲಿಸಿತು. ಈ ಮೂಲಕ ಇಂಗ್ಲೆಂಡ್ 8ರ ಘಟ್ಟ ಪ್ರವೇಶಿಸುವ ಆಸೆಯನ್ನು ಜೀವಂತವಾಗಿರಿಸಿಕೊಂಡಿದೆ.

ಒಮನ್ ಕ್ರಿಕೆಟ್ ತಂಡದಲ್ಲಿ ಭಾರತೀಯ ಮೂಲದ ಐವರು ಆಟಗಾರರು ಇದ್ದಾರೆ.

ಸ್ಕೋರ್
ಒಮನ್: 47-10 (13.2 ಓವರ್)
ಇಂಗ್ಲೆಂಡ್: 51-2 (3.1 ಓವರ್)

ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಜೊತೆಯಾಗಿ ಪುರುಷರ ಡಬಲ್ಸ್‌ನಲ್ಲಿ ಟೆನಿಸ್ ಆಟಗಾರರು

ಟೆನಿಸ್: ಬೋಪಣ್ಣಗೆ ಬಾಲಾಜಿ ಜೋಡಿ

ದೆಹಲಿ: ಮುಂಬರುವ ಪ್ಯಾರಿಸ್ ಒಲಿಂಪಿಕ್ ಕೂಟದ ಟೆನಿಸ್ ಸ್ಪರ್ಧೆಯ ಪುರುಷರ ಡಬಲ್ಸ್‌ನಲ್ಲಿ ಎನ್.ಶ್ರೀರಾಮ್ ಬಾಲಾಜಿ ಅವರು ರೋಹನ್ ಬೋಪಣ್ಣ ಜತೆ ಆಡಲಿದ್ದಾರೆ. ಅಖಿಲ ಭಾರತ ಟೆನಿಸ್ ಅಸೋಸಿಯೇಶನ್ (ಎಐಟಿಎ) ಇದನ್ನು ದೃಢಪಡಿಸಿದೆ. ಡೇವಿಸ್ ಕಪ್ ನಾಯಕ ನಂದನ್ ಬಾಲ್ ಅವರ ಅಧ್ಯಕ್ಷತೆಯಲ್ಲಿ ನಡೆದ ಆಯ್ಕೆ ಸಮಿತಿ ಸಭೆಯಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ.

ಕಳೆದ ವಾರ ಬೋಪಣ್ಣ ಮತ್ತು ಸುಮಿತ್ ನಾಗಲ್ ಅವರು ಒಲಿಂಪಿಕ್ಸ್‌ಗೆ ಅರ್ಹತೆ ಪಡೆದಿದ್ದರು. ಆದರೆ ಬೋಪಣ್ಣಗೆ ಜೋಡಿಯಾರೆಂದು ನಿರ್ಧಾರವಾಗಿರಲಿಲ್ಲ. ಆದರೆ ಬೋಪಣ್ಣ ಅವರು ತಮ್ಮ ಜತೆಗಾರನಾಗಿ ಶ್ರೀರಾಮ್ ಬಾಲಾಜಿ ಅವರನ್ನು ಆಯ್ಕೆ ಮಾಡುವಂತೆ ಎಐಟಿಎಗೆ ಮನವಿ ಮಾಡಿದ್ದರು. ಇದೀಗ ಅವರೇ ಜತೆಗಾರನಾಗಿ ಆಡಲಿದ್ದಾರೆ.

44 ವರ್ಷದ ಬೋಪಣ್ಣ ಜನವರಿಯಲ್ಲಿ ಆಸ್ಟ್ರೇಲಿಯನ್ ಓಪನ್ ಗ್ರ್ಯಾಂಡ್ ಸ್ಲಾಮ್ ಗೆದ್ದು ಕಳೆದ ವಾರ ಫ್ರೆಂಚ್ ಓಪನ್‌ನಲ್ಲಿ ಸೆಮಿಫೈನಲ್ ತಲುಪಿದ್ದರು. ಬೋಪಣ್ಣ ಲಂಡನ್ 2012 ಗೇಮ್ಸ್ ಮತ್ತು ರಿಯೊ 2016 ರಲ್ಲಿ ಭಾರತವನ್ನು ಪ್ರತಿನಿಧಿಸಿದ್ದರು. ಆದರೆ ಟೋಕಿಯೊ ಒಲಿಂಪಿಕ್ಸ್‌ಗೆ ಅರ್ಹತೆ ಕಳೆದು ಕೊಂಡಿದ್ದರು. ಕಳೆದ ವಾರ ಪ್ರಕಟಗೊಂಡ ಎಟಿಪಿ ರ‍್ಯಾಂಕಿಂಗ್‌ನಲ್ಲಿ ಸುಮಿತ್ 18 ಸ್ಥಾನ ಮೇಲೇರಿ 77ನೇ ರ‍್ಯಾಂಕಿಂಗ್ ಪಡೆದ ಕಾರಣ ಅವರಿಗೆ ಒಲಿಂಪಿಕ್ಸ್ ಅರ್ಹತೆ ಲಭಿಸಿತ್ತು.

ಚಿನ್ನ ಗೆದ್ದ ಬಾಕ್ಸರ್‌ಗಳಿಗೆ ಭಾರೀ ನಗದು ಪ್ರಶಸ್ತಿ ಘೋಷಣೆ

ಕೆಲವು ತಿಂಗಳ ಹಿಂದೆ ವಿಶ್ವ ಅಥ್ಲೆಟಿಕ್ (ಡಬ್ಲ್ಯುಎ) ಸಂಸ್ಥೆ ಟ್ರ್ಯಾಕ್ ಮತ್ತು ಫೀಲ್ಡ್ ವಿಭಾಗದಲ್ಲಿ ಚಿನ್ನ ಜಯಿಸುವ ಅಥ್ಲೀಟ್‌ಗಳಿಗೆ 41.60 ಲಕ್ಷ ನಗದು ಪ್ರಶಸ್ತಿ ನೀಡುವುದಾಗಿ ಪ್ರಕಟಿಸಿತ್ತು. ಇದೀಗ ಅಂತಾರಾಷ್ಟ್ರೀಯ ಬಾಕ್ಸಿಂಗ್ ಸಂಸ್ಥೆ ಕೂಡ ಮಹತ್ವದ ನಿರ್ಧಾರ ಕೈಗೊಂಡಿದ್ದು, ಚಿನ್ನ ಗೆಲ್ಲುವ ಪ್ರತಿಯೊಬ್ಬ ಬಾಕ್ಸರ್‌ಗಳಿಗೆ 41.68 ಲಕ್ಷ ನಗದು ಬಹುಮಾನ ನೀಡುವುದಾಗಿ ಘೋಷಿಸಿದೆ. ಜತೆಗೆ ಕೋಚ್, ರಾಷ್ಟ್ರೀಯ ತಂಡಗಳಿಗೆ 10 ಲಕ್ಷ ನೀಡುವುದಾಗಿಯೂ ಪ್ರಕಟಿಸಿದೆ. ಆದರೆ, 2020ರ ಟೋಕಿಯೊ ಒಲಿಂಪಿಕ್ಸ್ ಬಾಕ್ಸಿಂಗ್ ಸ್ಪರ್ಧೆಗಳನ್ನು ಐಬಿಎ ನೆರವಿಲ್ಲದೇ ಐಒಸಿಯೇ ಸಂಘಟಿಸಿತ್ತು. ಕ್ರೀಡಾ ಸಂಸ್ಥೆಗಳು ನೀಡುವ ಬಹುಮಾನ ಹಣಕ್ಕೂ ಐಒಸಿ ಸಮ್ಮತಿ ನೀಡಿಲ್ಲ.

ಜುಲೈ 26ಕ್ಕೆ ಒಲಿಂಪಿಕ್ಸ್ ಆರಂಭ

ಮಹತ್ವದ ಕ್ರೀಡಾಕೂಡವಾದ ಪ್ಯಾರಿಸ್ ಒಲಿಂಪಿಕ್ಸ್‌ನ ಉದ್ಘಾಟನಾ ಸಮಾರಂಭ ಜುಲೈ 26ರಂದು ಸೀನ್ ನದಿಯಲ್ಲಿ ಸಂಜೆ 7.30ಕ್ಕೆ ಅದ್ದೂರಿ ಕಾರ್ಯಕ್ರಮ ನೆರವೇರಲಿದೆ.

ಒಲಿಂಪಿಕ್ಸ್ ಇತಿಹಾಸದಲ್ಲೇ ಇದೇ ಮೊದಲ ಬಾರಿಗೆ ಕ್ರೀಡಾಂಗಣದ ಹೊರಗಡೆ ನಡೆಯುವ ಉದ್ಘಾಟನಾ ಸಮಾರಂಭ ಇದಾಗಿದೆ. 10,500ಕ್ಕೂ ಹೆಚ್ಚು ಅಥ್ಲೀಟ್‌ಗಳು ಪ್ಯಾರಿಸ್‌ನಿಂದ ಸುಮಾರು 6 ಕಿಲೋ ಮೀಟರ್ ವರೆಗೆ ಬೋಟ್‌ಗಳಲ್ಲೇ ಪರೇಡ್ ನಡೆಸಿ ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಳ್ಳಲಿದ್ದಾರೆ. ಕ್ರೀಡಾ ಕೂಟ ಜುಲೈ 26ರಿಂದ ಆಗಸ್ಟ್ 11ರವರೆಗೆ ನಡೆಯಲಿದೆ. ಪ್ಯಾರಿಸ್ ಆತಿಥ್ಯದಲ್ಲಿ ನಡೆಯುತ್ತಿರುವ ಮೂರನೇ (1900 ಮತ್ತು 1924ರ ನಂತರ) ಟೂರ್ನಿ ಇದಾಗಿದೆ. 32 ಕ್ರೀಡೆಗಳು ಮತ್ತು 329 ಈವೆಂಟ್‌ಗಳನ್ನು ಯೋಜಿಸಲಾಗಿದೆ.

ಸನ್ನಿ ಲಿಯೋನ್‌ಗೆ ಇಲ್ಲ ಅನುಮತಿ

ತಿರುವಂತನಂತಪುರ: ಇತ್ತೀಚೆಗೆ ನಡೆದ ಕಾಲ್ತುಳಿತದ ಹಿನ್ನೆಲೆಯಲ್ಲಿ ಕೇರಳ ಸರಕಾರವು ಹೊರಗಿನ ಡಿಜೆ ಪಾರ್ಟಿಗಳು ಮತ್ತು ಕಾಲೇಜು ಕ್ಯಾಂಪಸ್‌ಗಳಲ್ಲಿ ರಾತ್ರಿ ಸಂಗೀತ ಕಾರ್ಯಕ್ರಮಗಳನ್ನು ನಿಷೇಧಿಸಿತ್ತು. ಆದರೂ ಬಾಲಿವುಡ್ ನಟಿ ಸನ್ನಿ ಲಿಯೋನ್ ಅವರ ನೃತ್ಯ ಕಾರ್ಯಕ್ರಮಕ್ಕೆ ಕೇರಳ ವಿಶ್ವವಿದ್ಯಾಲಯ ವಿದ್ಯಾರ್ಥಿಗಳು ತಯಾರಿ ನಡೆಸಿದ್ದರು.

PUBLIC NOTICE

My Client **Smt. Ramakka** W/o. Sri. Rajappa has misplaced/lost the original Hakku Patra dated 02/11/1992, issued the Chief Officer of H. A. Sanitary Board, Bangalore, in respect of Property bearing No. 705, PID No. 73-158-705 measuring East To West 15 feet and North to South 20 feet, Situated at Sriramanagari Slum, Airport Road, Konena Agrahara, Varthur Hobli Bangalore East (South) Taluk, Bangalore.

Any person finding the same may contact the undersigned ***within 7 days*** from this day, failing which my Client will proceed further.

Address
Sharanya P A, Advocate,
 # 417, 12th Main Road, 75th Cross, 6th Block, Rajajinagar, Bangalore-560010
PH: 8792232913 / 7483628330

NOTICE
TATA ELXSI LIMITED
ITPB Road, Whitefield, Bengaluru-560048

ಈ ಸೂಚನೆಯ ಮೂಲಕ ತಿಳಿಸುವುದೇನೆಂದರೆ, ಈ ಕೆಳಗೆ ಹೆಸರಿಸಿರುವ ಸೆಕ್ಯುರಿಟೀಸ್ ಕಂಪನಿಯು ಹೇಳಲಾದ ಸೆಕ್ಯುರಿಟಿ/ ಪ್ರಮಾಣಪತ್ರಗಳನ್ನು ಕಳೆದುಕೊಂಡಿದ್ದು ಅರ್ಜಿದಾರರು ಹೊಸ ಪ್ರಮಾಣಪತ್ರಕ್ಕಾಗಿ ಕಂಪನಿಗೆ ಅರ್ಜಿ ಸಲ್ಲಿಸಿರುತ್ತಾರೆ. ಕಂಪನಿಯು ಹೊಂದಿದವರಿಗೆ/ ಅರ್ಜಿದಾರರಿಗೆ ಹೇಳಲಾದ ಷೇರುಗಳನ್ನು IEPF ನಿಯಮಾನುಸಾರ IEPF ಗೆ ವರ್ಗಾಯಿಸಲು ಮಾಹಿತಿ ನೀಡಿದೆ.

ಯಾವುದೇ ವ್ಯಕ್ತಿ ಹೇಳಲಾದ ಸೆಕ್ಯುರಿಟೀಸ್ ಬಗ್ಗೆ ಕ್ಲೈಮು ಹೊಂದಿದ್ದಲ್ಲಿ ಅಂಥವರು ತಮ್ಮ ದೂರನ್ನು ಕಂಪನಿಯ ನೋಂದಾಯಿತ ಕಛೇರಿಗೆ ಈ ದಿನದಿಂದ 15 ದಿನಗಳ ಒಳಗಾಗಿ ಕ್ಲೈಮನ್ನು ತಿಳಿಸತಕ್ಕದ್ದು, ತಪ್ಪಿದಲ್ಲಿ ಕಂಪನಿಯು ನಕಲಿ ಪ್ರಮಾಣಪತ್ರವನ್ನು ಮುನ್ಸೂಚನೆ ನೀಡದೆಯೇ ವಿತರಣೆ ಮಾಡಲಿದೆ.

Name of Holder: SACHIN MAHESHWARI
Kind of Securities and face value:- Equity shares & Rs.10
Certificate No.: 84969
Folio No: EXS0001630
Distinctive Nos: 14465211-14465310
No. of shares: 100
Place: Bangalore
Date- 15.06.2024
Name of Applicant
Sachin Maheshwari

PUBLIC NOTICE

Public are informed that our clients Smt. Nagaveni D/o. Muddappa and Lakshmamma intends to Purchase the Property bearing No. 7, Property No. 1, Sl. No. 6228, (in the records of Bidarahalli Grama Panchayat), situated at Maragondanahalli Village, Bidarahalli Hobli, Bangalore East Taluk, Bangalore measuring East to West 36 feet North to South 49 feet, totally measuring 1764 square feet and bounded on the : East by : Site No. 2 & 3, West by : Approach Road, measuring East to West 36 feet North to South 10 ft., in same site No. 7 for the exclusive use of the purchaser and remaining portion of same Site no. 07, North by: Site No. 06, South by : Site No. 08. from its owner Sri. V. Subramani S/o. Sri. Venkatappa, and informing general public that Smt. Nagaveni D/o. Muddappa and Lakshmamma intent to mortgage the said property in favour of M/s PIRAMAL CAPITAL AND HOUSING FINANCE LIMITED and anyone having any claim over the said property or any other claims by any person/s Nationalized banks, MNC Banks Private Banks, Co-Operative Banks any Financial institutions Governed by the RBI Rules may lodge their objections in writing within 07 days from this day to the under mentioned Advocate.

K. S. Ravi, ADVOCATE, OFFICE# 53/1, 1th Floor, Guttahalli Main Road, D.T. Street, 8th Cross, Malleshwaram, Bangalore – 560 003, Email: raviksadvocate@gmail.com Mobile: 99450 00789

IN THE COURT OF XXXVIII ADDL. CITY CIVIL AND SESSIONS JUDGE AT BENGALURU
P & SC NO. 272/2024 (CCH-39)

PETITIONERS : 1. Swarna Kumar Ajjampur, S/o late A. Krishna Swamy, Aged about 73 years, R/at: #U 1 queen block, SMP PH 2, Behind Maruti Dental College, Off B.G. Road, Bangalore- 560076.
2. Mrs. Swarna Latha, W/o late Vasanth Kumar B. A., Aged about 77 years, R/at: #F 2 Queen block, SMP PH 2, Behind Maruti dental college, Off B.G. Road, Bangalore- 560076.
3. Mrs. Mala Pandit, W/o Sri. Raja Shekhar T. N., Aged about 70 years, R/at: Phalguni Krupa 101/b, 4th Main 6th Cross, Raja gardenia Turahalli, Subramanyapura post, Bengaluru 560061. **Represented by her GPA holder Sri. Swarna Kumar Ajjampur,** S/o late A. Krishna swamy, Aged about 73 yrs, R/at: #U 1 queen block, SMP PH 2. Behind Maruthi Dental College, Off B.G. Road, Bangalore-560076.
4. Dr. Swarna Rekha, W/o Naresh Bhat, Aged about 67 years,Residing at: # 310, Viren, 5th main, 3rd cross, Sadanandanagar, Bangalore-560038.
And: -NIL- ....RESPONDENTS

PUBLIC NOTICE

Whereas, the above named persons have made petition to this court under section 372 of Indian Succession Act for the grant of Succession Certificate in favour of the Petitioners, in respect of the schedule mentioned below. The below mentioned schedule has held by A.Krishna swamy, Father of Petitioners herein who expired on 18-08-2022.

Interested parties are hereby called upon to appear before this court in person or by pleader duly instructed **on 12-07-2024 at 11 a.m.** inform to show cause against the Petitioners failing wherein the appearance will be heard and declared as ex-parte.

SCHEDULE

All that piece and parcel of arrears of pension amounting to **Rs.2,49,690/-**Lying with Lying with the pension drawing authority/additional director, state pension payment and treasury, Govt of Karnataka, arising out of revision of pension of the deceased A Krishna Swamy who was entitled to pension under PPO No.34632/RPR/DOR 31.01.1982 and revised pension under notification dated 10/2/2023 bearing reference No. PM/GIII/7th CPC- Revision/ 2022-23/97.

Giver under my hand & seal of the court, this **11th day of June 2024.**

By order of the court. Senior Sheristedar City Civil Court, Bangalore

Sri. NAGESHA B.S., Advocate,
B-4, F Block, Daya MK Vivarta Maagan -Apartments, Off Bannerghatta Road, Bengaluru - 560076. 9741500680.

ಜರ್ಮನಿಯ ನೆಲದಲ್ಲಿ ಯುರೋ ಕಪ್ ಕಾಳಗ

ಮ್ಯೂನಿಚ್: ಫುಟ್ಬಾಲ್ ಅಭಿಮಾನಿಗಳು ಬಹಳ ಕಾತರದಿಂದ ಕಾಯುತ್ತಿದ್ದ ಪ್ರತಿಷ್ಠಿತ ಕಾಲ್ಚೆಂಡಿನ ಕಾಳಗ ಯುರೋ ಕಪ್ ಟೂರ್ನಿ ಆರಂಭಕ್ಕೆ ಕ್ಷಣಗಣನೆ ಶುರುವಾಗಿದೆ. ನಿನ್ನೆ ಈ ಟೂರ್ನಿಗೆ ಅಧಿಕೃತ ಚಾಲನೆ ಸಿಕ್ಕಿದೆ. ಭಾರತೀಯ ಕಾಲಮಾನದ ಪ್ರಕಾರ ತಡರಾತ್ರಿ ನಡೆಯಲಿರುವ ಟೂರ್ನಿಯ ಎ ಗುಂಪಿನ ಮೊದಲ ಪಂದ್ಯದಲ್ಲಿ ಆತಿಥೇಯ ಜರ್ಮನಿ 28 ವರ್ಷಗಳ ಬಳಿಕ ಪ್ರಶಸ್ತಿ ಗೆಲ್ಲುವ ಹಂಬಲದಲ್ಲಿ ಸ್ಕಾಟ್ಲೆಂಡ್ ವಿರುದ್ಧ ಕಣಕ್ಕಿಳಿಯಲಿದೆ.

ಒಟ್ಟು 5 ಗುಂಪುಗಳು: ಒಟ್ಟು 24 ತಂಡಗಳು ಟೂರ್ನಿಯಲ್ಲಿ ಸ್ಪರ್ಧಿಸಲಿದ್ದು, 6 ಗುಂಪುಗಳನ್ನು ಮಾಡಲಾಗಿದೆ. ಪೋರ್ಚುಗಲ್‌ನ ಕ್ರಿಸ್ಟಿಯಾನೊ ರೊನಾಲ್ಡೊ, ಫ್ರಾನ್ಸ್‌ನ ಕೀಲಿಯನ್ ಎಂಬಾಪೆ ಅವರು ಟೂರ್ನಿಯ ಪ್ರಮುಖ ಆಕರ್ಷಣೆಯಾಗಿದ್ದಾರೆ. ಅಚ್ಚರಿ ಎಂದರೆ 2014ರ ವಿಶ್ವಕಪ್ ಜಯಿಸಿದ್ದ ಜರ್ಮನಿ ತಂಡಕ್ಕೆ ನಾಯಕರಾಗಿದ್ದ ಫಿಲಿಪ್ ಲಾಮ್ ಈಗ ಯುರೋ 2024 ಟೂರ್ನಿಯ ನಿರ್ದೇಶಕರಾಗಿದ್ದಾರೆ.

ಬಹುಮಾನ ಮೊತ್ತ: ಟೂರ್ನಿಯಲ್ಲಿ ಚಾಂಪಿಯನ್ ಪಟ್ಟ ಅಲಂಕರಿಸಿದ ತಂಡಕ್ಕೆ ಬರೋಬ್ಬರಿ 71.87 ಕೋಟಿ ರೂ. ಸಿಗಲಿದೆ. ರನ್ನರ್ ಅಪ್ ತಂಡ 44.92 ಕೋಟಿ ರೂ. ಪಡೆಯಲಿದೆ. ಸೆಮಿಫೈನಲ್, ಕ್ವಾರ್ಟರ್ ಫೈನಲ್ ಮತ್ತು ಪ್ರೀ ಕ್ವಾರ್ಟರ್ ಫೈನಲ್ ತಲುಪಿದ ತಂಡಗಳಿಗೆ ಕ್ರಮವಾಗಿ ತಲಾ, 35.93 ಕೋಟಿ, 22.46 ಕೋಟಿ, 13.47 ಕೋಟಿ ರೂ. ಸಿಗಲಿದೆ. ಇದು ಮಾತ್ರವಲ್ಲದೆ ಪ್ರತಿ ಪಂದ್ಯದ ಗೆಲುವಿಗೆ 8.98 ಕೋಟಿ ಮತ್ತು ಡ್ರಾ ಗೊಂಡ ಪಂದ್ಯದ ತಂಡಗಳಿಗೆ 4.49 ಕೋಟಿ ರೂ. ಲಭಿಸಲಿದೆ. ಟೂರ್ನಿಯ ಒಟ್ಟು ಪ್ರಶಸ್ತಿ ಮೊತ್ತ 2,973(331 ದಶಲಕ್ಷ ಯುರೋ) ಕೋಟಿ ರೂ. ಆಗಿದೆ.

ಅ ಗುಂಪಿನ ತಂಡಗಳು
ಜರ್ಮನಿ, ಸ್ಕಾಟ್ಲೆಂಡ್, ಹಂಗೇರಿ, ಸ್ವಿಜರ್‌ಲೆಂಡ್

ಆ ಗುಂಪಿನ ತಂಡಗಳು
ಸ್ಪೇನ್, ಕ್ರೊವೇಷಿಯಾ, ಇಟಲಿ, ಅಲ್ಬೆನಿಯಾ

ಇ ಗುಂಪಿನ ತಂಡಗಳು
ಇಂಗ್ಲೆಂಡ್, ಸ್ಲವೇನಿಯಾ, ಡೆನ್ಮಾರ್ಕ್, ಸರ್ಬಿಯಾ

ಈ ಗುಂಪಿನ ತಂಡಗಳು
ಪೋಲೆಂಡ್, ನೆದರ್ಲೆಂಡ್, ಆಸ್ಟ್ರೀಯಾ, ಫ್ರಾನ್ಸ್.

ಉ ಗುಂಪಿನ ತಂಡಗಳು
ಬೆಲ್ಜಿಯಂ, ಸ್ಲೊವಾಕಿಯಾ, ರೊಮೇನಿಯಾ, ಯುಕ್ರೇನ್

ಊ ಗುಂಪಿನ ತಂಡಗಳು
ಪೋರ್ಚುಗಲ್, ಟರ್ಕಿ, ಜಾರ್ಜಿಯಾ, ಜೆಕ್ ಗಣರಾಜ್ಯ

ಸಾಮಾಜಿಕ ತಾಣ ಪಯಣ

ಮನೋನ್ಮಾದ

ಉಸಿರ ಬಸಿರ ಭಾವದಲ್ಲಿ
ಬಿಸಿಯ ಹಗಲ ತುಂಬಿ ತೇಗಿ
ಇರುಳ ಹೊರಳುವಾಟದಲ್ಲಿ
ಕೌಮುದಿಯ ಕೌದಿ ಹೊದ್ದು
ಒದ್ದು ಬರುವ ನಿದ್ದೆ ಸರಿಸಿ
ಮುದ್ದು ಮಾಡಿದೆ

ಅತರಂಗದೊಡಲ ಬೇಗೆ
ನಿರಂತರದೆ ಹರಿದು ಸರಿದು
ಮುರಿದುಕೊಳುವ ಮುದವನಪ್ಪಿ
ರಾಗರಸದ ಕಡಲು ಉಕ್ಕಿ
ಏರುವಲೆಯ ನೆಕ್ಕಿ ಮುಕ್ಕಿ
ಸಂಚು ಹೂಡಿದೆ

ಪವಡಿಸುವ ಕನಸಗಂಬ
ನೇಣು ಬಿಗಿವ ಮುನ್ನ ಎದ್ದು
ಕಣ್ಣು ಉಜ್ಜಿ ಲಜ್ಜೆಯುಟ್ಟು
ಮೆಟ್ಟಿಲಿಳಿದು ಗಟ್ಟಿಯಾಗಿ
ಪಾದವಿಟ್ಟ ತಿಟ್ಟನೆಲ್ಲ
ಮೆಟ್ಟಿ ನಲಿದಿದೆ

ಬೀಸಿ ಬರುವ ಮನಸ ಪವನ
ಮೂಸುಗಲ್ಲ ಒತ್ತಿ ಮುತ್ತಿ
ಸೂಸುತಿರುವ ಸುಧೆಯಗುಂಟ
ಹಾಸು ಬಂಡೆ ಸವರಿ ಬೆವರಿ
ನವಿರುಗೊಡವ ಪಾನಗೈದು
ಬೆವರುಗೂಡಿದೆ

● ನೀ. ಶ್ರೀಶೈಲ ಹುಲ್ಲೂರು

ಹೈಕುಗಳು

ಕೊನೆಯ ಬಾರಿ
ಕಂಗಳಲಿ ನಿರೀಕ್ಷೆ
ಆ ಅದೇ ಮಾತ

★

ನುಡಿಸಿ ಬಿಟ್ಟೆ
ಹೃದಯವೀಣೆ ಹೇಗೆ
ಬೆರಳಿರದೆ

★

ಆ ಮೂರು ದಿನ
ಆಕೆಗಿಂತ ಅವನೇ
ಕಷ್ಟಪಡೋದು

★

ರುಜುವಾತಾಯ್ತು
ಕೊನೆ ಗಳಿಗೆಯಲ್ಲಿ
ಕಾಲ ಮಿಂಚಿತ್ತು

★

ಪ್ರವಾಹವೊಂದು
ತಂದೆಸೆದ ದೋಣಿಗೆ
ನೂರು ವರುಷ

★★★

ನಟನೆಯಲ್ಲಿ
ಪಳಗಿದವರಿಗೂ
ಕಷ್ಟ, ಕಂಬನಿ

★★★

ಎಲ್ಲೋ ಒಂದೆಡೆ
ಪ್ರೀತಿಯ ಉಸಿರಿದೆ
ಬೆಳಗೇ ಸಾಕ್ಷಿ

★

ಸಾವಿಗಂಜುವ
ಬದುಕಿನ ಬದುಕು
ಇದ್ದೂ ಸತ್ತಂತೆ

★

ಈ ಉಸಿರಿತ್ತು
ಪೊರೆಯುವ ಶಕ್ತಿಗೆ
ದೊಡ್ಡ ಪ್ರಣಾಮ

★

ಒಂದು ಮನೆಯ
ಬೆಳಕು ಒಂದು ಮನೆ
ಬೆಳದಿಂಗಳು

● ನಿಂಗಮ್ಮ ಭಾವಿಕಟ್ಟಿ ಹುನಗುಂದ

ಕಾರ್ಟೂನ್



ಉಚಿತ ಬಸ್ ಪ್ರಯಾಣದಲ್ಲಿ ನೀನು ಉಳಿಸಿದ್ದು ಈಗ ವಸೂಲಿ ಆಗುತ್ತಿದೆ ನೋಡೆ ..!!!

● ಎಚ್.ಎಸ್. ವಿಶ್ವನಾಥ್

ವೃತ್ತಿ-ಪ್ರವೃತ್ತಿ

ಜೀವನದಲಿ
ಹಣ
ಗಳಿಸಲು
ನಾವು
ಮಾಡಬೇಕು
ವೃತ್ತಿ...

ಮನಸನು
ಮಂದಹಾಸ
ಗೊಳಿಸಲು
ಇರುವುದೇ
ನಮ್ಮ
ಪ್ರವೃತ್ತಿ!

● ಕೆ ನಟರಾಜ್

ತರ್ಲೆ-ತಿಮ್ಮಾ

ಚಂದದ ಬೊಂಬೆಯು ಹೂವಿನ ವಯ್ಯಾರ   ಚಿತ್ರದಲ್ಲಿರುವವರು, ಸಹನಾ ಆರಾಧ್ಯ

ಕರುಣೆ ಹೃದಯದಿ ಬೆಳಗುವ ಹಣತೆ

● ಪರಮೇಶ ಕೆ. ಉತ್ತನಹಳ್ಳಿ

ಪ್ರತಿಯೊಂದು ಜೀವಿಯನ್ನು ಕರುಣೆಯಿಂದ ನೋಡಬೇಕು, ಹಾಗೆ ನೋಡಲು ನಮ್ಮ ಒಳಗೆ ಕರುಣೆ ಇರಬೇಕು. ಈ ಜಗತ್ತಿನಲ್ಲಿ ಮಗುವಾಗಿ ಜನಿಸುವ ವ್ಯಕ್ತಿಯು ಹುಟ್ಟುವಾಗಲೇ ಮನುಷ್ಯನಾಗಿ ಹುಟ್ಟುವುದಿಲ್ಲ. ಭಿನ್ನ ಕಾರ್ಯದಿ ದಿನನಿತ್ಯದ ಬೆಳವಣಿಗೆಯಲ್ಲಿ ಅತೀತ ಭಾವನೆಯನ್ನು ಹೊಂದಿ ಮನುಷ್ಯನಾಗಲು ಹುಟ್ಟುವುದು. ಆ ರೀತಿ ಮನುಷ್ಯನಾದಾಗಲೇ ಮಾನವ ಇತರ ಪ್ರಾಣಿಗಳಿಗೂ ತನಗೂ ಇರುವ ಭಿನ್ನತೆ ಅರಿವಿಗೆ ಬರುತ್ತದೆ. ಯಾರಲ್ಲಿ ಎಲ್ಲರನ್ನುಒಂದೇ ರೀತಿಯಿಂದ ಕಾಣುವ ಮನೋಭಾವ ಇರುವುದೋ ಅವರೇ ನಿಜವಾದ ಮನುಷ್ಯರು. ಮನುಷ್ಯ ರೂಪದ ಪ್ರಾಣಿಯಲ್ಲಿ ಹೊರಹೊಮ್ಮಬೇಕಾದ ಒಂದು ವಿಶಿಷ್ಟ ಮೌಲ್ಯವೇ ಕರುಣೆ.

ಸಾಮಾನ್ಯವಾಗಿ ಕರುಣೆ ಎಂದರೆ ಅನುಕಂಪ, ದಯೆಯನ್ನು ತೋರುವ ಒಂದು ಕ್ರಿಯೆ ಎಂದು ಹೇಳುತ್ತಾರೆ. ಈ ಜಗತ್ತಿನ ಸರ್ವಜೀವಾತ್ಮಗಳನ್ನು ಸಮಾನವಾದ ರೀತಿಯಲ್ಲಿ ಕಂಡು ಸಹಾನುಭೂತಿಯನ್ನು ತೋರುವುದೇ ಕರುಣೆಯಾಗಿದೆ. ಸ್ವಾರ್ಥ ಪ್ರಪಂಚದಲ್ಲಿ ಬದುಕುತ್ತಿರುವ ವ್ಯಕ್ತಿಯು ತನಗಾಗಿ ಎಲ್ಲವನ್ನು ಕಬಳಿಸುವ, ಮತ್ತೊಬ್ಬರು ಹಿಂಸೆಯಲ್ಲಿ ವಿಲ-ವಿಲ ಎಂದು ಒದ್ದಾಡಿದರೂ ಸರಿಯೇ, ಅದರ ಕಡೆ ಲಕ್ಷ್ಯ ಕೊಡದೆ ಕೇವಲ ತನ್ನಿಚ್ಛೆಗಾಗಿ ತನ್ನ ಒಳಿತಿಗಾಗಿ ಮತ್ತೊಬ್ಬರನ್ನು ತುಳಿಯುವ ಸಂಸ್ಕೃತಿಯಿಂದ ಕರುಣೆಯು ಕನಿಕರವಿಲ್ಲದೆ ಕರಗಿಹೋಗುತ್ತಿದೆ. ಕರುಣೆ ತೋರುವವರನ್ನೆ ಅನುಮಾನದಿಂದ ನೋಡುವ ಮಟ್ಟಕ್ಕೆ ನಾವು ಇಂದು ಇಳಿದಿದ್ದೇವೆ. ನೊಂದವರ, ಕಷ್ಟದಲ್ಲಿ ಬೆಂದವರ, ಕಣ್ಣೀರ ಒದ್ದೆಯಲ್ಲಿ ಮರುಗುತ್ತಿರುವವರ ಬಗ್ಗೆ ಕರುಣೆ ತೋರದಿದ್ದರೆ ಮನುಷ್ಯರಾಗಿ ಬದುಕುತ್ತಿರುವುದು ಸಾರ್ಥಕತೆ ಎನಿಸುವುದಿಲ್ಲ.

ತಾಯಿ ತನ್ನ ಕಂದಮ್ಮನಿಗೆ ತೋರುವ ಕರುಣೆ ಪ್ರತಿ ವ್ಯಕ್ತಿಯಲ್ಲು ವ್ಯಕ್ತವಾಗಬೇಕು. ಅಂದರೆ ತನ್ನಂತೆ ಪರರನ್ನು ಕಂಡು ಕಾಣುವ ಮನೋಭಾವ. ಮತ್ತೊಬ್ಬರ ಕಷ್ಟಕ್ಕೆ ಸ್ಪಂದಿಸುವ ಹೃದಯ ವೈಶಾಲ್ಯತೆ. ಇಂದು ಅನಿವಾರ್ಯವಾಗಿ ಮಾನವನ ಹೃದಯಾಂತರಾಳದಲ್ಲಿ ಹೊಮ್ಮಬೇಕಾದ ಒಂದು ಮಾನವೀಯ ಮೌಲ್ಯವು ಕರುಣೆಯಾಗಿದೆ. ಸೃಷ್ಟಿಯಲ್ಲಿನ ಪ್ರತಿಯೊಂದು ಜೀವಿಗಳ ಹೃದಯಾಂತರಾಳವು ಫಲಭರಿತವಾದ ವನವಿದ್ದಂತೆ.



ಅಲ್ಲಿ ಪ್ರೀತಿ, ಕರುಣೆ, ಭಯ, ಕೋಪ, ತಾಪ, ಶಾಪ ಹೀಗೆ ಏನು ಬೆಳೆದರೂ ಅದೇ ಫಲವೇ ನಮ್ಮ ಮುಂದಿನ ದಿನಗಳಿಗೆ ಅನುಭವಿಸಲು ಸಿಗುವುದು. ಆದ್ದರಿಂದ ಯುಕ್ತವಾದದನ್ನೇ ಬೆಳೆದರೆ ಅದರ ಶಕ್ತತೆಯಲ್ಲಿ ಬದುಕಲು ಸಾಧ್ಯವಾಗುತ್ತದೆ. ಕರುಣೆಯು ನಮ್ಮ ಮನದಲಿದ್ದರೆ ಮತ್ತೊಬ್ಬರಿಗೆ ಎಂದಿಗೂ ನೋವನ್ನಾಗಲಿ, ಹಿಂಸೆಯನ್ನಾಗಲಿ ಕೊಡುವುದಿಲ್ಲ. ಇಂಥವರು ಒಂದು ವೇಳೆ ತಾವೇ ಇರುವಷ್ಟು ನೋವನ್ನು ಅನುಭವಿಸುತ್ತಾರೆ.

ಹನ್ನೆರಡನೇ ಶತಮಾನದ ವಿಶ್ವಗುರು, ಧರ್ಮಪಿತ, ಮಹಾಮಾನವತವಾದಿ, ಭಕ್ತಿಭಂಡಾರಿ ಎಂದು ಕರೆಸಿಕೊಂಡಿರುವ ಬಸವಣ್ಣನವರು ತಮ್ಮ ಹಲವಾರು ವಚನಗಳಲ್ಲಿ ಕರುಣೆಯ ಕಾರುಣ್ಯವನ್ನು ಚಿತ್ರಿಸುತ್ತಾರೆ.

ದಯವಿಲ್ಲದಧರ್ಮದಾವುದಯ್ಯ,
ದಯವಿರಬೇಕು ಸಕಲ ಪ್ರಾಣಿಗಳೆಲ್ಲರಲ್ಲಿ,
ದಯವೇ ಧರ್ಮದ ಮೂಲವಯ್ಯ,
ಕೂಡಲಸಂಗಮದೇವನೆಂತೊಲಿವನಯ್ಯ.

ಎಲ್ಲ ಧರ್ಮಗಳ ಮೂಲ ಉದ್ದೇಶ ಸರ್ವಜೀವಗಳನ್ನು ದಯೆ, ಕರುಣೆ, ಅನುಕಂಪ, ಮಾನವೀಯತೆಯಿಂದ ಕಾಣುವುದಾಗಿದೆ. ನಿಜವಾದ ಧರ್ಮದ ನೆಲೆಯೇ ಕಂಡವರನ್ನು ಕಾಣುವವರನ್ನು ಕರುಣಾಭಾವದಿಂದ ನೋಡುವುದು. ಭಕ್ತಿಯ ಕರುಣೆಯಿಂದ ನರನನ್ನು ಮಾತ್ರವಲ್ಲ ಹರನನ್ನು ಕೂಡ ಗೆಲ್ಲಬಹುದು. ಪ್ರೀತಿ-ಕರುಣೆಯಿದ್ದರೆ ಕ್ರೂರತ್ವದಿ ವರ್ತಿಸುವ ಮೃಗವು ಸಾಧುವಾಗಲು ಸಾಧ್ಯವಿದೆ. ಅದಕ್ಕೆ ದ್ವೇಷದಿಂದ ದ್ವೇಷವನ್ನು ಗೆಲ್ಲಲಾಗದು. ಅಂತಃ ಕರಣ ಎಂತಹ ದ್ವೇಷವನ್ನು ಸೋಲಿಸಿ ಪ್ರೀತಿಯನ್ನು ಗೆಲ್ಲಿಸುತ್ತದೆ.

ಮಳೆ ಹಿಡಿದಿಟ್ಟ ನೆನಪುಗಳ ಸರಣಿ

● ದೀಕ್ಷಾ ಮುಚ್ಚಂಡಿ

ಪ್ರಕೃತಿ ತುಂಬಾ ಸುಂದರ. ಈ ಸುಂದರತೆಯಲ್ಲಿ ಬರುವ ಮೂರು ಕಾಲಗಳು ಪ್ರಕೃತಿ ತನ್ನ ಸೌಂದರ್ಯವನ್ನು ಮತ್ತಷ್ಟು ಹೆಚ್ಚಿಸಿಕೊಳ್ಳುವ ಸಮಯ. ಆಕಾಶದಲ್ಲಿ ಮೋಡ ಕವಿದು ಜಗತ್ತಿನಲ್ಲಿ ಸಂತೋಷದ ಗಾಳಿ ಬೀಸುವ ಕಾಲವೇ ಮಳೆಗಾಲ.

ಮಳೆಗಾಲವೆಂದರೆ ನನಗೆ ನೆನಪಾಗುವುದು ನನ್ನ ಬಾಲ್ಯ.

ಅಣ್ಣ ನಾನು ಒಂದೇ ಶಾಲೆಯಲ್ಲಿ ಓದುತ್ತಿದ್ದೆವು. ಆದರೆ ಅದೇಕೋ ಗೊತ್ತಿಲ್ಲ, ಒಟ್ಟಿಗೆ ಮಾತ್ರ ಹೋಗುತ್ತಿರಲಿಲ್ಲ. ಆ ಕಾರಣದಿಂದ ಮಳೆಗಾಲದಲ್ಲಿ ಕೊಡೆಗಾಗಿ ಜಗಳವಾಡುತ್ತಿದ್ದೆವು. ಹೀಗೆ ಒಂದು ದಿನ ಶಾಲೆಗೆ ಹೋಗುವ ಮನ್ನ ಕೊಡೆಗಾಗಿ ಜಗಳವಾಡುತ್ತಿದ್ದಾಗ ಆ ಕೊಡೆಯಿಂದ ಅವನಿಗೆ ಹೊಡೆದು ಬಿಟ್ಟೆ. ನೋಡು, ನೋಡುತ್ತಿದ್ದಂತೆ ಕೊಡೆ ಮುರಿದುಹೋಗಿತ್ತು. ನನಗೆ ಅವನು ಮತ್ತೆ ಹೊಡೆಯುತ್ತಾನೆ ಎಂಬ ಭಯಕ್ಕಿಂತ ಕೊಡೆ ತಂದು ಇನ್ನೂ ಮೂರು ದಿನವೂ ಆಗಿರಲಿಲ್ಲ, ಅದನ್ನು ಅಮ್ಮ ನೋಡಿದರೆ ಏನು ಮಾಡುತ್ತಾಳೆ ಎಂಬ ಭಯ ಹೆಚ್ಚಿತ್ತು. ಅದನ್ನು ಮನೆಯಲ್ಲಿ ಅಮ್ಮನಿಗೆ ಕಾಣದ ಹಾಗೆ ಮೆಲ್ಲಗೆ ತಂದು ಬಚ್ಚಿಟ್ಟೆ. ಆ ದಿನ ನನ್ನ ಮನಸ್ಸು ಕೂಡ ಮುರಿದಿದ್ದನ್ನು ನೆನೆದು ಚಡಪಡಿಸುತ್ತಿತ್ತು.

ದಿನವೂ ಶಾಲೆಗೆ ಪ್ರಾರ್ಥನಾ ಗೀತೆ ಮುಗಿದ ನಂತರ ಹೋಗುತ್ತಿದ್ದ ನಾನು ಅಂದು ಮಾತ್ರಾ ಅರ್ಧಗಂಟೆ ಮುಂಚಿತವಾಗಿ ಕೊಡೆಯನ್ನು ಬಿಟ್ಟು ಮಳೆಯಲ್ಲಿ ಶಾಲೆಗೆ ಓಡಿದೆ. ಹೇಗೋ ಅಮ್ಮನಿಗೆ ಗೊತ್ತಾಗುವ ಮುಂಚೆ ಶಾಲೆಗೆ ಬಂದೆ. ಆದರೆ ನೋಡು ನೋಡುತ್ತಿದ್ದಂತೆ ಹೊತ್ತು ಕಳೆದು ಸಂಜೆ ಹೊತ್ತಾಯ್ತು. ಶಾಲೆ ಬೆಲ್ ಢಣ್ ಢಣ್ ಎಂದು ಬಾರಿಸಿಯೇ ಬಿಟ್ಟಿತ್ತು. ಪ್ರತಿ ದಿನ ಬೆಲ್ ಶಬ್ದಕ್ಕಾಗಿ ಕಾಯುತ್ತಿದ್ದೆ. ಅಂದು ಮಾತ್ರ ಈ ಬೆಲ್ ಯಾಕಾದರೂ ಹೊಡೆಯಿತು. ಈಗ ಮನೆಗೆ ಹೋಗಬೇಕಲ್ಲ ಎಂದುಕೊಳ್ಳುತ್ತಾ, ಮನೆಯತ್ತ ಹೆಜ್ಜೆ ಹಾಕಿದೆ.

ಯಾವತ್ತು ನನ್ನ ಜತೆಯಲ್ಲಿ ಒಟ್ಟಿಗೆ ಬರದ ಅಣ್ಣ ಅಂದು ನನ್ನ ಜತೆ ಮನೆಗೆ ಬಂದವನು, ದಾರಿಯುದ್ದಕ್ಕೂ ರೇಗಿಸುತ್ತಲೇ ಇದ್ದ. ಆತ ನನ್ನ ಕೋಪವನ್ನು ನೆತ್ತಿಗೇರಿಸಿದ್ದ. ಆದರೆ ಅಮ್ಮ ಮತ್ತೆಲ್ಲಿ ಹೊಡೆಯುವಳು ಎಂಬ ಭಯ ಇದ್ದೇ ಇತ್ತು. ಮನೆಗೆ ಬಂದು ನೋಡಿದರೆ ಕೊಡೆ ಸರಿಯಾಗಿತ್ತು. ಅಣ್ಣ ನನ್ನನ್ನು ನೋಡಿ ತಲೆಗೆ ಒಂದು ಪೆಟ್ಟು ಕೊಟ್ಟು, ಕೊಡೆ ಸರಿಮಾಡಿಸಿದ್ದೇನೆ. ಹೆದರಬೇಡ. ಅಮ್ಮ ಏನೂ ಅನ್ನಲ್ಲ ಎಂದ. ಆ ಕ್ಷಣಕ್ಕೆ ನಾನು ನಿರಾಳವಾದೆ. ನನಗೆ ಈಗಲೂ ಮಳೆಗಾಲದಲ್ಲಿ ಕೊಡೆ ಹಿಡಿದಾಗಲೆಲ್ಲ ಆ ನೆನಪುಗಳು ಮರುಕಳಿಸುತ್ತವೆ.

ವಿಟಾಕೀಸ್

ಜನತಾ ಸಿಟಿಯಲಿ ಪ್ರಾಮಾಣಿಕ ಬದುಕು

ಕಾಮನ್‌ಮ್ಯಾನ್ ಸ್ಟೋರಿಯ ಹಲವು ಸಿನಿಮಾಗಳು ತೆರೆಗೆ ಬಂದಿವೆ. ಈ ವಾರ ತೆರೆಗೆ ಬಂದ ಕೋಟಿ ಸಾಮಾನ್ಯ ವ್ಯಕ್ತಿಯ ಕಥೆಯನ್ನೇ ಒಳಗೊಂಡಿದ್ದರು ಒಂದಷ್ಟು ವಿಭಿನ್ನವಾಗಿದೆ. ಅದು ಜನತಾ ಸಿಟಿ, ಅಲ್ಲಿನ ನಿವಾಸಿ ಕೋಟಿಗೆ ಯಾರಿಗೂ ಮೋಸ ಮಾಡದೆ, ಪ್ರಾಮಾಣಿಕವಾಗಿ ದುಡಿದು ಒಂದು ಕೋಟಿ ರು. ಸಂಪಾದಿಸಬೇಕು, ತನ್ನ ಕುಟುಂಬವನ್ನು ಚೆನ್ನಾಗಿ ನೋಡಿಕೊಳ್ಳಬೇಕು ಎಂಬ ಹಂಬಲ. ಅಂತೆಯೇ ಅದೇ ಹಾದಿಯಲ್ಲಿ ಸಾಗುತ್ತಾನೆ. ಶಿಫ್ಟಿಂಗ್ ಕೆಲಸದ ಜತೆಗೆ ಚಾಲಕನ ಕೆಲಸವನ್ನು ನಿರ್ವಹಿಸುತ್ತಿರುತ್ತಾನೆ. ತನ್ನ ಪ್ರಾಮಾಣಿಕ ಹಾದಿ ಬಿಟ್ಟು ನಡೆದವನೇ ಅಲ್ಲ. ಕೋಟಿ ಸಂಪಾದನೆಯ ಗುರಿ ಹೊತ್ತು ಸಾಲ ಮಾಡಿ ಕಾರು ಖರೀದಿಸುತ್ತಾನೆ. ಈ ನಡುವೆ ಕೋಟಿಗೆ ನಾನಾ ಸಮಸ್ಯೆಗಳು ಕಾಡಲು ಆರಂಭಿಸುತ್ತವೆ. ದುಡಿಮೆಗಾಗಿ ಖರೀದಿಸಿದ ಕಾರು ಕಳುವಾಗುತ್ತದೆ, ಶಿಫ್ಟಿಂಗ್‌ನಲ್ಲಿ ಮೋಸವಾಗುತ್ತದೆ. ಅದು ಕೋಟಿಯ ಮೇಲೆ ಪರಿಣಾಮ ಬೀರುತ್ತದೆ. ಕೋಟಿ ಕಂಡ ಕನಸು ಕಮರುವುದರ ಜತೆಗೆ, ಬದುಕು ಸಂಕಷ್ಟಕ್ಕೆ ಸ್ಥಿತಿಗೆ ತಲುಪುತ್ತದೆ. ಈ ನಡುವೆಯೇ ಶಾರ್ಪ್ ಶೂಟರ್ ಆದ ಕೋಟಿಗೆ ಸುಪಾರಿ ಸಿದ್ಧವಾಗಿರುತ್ತದೆ. ಈ ಸಂದಿಗ್ಧ ಸ್ಥಿತಿಯಲ್ಲಿ ಕೋಟಿ ತನ್ನ ಗುರಿ ಈಡೇರಿಸಿಕೊಳ್ಳಲು ಅಡ್ಡ ದಾರಿ ಹಿಡಿಯುತ್ತಾನಾ ಎಂಬುದನ್ನು ಸಿನಿಮಾ ನೋಡಿಯೇ ತಿಳಿಯಬೇಕು.

ನಿರ್ದೇಶಕ ಪರಮೇಶ್ವರ್ ಗುಡ್ಕಲ್ ಪ್ರಸ್ತುತ ಸನ್ನಿವೇಶಕ್ಕೆ ಹೊಂದುವ ಕಥೆಯನ್ನು ಹೆಣೆದು ತೆರೆಯಲ್ಲಿ ಕಟ್ಟಿಕೊಟ್ಟಿದ್ದಾರೆ.

ಇಲ್ಲಿಯೂ ಕೂಡ ಡಾಲಿ ಕಾಮಾನ್ ಮ್ಯಾನ್ ಆಗಿ ಕಾಣಿಸಿಕೊಂಡಿದ್ದು, ಸಿಂಪಲ್ ಲುಕ್‌ನಲ್ಲಿ ಕಂಗೊಳಿಸುತ್ತಾರೆ. ಕೋಟಿಯಾಗಿ ಅದ್ಭುತ ಅಭಿನಯ ತೋರಿದ್ದು, ಸೆಂಟಿಮೆಂಟ್ ಆ್ಯಕ್ಷನ್ ನಲ್ಲಿಯೂ ಗಮನಸೆಳೆಯುತ್ತಾರೆ. ಇನ್ನು ಮೋಕ್ಷಾ ಕುಶಾಲ್ ನಾಯಕಿಯಾಗಿ ಬಣ್ಣಹಚ್ಚಿದ್ದು ಅವರ ಪಾತ್ರಕ್ಕೆ ಇನ್ನೊಂದಷ್ಟು ಸ್ಪೇಸ್ ಬೇಕಿತ್ತು ಅನ್ನಿಸುತ್ತದೆ. ಕೋಟಿಯ ತಾಯಿಯಾಗಿ ತಾರಾ ಅನುರಾಧಾ ಮನಮೆಚ್ಚುವ ಅಭಿನಯದ ತೋರಿದ್ದಾರೆ. ಇಡೀ ಚಿತ್ರದುದ್ದಕ್ಕೂ ಸೆಂಟಿಮೆಂಟ್‌ನಲ್ಲಿಯೇ ಮನಗೆಲ್ಲುತ್ತಾರೆ. ಇಲ್ಲಿ ನಾಯಕನಂತೆಯೇ ಖಳ ನಾಯಕನ ಪಾತ್ರಕ್ಕೆ ಹೆಚ್ಚಿನ ಮಹತ್ವ ನೀಡಿದ್ದು, ರಮೇಶ್ ಇಂದಿರಾ ಖಳನಾಗಿ ಅಕ್ಷರಶಃ ಅಬ್ಬರಿಸಿದ್ದಾರೆ, ಈ ಪಾತ್ರಕ್ಕೆ ರಮೇಶ್ ಹೇಳಿ ಮಾಡಿಸಿದಂತೆ ಹೊಂದಿಕೊಂಡಿದ್ದಾರೆ. ರಂಗಾಯಣ ರಘು ಪಾತ್ರ ಹಾಗೆ ಬಂದು ಹೀಗೆ ಮರೆಯಾಗುತ್ತದೆ. ಇನ್ನು ಕೆಲವೊಂದು ಪಾತ್ರಗಳನ್ನು ಒತ್ತಾಯ ಪೂರ್ವಕವಾಗಿ ತುಂಬಿದಂತಿದೆ. ಪೃಥ್ವಿ ಶಾಮನೂರು ಪಾತ್ರ ಆಟಕ್ಕುಂಟು ಲೆಕ್ಕಿಲ್ಲ ಎನ್ನುವಂತಾಗಿದೆ. ನೋಬಿಲ್ ಪೌಲ್ ಹಿನ್ನೆಲೆ ಸಂಗೀತ ಕೋಟಿಗೆ ಜೀವತುಂಬಿದೆ, ಛಾಯಾಗ್ರಹಣಕ್ಕೂ ಫುಲ್ ಮಾರ್ಕ್ಸ್ ನೀಡಬಹುದು. ಒಟ್ಟಾರೆ ಕೋಟಿಯನ್ನು ಮನೆಮಂದಿಯೆಲ್ಲಾ ಕುಳಿತು ನೋಡಲು ಅಡ್ಡಿ ಇಲ್ಲ.

ಚಿತ್ರ : ಕೋಟಿ
ನಿರ್ದೇಶನ : ಪರಮೇಶ್ವರ್ ಗುಂಡ್ಕಲ್
ನಿರ್ಮಾಣ :ಜ್ಯೋತಿ ದೇಶಪಾಂಡೆ
ತಾರಾಗಣ : ಡಾಲಿ ಧನಂಜಯ, ಮೋಕ್ಷಾ, ರಮೇಶ್ ಇಂದಿರ, ತಾರಾ, ರಂಗಾಯಣ ರಘು ಮುಂತಾದವರು.
ರೇಟಿಂಗ್ : ★★★

ಪ್ರೀತಿಯ ಹಾದಿಯಲಿ ಕಾಡುವ ಸವಾಲು

ವಸಿಷ್ಠ ಸಿಂಹಗೆ ಅಂಡರ್ ವರ್ಲ್ಡ್ ಕಥೆಯ ಸಿನಿಮಾಗಳು ಹೊಸತೇನಲ್ಲ, ಬಹುತೇಕ ಸಿನಿಮಾಗಳಲ್ಲಿ ವಸಿಷ್ಠ ರೌಡಿಯಾಗಿಯೇ ಕಂಗೊಳಿಸಿದ್ದಾರೆ. ಈಗ ತೆರೆಗೆ ಬಂದಿರುವ ಲವ್ ಲಿಯಲ್ಲಿ ವಸಿಷ್ಠ, ಗ್ಯಾಂಗ್‌ಸ್ಟರ್ ಜತೆಗೆ ಲವ್ವರ್ ಬಾಯ್ ಆಗಿಯೂ ಕಾಣಿಸಿಕೊಂಡಿದ್ದಾರೆ, ಹಾಗಾಗಿಯೇ ವಸಿಷ್ಠ ಸಿಂಹನಿಗೆ ಲವ್ ಲಿ ಬಲು ವಿಶೇಷವಾದ ಸಿನಿಮಾ. ಆತ ಅನಾಥ. ಯಾರೂ ಕೂಡ ಆತನ ನೆರವಿಗೆ ಧಾವಿಸುವುದಿಲ್ಲ, ಆದರೂ ನಾಯಕ ಹಠತೊಟ್ಟು ಬೆಳೆಯುತ್ತಾನೆ, ಎಲ್ಲರೂ ಅಚ್ಚರಿಪಡುವಂತೆ ಬೆಳೆದು ನಿಲ್ಲುತ್ತಾನೆ. ಈ ರೀತಿ ಉತ್ತಮ ಬದುಕು ಕಟ್ಟಿಕೊಡಲು ಕಾರಣ ಪ್ರೀತಿ. ಪ್ರೇಮದ ಬೆಳಕು ನಾಯಕನ ಬಾಳಲ್ಲಿ ಹಸನಾದ ಬದುಕು ಕಟ್ಟಿಕೊಳ್ಳುವಂತೆ ಮಾಡುತ್ತದೆ. ಕುಡಿತ ಮೋಜು ಮಸ್ತಿ ಎಲ್ಲಾ ತ್ಯಜಿಸಿದ ನಾಯಕ ಸಾತ್ವಿಕನಂತೆ ಬದುಕುತ್ತಿರುತ್ತಾನೆ. ಫ್ಲಾಶ್ ಬ್ಯಾಕ್‌ಗೆ ಹೋದರೆ ರೌಡಿಯಾಗಿ ಆರ್ಭಟಿಸಿದ್ದು ತಿಳಿಯುತ್ತದೆ. ಹೀಗೆ ಗ್ಯಾಂಗ್‌ಸ್ಟರ್ ಆಗಿ ಮೆರೆದಿದ್ದ ನಾಯಕ ಪ್ರೀತಿಯಲ್ಲಿ ಬಿದ್ದುದ್ದಾದರೂ ಹೇಗೆ ಎಂಬ ಕುತೂಹಲ ಕಾಡುತ್ತದೆ. ಅಲ್ಲಿಗೆ ಮೊದಲಾರ್ಧ ಮುಕ್ತಾಯವಾಗಿ ದ್ವಿತಿಯಾರ್ಧ ಆರಂಭವಾಗುತ್ತದೆ. ಸೆಕೆಂಡ್ ಹಾಫ್‌ನಲ್ಲಿ ಚಿತ್ರ ಹೊಸ ತಿರುವು ಪಡೆದುಕೊಳ್ಳುತ್ತದೆ. ನಾಯಕನಿಗೆ ಎದುರಾಗುವ ಸನ್ನಿವೇಶಗಳಿಂದ ಆತ ಮತ್ತೆ ರೌಡಿಯಾಗುತ್ತಾನಾ, ಇಲ್ಲ ಸಾತ್ವಿಕ ಬದುಕಿನಲ್ಲಿಯೇ ತೃಪ್ತಿ ಕಾಣುತ್ತಾನಾ ಎಂಬುದನ್ನು ತೆರೆಯಲ್ಲಿ ನೋಡಿದರೆ ಚೆಂದ.

ಇಲ್ಲಿ ಗ್ಯಾಂಗ್‌ಸ್ಟರ್ ಕಥೆಯ ಜತೆಗೆ ಹೆಣ್ಣು ಮಕ್ಕಳ ಕಳ್ಳ ಸಾಗಣಿಕೆ, ಡ್ರಗ್ಸ್ ಮಾಫಿಯಾದ ಕುರಿತಂತೆ ಬಗ್ಗೆ ಚಿತ್ರ ಬೆಳಕು ಚೆಲ್ಲುತ್ತದೆ. ಇದಕ್ಕೆ ಲವ್, ಸೆಂಟಿಮೆಂಟ್, ಆ್ಯಕ್ಷನ್ ಬೆರೆಸಿ ಅದನ್ನು ಮನರಂಜನಾತ್ಮಕವಾಗಿ ಹೇಳುವಲ್ಲಿ ನಿರ್ದೇಶಕ ಚೇತನ್ ಕೇಶವ್ ಯಶಸ್ವಿಯಾಗಿದ್ದಾರೆ. ಇಡೀ ಸಿನಿಮಾದಲ್ಲಿ ವಸಿಷ್ಠ ಆವರಿಸಿದ್ದು, ಪ್ರೀತಿ, ಬೆಸುಗೆ, ಬಾಂಧವ್ಯ, ಹೊಡಿಬಡಿದಾಟ... ಹೀಗೆ ಎಲ್ಲಾ ಸನ್ನಿವೇಶಗಳಿಗೆ ಹೊಂದಿಕೊಂಡು, ತಮ್ಮ ಪಾತ್ರದಲ್ಲಿ ಜೀವಿಸಿದ್ದಾರೆ. ಸ್ಟೆಫಿ ಪಟೇಲ್ ತಮ್ಮ ಪಾತ್ರವನ್ನು ಅರ್ಥೈಸಿಕೊಂಡು ಜವಾಬ್ದಾರಿಯುತವಾಗಿ ನಿಭಾಯಿಸಿದ್ದಾರೆ. ಉಳಿದಂತೆ ದತ್ತಣ್ಣ, ಚಿತ್ಕಾಲಾ ಬಿರಾದಾರ್, ವಂಶಿಕಾ, ಮಾಳವಿಕಾ ಸೇರಿದಂತೆ ಎಲ್ಲರೂ ತಮ್ಮ ಪಾತ್ರಗಳಿಗೆ ಜೀವತುಂಬಿದ್ದಾರೆ. ಸಂಗೀತ, ಛಾಯಾಗ್ರಹಣ ಚಿತ್ರಕ್ಕೆ ಶಕ್ತಿತುಂಬಿವೆ. ಮಾಸ್, ಕ್ಲಾಸ್ ಆಗಿರುವ ಲವ್ ಲಿ ಚಿತ್ರವನ್ನು ಎಲ್ಲರೂ ಒಟ್ಟಿಗೆ ಕುಳಿತು ನೋಡಲು ಅಡ್ಡಿಯಿಲ್ಲ.

ಚಿತ್ರ : ಲವ್ ಲಿ
ನಿರ್ದೇಶನ : ಚೇತನ್ ಕೇಶವ್
ನಿರ್ಮಾಣ : ರವೀಂದ್ರ ಕುಮಾರ್
ತಾರಾಗಣ : ವಸಿಷ್ಠ ಸಿಂಹ, ಸ್ಟೆಫಿ ಪಟೇಲ್, ದತ್ತಣ್ಣ, ಮಾಳವಿಕಾ, ಚಿತ್ಕಲಾ ಬಿರಾದಾರ್ ಮುಂತಾದವರು
ರೇಟಿಂಗ್ : ★★★

ಹಲವು ಸಿನಿಮಾಗಳನ್ನು ನಿರ್ದೇಶಿಸಿ ಪ್ರಶಸ್ತಿ ಮುಡಿಗೇರಿಸಿಕೊಂಡಿರುವ ನಿರ್ದೇಶಕ ಕೆ. ಶಿವರುದ್ರಯ್ಯ ಈಗ ಸಿಗ್ನಲ್‌ಮ್ಯಾನ್ 1971 ಸಿನಿಮಾವನ್ನು ತೆರೆಗೆ ತರಲು ಸಿದ್ಧವಾಗಿದ್ದಾರೆ. ಈಗಾಗಲೇ ಸಿಗ್ನಲ್‌ಮ್ಯಾನ್ 1971 ಹಲವು ಅಂತಾರಾಷ್ಟ್ರೀಯ ಚಿತ್ರೋತ್ಸವಗಳಲ್ಲಿ ಪ್ರದರ್ಶನ ಕಂಡು ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿದೆ. ಪ್ರಕಾಶ್ ಬೆಳವಾಡಿ, ರಾಜೇಶ್ ನಟರಂಗ, ವೆಂಕಟೇಶ್ ಪ್ರಸಾದ್ ಪ್ರಮುಖ ಪಾತ್ರಗಳಲ್ಲಿ ನಟಿಸಿರುವ ಈ ಚಿತ್ರ, ಆಗಸ್ಟ್‌ನಲ್ಲಿ ರಾಜ್ಯಾದ್ಯಂತ ತೆರೆಗೆ ಬರಲಿದೆ.

ಜನಸಂಪರ್ಕವಿಲ್ಲದ ರೈಲು ನಿಲ್ದಾಣದಲ್ಲಿ ಕಾರ್ಯನಿರ್ವಹಿಸುವ ಸಿಗ್ನಲ್ ಮ್ಯಾನ್ ಸುತ್ತ ಚಿತ್ರದ ಕಥೆ ಸಾಗುತ್ತದೆ. ಸಿಗ್ನಲ್‌ಮ್ಯಾನ್ ಪಾತ್ರದಲ್ಲಿ ಪ್ರಕಾಶ್ ಬೆಳವಾಡಿ ಅಭಿನಯಿಸಿದ್ದಾರೆ. ಊಟಿಯಲ್ಲಿ ರೈಲ್ವೆ ನಿಲ್ದಾಣದ ಸೆಟ್ ಹಾಕಿ ಅಲ್ಲಿಯೇ ಬಹುತೇಕ ಚಿತ್ರೀಕರಣ ನಡೆಸಲಾಗಿದೆ. ಹಿಂದೂಸ್ಥಾನ್ ಮುಕ್ತ ಮೀಡಿಯಾ ಎಂಟರ್‌ಟೇನರ್ ಲಾಂಛನದಲ್ಲಿ ಬಿ.ವಿ.ಗಣೇಶ್ ಪ್ರಭು ಚಿತ್ರ ನಿರ್ಮಾಣಕ್ಕೆ ಬಂಡವಾಳ ಹೂಡಿದ್ದಾರೆ. ಶೇಖರ್ ಚಂದ್ರು ಛಾಯಾಗ್ರಹಣ, ಸುರೇಶ್ ಅರಸ್ ಸಂಕಲನ, ಒಸೆಪಚ್ಚನ್ ಸಂಗೀತ ನಿರ್ದೇಶನ ಹಾಗೂ ಸಂತೋಷ್ ಪಾಂಚಾಲ್ ಕಲಾ ನಿರ್ದೇಶನ ಚಿತ್ರಕ್ಕಿದೆ.



ಸಿಗ್ನಲ್‌ಮ್ಯಾನ್ ರಿಲೀಸ್‌ಗೆ ಗ್ರೀನ್ ಸಿಗ್ನಲ್

ಬೆಂಗಳೂರು, ಚೆನ್ನೈ, ಮುಂಬೈ ಅಂತಾರಾಷ್ಟ್ರೀಯ ಚಿತ್ರೋತ್ಸವಗಳಲ್ಲಿಯೂ ನಮ್ಮ ಸಿಗ್ನಲ್ ಮ್ಯಾನ್ ಪ್ರದರ್ಶನ ಕಂಡು ಪ್ರಶಸ್ತಿಗಳಿಸಿದೆ. ಅಂತೆಯೇ ಬಾಂಗ್ಲಾದೇಶದಲ್ಲಿ ನಡೆದ ಅಂತಾರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ ಬೆಸ್ಟ್ ಫ್ಯೂಚರ್ ಫಿಲ್ಮ್ ಪ್ರಶಸ್ತಿ ಸಂದಿದೆ. ಅಲ್ಲಿನ ಪ್ರೇಕ್ಷಕರು ನಮ್ಮ ಚಿತ್ರದ ಬಗ್ಗೆ ಮೆಚ್ಚುಗೆಯ ಮಾತುಗಳನ್ನಾಡಿದರು. ಇದು ನಮ್ಮ ತಂಡಕ್ಕೆ ಶಕ್ತಿತುಂಬಿದೆ.

-ಬಿ.ವಿ.ಗಣೇಶ್ ಪ್ರಭು ನಿರ್ಮಾಪಕ

1971ರಲ್ಲಿ ನಡೆದ ಇಂಡೋ-ಪಾಕ್ ಕದನದ ಹಿನ್ನೆಲೆಯನ್ನು ಈ ಚಿತ್ರದಲ್ಲಿ ಅಳವಡಿಸಿಕೊಳ್ಳಲಾಗಿದೆ. ಯಾರು ಇಳಿಯದ, ಹತ್ತದ ರೈಲ್ವೆ ನಿಲ್ದಾಣದಲ್ಲಿ ಇಪ್ಪತ್ತು ವರ್ಷಗಳ ಕಾಲ ಕಾರ್ಯ ನಿರ್ವಹಿಸುವ ಸಿಗ್ನಲ್ ಮ್ಯಾನ್ ಒಬ್ಬನ ಜೀವನದ ಕಥೆಯೂ ಇದರಲ್ಲಿದೆ. ಎರಡು ದಶಕಗಳ ಕಾಲ ಜನಸಂಪರ್ಕವಿಲ್ಲದ ಸ್ಥಳದಲ್ಲಿದ್ದ ಈತ ಗೊಂದಲಕ್ಕೀಡಾಗುತ್ತಾನೆ. ಗೊಂದಲದಿಂದ ಆಚೆ ಬಂದ ನಂತರ ರಾಜ್ಯ ಹಾಗೂ ರಾಷ್ಟ್ರಕ್ಕೆ ಬೇಕಾಗುವ ವ್ಯಕ್ತಿಯಾಗುತ್ತಾನೆ. ಅದು ಹೇಗೆ ಎಂಬುದನ್ನು ಸಿನಿಮಾದಲ್ಲಿ ಹೇಳಿದ್ದೇವೆ.

-ಕೆ.ಶಿವರುದ್ರಯ್ಯ ನಿರ್ದೇಶಕ

ವಿಶ್ವವಾಣಿ

15.06.2024 ಶನಿವಾರ

vishwavani.news

ದಿನ ದರ್ಶಿಕೆ

ಜೇಷ್ಠ ಮಾಸ, ನಕ್ಷತ್ರ ಉತ್ತರಾ, ಶುಕ್ಲಪಕ್ಷ, ನವಮಿ, ವೃತಿಪಾತ ಸಿದ್ಧಿ, ಕ್ರೋಧಿನಾಮ ಸಂವತ್ಸರ, 1945 ಶೋಭಕೃತ್, ಋತು- ಗ್ರೀಷ್ಮ, ದ್ರಿಕ್ ಆಯನ- ಉತ್ತರಾಯಣ

ಮನೆಮದ್ದು



ಉಗುರು ಸುತ್ತು ಸಮಸ್ಯೆಯಿಂದ ಬಳಲುತ್ತಿದ್ದರೆ, ಒಂದು ಪಾತ್ರೆಗೆ ಒಂದು ಚಮಚ ತೆಂಗಿನೆಣ್ಣೆ, ಒಂದು ಚಮಚ ಅರಶಿನ ಪುಡಿಯನ್ನು ಹಾಕಿ. ಈ ಎರಡರ ಮಿಶ್ರಣವನ್ನು ಸ್ವಲ್ಪ ಬಿಸಿ ಮಾಡಿ ಉಗುರು ಸುತ್ತಾದ ಬೆರಳಿಗೆ ಲೇಪಿಸಿದರೆ ನೋವು ಕಡಿಮೆಯಾಗುವುದು.

ಸೌಂದರ್ಯ ಸೂತ್ರ

ರಾತ್ರಿ ಮಲಗುವ ಮುನ್ನ ಸ್ವಲ್ಪ ಹಾಲಿಗೆ, ಅಲೋವೇರಾ ಜೆಲ್ ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಿಕೊಳ್ಳಿ. ನಂತರ ಅದನ್ನು ಮೊಣಕೈ ಮತ್ತು ಮೊಣಕಾಲುಗಳ ಮೇಲೆ ಲೇಪಿಸಿ. ರಾತ್ರಿಯಿಡೀ ಹಾಗೇ ಬಿಟ್ಟು ಬೆಳಿಗ್ಗೆ ಎದ್ದ ನಂತರ ನೀರಿನಿಂದ ತೊಳೆಯಿರಿ. ಹೀಗೆ ಮಾಡುವುದರಿಂದ, ಕಪ್ಪು ಕಲೆ ನಿವಾರಣೆಯಾಗಿ, ಚರ್ಮದ ಕಾಂತಿ ಹೆಚ್ಚುವುದು

ದಿನ ಭವಿಷ್ಯ

ಮೇಷ ಹೊಸ ಯೋಜನೆಯೊಂದು ನಿಮ್ಮನ್ನು ಹುಡುಕಿ ಬರುತ್ತದೆ. ಅನಿರೀಕ್ಷಿತವಾಗಿ ಹತ್ತಿರದ ಬಂಧುವೊಬ್ಬರ ಆಗಮನದಿಂದ ಮನೆಯಲ್ಲಿ ಸಂತೋಷ.

ವೃಷಭ ರಿಯಲ್ ಎಸ್ಟೇಟ್ ವ್ಯವಹಾರ ನಡೆಸುವವರಿಗೆ ಇಂದು ಉತ್ತಮ ಆದಾಯ. ಅವಿವಾಹಿತರಿಗೆ ಕಂಕಣ ಬಲ ಕೂಡಿ ಬರಲಿದೆ. ವಿದ್ಯಾರ್ಥಿಗಳು ಹೆಚ್ಚಿನ ಪ್ರಯತ್ನ ಪಡಬೇಕು.

ಮಿಥುನ ಕೌಟುಂಬಿಕ ಸಮಸ್ಯೆಗಳು ಮಾನಸಿಕ ಶಾಂತಿಯ ಮೇಲೆ ಪ್ರತಿಕೂಲ ಪರಿಣಾಮ ಬೀರಬಹುದು. ಅತಿಯಾಗಿ ಖರ್ಚು ಮಾಡುವುದನ್ನು ಕಡಿಮೆ ಮಾಡುವುದು ಒಳಿತು.

ಕಟಕ ಸರ್ಕಾರಿ ನೌಕರರಿಗೆ ವೃಥಾ ಅಲೆದಾಟ, ಹಣದ ಖರ್ಚು. ಹಣಕಾಸಿನ ಪರಿಸ್ಥಿತಿಯನ್ನು ಜಾಣತನದಿಂದ ನಿಭಾಯಿಸಿ. ಕಲಾವಿದರಿಗೆ ಕೀರ್ತಿ ಯಶಸ್ಸು.

ಸಿಂಹ ಇವತ್ತು ಈ ರಾಶಿಯವರಿಗೆ ಲಾಭದಾಯಕ ದಿನ. ನಾನಾ ಮೂಲಗಳಿಂದ ಧನ ಸಹಾಯ ಹರಿದು ಬರಲಿದೆ. ಕಷ್ಟ ಕಾಲದಲ್ಲಿ ಮಾಡಿದ ಸಾಲಗಳನ್ನು ತೀರಿಸುವಿರಿ.

ಕನ್ಯಾ ನೀವು ಬಹುದಿನಗಳಿಂದ ಕೊಂಡುಕೊಳ್ಳಬೇಕೆಂದು ಬಯಸಿದ್ದ ವಸ್ತು ಇಂದು ಕೈಸೇರಲಿದೆ. ಅನುಭವಿಸಿದ ಕಷ್ಟಗಳು ಮರೆಯಾಗುವಂತೆ ಶುಭ ಸಮಾಚಾರ ಕೇಳಲಿದ್ದಿರಿ.

ತುಲಾ ಸರ್ಕಾರದಿಂದ ಆಗಬೇಕಾದ ಕೆಲಸ ಕಾರ್ಯಗಳಲ್ಲಿ ವಿಳಂಬ. ವೈದ್ಯಕೀಯ ವೃತ್ತಿಯಲ್ಲಿರುವವರಿಗೆ ಖ್ಯಾತಿ, ಹೆಸರು ಲಭಿಸಲಿದೆ. ಮಕ್ಕಳಿಂದ ಶುಭ ಸುದ್ದಿ.

ವೃಶ್ಚಿಕ ಕಚೇರಿಯಲ್ಲಿ ಮೇಲಧಿಕಾರಿಗಳೊಂದಿಗೆ ಅಥವಾ ಸಹದ್ಯೋಗಿಗಳೊಂ ದಿಗೆ ಮಾತಿನ ಚಕಮಕಿ. ಆದಷ್ಟು ವಾದ ಕಡಿಮೆ ಮಾಡಿ, ಅನುಸರಿಸಿಕೊಂಡು ಹೋಗಿ.

ಧನು ದೀರ್ಘಕಾಲದ ಹೂಡಿಕೆ ಮಾಡಲು ಯೋಚಿಸುತ್ತಿರುವವರಿಗೆ ಇಂದು ಉತ್ತಮ ದಿನ. ನಿರುದ್ಯೋಗಿಗಳಿಗೆ ಬಯಸಿದ ಕ್ಷೇತ್ರದಲ್ಲಿ ಉದ್ಯೋಗದ ಸಾಧ್ಯತೆ.

ಮಕರ ಮೇಲಧಿಕಾರಿಗಳಿಂದ ಪ್ರಶಂಸೆ, ಸಾಮಾಜಿಕ ಜೀವನದಲ್ಲಿ ಗೌರವ ಮನ್ನಣೆಗಳಿಗೆ ಪಾತ್ರರಾಗುತ್ತೀರಿ. ಆಸ್ತಿ ವಿವಾದ ಬಗೆಹರಿಯುತ್ತದೆ.

ಕುಂಭ ಕುಟುಂಬದಲ್ಲಿ ಅಶಾಂತಿಯ ವಾತಾವರಣ. ಇಂದು ನಿಮಗೆ ಲಾಭಕ್ಕಿಂತ ಒತ್ತಡ ಹೆಚ್ಚು. ದೇವರ ಧ್ಯಾನ ಮಾಡಿದಲ್ಲಿ ಮನಸ್ಸಿಗೆ ನೆಮ್ಮದಿ ದಕ್ಕುವುದು.

ಮೀನ ಆರೋಗ್ಯ ಸಮಸ್ಯೆಗಳು ಕಾಡುವ ಸಾಧ್ಯತೆ ಇದೆ. ಹಣಕಾಸಿನ ಸಮಸ್ಯೆ ನಿವಾರಣೆ. ಆಭರಣಗಳು ಅಥವಾ ದುಬಾರಿ ವಸ್ತುಗಳನ್ನು ಖರೀದಿಸಲಿದ್ದೀರಿ.

● ಕೆ.ಬಿ.ಸಂತೋಷ್ ಗುರೂಜಿ

ಈ ದಿನ ಇತಿಹಾಸ

- 1929 - ಬಾಲಿವುಡ್‌ನ ಜನಪ್ರಿಯ ನಟಿ ಮತ್ತು ಗಾಯಕಿ ಸುರೈಯಾ ಜನನ
- 1995 - ಭಾರತದ ಟೇಬಲ್ ಟೆನ್ನಿಸ್ ಆಟಗಾರ್ತಿ ಮನಿಕಾ ಬಾತ್ರಾ ಜನನ
- 1947 - ಅಖಿಲ ಭಾರತ ಕಾಂಗ್ರೆಸ್, ದೆಹಲಿಯಲ್ಲಿ ಬ್ರಿಟೀಷರ ಭಾರತದ ವಿಭಜನೆಯ ಯೋಜನೆಯನ್ನು ಒಪ್ಪಿಕೊಂಡಿತು.
- 2005 - ಮಾಹಿತಿ ಹಕ್ಕು ಕಾಯಿದೆಯನ್ನು ಜಾರಿಗೆ ತರಲಾಯಿತು.

ಚಿತ್ರಸ್ಫೂರ್ತಿ



ಜಗತ್ತಿನಲ್ಲಿರುವ ಪ್ರತಿ ಜೀವಿಗಳು ಆಹಾರ ಸರಪಳಿಯ ಕೊಂಡಿಗಳಿದ್ದಂತೆ. ದಕ್ಷಿಣ ಏಷಿಯಾದಲ್ಲಿ ಸಾಮಾನ್ಯವಾಗಿ ಕಂಡುಬರುವ ನೀಲಕಂಠ ಪಕ್ಷಿ, ತನ್ನ ಬೇಟೆಯಾಗಿರುವ ಚೇಳನ್ನು ಬಾಯಲ್ಲಿ ಕಚ್ಚಿಕೊಂಡಿರುವ ದೃಶ್ಯ ವನ್ಯಜೀವಿ ಛಾಯಾಗ್ರಹಕ ಅನೂಪ್ ದೇವಧರ್ ಅವರ ಕ್ಯಾಮರಾದಲ್ಲಿ ಸೆರೆಯಾಗಿದ್ದು ಹೀಗೆ.

ನಂಬಿಕೆಯೇ ದೇವರು

ಒಂದೊಳ್ಳೆ ಮಾತು

ಒಂದೊಳ್ಳೆ ಮಾತು

ರೂಪಾ ಗುರುರಾಜ್

rgururaj628@gmail.com

ಹಿಂದೆ ಒಬ್ಬ ರಾಜನಿದ್ದ. ಕೃಷ್ಣನ ಪರಮ ಭಕ್ತ. ರಾಜನು ನಿತ್ಯವೂ ಸುಂದರವಾದ ಹೂಮಾಲೆ ತಂದು ದೇವಾಲಯದಲ್ಲಿದ್ದ ಕೃಷ್ಣನಿಗೆ ಅರ್ಪಿಸುತ್ತಿದ್ದ. ಅರ್ಚಕರು ಹೂ ಮಾಲೆಯನ್ನು ಕೃಷ್ಣನಿಗೆ ಹಾಕಿ ಪೂಜಿಸಿ ಮಂಗಳಾರತಿ ಮಾಡಿ ರಾಜನಿಗೆ ಮಂಗಳಾರತಿ ಕೊಟ್ಟು, ಪ್ರಸಾದ ಕೊಡುವಾಗ ಭಗವಂತನ ಅನುಗ್ರಹ ಎಂದು ಆಶೀರ್ವದಿಸಿ ಅದೇ ಹೂ ಮಾಲೆಯನ್ನು ಪ್ರತಿದಿನವೂ ರಾಜನಿಗೆ ಹಾಕುತ್ತಿದ್ದರು.

ರಾಜನು ನೇಮಕ ಮಾಡಿದ ಅರ್ಚಕರು ಶ್ರದ್ಧಾ, ಭಕ್ತಿಯಿಂದ ಕೃಷ್ಣನಿಗೆ ಪೂಜೆ ಮಾಡುತ್ತಿದ್ದರು. ಭಗವಂತನ ಪೂಜೆ ಮಾಡುವ ಕೈಂಕರ್ಯ ಸಿಕ್ಕಿದ್ದು ತಮ್ಮ ಪೂರ್ವ ಜನ್ಮದ ಪುಣ್ಯ, ಇದು ಶ್ರೀ ಕೃಷ್ಣನ ದಯೆ ಎಂದುಕೊಂಡು, ಭಕ್ತಿ ನಿಷ್ಠೆಯಿಂದ ಶ್ರೀ ಕೃಷ್ಣನನ್ನು ಪೂಜಿಸುತ್ತಿದ್ದರು.

ಒಂದು ದಿನ ರಾಜ ಅನಾರೋಗ್ಯದ ನಿಮಿತ್ತ ಪೂಜೆಗೆ ಬರಲಾಗದಿದ್ದಾಗ ಎಂದಿನಂತೆ ಪೂಜೆ ಮುಗಿದ ಮೇಲೆ , ಸಂಜೆ ಹೂವಿನ ಹಾರವನ್ನು ತೆಗೆಯುವಾಗ ಇಂದು ಈ ಪ್ರಸಾದದ ಹೂವನ್ನು ತಾನೇ ಏಕೆ ಧರಿಸಬಾರದು ಎಂದು ಅರ್ಚಕರಿಗೆ ಒಂದು ಕ್ಷಣ ಆಸೆಯಾಯಿತು. ಅಂತೆಯೇ ಕೃಷ್ಣನಿಗೆ ನಮಿಸುತ್ತಾ, 'ಅಪ್ಪ ನಿನ್ನ ಪ್ರಸಾದವನ್ನು ಇಂದು ನಾನು ಸ್ವೀಕರಿಸುತ್ತೇನೆ' ಎಂದು ಭಕ್ತಿಯಿಂದ ಕುತ್ತಿಗೆಗೆ ಹಾಕಿಕೊಂಡರು. ಅದೇ ಸಮಯಕ್ಕೆ ರಾಜನ ಸೇವಕ ಬಂದು, 'ಸ್ವಾಮಿ ರಾಜರು ದೇವಸ್ಥಾನಕ್ಕೆ ಬರುತ್ತಿದ್ದಾರೆ. ರಾಜರಿಗೆ ಹಾಕುವ ಹಾರವನ್ನು ತೆಗೆದಿಡಿ' ಎಂದು ಹೇಳಿ ಹೋದನು.

ಅರ್ಚಕರಿಗೆ ಕಣ್ಣು ಕತ್ತಲೆಯಾಯಿತು, 'ಭಗವಂತ ಎಂಥಾ ತಪ್ಪು ಮಾಡಿಬಿಟ್ಟೆ ನನ್ನನ್ನು ಕೊನೆಯ ಬಾರಿ ಕ್ಷಮಿಸಿ ಬಿಡು' ಎನ್ನುತ್ತಾ, ಹಾರವನ್ನು ಮತ್ತೆ ಕೃಷ್ಣನಿಗೇ ಹಾಕಿಬಿಟ್ಟರು. ರಾಜ ಬಂದು ಮಂಗಳಾರತಿ ತೆಗೆದುಕೊಂಡ ಮೇಲೆ ಹಾರವನ್ನು ಪ್ರಸಾದವಾಗಿ ರಾಜನ ಕೊರಳಿಗೆ ಹಾಕಿದರು.

ರಾಜನು ಎಂದಿನಂತೆ ಹಾರವನ್ನು ಕೈಯಲ್ಲಿ ಮುಟ್ಟಿ ನೋಡುತ್ತಿರುವಾಗ ಒಂದು ಬಿಳಿ ಕೂದಲು ಕೈಗೆ ಅಟಿಯಿತು. ತಕ್ಷಣ ಆ ಕೂದಲೆಳೆಯನ್ನು ತೆಗೆದು, 'ಏನು ಅರ್ಚಕರೇ ಹಾರದಲ್ಲಿ ಮನುಷ್ಯರ ಕೂದಲು ಏನಿದರ ಅರ್ಥ. ಇದು ಯಾವ ಕೂದಲು ನಿಜ ಹೇಳಿ' ಎಂದು ಗದರಿಸಿದನು. ಏನಾದರಾಗಲಿ ಎಂದು ಧೈರ್ಯದಿಂದ ಅರ್ಚಕರು ಆ ಹಾರದಲ್ಲಿರುವ ಕೂದಲು ಕೃಷ್ಣನದೇ ಎಂದು ಹೇಳಿದರು. ರಾಜ ಇದನ್ನು ನಂಬಲು ತಯಾರಿರಲಿಲ್ಲ.

ರಾಜ ಇದನ್ನು ನಂಬಲು ತಯಾರಿರಲಿಲ್ಲ. 'ನಾಳೆ ಬರುತ್ತೇನೆ ಕೃಷ್ಣನ ಮುಡಿಯಲ್ಲಿ ಬಿಳಿ ಕೂದಲು ಕಂಡರೆ ಸರಿ ಇಲ್ಲದಿದ್ದರೆ ತಾವು ಇಷ್ಟು ವರ್ಷ ಮಾಡಿದ ಸೇವೆಯನ್ನು ಮರೆತು ಮಾಡಿದ ತಪ್ಪಿಗಾಗಿ ನಿಮಗೆ ಗಲ್ಲು ಶಿಕ್ಷೆ' ಎಂದು ಕಟುವಾಗಿ ಹೇಳಿ ಹೊರಟು ಹೋದ. ಅರ್ಚಕರು ಕೃಷ್ಣನ ಪಾದವನ್ನೇ ಹಿಡಿದು ದೈನ್ಯದಿಂದ 'ತಂದೆ ನೀನೆ ನನ್ನ ಸರ್ವಸ್ವವೆಂದು ಇಷ್ಟು ವರ್ಷ ಪೂಜೆ ಮಾಡಿದ್ದೇನೆ. ನನ್ನಿಂದ ತಪ್ಪಾಗಿದ್ದರೆ ಕ್ಷಮಿಸಿಬಿಡು ಈಗ ನೀನೇ ನನ್ನನ್ನು ಕಾಪಾಡಬೇಕು' ಎಂದು ಪರಿಪರಿಯಾಗಿ ಬೇಡಿಕೊಂಡರು. ಭಗವಂತನ ಪಾದದಡಿಯಲ್ಲಿ ಕುಳಿತೇ ರಾತ್ರಿ ಕಳೆದು ಬೆಳಗಾಯಿತು.

ರಾಜನು ಬಂದವನೇ ಕೃಷ್ಣನ ವಿಗ್ರಹದ ಮೇಲಿರುವ ಕಿರೀಟವನ್ನು ತೆಗೆದನು. ಅಲ್ಲಿ ಕಂಡ ಬಿಳುಕುವುದನ್ನು ನೋಡಿ ಆಶ್ಚರ್ಯವಾಗಿ ಒಂದಷ್ಟನ್ನು ಹಿಡಿದು ಎಳೆದನು. ನೋಡನೋಡುತ್ತಿದ್ದಂತೆ ಕೃಷ್ಣನ ಕೂದಲು ಕಿತ್ತಿರುವ ಜಾಗದಲ್ಲಿ ರಕ್ತ ಬರಲು ಶುರುವಾಯಿತು. ರಾಜನು ಇದ್ದಕ್ಕಿದ್ದಂತೆ ಭೂಕಂಪವಾಗಿ ಭೂಮಿ ಬಿರಿದಂತೆ ನಡುಗಿ ಬೆವರತೊಡಗಿದ. ಗಾಬರಿಯಿಂದ ಒಂದೇ ಸಲಕ್ಕೆ ಮುಂದೆ ಬಂದು, 'ಕೃಷ್ಣನ ಪಾದಗಳನ್ನು ಹಿಡಿದು ಕೃಷ್ಣಾ ನನ್ನ ಅಪರಾಧವನ್ನು ಮನ್ನಿಸು. ಯಾವುದೋ ಆವೇಶದಲ್ಲಿ ಕ್ಷಣ ಮೈಮರೆತು ದುಡುಕಿ ಮಾತನಾಡಿದೆ. ಕೃಷ್ಣಾ ನೀನೇ ಮನ್ನಿಸು ದೇವಾ' ಎಂದು ಕೃಷ್ಣನ ಪಾದಗಳಲ್ಲಿ ಹಣೆ ಚಚ್ಚಿಕೊಂಡು ಅಳತೊಡಗಿದ. ಆಗ ಆಕಾಶವಾಣಿಯೊಂದು, 'ಅರ್ಚಕರ ಭಕ್ತಿಯನ್ನು ನಿಸ್ವಾರ್ಥ ಸೇವೆಯನ್ನು ಇನ್ನೆಂದು ಅನುಮಾನಿಸಬೇಡ ಅವರ ಭಕ್ತಿಯಲ್ಲಿ ನಾನಿದ್ದೇನೆ' ಎಂದಿತು. ರಾಜ ಅರ್ಚಕರ ಕಾಲಿಗೆ ಬಿದ್ದು ಕ್ಷಮೆ ಯಾಚಿಸಿದ.

ಅವರವರ ಭಕ್ತಿ, ಶ್ರದ್ಧೆ ಅವರನ್ನು ಕಾಯುತ್ತದೆ ಅದನ್ನು ಎಂದೂ ಪರೀಕ್ಷಿಸಲು ಹೋಗಬಾರದು.

ಪದಬಂಧ



ಎಡದಿಂದ ಬಲಕ್ಕೆ:

2. ಪ್ರತಿದಿನದ ಕೆಲಸಗಳನ್ನು ಬರೆದಿಡುವ ಪುಸ್ತಕ (4)
5. ಮರಗಿಡಗಳ ಚಿಗುರು (3)
6. ಕೊಲ್ಲುವಿಕೆಗೆ ಮತ್ತೊಂದು ಹೆಸರು (3)
8. ಚೇತರಿಸಿಕೊಳ್ಳುವುದರ ಮಧ್ಯೆ ಆಂಗ್ಲರ ಚಿಂತೆಯೂ ಇದೆ (4)
9. ಕಿತಾಪತಿ ಮಾಡಿದ ಬೇಡ (3)
11. ಹಿಂದಿಯ ತಾಯಿಯೊಂದಿಗೆ ಬಂದಿರುವ ಮುಂಡಾಸು (3)
13. ದ್ರವರೂಪದ ಒಂದು ಸಿಹಿ (3)
16. ಪಾಕ ಸರಿಯಾಗಿ ಅಗತ್ಯವಾದ ಬೆಂಕಿ (3)
18. ನವರತ್ನಗಳಲ್ಲಿ ಒಂದಾದ ಪಚ್ಚೆ (4)
19. ಗರ ಬಡಿದಂತಿರುವ ದಡ್ಡ (3)
21. ಕೂಸು ಹುಟ್ಟುವ ಮೊದಲೇ ತಯಾರಿಸಿದ ಟೋಪಿ (3)
22. ಜನರನ್ನು ಸೇರಿಸಿ ಮಾಡಿದ ದೊಡ್ಡ ಸಭೆ (4)

ಮೇಲಿನಿಂದ ಕೆಳಕ್ಕೆ:

1. ಕೆನ್ನೆಗೆ ಬಾರಿಸುವ ಏಟು (4)
2. ಆಕಾಶ ಅಥವಾ ಸ್ವರ್ಗ (2)
3. ರಾಜರ ರಾಜ, ಸಾರ್ವಭೌಮ (4)
4. ಹೊಸದಾಗಿ ಕಂಡಿರುವ ಕಾಡು (2)
6. ಪ್ರಕೃತಿಯ ಬಣ್ಣ (3)
7. ಸೊರಗು ಎನ್ನುವುದು ಅಸ್ತವ್ಯಸ್ತವಾಗಿ ಬಂದಿದೆ (3)
10. ಸಾಕುಮಗನಾದ ಕರ್ಣ (3)
12. ವಸಂತಕಾಲವನ್ನು ನೆನಪಿಸುವ ವಿಷ್ಣು (3)
13. ಪರಾಗವಲ್ಲ, ಪಂಡಿತ (3)
14. ಮತ್ತೊಂದು ವೃಕ್ಷದೊಂದಿಗೆ ಬಂದಿರುವ ಕದನ (3)
15. ಲೋಕಾಭಿರಾಮವಾದ ಸಂಭಾಷಣೆ ತಲೆಕೆಳಗಾಗಿದೆ (4)
17. ಲಲಿತಕಲೆಗಳನ್ನು ತಿಳಿದವನು (4)
20. ಚಳಿಗಾಲಕ್ಕೆ ಮತ್ತೊಂದು ಹೆಸರು (2)
21. ರಾಮನ ಹಿರಿಯ ಮಗ (2)

ನಿನ್ನೆಯ ಉತ್ತರ

ಎಡದಿಂದ ಬಲಕ್ಕೆ: 1. ಸಾಗರ 3. ಮೊಸರು 5. ಹಾಟಕ 7. ತಲೆನೋವು 9. ನವನೀತ 11. ಗೆಣಸು 13. ಸಾಗಣೆ 14. ಕಾರಣ 16. ಪಾವತಿ 18. ಸವಿನಯ 20. ಮಿತಭಾಷಿ 22. ಸಮೀರ 24. ಸಂಪತ್ತು 25. ಕುರವಿ

ಮೇಲಿನಿಂದ ಕೆಳಕ್ಕೆ: 1.ಸಾಮಂತ 2. ಕಾಟ 4. ಸರನೀ 5. ಹಾವುಗೆ 6. ಕನಸು 8. ಲೆಕ್ಕಿಗ 10. ತಲ್ಲಣ 12. ಣರುವ 13. ಸಾಹಸ 15. ರಸ್ವಭಾ 16. ಪಾಯಸ 17. ತಿಮಿರ 19. ವಿಕೋಪ 21. ಷಿದುವಿ 23. ಮೀನು

● ಸಿ. ರವಿಶಂಕರ ಶಾಸ್ತ್ರಿ, ದಂಬೆ

ದಿನಕ್ಕೊಂದು ಮಾಹಿತಿ

ಎರಡು ಸಾಗರ ಸೇರುವ ನೀರು



ಕರ್ನಾಟಕದಲ್ಲಿ ಅನೇಕ ಪರ್ವತ ಶ್ರೇಣಿಗಳಿವೆ. ಸಾಮಾನ್ಯವಾಗಿ ಈ ಪರ್ವತಗಳ ಮೇಲೆ ಬಿದ್ದ ಮಳೆಯು ಹರಿದು, ನದಿಯಾಗಿ ಹೋಗಿ ಅಲ್ಲಿಯವರೆಗೂ ಅದು ಕಂಡಿರಲಾರದ ಆ ಕಾಣದ ಕಡಲನು ಸೇರುತ್ತವೆ. ಆದರೆ ಬಿಸಿಲೆ ಪಶ್ಚಿಮ ಘಟ್ಟದಲ್ಲಿ ಬರುವ ಮಂಕನಹಳ್ಳಿ ಎಂಬ ಊರಿನಲ್ಲಿ ಒಂದು ಪರ್ವತವಿದೆ. ಅಲ್ಲಿ ಹರಿಯುವ ನೀರು ಒಂದೇ ಸಮುದ್ರ ಸೇರದೆ, ವಿಭಜಿಸಲ್ಪಡುತ್ತದೆ ಎನ್ನುವುದೇ ವಿಶೇಷ. ಆ ಪರ್ವತದ ತುದಿಯಲ್ಲಿ ಎಡಗಡೆ ಭಾಗಕ್ಕೆ ಬೀಳುವ ಮಳೆಯ ನೀರು ಅರಬ್ಬೀ ಸಮುದ್ರಕ್ಕೂ ಹಾಗೂ ಬಲಭಾಗಕ್ಕೆ ಬೀಳುವ ಮಳೆಯ ನೀರು ಬಂಗಾಳ ಕೊಲ್ಲಿಗೂ ಹೋಗಿ ಸೇರುತ್ತದೆ.

ಪುಸ್ತಕ ಲೋಕ

ಬೆಂಗಳೂರು ಕಲರ್ಸ್



ಮೇಘನಾ ಸುಧೀಂದ್ರ, ಬರೆದಿರುವ ಅವರ ಬೆಂಗಳೂರು ಕಲರ್ಸ್ ಮಹಾನಗರದ ಕಥನವಾಗಿದೆ. ಈ ಪುಸ್ತಕದಲ್ಲಿ ಬರುವ ಪ್ರತಿ ಪಾತ್ರಗಳು ಓದುಗನೊಡನೆ ಮಾತನ್ನಾಡುತ್ತವೆ. ಬೆಂಗಳೂರಿನ ಅಭಿವೃದ್ಧಿ, ಇಲ್ಲಿನ ವರ್ಣರಂಜಿತ ಚರಿತ್ರೆ, ಕ್ಷಣದಿಂದ ಕ್ಷಣಕ್ಕೆ ಬದಲಾಗುತ್ತಿರುವ ಪರಿಸ್ಥಿತಿ, ಹವಾಮಾನ ಹೀಗೆ ಎಲ್ಲದರ ಕುರಿತು ಸರಳ ಭಾಷೆಯಲ್ಲಿ ಕಥನಗಳ ಮೂಲಕ ಈ ಪುಸ್ತಕವನ್ನು ಲೇಖಕಿ ಚಿತ್ರಿಸಿದ್ದಾರೆ. ಕೆಲವರಿಗೆ ಇದು ಸೌಲಭ್ಯ ಕೊಡುವ ರೆಸಾರ್ಟ್‌ಗಳಾದರೆ ಇನ್ನು ಕೆಲವರಿಗೆ ಮೇಕ್ ಶಿಫ್ಟ್ ಜಾಗ ಮತ್ತು ಕೆಲವರಿಗೆ ಆತ್ಮದ ಒಂದು ಭಾಗ ಎಂದು ಸ್ವತಃ ಲೇಖಕಿ ಈ ಕೃತಿಯ ಪರಿಚಯ ಮಾಡುತ್ತಾರೆ.

ಟ್ವೀಟ್‌ಮೆಂಟ್

ಅನಿತಾ ಜೇಕಬ್: ನನಗಿನ್ನೂ ಗೊತ್ತಾಗುತ್ತಿಲ್ಲ, ಇಸ್ರೇಲ್ ಭಾರತ ಭಾಗವಾಗಿ ಮಣಿಪುರ ಯಾವಾಗ ಹೊರಗಾಯ್ತು ಅಂತ?

ತಿಲಕ್ ಚೌದರಿ: ಈಗ ನನಗೆ ಗೊತ್ತಾಗ್ತಿಲ್ಲ, ನಾನ್ ನಿನ್ಗೆ ಫಾಲೋ ಮಾಡ್ತಿಲ್ಲ. ಆದ್ರೂ ನಿಮ್ಮ ಪೋಸ್ಟ್‌ಗಳು ನನ್ನ ಟೈಮ್ ಲೈನ್‌ನಲ್ಲಿ ಹೇಗೆ ಬರ್ತಿದೆ ಅಂತ!

ದಿನಕ್ಕೊಂದು ಪ್ರಶ್ನೆ

● ಎಲ್.ಪಿ.ಕುಲಕರ್ಣಿ, ಬಾದಾಮಿ

● 'ರಿಸಾ' ಯಾವ ರಾಜ್ಯದ ಬುಡಕಟ್ಟು ವೇಷಭೂಷಣವಾಗಿದ್ದು, ಇತ್ತೀಚೆಗೆ ಅದಕ್ಕೆ ಜಿಐ ಟ್ಯಾಗ್ ಅನ್ನು ನೀಡಲಾಗಿದೆ?

- ಎ. ಗುಜರಾತ್
- ಬಿ. ತ್ರಿಪುರಾ
- ಸಿ. ಮೇಘಾಲಯ
- ಡಿ. ಕರ್ನಾಟಕ

ಉತ್ತರ: ಬಿ. ತ್ರಿಪುರಾ

ಮಾಹಿತಿ

ತ್ರಿಪುರಾದ ಬುಡಕಟ್ಟು ಉಡುಪಾದ 'ರಿಸಾ' ಗೆ ಜಿಐ ಟ್ಯಾಗ್ ನೀಡಲಾಗಿದೆ. ಉತ್ಪನ್ನವನ್ನು ಅದರ ಮೂಲದ ಪ್ರದೇಶಕ್ಕೆ ಲಿಂಕ್ ಮಾಡಲು ಭೌಗೋಳಿಕ ಸೂಚನೆಯನ್ನು ಮುಖ್ಯವಾಗಿ ನೀಡಲಾಗುತ್ತದೆ. ಹಾಗೆ ಕಟಕ್‌ನ (ಒಡಿಶಾ) ಪ್ರಸಿದ್ಧ ಬೆಳ್ಳಿ ತರ್ಕಾಶಿಗೆ ಜಿಐ ಟ್ಯಾಗ್ ನೀಡಲಾಗಿದೆ. ಒಡಿಶಾ ರಾಜ್ಯ ಸಹಕಾರ ಕರಕುಶಲ ಕಾರ್ಪೊರೇಷನ್ ಲಿಮಿಟೆಡ್ ಜುಲೈ 1, 2021 ರಂದು ಪ್ರಸಿದ್ಧ ಸಿಲ್ವರ್ ತಾರ್ಕಾಶಿಗೆ ಜಿಐ ಟ್ಯಾಗ್‌ನ್ನು ವಿನಂತಿಸಿತ್ತು.

ಬೆರಗುಗೊಳಿಸುವ ಖಗೋಳ

ವಿಜ್ಞಾನ ವಿಸ್ಮಯ

ಕೆ. ನಟರಾಜ್

ವಿಶ್ವದ ಬಗ್ಗೆ ನಮಗೆ ಗೊತ್ತಿರುವುದೆಷ್ಟು? ಇದುವರೆಗೂ ಖಗೋಳ ಶಾಸ್ತ್ರಜ್ಞರು- ನಕ್ಷತ್ರ, ಗ್ರಹಗಳು, ಗ್ಯಾಲಕ್ಸಿಗಳು, ಇತರೆ ಆಕಾಶಕಾಯಗಳ ಬಗ್ಗೆ ಏನನ್ನು ಕಂಡುಹಿಡಿದಿದ್ದಾರೋ ಅದು ಕೇವಲ ವಿಶ್ವದ ಶೇಕಡಾ 5ರಷ್ಟು ಮಾತ್ರ. ವಿಶ್ವದ ಬಗ್ಗೆ ನೋಡುವುದು, ತಿಳಿಯುವುದು ಬೇಕಾದಷ್ಟಿದೆ ಎನ್ನುತ್ತಾರೆ ವಿಜ್ಞಾನಿಗಳು.

ಕಾಲದೊಂದಿಗಿನ ನಮ್ಮ ಪಯಣ

ಎಷ್ಟೋ ಇಂಗ್ಲಿಷ್ ಮೂವೀಗಳಲ್ಲಿ ಕಾಲದ ಹಿಂದಿನ ಪಯಣ ಸಾಧ್ಯ ಎಂದು ತೋರಿಸಲಾಗುತ್ತಿದೆ. ಆದರೆ ಮಾನವರಾದ ನಮ್ಮಿಂದ ಅದು ಸಾಧ್ಯವಿಲ್ಲದ ಮಾತು.

ಐನ್‌ಸ್ಟೈನ್‌ರ ಪ್ರಕಾರ ಕಾಲ, ಅವಕಾಶ ಹಾಗೂ ಗುರುತ್ವಗಳು ಒಂದಕ್ಕೊಂದು ಸಂಬಂಧಿಸಿವೆ ಎಂಬುದು ನಮಗೆ ಗೊತ್ತಿದೆ. ಇದನ್ನು ಸರಳವಾಗಿ ವಿವರಿಸಿ ಹೇಳುವುದಾದರೆ: ನೀವು ವೇಗವಾಗಿ ಹೋದಂತೆಲ್ಲಾ, ಬೇರೆ ವಸ್ತುಗಳ ಚಲನೆ ನಿಧಾನವಾದಂತೆ ಭಾಸವಾಗುತ್ತದೆ! ಒಂದು ಅಂತಾರಾಷ್ಟ್ರೀಯ ಸ್ಪೇಸ್ ನಿಲ್ದಾಣ 28,163 ಮೈಲಿ ವೇಗದಲ್ಲಿ ಚಲಿಸುತ್ತಿದೆ ಹಾಗೂ ಅದರ ಮೇಲೆ ನೀವು ಕುಳಿತು ಚಲಿಸುತ್ತಿರುವಿರಿ ಎಂದಾದರೆ, ನಿಮ್ಮ ಕಾಲ, ಭೂಮಿಯ ಮೇಲಿನ ಕಾಲಕ್ಕಿಂತ ಬೇರೆಯ ದರದಲ್ಲೇ ಕಂಡು

ಬರುತ್ತದೆ! ಆಗ ನಿಮ್ಮ ನಿಮಿಷ, ಗಂಟೆ, ದಿನ ಹಾಗೂ ವರ್ಷಗಳೇ ವ್ಯತ್ಯಯವಾಗುತ್ತವೆ!

ವಿಶ್ವದ ಅತ್ಯಂತ ದೊಡ್ಡ ನಕ್ಷತ್ರ

ವಿಶ್ವದಲ್ಲೇ ಅತ್ಯಂತ ದೊಡ್ಡ ನಕ್ಷತ್ರದ ಹೆಸರು, ಯು-ವೈ ಸ್ಕೂಟಿ ಎಂದು. ಇದು ನಮ್ಮ ಆಕಾಶಗಂಗೆ ಲಾಕ್ಸಿಯ ಮಧ್ಯ ಭಾಗದಲ್ಲಿ ಕಂಡುಬರುತ್ತದೆ. ಭೂಮಿಯಿಂದ 9,500 ಬೆಳಕಿನ ವರ್ಷಗಳ ದೂರದಲ್ಲಿದೆ. ಇದರ ಫ ತ್ರಿಜ್ಯವೇ ಸೂರ್ಯನ ತ್ರಿಜ್ಯದ 1,700 ಪಟ್ಟು ಹೆಚ್ಚಿದೆ. ಅಂದರೆ ನಮ್ಮ 5 ದಶಲಕ್ಷ ಸೂರ್ಯರನ್ನು ಈ ಯು-ವೈ ಸ್ಕೂಟಿ ನಕ್ಷತ್ರದೊಳಗೆ ತುಂಬಬಹುದಂತೆ!

- ನಮ್ಮ ಸೂರ್ಯ ಒಂದು ಸಣ್ಣ ಚುಕ್ಕೆ ; ಇದು ಅಕ್ಷರಶಃ ಸತ್ಯ! ನಮ್ಮ ಸೂರ್ಯ ಈ ವಿಶ್ವದಲ್ಲಿ ಒಂದು ಸಾಧಾರಣ ನಕ್ಷತ್ರ. ನಮ್ಮ ಕಣ್ಣಿಗೆ ಪ್ರಕಾಶಮಾನವಾಗಿ ಕಾಣುವ ಸಿರಿಯಸ್ ನಕ್ಷತ್ರ ಸೂರ್ಯನ ಎರಡು ಪಟ್ಟು ದೊಡ್ಡದಾಗಿದ್ದಾನೆ. ನಮ್ಮ ಗೆಲಾಕ್ಸಿಯಲ್ಲಿ ಸೂರ್ಯನ ನೂರು, ಸಾವಿರ ಪಟ್ಟು ದೊಡ್ಡದಾದ ನಕ್ಷತ್ರಗಳೇ ಬಹಳ ಸಂಖ್ಯೆಯಲ್ಲಿವೆ. ಇನ್ನು ನಮ್ಮ ಭೂಮಿಯ ಗಾತ್ರವನ್ನು ಹೇಗೆ ಹೇಳುವುದು? ನಮ್ಮ ಸೂರ್ಯನಲ್ಲಿ 1,300,000 ಭೂಮಿಗಳನ್ನು ತುಂಬಬಹುದಂತೆ!
- ಅದ್ಭುತ ಗಾತ್ರದ ಕಪ್ಪುರಂಧ್ರ; ನಮ್ಮ ವಿಜ್ಞಾನಿಗಳ ಸಿದ್ಧಾಂತದ ಪ್ರಕಾರ ಕಪ್ಪುರಂಧ್ರಗಳು ನಮ್ಮ ಗೆಲಕ್ಸಿಯ ಕೇಂದ್ರ ಭಾಗದಲ್ಲಿ ಕೇಂದ್ರೀಕೃತಗೊಂಡಿವೆ. ಅಂತಹ ಒಂದು ದೈತ್ಯ ಗೆಲಾಕ್ಸಿ ಸೆಗೆಟೇರಿಯಸ್-ಎ. ಇದು ನಮ್ಮಿಂದ 27,000 ಬೆಳಕಿನ ವರ್ಷ ದೂರದಲ್ಲಿದೆ.
- ಚಂದ್ರನ ಹುಟ್ಟು ಭೂಮಿಯಿಂದ: ಸುಮಾರು 4.5 ಬಿಲಿಯನ್ ವರ್ಷಗಳ ಹಿಂದೆ ಭೂಮಿಯನ್ನು ಇನ್ನೊಂದು ಆಕಾಶಕಾಯ ಢಿಕ್ಕಿ ಹೊಡೆದ ಪರಿಣಾಮವಾಗಿ ಭೂಮಿಯ ಒಂದು ತುಣುಕು ಬೇರ್ಪಟ್ಟು ಚಂದ್ರನಾಗಿ ರೂಪುಗೊಂಡಿದೆಯಂತೆ.
- ಇದಕ್ಕೆ ವಿಜ್ಞಾನಿಗಳು ಕೊಡುವ ಪುರಾವೆ- ಭೂಮಿಯ ಮೇಲಿನ ಬಹಳಷ್ಟು ವಸ್ತುಗಳು ಚಂದ್ರನಲ್ಲೂ ಕಂಡು ಬಂದಿರುವುದು!

ಆರೋಗ್ಯಕ್ಕೆ ಅಮೃತ ಸ್ಟಾರ್ ಫ್ರೂಟ್

ಆಹಾರವೇ ವೈದ್ಯ

ಬೆಂ. ಮು. ಮಾರುತಿ

ಪೌಷ್ಟಿಕಾಂಶದ ಸಂಗತಿಗಳು

ಸರಾಸರಿ ಗಾತ್ರದ ಕಚ್ಚಾ ನಕ್ಷತ್ರದ ಹಣ್ಣಿನ ಪೌಷ್ಟಿಕಾಂಶದ ಮೌಲ್ಯವನ್ನು ಕೆಳಗೆ ನೀಡಲಾಗಿದೆ:

ಕ್ಯಾಲೋರಿಗಳು: 28 ಕೆ.ಸಿ.ಎಲ್

ಕಾರ್ಬೋಹೈಡ್ರೇಟ್: 6 ಗ್ರಾಂ

ಫೈಬರ್: 3 ಗ್ರಾಂ

ಪ್ರೋಟೀನ್: 1 ಗ್ರಾಂ

ಕೊಬ್ಬು: 0.28 ಗ್ರಾಂ

ಸ್ಟಾರ್ ಹಣ್ಣು ಸಿಹಿ ಮತ್ತು ಹುಳಿ ಸಂತೋಷದ ಮಿಶ್ರಣವಾಗಿದೆ. ಹಣ್ಣು ನಕ್ಷತ್ರದ ಆಕಾರವನ್ನು ಹೊಂದಿದೆ ಮತ್ತು ಆದ್ದರಿಂದ ಸಾಮಾನ್ಯ ಹೆಸರು. ಹಣ್ಣಿನ ಚರ್ಮವು ರೇಷ್ಮೆಯಂತಿರುತ್ತದೆ ಮತ್ತು ಮೇಣದಂತೆ ಭಾಸವಾಗುತ್ತದೆ, ಆದಾಗ್ಯೂ 100% ಖಾದ್ಯವಾಗಿದೆ. ಹಣ್ಣು ವಿಟಮಿನ್ 'ಸಿ' ಅನ್ನು ಒಳಗೊಂಡಿರುತ್ತದೆ ಮತ್ತು ವಿಟಮಿನ್ ಬಿ 5, ಫೋಲೇಟ್, ಮೆಗ್ನೀಸಿಯಮ್ ಮುಂತಾದ ಹಲವಾರು ಪೋಷಕಾಂಶಗಳನ್ನು ಒಳಗೊಂಡಿದೆ. ಹಣ್ಣಿನಲ್ಲಿ ಕ್ವೆರ್ಸೆಟಿನ್, ಎಪಿಕಾಟೆಚಿನ್ ಮುಂತಾದ ಅನೇಕ ಅಗತ್ಯ ಸಸ್ಯ ಸಂಯುಕ್ತಗಳಿವೆ. ಮೂತ್ರಪಿಂಡದ ಕಾಯಿಲೆ ಇರುವವರು ಸ್ಟಾರ್ ಹಣ್ಣುಗಳನ್ನು ಸೇವಿಸಬಾರದು. ಏಕೆಂದರೆ ಇದು ತೊಡಕುಗಳಿಗೆ ಕಾರಣವಾಗಬಹುದು.

ತ್ವರಿತ ಸಂಗತಿಗಳು : ಸ್ಟಾರ್ ಫ್ರೂಟ್ ಅನ್ನು ಕ್ಯಾರಂಬೋಲಾ ಎಂದೂ ಕರೆಯಲಾಗುತ್ತದೆ, ಈ ಹೆಸರನ್ನು ಸಂಸ್ಕೃತದಲ್ಲಿ ಕರ್ಮಫಲ ಎಂಬ ಪದದಿಂದ ಪಡೆಯಲಾಗಿದೆ. ನಕ್ಷತ್ರದ ಹಣ್ಣುಗಳು ಏಷ್ಯಾದ ಆಗ್ನೇಯದಲ್ಲಿ ಹುಟ್ಟಿಕೊಂಡಿವೆ ಮತ್ತು ಭಾರತ, ಇಂಡೋನೇಷ್ಯಾ, ಶ್ರೀಲಂಕಾ, ಮಲೇಷ್ಯಾ ಮತ್ತು ಇನ್ನೂ ಕೆಲವು ಪ್ರದೇಶಗಳಲ್ಲಿ ಕಂಡುಬರುತ್ತವೆ. ನಕ್ಷತ್ರ ಹಣ್ಣು ಅದರ ಆಕಾರದಲ್ಲಿ ನಕ್ಷತ್ರದ ಹೋಲಿಕೆಯನ್ನು ಹೊಂದಿದೆ, ಆದ್ದರಿಂದ ಇದಕ್ಕೆ ಅದರ ಹೆಸರು ಬಂದಿದೆ. ಆಕ್ಸಲಿಡೇಸಿ ಕುಟುಂಬಕ್ಕೆ ಸೇರಿದ ನಕ್ಷತ್ರ ಹಣ್ಣಿನ ಮರದ ವೈಜ್ಞಾನಿಕ ಹೆಸರು ಅವೆರೋವಾ ಕ್ಯಾರಂಬೋಲಾ.

ಸಂಪೂರ್ಣ ನಕ್ಷತ್ರದ ಹಣ್ಣುಗಳು ಅದರ ಮೇಣದಂತಹ ಚರ್ಮದಿಂದ ಅದರ ಬೀಜಗಳವರೆಗೆ ಖಾದ್ಯವಾಗಿದೆ. ಗಾತ್ರವು 3 ರಿಂದ 6 ಇಂಚುಗಳಷ್ಟು ಉದ್ದವಿರುತ್ತದೆ ಮತ್ತು ಹೆಚ್ಚಾಗಿ 5 ರೇಖೆಗಳನ್ನು ಹೊಂದಿರುತ್ತದೆ ಆದರೆ ಹೆಚ್ಚು ಇರಬಹುದು. ನಕ್ಷತ್ರ ಹಣ್ಣು ಹಸಿರು ಬಣ್ಣವನ್ನು ಹೊಂದಿರುತ್ತದೆ ಮತ್ತು ಹಣ್ಣಾದಾಗ ಹಳದಿ ಬಣ್ಣಕ್ಕೆ ತಿರುಗುತ್ತದೆ. ಇದನ್ನು ಹಸಿ ಮತ್ತು ಉಪ್ಪಿನಕಾಯಿ, ಜ್ಯೂಸ್, ಬೇಯಿಸಿದ ಇತ್ಯಾದಿಯಾಗಿ ತಿನ್ನಲಾಗುತ್ತದೆ. ಈ ಹಣ್ಣಿನ ರುಚಿ ಸಾಮಾನ್ಯವಾಗಿ ಹುಳಿಯಾಗಿರುತ್ತದೆ ಆದರೆ ಹಣ್ಣಾದಾಗ ಸ್ವಲ್ಪ ಸಿಹಿಯಾಗಿರುತ್ತದೆ. ಇದರ ರಸವನ್ನು ಕೆಲವೊಮ್ಮೆ ಬಟ್ಟೆಯಿಂದ ಕಲೆಗಳನ್ನು ತೆಗೆದುಹಾಕಲು ಬಳಸಲಾಗುತ್ತದೆ.

ಏನೇನು ಪ್ರಯೋಜನ?

- ಸ್ಟಾರ್ ಫ್ರೂಟ್ ಹಣ್ಣು ಹೃದಯವನ್ನು ಆರೋಗ್ಯಕರವಾಗಿ ಇರಿಸಿಕೊಳ್ಳಲು ಸಹಾಯ ಮಾಡುತ್ತದೆ.
- ಇದರಲ್ಲಿರುವ ಕ್ಯಾಲ್ಸಿಯಂ, ಪೊಟ್ಯಾಸಿಯಂ ಅಂಶಗಳು ಹೃದಯ ಸ್ತಂಭನವನ್ನು ತಡೆಯುತ್ತದೆ. ಅಲ್ಲದೆ ರಕ್ತದ ಹರಿವನ್ನು ಸುಧಾರಿಸುತ್ತದೆ.
- ಮಧುಮೇಹ ಇರುವವರು ಈ ಹಣ್ಣನ್ನು ಸುಲಭದಲ್ಲಿ ಸೇವನೆ ಮಾಡಬಹುದಾಗಿದೆ. ರಕ್ತದಲ್ಲಿನ ಇನ್ಸುಲಿನ್ ಮಟ್ಟವನ್ನು ಸುಧಾರಿಸಲು ಸಹಕಾರಿಯಾಗಿದೆ. ಅಲ್ಲದೆ ಸ್ಟಾರ್ ಫ್ರೂಟ್‌ನಲ್ಲಿ ಫೈಬರ್ ಅಂಶ ಸಮೃದ್ಧವಾಗಿರುವ ಕಾರಣ ಮಧುಮೇಹವನ್ನು ನಿಯಂತ್ರಿಸುತ್ತದೆ.
- ಮಾಂಸಹಾರ, ಕೆಲವು ಗಟ್ಟಿ ಆಹಾರ ಪದಾರ್ಥಗಳನ್ನು ಸೇವಿಸಿದಾಗ ಅಜೀರ್ಣತೆ ಉಂಟಾಗಿ ತೊಂದರೆಯಾದರೆ ಈ ಸ್ಟಾರ್ ಫ್ರೂಟ್‌ನ ಸೇವನೆ ಮಾಡಿ.
- ಸ್ಟಾರ್ ಫ್ರೂಟ್‌ನಲ್ಲಿ ವಿಟಮಿನ್ ಸಿ ಅಂಶ ಹೇರಳವಾಗಿದೆ. ಹೀಗಾಗಿ ಇದು ದೇಹದಲ್ಲಿ ಅನೇಕ ಸಮಸ್ಯೆಗಳಿಗೆ ಪರಿಹಾರ ನೀಡುತ್ತದೆ. ಅಲ್ಲದೆ ಹೇರಳವಾದ ನೀರಿನಾಂಶವಿರುವ ಕಾರಣ ದೇಹ ನಿರ್ಜಲೀಕರಣವಾಗದಂತೆ ತಡೆಯುತ್ತದೆ.
- ಕೆಲವೊಮ್ಮೆ ನರಗಳ ಸಮಸ್ಯೆಯಾದರೆ ದೇಹದಲ್ಲಿ ಉರಿಯೂತ ಉಂಟಾಗುತ್ತದೆ. ಕಾಲು, ಕೈಗಳ ನರಗಳು ಇದ್ದಕ್ಕಿಂತೆ ಉರಿಯಲು ಆರಂಭವಾಗುತ್ತವೆ. ಇದನ್ನು ತಡೆಯಲು ಸ್ಟಾರ್ ಫ್ರೂಟ್ ಸಹಾಯಕವಾಗಿದೆ.
- ಸ್ಟಾರ್ ಫ್ರೂಟ್‌ನಲ್ಲಿ ವಿವಿಧ ವಿಟಮಿನ್‌ಗಳು, ಆಂಟಿಆಕ್ಸಿಡೆಂಟ್‌ಗಳಿವೆ ಮತ್ತು ವಿಟಮಿನ್ ಸಿ ಹೇರಳವಾಗಿರುವ ಕಾರಣ ಚರ್ಮಕ್ಕೆ ತುಂಬಾ ಒಳ್ಳೆಯದು.

ವಿಶ್ವವಾಣಿ
ಆರಾಮ
@vishwavaninews
ಬೆಂಗಳೂರು
ಶನಿವಾರ
15 | 06 | 2024
ಅನುದಿನವೂ ವಿರಾಮಕ್ಕೆ ಒಂದು ನೆಪ

ನಂಬಿಕೆಯೇ ದೇವರು

ಜನತಾ ಸಿಟಿಯಲಿ ಪ್ರಾಮಾಣಿಕ ಬದುಕು

ಬಿ ಪಾಸಿಟಿವ್

ಇರುವ ಭಾಗ್ಯವ ನೆನೆಯಿರಿ

ಒಂದು ದಿನ ಬೆಳಿಗ್ಗೆ ಎಂದಿನಂತೆ ಏಳಲಾಗುತ್ತಿಲ್ಲ, ಜ್ವರ ಕಾಡ್ತಾ ಇರುತ್ತದೆ. ಅರೆ! ಇವತ್ತಿನ ಕೆಲಸ ಎಲ್ಲ ಹಾಗೆ ಉಳಿದುಬಿಡುತ್ತದೆ ಎಂಬ ಚಿಂತೆ ವಿಶ್ರಾಂತಿಯನ್ನು ಕೂಡ ಯಾತನಾಮಯ ಮಾಡಿಬಿಡುತ್ತದೆ. ನನಗೆ ಮಾತ್ರ ಈ ರೀತಿ ಕಷ್ಟ ಅಂತೆಲ್ಲ ಗೊಣಗುತ್ತ ದಿನ ಕಳೆಯುತ್ತದೆ. ಆ ದಿನ ಯಾರ ಜತೆ ಮಾತುಕತೆ ನಡೆದರೂ

ಅನಾರೋಗ್ಯದ ಬಗ್ಗೆಯೇ ಬಡಬಡಿಸುತ್ತೇವೆ. ಆರೋಗ್ಯ ಸರಿಯಾಯಿತು ಅಂದುಕೊಳ್ಳುವುತ್ತಿರುವಾಗಲೇ ಧಿಡೀರ್ ಅಂತ ಹಣಕಾಸಿನ ಮುಗ್ಗಟ್ಟು ಎದುರಾಗುತ್ತದೆ, ಮತ್ತೆ ನಿರಾಶೆಯ ಕೂಪಕ್ಕೆ ಬಿದ್ದು ಜೀವನ ಮುಗಿದೇ ಹೋಯ್ತು ಅನ್ನುವ ಹಾಗೆ ಹಾರಾಡುತ್ತೇವೆ. ನಮ್ಮಷ್ಟು ಕಷ್ಟದಲ್ಲಿ ಬೇರೆ ಯಾರೂ ಇಲ್ಲ ಎಂಬ ಕೀಳರಿಮೆ ಬೇರೆ. ಯಾವುದೋ ಕೆಲಸಕ್ಕೆ ಹೊರಟಾಗ ವಾಹನ ಸಿಗುವುದಿಲ್ಲ, ಸಿಕ್ಕರೂ ಜನ ಜಂಗುಳಿ. ಹೋದ ಕಡೆ ಅಂದುಕೊಂಡಂತೆ ಕಾರ್ಯ ಆಗುವುದಿಲ್ಲ, ನಮ್ಮನ್ನು ಯಾರೋ ಸರಿಯಾಗಿ ಮಾತನಾಡಿಸಲಿಲ್ಲ, ಹೇಳಿದ ಸಮಯಕ್ಕೆ ಬಂದಿಲ್ಲ. ಇವೆಲ್ಲ ನಮ್ಮನ್ನು ಎಷ್ಟು ಹೈರಾಣ ಮಾಡುತ್ತವೆ ಎಂದರೆ, ಒಂದು ರೀತಿಯ ನಿರಾಶಾವಾದಿಗಳಾಗಿ ಬಿಡುತ್ತೇವೆ. ನಮ್ಮ ಬದುಕನ್ನು ನಾವೇ ಅಸಹನೀಯಗೊಳಿಸಿಕೊಳ್ಳುತ್ತೇವೆ. ಆದರೆ ಇವೆಲ್ಲ ಸಿಕ್ಕು ಸಿಡುಕುಗಳ ನಡುವೆ ನಾವಿನ್ನೂ ಈ ಜಗತ್ತಿನಲ್ಲಿ ಪ್ರಸ್ತುತರಾಗಿದ್ದೇವೆ ಎಂಬ ಒಂದು ಪರಮ ಸತ್ಯವನ್ನು ಮರೆತುಬಿಡುತ್ತೇವೆ. ಬೆಳಗಿನ ಸೂರ್ಯೋದಯವನ್ನು ನಾವು ನೋಡುತ್ತಿದ್ದೇವೆ ಎಂದರೆ ಅಂತಹ ಎಷ್ಟೋ ಭಾಗ್ಯಶಾಲಿಗಳಲ್ಲಿ ನಾವು ಕೂಡ ಒಬ್ಬರು. ಈ ವಾಸ್ತವವನ್ನು ಅರಿತಾಗ ನಮ್ಮ ದೂರು ದುಮ್ಮಾನಗಳೆಲ್ಲ ಹಾಗೆಯೇ ಮಂಜಿನಂತೆ ಕರಗಿಹೋಗುತ್ತವೆ. ನಾವು ಈ ನಿಮಿಷ ಅನುಭವಿಸುತ್ತಿರುವ ಕ್ಷಣ, ನೋಡುತ್ತಿರುವ ನೋಟ, ಮೈ ಸೋಕುವ ಗಾಳಿ ಎಲ್ಲ ನಮ್ಮ ಇರುವಿಕೆಯನ್ನು ಸಾರಿ ಹೇಳುತ್ತವೆ. ಇದನ್ನು ಸುಮ್ಮನೆ ಅನುಭವಿಸಬೇಕು. ಅಪೂರ್ಣತೆಯ ಮಧ್ಯೆಯೇ ಸಮಾಧಾನ ಹೊಂದಬೇಕು.

● ವಿದ್ಯಾಶಂಕರ್ ಶರ್ಮ

ಲವ್ಎವೆರಿ ಬಾಡಿ

ನೀವು ಕಾಫಿ ಪ್ರಿಯರಾ? ಹಾಗೇನಾದರೂ ಆಗಿದ್ದರೆ ನೀವು ಕುಡಿಯುವ ಕಾಫಿಯಲ್ಲಿ ಕೆಫಿನ್ ಅಂಶ ಎಷ್ಟಿದೆ ಎಂಬುದನ್ನು ಮೊದಲು ಪತ್ತೆ ಮಾಡಿಕೊಳ್ಳಿ. ಏಕೆಂದರೆ ಅತಿಯಾದ ಕೆಫಿನ್ ಅಂಶದಿಂದ ದೇಹ ಮಾರಣಾಂತಿಕ ಸಮಸ್ಯೆಗಳಿಗೆ ತುತ್ತಾಗಬಹುದು ಎಂಬುದನ್ನು ಸಂಶೋಧನೆಯೊಂದು ದೃಢಪಡಿಸಿದೆ. ಕಾಫಿಯಲ್ಲಿರುವ ಕೆಫಿನ್ ಅಂಶ ಒಂದರ್ಥದಲ್ಲಿ ಮಾದಕ ದ್ರವ್ಯದ ಹಾಗೆಯೇ. ಗರ್ಭಿಣಿಯರು ಹೆಚ್ಚಾಗಿ ಕಾಫಿ ಸೇವಿಸುವುದು ಅವರ ಆರೋಗ್ಯಕ್ಕೆ ಒಳ್ಳೆಯದಲ್ಲ. ಹೃದಯದ ಆರೋಗ್ಯಕ್ಕೂ ಇದು ಒಳ್ಳೆಯದಲ್ಲ. ದಿನಕ್ಕೊಮ್ಮೆಯೋ, ಎರಡು ಬಾರಿಯೋ ಕಾಫಿ ಸೇವಿಸಿದರೆ ಅದು ಚೈತನ್ಯ ನೀಡುವುದಲ್ಲದೆ, ಚಟುವಟಿಕೆಯಿಂದ ಇರಲು ಸಹಕರಿಸುತ್ತದೆ. ಆದರೆ ಇದೇ ಅಭ್ಯಾಸ ಅತಿಯಾಗಿ, ದಿನಕ್ಕೆ ಐದಾರು ಬಾರಿ ಅಥವಾ ಇನ್ನೂ ಹೆಚ್ಚು ಬಾರಿ ಕಾಫಿ ಸೇವಿಸುತ್ತಲೇ ಇರುವುದರಿಂದ ಶರೀರದ ಆರೋಗ್ಯ ಸಂಪೂರ್ಣ ಹದಗೆಡುವುದು ಖಂಡಿತ.

● ದೇಹಾಭಿ'ಮಾಣಿ'

ನೀವೂ ಬರೆಯಬಹುದು

ನಮ್ಮ ವಿಳಾಸ:
ಪುರವಣಿ ವಿಭಾಗ, ನಂ.1687, ಮೊದಲ ಮಹಡಿ, ನಿಸರ್ಗ ಸೆರೆನಿಟಿ ಕಾಂಪ್ಲೆಕ್ಸ್, ರಾಘವೇಂದ್ರ ಸ್ವಾಮಿ ಮಠದ ಹತ್ತಿರ, ಬಿಇಎಂಎಲ್ ಬಡಾವಣೆ, ರಾಜರಾಜೇಶ್ವರಿ ನಗರ, ಬೆಂಗಳೂರು-560098
ಇ-ಮೇಲ್: vishwavanimagazine@gmail.com

ಪ್ರಶ್ನೆ ಕೇಳುವುದೂ ಒಂದು ಕಲೆ. ಕೆಲವರಂತೂ ಅವರು ಕೇಳುವ ಪ್ರಶ್ನೆಗಳಿಗೇ ಹೆಸರುವಾಸಿಯಾಗಿರುತ್ತಾರೆ. ನಾವು ಕೇಳುವ ಪ್ರಶ್ನೆ ಹೇಗಿರಬೇಕು ಅಂದರೆ ಅದು ನಾವು ನಿಂತಿರುವಂತಹ ನೆಲವನ್ನೇ ಅಲುಗಿಸುವಂತಿರಬೇಕು, ಕತ್ತಲ ಸುರಂಗದಲ್ಲಿ ಸಿಕ್ಕಿಬಿದ್ದವರನ್ನು ಎಳೆದು ಬೆಳಕಿನೆಡೆಗೆ ಕರೆದು ತರುವಂತಿರಬೇಕು, ಖಿನ್ನತೆಯ ಪಾತಾಳದಲ್ಲಿ ಸಿಕ್ಕಿ ನರಳಾಡುತ್ತಿರುವವರಿಗೆ ಸ್ಫೂರ್ತಿಯ ಸೆಲೆಯಾಗಬೇಕು.

ಪ್ರಶ್ನೆ ಕೇಳುವ ಕಲೆ!

ಬಹಳಷ್ಟು ಸಲ ನಮ್ಮ ಉತ್ತರಗಳಿಗಿಂತ ನಾವು ಕೇಳುವ ಪ್ರಶ್ನೆಗಳನ್ನು ನೋಡಿಯೇ ನಮ್ಮನ್ನು ಜನರು ಗೌರವಿಸುತ್ತಾರೆ. ಅದರಲ್ಲೂ ತೂಕವಿರಬೇಕು, ಇತಿ ಮಿತಿಯಿರಬೇಕು, ಸೌಜನ್ಯವಿರಬೇಕು, ನೈಜತೆಯು ಕಾಣಬೇಕು; ಎಲ್ಲದಕ್ಕೂ ಮಿಗಿಲಾಗಿ ಇನ್ನೊಬ್ಬರಿಗೆ ನಮ್ಮ ಪ್ರಶ್ನೆಗಳು ಕಿರಿಕಿರಿಯಾಗಕೂಡದು. ಒಂದು ಪ್ರಶ್ನೆ ಒಬ್ಬರ ಜೀವನವನ್ನು

ಜೋಷ್ ಮಾತು
● ವಿಕ್ರಮ ಜೋಶಿ

ಕಟ್ಟಿಕೊಟ್ಟ ನಿದರ್ಶನಗಳೂ ಇವೆ, ಹಾಗೆಯೇ ಹಾಳು ಮಾಡಿದ ಉದಾಹರಣೆಗಳೂ ಸಾಕಷ್ಟಿವೆ. ಇನ್ನು ಕೆಲವು ಕಡೆ ಪ್ರಶ್ನೆಗಳು ಸಮರಗಳನ್ನು ನಿಲ್ಲಿಸಿದ್ದಿದೆ. ಹಾಗೆಯೇ ಪ್ರಶ್ನೆಗಳಿಂದ ಮಹಾಯುದ್ಧಗಳೂ ನಡೆದಿವೆ. ಕೈಗಾರಿಕಾ ಕ್ರಾಂತಿಯ ಯುಗದಲ್ಲಂತೂ ಕಂಪನಿಗಳ ಮಾಲೀಕರು ಅಥವಾ ಮುಖ್ಯಸ್ಥರು ಕೇಳುವ ಒಂದೊಂದು ಪ್ರಶ್ನೆಗಳು ಅವುಗಳ ರೂಪರೇಷೆಗಳನ್ನೇ ಬದಲಾಯಿಸಿದ ಘಟನೆಗಳಿವೆ. ಹಾಗೆಯೇ ಪ್ರಶ್ನೆಗಳೇ ಇಲ್ಲದೆಡೆ ಅದು ಸಮಾಜವಿರಲಿ, ಸಂಸ್ಕೃತಿಯಿರಲಿ, ಸಂಸ್ಥೆಯಿರಲಿ ನಿಂತ ನೀರಿನಂತಾಗಿ, ಅಲ್ಲಿ ಕೆಸರಾಗಿ, ಅದು ನಾರುತ್ತ ಕೊನೆಗೆ ಆವಿಯಾಗಿ ಯಾರಿಗೂ ಕಾಣದಂತೆ ಮಾಯವಾಗಿವೆ. ಹೀಗಾಗಿ ಇಂದು, ಎಂದೂ ಪ್ರಶ್ನೆಗಳನ್ನು ಕೇಳುವ ಕಲೆಯನ್ನು ಕರಗತಮಾಡಿಕೊಳ್ಳುವುದು ಎಲ್ಲರ ಅಗತ್ಯ.

ಸಮಸ್ಯೆ ಎಷ್ಟೇ ಜಟಿಲವಾಗಿರಲಿ ಅದರ ಮೂಲಕ್ಕೆ ಹೋದರೆ ಅಲ್ಲೇ ನಮಗೆ ಬೇಕಾದ ಪರಿಹಾರದ ಅರ್ಧಪಾಲು ಸಿಕ್ಕಿರುತ್ತದೆ. ಆದರೆ ಆ ಮೂಲಕ್ಕೆ ನಮ್ಮನ್ನು ಕರೆದೊಯ್ಯುವುದು ಪ್ರಶ್ನೆಗಳು. ಕಾರ್ಪೊರೇಟ್ ಜಗತ್ತಿನಲ್ಲಿ 'ಐದು ಯಾಕೆಗಳು' ತುಂಬಾ ಪ್ರಚಲಿತದಲ್ಲಿರುವಂತಹದ್ದು. ಈ 'ಐದು ಯಾಕೆಗಳು' ಎನ್ನುವ ಒಂದು ಪ್ರಶ್ನಾವಳಿಯ ಪ್ರಕ್ರಿಯೆಯನ್ನು ವ್ಯಾಪಾರಕ್ಕೆ ಸಂಬಂಧಿಸಿದ ಸಮಸ್ಯೆಗಳಿಗೆ, ಕಂಪನಿಗಳಲ್ಲಿ ಉಂಟಾದ ಸಂದಿಗ್ಧತೆಗೆ ಅಥವಾ ಯಂತ್ರಗಳು ಕೆಟ್ಟಾಗ ಅದನ್ನು ಸರಿಮಾಡುವುದಕ್ಕೆ ಮಾತ್ರವೇ ಬಳಸಬೇಕಾಗಿಲ್ಲ. ವೈಯಕ್ತಿಕ ಜೀವನದಲ್ಲಿ ಸಮಸ್ಯೆಗಳು ಎದುರಾದಾಗ, ಯಾವುದೋ ಸಂಶೋಧನೆಯಲ್ಲಿ ತೊಡಗಿರುವಾಗ ನಡುಹಾದಿಯಲ್ಲಿ ದಾರಿ ಕಾಣದೆ ಪಯಣವು ನಿಂತು ಹೋದಾಗ, 'ನಮ್ಮ ಬದುಕಿನ ಗುರಿ ಏನು?' ಎನ್ನುವಂತ ಪ್ರಶ್ನೆಗಳು ಎದುರಾದಾಗಲೂ ಈ 'ಯಾಕೆ' ಎನ್ನುವ ಪ್ರಶ್ನೆ ಸಹಾಯಕ್ಕೆ ಬರುತ್ತದೆ. ಮತ್ತೆ ಮತ್ತೆ ಆ ಪ್ರಶ್ನೆಯನ್ನು ಕೇಳುವುದರಿಂದ ಸಮಸ್ಯೆಯ ಬುಡಕ್ಕೆ ಹೋಗಿ ನೈಜತೆಯನ್ನು ಅರಿತು ಅದಕ್ಕೆ ತಕ್ಕನಾದ ಉತ್ತರವನ್ನು ಕಂಡುಕೊಳ್ಳುವುದಕ್ಕೆ ಸಾಧ್ಯವಿದೆ.

ಹಾಗಿದ್ದರೆ ಪ್ರಶ್ನೆಗಳನ್ನು ಕೇಳುವುದಕ್ಕೆ ಇದೊಂದೇ ಮಾದರಿಯೇ? ಇಲ್ಲ. ಇನ್ನೂ ಹಲವಾರು ರೀತಿಯಿಂದ ಪ್ರಶ್ನೆಗಳನ್ನು ಕೇಳಿ ನಮ್ಮ ವಿಚಾರವನ್ನು ಒಂದು ರೂಪಕ್ಕೆ ತಂದು ಪರಿಹಾರಗಳನ್ನು ಪಡೆಯಬಹುದು. ಹಾರ್ವರ್ಡ್ ಬ್ಯುಸಿನೆಸ್ ರಿವ್ಯೂನಲ್ಲಿ ಪ್ರಕಟವಾದ ಒಂದು ಸಂಶೋಧನ ಬರಹವನ್ನು ಆಧಾರವಾಗಿಟ್ಟುಕೊಂಡರೆ ಐದು ಬಗೆಯ ಪ್ರಶ್ನೆಗಳ ಮಾದರಿ ಹೀಗಿದೆ.

ತನಿಖಾತ್ಮಕ ಪ್ರಶ್ನೆಗಳು

ಯಾವುದೇ ಸಮಸ್ಯೆಯಿರಲಿ ಮೊದಲು ಅದರಲ್ಲಿ ಸಹಜವಾದ ತನಿಖೆಯ ಅಗತ್ಯವಿದೆ. ಅದಕ್ಕೆ ಅನುಕೂಲ ಮಾಡಿಕೊಡುವುದು ತನಿಖಾತ್ಮಕ ಪ್ರಶ್ನೆಗಳು. (1) ಏನಾಯಿತು? (2)ಯಾಕೆ ಕೆಲಸ ಮಾಡುತ್ತಿಲ್ಲ? (3) ಸಮಸ್ಯೆಯ ಮೂಲ ಯಾವುದಿರಬಹುದು?, (4) ನಮ್ಮ ಆಯ್ಕೆ ಯಾವುದಾಗಿರಬೇಕು? (5) ಇದಕ್ಕೆ ಪೂರಕವಾದ ಏನಾದರೂ ಸಾಕ್ಷಿ ಇದೆಯೇ? ಹೀಗೆ ಐದು ಬೇರೆ ಬೇರೆ ವಿಧಾನಗಳಿಂದ ತನಿಖಾತ್ಮಕ ಪ್ರಶ್ನೆಗಳನ್ನು ಕೇಳಬಹುದು.

ಊಹಾತ್ಮಕ ಪ್ರಶ್ನೆಗಳು

ಕೆಲವೊಮ್ಮೆ ನಮಗೆ ಪ್ರಚಲಿತ ಪರಿಸ್ಥಿತಿಯ ಬಗ್ಗೆ ಕನಿಷ್ಠ ಮಾಹಿತಿ ಗೊತ್ತಿರುತ್ತದೆ; ಇಲ್ಲವೇ ಆ ವಿಷಯದ ಕುರಿತು

ನಾವು ಸಂಪೂರ್ಣವಾಗಿ ಕತ್ತಲಲ್ಲಿ ಇರುತ್ತೇವೆ. ಆಗ ನಮಗೆ ನೆರವಾಗುವುದು ಊಹಾತ್ಮಕ ಪ್ರಶ್ನೆಗಳು. ಇದನ್ನೂ ಐದು ಬೇರೆ ಬೇರೆ ಮಾರ್ಗಗಳಲ್ಲಿ ಇಡಬಹುದು.

(1) ಇಷ್ಟನ್ನು ಹೊರತುಪಡಿಸಿ ಬೇರೆ ಯಾವೆಲ್ಲ ಸನ್ನಿವೇಶಗಳು ಬರಬಹುದು? (2) ನಾವು ಇವತ್ತು ಮಾಡುತ್ತಿರುವ ರೀತಿಯ ಹೊರತಾಗಿ ಇನ್ನೂ ಬೇರೆ ಶೈಲಿಯಿಂದ ಪ್ರಯತ್ನಪಡಬಹುದೇ?(3) ಈಗಿರುವುದನ್ನು ಮೀರಿ ಬೇರೆ ಏನೇನು ಹೊಸ ಪ್ರಯೋಗಗಳನ್ನು ಮಾಡಬಹುದು? (4) ಈಗಾಗಲೇ ಮಾಡುತ್ತಿರುವ ಕೆಲಸವನ್ನು ಇನ್ನಷ್ಟು ಸರಳವಾಗಿ ಮಾಡಬಹುದೇ? (5) ನಮ್ಮೆದರು ಇಷ್ಟೆಲ್ಲಾ ಆಯ್ಕೆಗಳಿವೆ, ಇದಕ್ಕಿಂತ ಮುಖ್ಯವಾಗಿರುವ ಸಂಗತಿಗಳಾವುದಾದರೂ ನಮ್ಮಿಂದ ಬಿಟ್ಟು ಹೋಗಿರಬಹುದೇ?

ಉತ್ಪಾದಕ ಪ್ರಶ್ನೆಗಳು

ಈ ಪ್ರಶ್ನೆಗಳು ಹೊಸ ಸನ್ನಿವೇಶವನ್ನು ಸೃಷ್ಟಿಸುತ್ತವೆ. ಹಾಗೆಯೇ ನಮ್ಮ ನಿರ್ಧಾರವನ್ನು ಕಾರ್ಯಗತಗೊಳಿಸಲು ಬೇಕಾದ, ನಮ್ಮ ಕಲ್ಪನೆಗೆ ಮೀರಿದ, ಹಲವಾರು ಆಳವಾದ ವಿಷಯಗಳನ್ನು, ನಮ್ಮ ಸೂಪ್ತ ಮನಸ್ಸಿನೊಳಗಿಂದ ಹೊರಗಡೆಗೆ ತರಲು ಸಹಾಯ ಮಾಡುತ್ತವೆ. ಇದು ಆದಷ್ಟು ರಚನಾತ್ಮಕವಾಗಿದ್ದರೆ ಒಳ್ಳೆಯದು.

(1) ಮುಂದಿನ ನಡೆ ಯಾವುದು ? (2) ನಾವು ನಿರ್ಧಾರ ಮಾಡಿದ್ದನ್ನು ಕಾರ್ಯಾಚರಣೆಗೆ ತರಲು ಏನು ಮಾಡಬೇಕು? (3) ನಮಗೆ ಬೇಕಾದ ಎಲ್ಲ ಸಲಕರಣೆ ಹಾಗೂ ಸಂಪನ್ಮೂಲಗಳು ಇವೆಯೇ? (4) ನಾವು ನಿರ್ಧಾರ ತೆಗೆದುಕೊಳ್ಳಲು ಸಿದ್ದರಾಗಿದ್ದೇವೆಯೇ? (5) ಈ ಪರಿಸ್ಥಿತಿಯಲ್ಲಿ ಮುಂದೆ ಹೋಗಬಹುದೇ?

ವಸ್ತುನಿಷ್ಠ ಪ್ರಶ್ನೆಗಳು

ನಾವು ಕೆಲವೊಮ್ಮೆ ನಿರ್ಧಾರ ತಗೆದುಕೊಂಡ ಮೇಲೆ ಮತ್ತೆ ಅದರ ಸುತ್ತ ಪ್ರಶ್ನೆಗಳನ್ನೇ ಕೇಳುವುದಿಲ್ಲ. ಇದರಿಂದಾಗಿ ಆಗುವ ನಷ್ಟಗಳನ್ನು ತಪ್ಪಿಸುವುದಕ್ಕೆ ಇರುವುದೇ ವಸ್ತುನಿಷ್ಠ ಪ್ರಶ್ನೆಗಳು. ಇವುಗಳನ್ನು ಕೂಡ ಐದು ವಿಧವಾಗಿ ಕೇಳಬಹುದು.

(1) ಈ ನಿರ್ಧಾರ ಮತ್ತೊಮ್ಮೆ ಯೋಚಿಸಿದಾಗ ನಮಗೇ ಏನೇನಿಸಬಹುದು? (2) ನಾವು ಇಟ್ಟ ಹೆಜ್ಜೆಗಳೊಳಗೆ ಯಾವುದರಲ್ಲಿ ತುಂಬಾ ಸಮಸ್ಯೆ ಕಾಣಿಸುತ್ತದೆ? (3) ನಾವು ಕೇಳುತ್ತಿರುವ, ಆಡುತ್ತಿರುವ ಹಾಗೂ ಮಾಡುತ್ತಿರುವದರಲ್ಲಿ ಏನಾದರೂ ವ್ಯತ್ಯಾಸ ಇದೆಯೇ? (4) ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವುದಕ್ಕೆ ನಾವು ಎಲ್ಲರ ಅಭಿಪ್ರಾಯಗಳನ್ನು ಪಡೆದಿದ್ದೇವೆಯೇ? (5) ಇದರ ಕುರಿತು ಎಲ್ಲರಿಗೂ ಸರಿ ಸಮಾನವಾದ ಮಾಹಿತಿ ತಲುಪಿದೆಯೇ?

ನಿರೂಪಣಾತ್ಮಕ ಪ್ರಶ್ನೆಗಳು

ಕೊನೆಯದಾಗಿ ನಿರೂಪಣೆಯ ಹೊಣೆಯನ್ನು ಹೊತ್ತಿರುವ ಪ್ರಶ್ನೆಗಳು. ಇವು ಕೂಡ ಅದರದ್ದೇ ಆದ ಮಹತ್ವವನ್ನು ಹೊಂದಿರುತ್ತವೆ. ಆ ಪ್ರಶ್ನೆಗಳು ಹೀಗಿವೆ:

(1) ನಾವು ಹೊಸ ಮಾಹಿತಿಗಳಿಂದ ಕಲಿತಿದ್ದೇನು? (2) ಇವತ್ತಿನ ಹಾಗೂ ಭವಿಷ್ಯದ ನಡೆಗೆ ಇದರ ಪರಿಣಾಮ ಏನಾಗಬಹುದು? (3) ನಮ್ಮ ಗುರಿ ಏನಾಗಿರಬೇಕು? (4) ನಾವು ಮಾಡುತ್ತಿರುವುದು ಆ ಗುರಿಯ ನೇರದಲ್ಲಿ ಇದೆಯೇ? (5)ಇಷ್ಟಕ್ಕೂ ನಾವು ಸಾಧಿಸಲು ಹೊರಟಿದ್ದೇನು?

ಯಾವುದೇ ನಿರ್ಧಾರವನ್ನೂ ಅಂತಿಮಗೊಳಿಸುವ ಮುನ್ನ ಈ ಐದು ಮಾದರಿಯ ಪ್ರಶ್ನೆಗಳನ್ನು ಹಾಗೂ ಅದರೊಳಗಿರುವ ಐದು ರೀತಿಯ ಪ್ರಶ್ನೆಗಳನ್ನು ಉತ್ತರಿಸಲು ಪ್ರಯತ್ನಿಸಬೇಕು. ಪ್ರತಿ ಪ್ರಶ್ನೆಗೂ ಒಂದು ತೂಕವನ್ನಿಟ್ಟು ನಮ್ಮೆದುರಿಗಿನ ನಿರ್ಧಾರಗಳನ್ನು ಅಥವಾ ಪರಿಹಾರಗಳನ್ನು ತೂಗಬೇಕು. ಆಗ ಮಾತ್ರವೇ ಪ್ರಶ್ನೆಗಳನ್ನು ಕೇಳುವ ಕಲೆಯು ನಮ್ಮಲ್ಲಿ ಕರಗತವಾಗಬಲ್ಲದು!

● ಅಶ್ವಿನಿ ಸುನಿಲ್

ಪಾನಕ ಕುಡಿಯುವ ದೇವರು!

ನಮ್ಮ ದೇಶದ ಪ್ರತಿ ದೇವಾಲಯಗಳಿಗೂ ಅದರದ್ದೇ ಆದ ವೈಶಿಷ್ಟ್ಯವಿದೆ, ಇತಿಹಾಸವಿದೆ. ಒಂದು ಪ್ರದೇಶದಿಂದ ಇನ್ನೊಂದು ಪ್ರದೇಶಕ್ಕೆ ಹೋದಂತೆ ದೇವರನ್ನು ಪೂಜಿಸುವ ಕ್ರಮ, ಅರ್ಪಿಸುವ ನೈವೇದ್ಯ ವಿಭಿನ್ನವಾಗಿರಬಹುದು. ಆದರೆ ಭಕ್ತಿ ಮಾತ್ರ ಅದೇ. ಭಗವಾನ್ ವಿಷ್ಣುವಿನ ಎಂಟು ಮಹಾ ಕ್ಷೇತ್ರಗಳಲ್ಲಿ ಒಂದು ಎಂದು ಗುರುತಿಸಲ್ಪಟ್ಟ ಪಾನಕಾಲ ನರಸಿಂಹ ಕ್ಷೇತ್ರವು ಆಂಧ್ರಪ್ರದೇಶದ ವಿಜಯವಾಡದ ಸಮೀಪದ ಮಂಗಳಗಿರಿ ಬೆಟ್ಟದಲ್ಲಿದೆ.

ಒಂದೇ ಊರಿನಲ್ಲಿ ಮೂರು ನರಸಿಂಹ ಸ್ವಾಮಿಯ ದೇವಾಲಯವಿರುವುದು ಇಲ್ಲಿಯ ವಿಶೇಷತೆ. ಬೆಟ್ಟದ ಬುಡದಲ್ಲಿ ಲಕ್ಷ್ಮೀ ನರಸಿಂಹ ಸ್ವಾಮಿಯ ದೇವಾಲಯವಿದ್ದರೆ, ಬೆಟ್ಟದ ಮೇಲೆ ಇರುವುದು ಪಾನಕಾಲ ನರಸಿಂಹಸ್ವಾಮಿ. ಬೆಟ್ಟದ ತುದಿಯಲ್ಲಿ ಗಂಡಾಲ ನರಸಿಂಹಸ್ವಾಮಿ ದೇವಾಲಯವಿದೆ.



ದೇವರ ಬಾಯಿಗೆ ನೈವೇದ್ಯ

ಅಗಲವಾಗಿ ಬಾಯಿ ತೆರೆದಿರುವ ನರಸಿಂಹ ಸ್ವಾಮಿ ದೇವರು ಇಲ್ಲಿಯ ವಿಶೇಷತೆ . ಕಣ್ಣು, ಮೂಗು, ಬಾಯಿ, ಕೈ ಕಾಲು ಹೀಗೆ ಯಾವುದೇ ಭೌತಿಕ ರೂಪವಿಲ್ಲದ ದೇವರ ಮುಖವು ಲೋಹದಿಂದ ಮಾಡಲ್ಪಟ್ಟಿದ್ದು, ಬಾಯಿಯು ಸುಮಾರು ಹದಿನೈದು ಸೆಂಟಿಮೀಟರ್‌ನಷ್ಟು ಅಗಲವಾಗಿ ತೆರೆದಿದೆ. ಒಂದೊಂದು ದೇವಾಲಯದಲ್ಲಿ ದೇವರಿಗೆ ಒಂದೊಂದು ಬಗೆಯ ನೈವೇದ್ಯವನ್ನು ಅರ್ಪಿಸುವುದು ನಮಗೆಲ್ಲ ಗೊತ್ತು. ಆದರೆ ಇಲ್ಲಿ ಭಕ್ತರು ದೇವರಿಗೆ ಬೆಲ್ಲದ ಪಾನಕವನ್ನು ನೈವೇದ್ಯವಾಗಿ ಅರ್ಪಿಸುತ್ತಾರೆ. ಅರ್ಚಕರು ಪಾನಕವನ್ನು ದೇವರ ಬಾಯಿಗೆ ಹಾಕುತ್ತಾರೆ. ಹಾಗೆಯೇ ಪ್ರಸಾದ ರೂಪದಲ್ಲಿಯೂ ಪಾನಕವನ್ನೇ ಕೊಡಲಾಗುತ್ತದೆ. ದೇವರ ಬಾಯಿಗೆ ಪಾನಕ ಸಮರ್ಪಿಸುವಾಗ ದೇವರು ಪಾನಕವನ್ನು ಕುಡಿಯುತ್ತಿರುವ ಪ್ರತೀಕವಾಗಿ ಗಂಟಲಿನಿಂದ ಗಟ ಗಟ ಶಬ್ದವು ಕೇಳಿಬರುತ್ತದೆ. ದೇವರು ಸಂಪೂರ್ಣ ಹೃದಯದಿಂದ ನೈವೇದ್ಯ ಸ್ವೀಕರಿಸಿದ ಎನ್ನುವ ನಂಬಿಕೆ ಭಕ್ತರದ್ದು.

ಇರುವೆಗಳೇ ಇಲ್ಲ ಇಲ್ಲಿ!

ಪ್ರತಿದಿನ ಸಾವಿರಾರು ಭಕ್ತರು ಅರ್ಪಿಸುವ ಬೆಲ್ಲದ ಪಾನಕವು ಎಲ್ಲಿಗೆ ಹೋಗುತ್ತದೆ ಎನ್ನುವುದು ಒಂದು ಸೋಜಿಗದ ವಿಷಯವಾದರೆ, ಗರ್ಭಗುಡಿಯಲ್ಲಿ ಇಷ್ಟೆಲ್ಲ ಬೆಲ್ಲದ ಪಾನಕ ಸುರಿದರೂ ಕೂಡ ಒಂದೇ ಒಂದು ಇರುವೆಯಾಗಲಿ ನೊಣಗಳಾಗಲಿ ಬರದೇ ಇರುವುದು ಇನ್ನೊಂದು ವಿಶೇಷ. ಮನೆಯಲ್ಲಿ ಒಂದು ಚೂರು ಬೆಲ್ಲ ಅಥವಾ ಸಕ್ಕರೆ ಬಿದ್ದರೆ ಮರುಕ್ಷಣದಲ್ಲೇ ಇರುವೆಗಳು ಮುತ್ತಿಕೊಳ್ಳುವಾಗ ಇಲ್ಲಿ ಮಾತ್ರ ಇರುವೆಗಳು ಬರದಿರುವುದು ಆಶ್ಚರ್ಯ. ಒಂದು ಕಾಲದಲ್ಲಿ ಈ ಬೆಟ್ಟದಲ್ಲಿ ಜ್ವಾಲಾಮುಖಿಗಳಿದ್ದು, ಬೆಲ್ಲದ ನೀರು ಬೆಟ್ಟದ ನೆಲದಲ್ಲಿರುವ ಸಲ್ಫರ್‌ನ ಅಂಶಗಳೊಂದಿಗೆ ರಾಸಾಯನಿಕ ಪ್ರಕ್ರಿಯೆಗೆ ಒಳಗಾಗಿ ಜ್ವಾಲಾಮುಖಿಯನ್ನು ತಟಸ್ಥಗೊಳಿಸುತ್ತಿದೆ, ಎನ್ನಲಾಗುತ್ತಿದೆ. ಹೀಗೆ ದೇವರಿಗೆ ಪಾನಕ ಅರ್ಪಿಸುವ ಹಿಂದೆ ವೈಜ್ಞಾನಿಕ ಕಾರಣವಿದ್ದಿರಬಹು ದಾದರೂ ಭಕ್ತರ ನಂಬಿಕೆ ಮುಖ್ಯವಾದದ್ದು. ದೇವಾಲಯವು ಭಕ್ತರ ದರ್ಶನಕ್ಕಾಗಿ ಬೆಳಿಗ್ಗೆ 7:00 ಯಿಂದ ಸಂಜೆ ಮೂರು ಗಂಟೆಯವರೆಗೆ ಮಾತ್ರ ತೆರೆದಿರುತ್ತದೆ ಎನ್ನುವುದನ್ನು ನೆನಪಿಟ್ಟುಕೊಳ್ಳಬೇಕು. ಮೂರು ಗಂಟೆಯ ನಂತರ ಹೋದರೆ ನಿರಾಸೆಯಾದೀತು. ವಿಜಯವಾಡದಿಂದ ಬಸ್ಸು ಅಥವಾ ಖಾಸಗಿ ವಾಹನಗಳಲ್ಲಿ ಮಂಗಳಗಿರಿಯನ್ನು ತಲುಪಬಹುದು.

● ಸುಮನಾ ರಾವ್ , ದುಬೈ

ಮನವಾ ನಿಲಿಸುವುದು ಬಲು ಕಷ್ಟ, ಹರಿದಾಡುವ ಮನವ ನಿಲಿಸುವುದು ಬಲು ಕಷ್ಟ . ಜಪವ ಮಾಡಲು ಬಹುದು, ತಪವ ಮಾಡಲು ಬಹುದು ಉಪವಾಸ ವೃತದಲ್ಲಿರಲೂ ಬಹುದು, ಆದರೆ ಮನವ ನಿಲಿಸುವುದು ಬಲು ಕಷ್ಟ. ಹೀಗಿದೆ ಪುರಂದರ ದಾಸರ ಒಂದು ಕೃತಿ. ಮನುಷ್ಯನು ಬಾಹ್ಯ ಪ್ರಪಂಚದಲ್ಲಿ ಅಸಾಧ್ಯ ಎನಿಸುವಂಥ ಸಾಧನೆ ಮಾಡುತ್ತಾನೆ. ಆದರೆ ತನ್ನ ಮನಸ್ಸನ್ನು ನಿಲ್ಲಿಸಿಡುವುದು ಅವನಿಗೆ ಅತ್ಯಂತ ಕಷ್ಟ. ಅದು ಸದಾ ಕಾಲ ಹೊಯ್ದಾಡುತ್ತಲೇ ಇರುತ್ತದೆ. ನಮ್ಮ ಮನಸ್ಸಿನಲ್ಲಿ ಆಲೋಚನೆಗಳ ನಿರಂತರ ಪ್ರವಾಹ ಸದಾ ಇದ್ದೇ ಇದೆ. ಚಂಚಲ ಮನಸ್ಸು ಹೊಯ್ದಾಡುತ್ತಿರುತ್ತದೆ. ನಿಂತಲ್ಲಿ ನಿಲ್ಲುವುದಿಲ್ಲ. ನಿಜ ಅರ್ಥದಲ್ಲಿ ಮನುಷ್ಯನ ಸಾಧನೆ ಇಂತಹ ಮನಸ್ಸನ್ನು ನಿಯಂತ್ರಣದಲ್ಲಿಡುವುದೇ ಆಗಿದೆ. ಮನೋನಿಗ್ರಹವೇ ಅತಿ ದೊಡ್ಡ ಸಾಧನೆ.

ಜೀವನದ ಕೆಲ ಘಟನೆಗಳನ್ನು ಅವಲೋಕಿಸಿ ನೋಡಿದಾಗ ನಾವು ಯಾರೋ ಹೇಳಿದ ಮಾತಿಗೆ ದುಃಖಿಸುತ್ತೇವೆ. ಇನ್ಯಾರೋ ಅವಮಾನಿಸಿದ್ದಕ್ಕೆ ಕೋಪಗೊಂಡಿರುತ್ತೇವೆ. ಮತ್ಯಾವುದೋ ಅನಿರೀಕ್ಷಿತ ಘಟನೆಯಿಂದ ಆಘಾತಕ್ಕೊಳಗಾಗಿ, ಖಿನ್ನರಾಗಿರುತ್ತೇವೆ. ಇದರರ್ಥ, ನಮ್ಮ ಮನಸ್ಸನ್ನು ಬಾಹ್ಯ ವ್ಯಕ್ತಿಗಳು ಅಥವಾ ಘಟನೆಗಳು ನಿಯಂತ್ರಿಸುತ್ತಿವೆ ಎಂದಾಯಿತು. ನಮ್ಮೊಳಗಿರುವ ಮನಸ್ಸಿನ ಭಾವನೆಗಳನ್ನು, ಬದಲಾಯಿಸಲು ಬೇರೆಯವರಿಗೆ

ಮನಸ್ಸಿನ ರಿಮೋಟ್ ಕಂಟ್ರೋಲ್!

ಸ್ವಯಂ ನಿಯಂತ್ರಣ ಏಕೆ ಬೇಕು?

- **ಯಾವಾಗ ವ್ಯಕ್ತಿಯೊಬ್ಬನು ಸ್ವಯಂ ನಿಯಂತ್ರಣ ಕಳೆದುಕೊಳ್ಳುತ್ತಾನೋ, ಆಗ ಅತಿ ಸುಲಭವಾಗಿ ಪರಿಸ್ಥಿತಿಯು ಅವನನ್ನು ಆಳುತ್ತದೆ. ದುಃಖ, ಬೇಸರ, ಅವಮಾನ, ಸೋಲು, ದ್ವೇಷ ಮುಂತಾದ ನಕಾರಾತ್ಮಕ ಭಾವನೆಗಳನ್ನು ಎದುರಿಸಲು ಅವನಿಗೆ ಶಕ್ತಿ ಸಾಲದು. ಮನಶಕ್ತಿ ಕಳೆದುಕೊಂಡು ದುರ್ಬಲ ನಾಗಿಬಿಡುತ್ತಾನೆ. ಆಗ ತೆಗೆದುಕೊಳ್ಳುವ ನಿರ್ಧಾರ ಗಳು, ಮಾಡುವ ಆಯ್ಕೆಗಳು ವಿವೇಚನೆಯಿಂದ ಕೂಡಿರದೆ ಭಾವೋದ್ರೇಕದಿಂದ ಕೂಡಿರುತ್ತವೆ ಮತ್ತು ಅವು ಉದ್ದೇಶಿತ ಪರಿಣಾಮ ಬೀರಲಾರವು.**
- **ಇನ್ನು ನಿಯಂತ್ರಣ ಇರದ ಮನುಷ್ಯ ತನ್ನ ಪಂಚೇಂದ್ರಿಯಗಳ ಮೇಲಿನ ಹಿಡಿತವನ್ನು ಕಳೆದುಕೊಂಡಿರುತ್ತಾನೆ. ನಾಲಿಗೆಯನ್ನು ಹದ್ದುಬಸ್ತಿನಲ್ಲಿಡಕ್ಕಾಗದೇ ಎಗರಾಡುವುದು, ಹೊಡೆಯಲು ಮುಂದಾಗುವುದು ಇವೇ ಮುಂತಾದ ಅನುಚಿತ ಪ್ರತಿಕ್ರಿಯೆಗಳನ್ನು ವ್ಯಕ್ತಿ ತೋರಿಸಬಹುದು. ಇಂತಹ ವರ್ತನೆಗಳು ಮಿತಿ ಮೀರಿ, ಕೋಪದಿಂದ ವ್ಯಕ್ತಿಯ ಕೊಲೆ ಮಾಡುವವರೆಗೂ ಹೋಗಬಹುದು.**
- **ಸ್ವಯಂ ನಿಯಂತ್ರಣ ಇರದ ವ್ಯಕ್ತಿಗಳ ಮನಸ್ಸಿನಲ್ಲಿ ಆತಂಕ, ಉದ್ವಿಗ್ನತೆ, ತಳಮಳ, ಅಸಹನೆ ಮುಂತಾದ ನಕಾರಾತ್ಮಕ ಭಾವನೆಗಳೇ ತುಂಬಿಕೊಂಡು ಸದಾ ಅಶಾಂತಿ ಇರುತ್ತೆ. ಸಮಚಿತ್ತದಿಂದ, ಸಮಯೋಚಿತ ಕೆಲಸಗಳನ್ನು ಸಮರ್ಪಕವಾಗಿ ಮಾಡಲು ಅಂಥವರಿಂದ ಸಾಧ್ಯವಾಗುವುದಿಲ್ಲ.**

ಸುಲಭ ಸಾಧ್ಯವೆಂದಾಯಿತು. ಟಿವಿಯಲ್ಲಿ ರಿಮೋಟ್ ಕಂಟ್ರೋಲ್ ಬಳಸಿ ವಾಹಿನಿಗಳನ್ನು ಬದಲಾಯಿಸಿದಂತೆ ನಮ್ಮ ಮನದ ಸ್ಥಿತಿಯನ್ನು ಬೇರೆಯವರು ನಿರ್ದೇಶಿಸುತ್ತಿದ್ದಾರೆ ಎಂದಾಯಿತು. ನಮ್ಮ ಒಳಮನಸ್ಸಿನ ರಿಮೋಟ್ ಕಂಟ್ರೋಲ್‌ನ್ನು ಹೊರಗಿನವರ ಕೈಯಲ್ಲಿ ಕೊಟ್ಟಿದ್ದೇವೆ ಎಂದು ಅರ್ಥೈಸಬಹುದು. ಬಾಹ್ಯ ಪ್ರಪಂಚದ ವ್ಯಕ್ತಿಗಳು ಆಡಿಸಿದಂತೆ ನಾವು ನಮ್ಮ ಭಾವನೆಗಳನ್ನು ತೋರ್ಪಡಿಸುತ್ತಿದ್ದೇವೆ ಅಂದರೆ ನಾವು ಹೊರ ಜಗತ್ತಿನ ಗುಲಾಮರು. ನಾವು ದೃಢವಾಗಿಲ್ಲ, ಅನ್ಯ ವ್ಯಕ್ತಿಗಳ ಮಾತು, ವರ್ತನೆ, ಪ್ರತಿಕ್ರಿಯೆಗಳು ನಮ್ಮ ಮಾತು, ಮನಸ್ಸು, ಭಾವನೆಗಳ ಮೇಲೆ ಏಕಸ್ವಾಮ್ಯ ಸಾಧಿಸಿ, ನಾವು ಸ್ವಯಂನಿಯಂತ್ರಣವನ್ನು ಕಳೆದುಕೊಂಡಿದ್ದೇವೆ. ಧ್ಯಾನದಿಂದ ಸ್ವಯಂ ನಿಯಂತ್ರಣ ಸಾಧ್ಯ. ಧ್ಯಾನ ಎಂದರೆ ಮನಸ್ಸನ್ನು ನಿಲ್ಲಿಸಿಡುವುದು. ಪುಟಿದೇಳುತ್ತಿರುವ ಆಲೋಚನೆಗಳ ಪ್ರವಾಹವನ್ನು ಸೀಮಿತಗೊಳಿಸುವುದು. ಪ್ರತಿದಿನ ಧ್ಯಾನವನ್ನು ಮಾಡುವುದರಿಂದ ನಮ್ಮ ಮನಸ್ಸು ಶಾಂತಗೊಂಡು ವ್ಯಕ್ತಿಗಳನ್ನು, ಪರಿಸ್ಥಿತಿಗಳನ್ನು ಎದುರಿಸಲು ಸನ್ನದ್ಧವಾಗುವುದು. ಮನಸ್ಸಿಗೆ ಸ್ವಯಂ ನಿರ್ದೇಶನಗಳನ್ನು ಕೊಡುತ್ತ, ಸದಾ ಸಕಾರಾತ್ಮಕ ಚಿಂತನೆಯಿಂದ ಕೂಡಿದ ಧ್ಯಾನವು ಮನಸ್ಸಿನ ನಿಯಂತ್ರಣಕ್ಕೆ ಸಹಕಾರಿಯಾಗಬಲ್ಲದು.